ಸೋಮವಾರ, ಜುಲೈ 29, 2024 | ₹ 7.00

ಪ್ರಜಾವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Srishyla Educational Trust ®

GM University

P.B Road, Davanagere-577006

"Elite Placements: TCS placed students from GMIT"
GM Group of Institutions

Prime | Digital

Varun S Patil | Abhishek Belagavi | Ajith H Patagar | Jeevitha M J | Kavya Hegde | Likhit siddhartha | Hemashree C H | Padmashree H

Ninja

Chaitra R | Deepu R Heggere | Manoj Patil | Manoj R | Poorvika S | Mansi V M | Rakshitha M A | Varun Gowda T

48+ Number of Patents

300+ Recruiters

55+ Acres Campus

25+ Educational Experience

CET Option Entry is Now Open

GMU

- **E303** B.Tech CET Code
- **B086** MBA PGCET Code
- **C568** MCA PGCET Code

GMIT

- **E114** CET Code
- **E051** COMEDK Code

Apply Now For Online ADMISSION

Join us by choosing the right program in GM University

Faculty of Engineering & Technology

School of Computer Science & Technology

B. Tech. in

E303BW Computer Science & Engg. (CSE)
E303CU Information Science & Engg. (ISE)
E303LE Computer Science-AI & ML (CS-AIML)
E303LD Computer Science-Data Science (CS-DS)
E303LG Computer Science-Cyber Security (CS-CY)
E303LF Computer Science-Cloud Computing (CS-CC)
E303LH Computer Science-Information Security (CS-IS)
E303LJ Computer Science-Business Systems (CS-BS)
E303LK Computer Science-IOT (CS-IO)

School of Engineering

B. Tech. in

E303BB Electronics & Communication Engg. (E & CE)
E303BJ Electrical & Electronics Engg. (EEE)
E303CE Robotics & Automation (RA)
E303RA Engineering Design (ED)
E303YH Civil Engineering (CE)
E303BT Biotechnology (BT)

Faculty of Computing & IT

BCA-Computer Applications
MCA-Computer Applications
MSc-Data Science
MSc-AI & Data Analytics
MSc-Cyber Security

GM School of Advanced Studies

M.Tech. in

Data Engineering
Deep Learning
Artificial Intelligence in Healthcare
Computer Aided Structural Engineering (CASE)

Faculty of Basic & Applied Sciences

School of Mathematical and Physical Sciences

BSc-Major (M, CS), Minor (P/ S/E)
BSc-Major (S, CS), Minor (P/M/E)
BSc-Major (P, M), Minor (CS/ S/E)

School of Applied Sciences

BSc- Major (BT), Minor (CS/BC)
BSc- Major (FST) Minor (Z/BC/CS)
BSc- Major (MB) Minor (Z/C/BC/CS)

School of Chemical & Biological Sciences

BSc-Major (P, C), Minor (CS/ M/E)
BSc-Major (C, CS), Minor (P/ M/E)
BSc-Major (B, Z), Minor (C/ EC/CS/S)
BSc-Major (C, Z), Minor (B/ EC/CS/S)
BSc -Major (C, B), Minor (BC/MB/CS/S)

Faculty of Commerce & Management

School of Commerce

B.Com

B.Com (Accounting & Finance)
B.Com (Banking & Insurance
B.Com (Accounting & Taxation)
M.Com (Accounting & Taxation with Forensic Accounting)

School of Management

BBA

BBA (Digital Marketing and Social Media)
BBA (Business Analytics)
BBA (Innovation & Entrepreneurship)
BBA (Logistics & Supply Chain Management)
BBA (Human Resource Management)
BBA (Marketing & Sales)

MBA

MBA (Innovation & Entrepreneurship)
MBA (International Business)
MBA (Agricultural Marketing)

www.gmu.ac.in admissions@gmu.ac.in

93640 99720, 93640 99712, 63642 59993

‘ತೇಜಸ್ವಿ ಎಂಬ ವಿಸ್ಮಯ’ ಸಾಕ್ಷ್ಯಚಿತ್ರ ಸರಣಿ ಲೋಕಾರ್ಪಣೆ

‘ಪ್ರತಿಕ್ರಿಯೆಗಳು ಪುಸ್ತಕವಾಗಲಿ’

ಪ್ರಜಾವಾಣಿ ವಾರ್ತೆ

ಮಾಧ್ಯಮ ಅನೇಕ ಪ್ರೊಡಕ್ಷನ್‌ನ ಅರವಿಂದ್ ಮೋತಿ ಅವರು (ಎಡದಿಂದ ನಾಲ್ಕನೆಯವರು) ನಿರ್ಮಿಸಿದ ‘ತೇಜಸ್ವಿ ಎಂಬ ವಿಸ್ಮಯ’ ಸಾಕ್ಷ್ಯಚಿತ್ರ ಸರಣಿಯನ್ನು ಶಾಸಕ ಸಿ.ಎನ್‌. ಅಶ್ವತ್ಥನಾರಾಯಣ ಬಿಡುಗಡೆ ಮಾಡಿದರು. (ಎಡದಿಂದ) ಸಾಹಿತಿ ಎಸ್‌.ಜಿ. ಸಿದ್ಧರಾಮಯ್ಯ, ಬಿ.ಎನ್‌. ಶ್ರೀರಾಮ್‌, ಎಂ. ಚಂದ್ರಶೇಖರ್ ಪ್ರತಿಷ್ಠಾನದ ಸದಸ್ಯೆ ಸರೋಜ ಎಂ. ಚಂದ್ರಶೇಖರ್‌, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಿ.ವಿ. ಪರಮಶಿವಮೂರ್ತಿ, ಕೆ. ಚಿದಾನಂದ ಗೌಡ, ತೇಜಸ್ವಿ ಅವರ ಸಹೋದರಿ ತಾರಿಣಿ ಚಿದಾನಂದ ಮತ್ತು ಪುತ್ರಿ ಕೆ.ಪಿ. ಸುಸ್ಮಿತಾ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಪೂರ್ಣಚಂದ್ರ ತೇಜಸ್ವಿ ಅವರ ನಿರ್ಗಮನದ ಬಳಿಕ 1,200 ಪುಟಗಳಷ್ಟು ಪ್ರತಿಕ್ರಿಯೆಗಳು ಓದುಗರಿಂದ ಬಂದಿದ್ದವು. ಅವುಗಳು ಪುಸ್ತಕ ರೂಪದಲ್ಲಿ ಬಂದರೆ ತೇಜಸ್ವಿ ಅವರ ಬೇರೆಯದೇ ಜಗತ್ತು ತೆರೆದುಕೊಳ್ಳಲಿದೆ’ ಎಂದು ಸಾಹಿತಿ ಬಿ.ಎನ್. ಶ್ರೀರಾಮ್ ತಿಳಿಸಿದರು.

ಮೂನಿಸ್ವಾಮಿ ಆ್ಯಂಡ್ ಸನ್ಸ್, ಎಂ.ಚಂದ್ರಶೇಖರ್ ಪ್ರತಿಷ್ಠಾನ ಹಾಗೂ ಪೂರ್ಣಚಂದ್ರ ಸಾಂಸ್ಕೃತಿಕ ಅಧ್ಯಯನ ಕೇಂದ್ರ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಸಮಗ್ರ ಕೃತಿ ಜಗತ್ತು 14 ಸಂಪುಟಗಳು ಮತ್ತು ‘ತೇಜಸ್ವಿ ಎಂಬ ವಿಸ್ಮಯ’ ಸಾಕ್ಷ್ಯಚಿತ್ರ ಸರಣಿ ಬಿಡುಗಡೆ, ‘ತೇಜಸ್ವಿ ಸಾಹಿತ್ಯ–ಸಾಂಸ್ಕೃತಿಕ ಹಬ್ಬ’ ರಾಷ್ಟ್ರೀಯ ವಿಚಾರಸಂಕಿರಣ ಉದ್ಘಾಟಿಸಿ, ಮಾತನಾಡಿದರು.

‘ತೇಜಸ್ವಿ ಅವರ ಸಾಹಿತ್ಯ ಪ್ರಸಿದ್ಧಿಯಾಗಲು ಓದುಗರೊಂದಿಗೆ ಅವರಿಗೆ ಇದ್ದ ಸಂವಹನವೇ ಕಾರಣ. ಅವರ ಕೃತಿಗಳನ್ನು ಓದುತ್ತಿದ್ದರೆ ಸ್ವತಃ ಅವರೇ ಕಿವಿಯಲ್ಲಿ ಹೇಳಿದಂತೆ ಭಾಸವಾಗುತ್ತದೆ. ಕುವೆಂಪು ಅವರಿಂದ ಬಂದಿರುವ ತಿಳಿಹಾಸ್ಯದ ಜತೆಗೆ ಸ್ವಲ್ಪ ರಾಜಕೀಯ, ಸಾಹಿತ್ಯ ಹಾಗೂ ಸ್ವಲ್ಪ ತುಂಟಾಟವನ್ನು ಅವರ ಕೃತಿಗಳಲ್ಲಿ ಕಾಣಬಹುದು. ಕಠಿಣವಾದ ವಿಷಯಗಳನ್ನೂ ಅರ್ಥವಾಗುವ ರೀತಿಯಲ್ಲಿ ಬರೆಯುತ್ತಿದ್ದರು. ಲೇಖಕರಾದವರು ತಾನು ಬರೆದದ್ದು ಬೇರೆಯವರಿಗೆ ಅರ್ಥವಾಗುತ್ತದೆಯೋ ಇಲ್ಲವೋ ಎಂದು ತಿಳಿದು, ಬರೆಯಬೇಕು’ ಎಂದು ಹೇಳಿದರು.

‘ತೇಜಸ್ವಿ ಎಂಬ ವಿಸ್ಮಯ’ ಸಾಕ್ಷ್ಯಚಿತ್ರ ಸರಣಿ ಬಿಡುಗಡೆ ಮಾಡಿದ ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಮಾತನಾಡಿ, ‘ತೇಜಸ್ವಿ ಅವರ ಜೀವನವೇ ಒಂದು ಸಂದೇಶ. ಅವರ ವ್ಯಕ್ತಿತ್ವ ಆಶ್ಚರ್ಯ ಹುಟ್ಟಿಸುತ್ತದೆ. ಅವರು ಆಗಲೇ ಹವಾಮಾನ ವೈಪರೀತ್ಯದಂತಹ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದರು. ಈಗ ಪ್ರಕೃತಿಯ ವಿಕೋಪ ದೊಡ್ಡ ಸವಾಲಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿರುವ ಈ ಕಾಲದಲ್ಲಿ ಅವುಗಳನ್ನು ಪರಿಸರಕ್ಕೆ ಪೂರಕವಾಗಿ ಯಾವ ರೀತಿ ಅಳವಡಿಸಿಕೊಳ್ಳುತ್ತೇವೆ ಎನ್ನುವುದೂ ಮುಖ್ಯವಾಗುತ್ತದೆ’ ಎಂದರು.

ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಕೆ. ಚಿದಾನಂದಗೌಡ ಮಾತನಾಡಿ, ‘ತೇಜಸ್ವಿ ಅವರು ತಮ್ಮ ಅನುಭವವನ್ನು ಕೃತಿಗಳಲ್ಲಿ ದಾಖಲಿಸಿದ್ದಾರೆ. ಇದರಿಂದ ಅವರು ನಮಗೆ ಆಪ್ತರಾಗುತ್ತಾರೆ. ಈಗ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಬಗ್ಗೆ ಚರ್ಚೆ ಮಾಡಲಾಗುತ್ತಿದೆ. ತೇಜಸ್ವಿ ಅವರು ಆಗಲೇ ತಮ್ಮ ಕೃತಿಗಳಲ್ಲಿ ಜೀವಿಗಳಲ್ಲಿನ ‘ಸ್ವಾಭಾವಿಕ ಕೃತಕಬುದ್ಧಿಮತ್ತೆ’ ಬಗ್ಗೆ ಪ್ರಸ್ತಾಪಿಸಿದ್ದರು’ ಎಂದು ಹೇಳಿದರು.

ಪೂರ್ಣಚಂದ್ರ ಸಾಂಸ್ಕೃತಿಕ ಅಧ್ಯಯನ ಕೇಂದ್ರದ ನಿರ್ದೇಶಕ ಕೆ.ಸಿ. ಶಿವಾರೆಡ್ಡಿ ಮಾತನಾಡಿ, ‘ತೇಜಸ್ವಿ ಅವರ ಸಾಹಿತ್ಯದ ಓದು ಆತ್ಮವಿಶ್ವಾಸ ಹೆಚ್ಚಳ ಹಾಗೂ ಗಂಭೀರ ಬದುಕಿಗೆ ಪ್ರೇರಣೆ ನೀಡುತ್ತದೆ. ಲಕ್ಷಾಂತರ ರೂಪಾಯಿ ವೇತನ ಪಡೆಯುತ್ತಿದ್ದ ಐಟಿ–ಬಿಟಿ ಉದ್ಯೋಗಿಗಳು ಅವರ ಪ್ರೇರಣೆಯಿಂದ ಗ್ರಾಮೀಣ ಪ್ರದೇಶಕ್ಕೆ ಹೋದ ಉದಾಹರಣೆಗಳಿವೆ. ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳುವುದು ಹೇಗೆ ಎನ್ನುವುದನ್ನು ಅವರು ತೋರಿಸಿಕೊಟ್ಟಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದಲಿತ ಯುವಕನ ಕೈ ಕಡಿದ ರೌಡಿಗಳ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): ತಾಲ್ಲೂಕಿನ ಮಳಗಾಳು ಗ್ರಾಮದಲ್ಲಿ ವಾರದ ಹಿಂದೆ ದಲಿತ ಯುವಕನ ಕೈ ಕಡಿದ ಪ್ರಕರಣದ ಪ್ರಮುಖ ಆರೋಪಿಗಳಾದ ಹರ್ಷ ಅಲಿಯಾಸ್ ಕೈಮ ಮತ್ತು ಕರುಣೇಶ್ ಅಲಿಯಾಸ್ ಕನ್ನು ಎಂಬ ರೌಡಿಗಳ ಕಾಲಿಗೆ ಪೊಲೀಸರು ಭಾನುವಾರ ಬೆಳಗಿನ ಜಾವ ಗುಂಡು ಹಾರಿಸಿ ಬಂಧಿಸಿದ್ದಾರೆ.

ರೌಡಿಗಳು ನಡೆಸಿದ ಹಲ್ಲೆಯಲ್ಲಿ ಕನಕಪುರ ಟೌನ್ ಪೊಲೀಸ್ ಠಾಣೆಯ ಇಬ್ಬರು ಹೆಡ್ ಕಾನ್‌ಸ್ಟೆಬಲ್ ಸಹ ಗಾಯಗೊಂಡಿದ್ದಾರೆ. ಗುಂಡೇಟಿನಿಂದ ಗಾಯಗೊಂಡಿರುವ ಆರೋಪಿಗಳಿಗೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ಬಳಿಕ ಸಂಜಯ್ ಗಾಂಧಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಆಸ್ಪತ್ರೆಗೆ ಭೇಟಿ ನೀಡಿದ್ದರು.

ಆರೋಪಿ ಹರ್ಷ ಅಲಿಯಾಸ್ ಕೈಮ

ಕರುಣೇಶ ಅಲಿಯಾಸ್ ಕನ್ನು

ದಲಿತ ಯುವಕ ಅನೀಶ್ ಕೈ ಕಡಿದ ಬಳಿಕ ತಲೆ ಮರೆಸಿಕೊಂಡಿದ್ದ ಆರೋಪಿಗಳಿಬ್ಬರು ಕಗ್ಗಲಿಪುರದ ವ್ಯಾಲಿ ಸ್ಕೂಲ್ ರಸ್ತೆ ಸಮೀಪ ಬಚ್ಚಿಟ್ಟುಕೊಂಡಿದ್ದರು.

ಬಂಧಿಸಲು ತೆರಳಿದ್ದ ಕನಕಪುರ ಟೌನ್ ಠಾಣೆ ಪೊಲೀಸರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ ಆರೋಪಿಗಳ ಕಾಲಿಗೆ ಪೊಲೀಸರು ಗುಂಡು ಹೊಡೆದರು. ಸ್ಥಳದಲ್ಲೇ ಕುಸಿದು ಬಿದ್ದ ಇಬ್ಬರನ್ನೂ ವಶಕ್ಕೆ ಪಡೆದರು ಎಂದು ಚನ್ನಪಟ್ಟಣ ಡಿವೈಎಸ್ಪಿ ಕೆ.ಸಿ. ಗಿರಿ ‘ಪ್ರಜಾವಾಣಿ’ಗೆ ತಿಳಿಸಿದರು.

ಕೃತ್ಯದಲ್ಲಿ ಏಳು ಮಂದಿ ಭಾಗಿಯಾಗಿದ್ದು, ಘಟನೆ ಮಾರನೇ ದಿನವೇ ಐವರನ್ನು ಬಂಧಿಸಲಾಗಿದೆ. ಆರೋಪಿಗಳ ವಿರುದ್ಧ ಕೊಲೆ ಯತ್ನ, ಪರಿಶಿಷ್ಟರ ಮೇಲೆ ದೌರ್ಜನ್ಯ ಸೇರಿ ಐದು ಪ್ರಕರಣಗಳಿವೆ. ಆರೋಪಿಗಳು ಚೇತರಿಸಿಕೊಂಡ ಬಳಿಕ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು ಎಂದರು.

ಜುಲೈ 21ರಂದು ರಾತ್ರಿ ರೌಡಿ ಹರ್ಷ ಹಾಗೂ ಸಂಗಡಿಗರು ಮಾರಕಾಸ್ತ್ರಗಳೊಂದಿಗೆ ಬೈಕ್‌ನಲ್ಲಿ ಕಾಲೊನಿಗೆ ನುಗ್ಗಿ ಮನೆ ಎದುರು ಕುಳಿತಿದ್ದ ಅನೀಶ್ ಕೈ ಕತ್ತರಿಸಿದ್ದರು. ಬಿಡಿಸಲು ಬಂದ ಮಹಿಳೆಯರ ಮೇಲೂ ಹಲ್ಲೆ ನಡೆಸಿದ್ದರು. ಸದ್ಯ ಅನೀಶ್ ಬೆಂಗಳೂರಿನ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ನೀತಿ ಆಯೋಗದ ಸಭೆಗೆ ಹಾಜರಾಗದೆ ರಾಜ್ಯಕ್ಕೆ ಅನ್ಯಾಯ’

ಪ್ರಜಾವಾಣಿ ವಾರ್ತೆ

ಗದಗ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯಕ್ಕೆ ಬೇಕಾದ ಯೋಜನೆಗಳ ಕುರಿತು ಚರ್ಚಿಸುವ ನೀತಿ ಆಯೋಗದ ಸಭೆಗೆ ಗೈರು ಹಾಜರಾಗುವ ಮೂಲಕ ರಾಜ್ಯಕ್ಕೆ ಅನ್ಯಾಯ ಮಾಡಿದ್ದಾರೆ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಭಾನುವಾರ ಇಲ್ಲಿ ಮಾತನಾಡಿದ ಅವರು, ‘ರೈಲ್ವೆ ಸೇರಿದಂತೆ ಪ್ರಮುಖ ಯೋಜನೆಗಳಿಗೆ ರಾಜ್ಯ ಸರ್ಕಾರ ತನ್ನ ಪಾಲಿನ ಹಣ ಕೊಡದೆ ಕೇಂದ್ರ ಸರ್ಕಾರದ ವಿರುದ್ಧ ಅಸಹಕಾರ ತೋರುತ್ತಿದೆ. ಕಾಂಗ್ರೆಸ್ ಪಕ್ಷದವರು ಅಪಪ್ರಚಾರದಲ್ಲಿ ನಿಸ್ಸೀಮರು. ನಿರಂತರವಾಗಿ ಕೇಂದ್ರದ ಮೇಲೆ ಆಪಾದನೆ ಮಾಡುವುದು ಅವರಿಗೆ ಚಟವಾಗಿದೆ’ ಎಂದರು.

‘ನಾವು ಅಧಿಕಾರದಲ್ಲಿದ್ದಾಗ ಉಳಿತಾಯ ಬಜೆಟ್ ಮಂಡಿಸಿದ್ದೆವು. ಈಗ ಸಿಎಂ ₹1,631 ಕೋಟಿ ಕೊರತೆ ಬಜೆಟ್ ಮಂಡಿಸಿದ್ದಾರೆ’ ಎಂದು ಟೀಕಿಸಿದರು.

ಸಿಎಂ, ಡಿಸಿಎಂ ನಾಳೆ ದೆಹಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಮತ್ತು ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಗಳನ್ನು ಮುಂದಿಟ್ಟು ಬಿಜೆಪಿ- ಜೆಡಿಎಸ್ ಮೈತ್ರಿಕೂಟ ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ನಡೆಸಲು ಮುಂದಾಗಿರುವ ಮಧ್ಯೆಯೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಂಗಳವಾರ (ಜುಲೈ 30) ದೆಹಲಿಗೆತೆರಳುತ್ತಿರುವುದು ರಾಜ್ಯ ರಾಜಕೀಯ ವಲಯದಲ್ಲಿ ಕುತೂಹಲ ಕೆರಳಿಸಿದೆ.

ಪಕ್ಷದ ವರಿಷ್ಠರ ಆಹ್ವಾನದ ಮೇರೆಗೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ದೆಹಲಿಗೆ ತೆರಳಲಿದ್ದಾರೆ. ಮಂಗಳವಾರ ಸಂಜೆ 4 ಗಂಟೆಗೆ ಎಐಸಿಸಿ ನಾಯಕರ ಜೊತೆ ಸಭೆ ನಿಗದಿಯಾಗಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ರಾಜ್ಯದಲ್ಲಿ ಬಾಕಿ ಉಳಿದಿರುವ ಯೋಜನೆಗಳ ಬಗ್ಗೆ ಕೇಂದ್ರದ ನಾಯಕರ ಜೊತೆ ಚರ್ಚಿಸುವ ಉದ್ದೇಶದಿಂದ ಇಬ್ಬರು ನಾಯಕರು ದೆಹಲಿಗೆ ತೆರಳುತ್ತಿದ್ದಾರೆಯೇ ಹೊರತು, ಹಗರಣ ಅಥವಾ ರಾಜ್ಯ ರಾಜಕೀಯಕ್ಕೆ ಸಂಬಂಧಿಸಿ ಅಲ್ಲ. ಈ ಭೇಟಿ ಪೂರ್ವಯೋಜಿತ. ಕೇಂದ್ರದ ಜಲಶಕ್ತಿ ಸಚಿವರೂ ಸೇರಿದಂತೆ ಕೆಲವು ಸಚಿವರನ್ನೂ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಭೇಟಿ ಮಾಡಿ ಚರ್ಚೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಇದೇ ವೇಳೆ ಉಭಯ ನಾಯಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಚರ್ಚೆ ನಡೆಸಲಿದ್ದಾರೆ. ‘ಹಗರಣಗಳಿಂದ ಉಂಟಾಗಿರುವ ರಾಜಕೀಯ ಪರಿಸ್ಥಿತಿಯ ಬಗ್ಗೆಯೂ ಮಾಹಿತಿ ನೀಡುವ ಸಾಧ್ಯತೆಯಿದೆ. ಇವರಿಬ್ಬರ ಜತೆ ಇನ್ನೂ ಕೆಲವು ಸಚಿವರು ದೆಹಲಿಗೆ ಹೋಗಲಿದ್ದಾರೆ’ ಎಂದೂ ಮೂಲಗಳು ಹೇಳಿವೆ.

ಹೊಸ ರಾಜಕೀಯ ಪಕ್ಷ ಹುಟ್ಟು: ಚಿಂತನೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಕೋಲಾರ: ಸಾಹಿತಿ, ಚಿಂತಕ ಕೋಟಿಗಾನಹಳ್ಳಿ ರಾಮಯ್ಯ ನೇತೃತ್ವದಲ್ಲಿ ರಾಜ್ಯದಲ್ಲಿ ಪರ್ಯಾಯ ರಾಜಕಾರಣಕ್ಕಾಗಿ ಹೊಸ ರಾಜಕೀಯ ಪಕ್ಷ ಹುಟ್ಟು ಹಾಕುವ ಚಿಂತನೆಗೆ ಭಾನುವಾರ ಚಾಲನೆ ದೊರೆತಿದೆ.

ಬುದ್ಧಿ ದೀಪ ಆಶ್ರಯದಲ್ಲಿ ನಗರದ ನಚಿಕೇತ ನಿಲಯ ಆವರಣದ ಬುದ್ಧ ಮಂದಿರದಲ್ಲಿ ‘ಪ್ರತಿರೋಧದ ದನಿಗಳು’ ಅಡಿ ಪೂರ್ವಭಾವಿ ಸಭೆ ನಡೆಯಿತು. ಕೋಲಾರ, ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು, ಚಿಕ್ಕಬಳ್ಳಾಪುರದಿಂದ ವಿವಿಧ ಸಂಘಟನೆಗಳ ಮುಖಂಡರು ಪಾಲ್ಗೊಂಡಿದ್ದರು. ತಾತ್ಕಾಲಿಕವಾಗಿ ಸಮಿತಿಯೊಂದನ್ನು ರಚಿಸಲಾಯಿತು. ಪರಿಶಿಷ್ಟ ಜಾತಿ ಹಾಗೂ ವರ್ಗಗಳಿಗೆ ಮೀಸಲಿಟ್ಟಿರುವ ವಿಶೇಷ ಘಟಕದ ಹಣವನ್ನು ಸರ್ಕಾರ ವಿವಿಧ ಗ್ಯಾರಂಟಿ ಯೋಜನೆಗಳಿಗೆ ಪಲ್ಲಟಗೊಳಿಸಿರುವುದನ್ನು ಮುಖಂಡರು ಖಂಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಕೋಟಿಗಾನಹಳ್ಳಿ ರಾಮಯ್ಯ ಮಾತನಾಡಿ, ‘ರಾಜಕೀಯ ಪಕ್ಷಗಳು ಈ ನೆಲದ ನೋವು ಮರೆತಿರುವ ಹಿನ್ನೆಲೆಯಲ್ಲಿ ಹೊಸ ಪಕ್ಷ ಹಾಗೂ ಪರ್ಯಾಯ ರಾಜಕಾರಣದ ಅಗತ್ಯವಿದೆ. ಈ ಸಂಬಂಧ ದೊಡ್ಡಮಟ್ಟದಲ್ಲಿ ಚರ್ಚೆ, ಸಂವಾದ, ಜಾಗೃತಿ ನಡೆಯಬೇಕಿದೆ’ ಎಂದು ಪ್ರತಿಪಾದಿಸಿದರು.

‘ಪರ್ಯಾಯ ರಾಜಕಾರಣದ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ನಮಗೆ ರಾಜಕೀಯ ಶಕ್ತಿಯಾಗಿ ಹೊರ ಹೊಮ್ಮಲು ಸಾಧ್ಯವಾಗಿಲ್ಲ. ಈಗ ರಾಜಕೀಯ ಪ್ರಜ್ಞೆ ಜಾಗೃತವಾಗಿದೆ. ಅದಕ್ಕೆ ಸಾಣೆ ಹಿಡಿಯಬೇಕು’ ಎಂದು ಪ್ರೊ.ಹರಿರಾಂ ಹೇಳಿದರು.

‘ರಾಜ್ಯದಲ್ಲಿ ಬಿಎಸ್‌ಪಿ ಶಕ್ತಿ ಕಳೆದುಕೊಂಡಿದೆ. ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡ ಜೆಡಿಎಸ್ ಅಸ್ತಿತ್ವ ಕಳೆದುಕೊಳ್ಳುವ ಹಂತದಲ್ಲಿದೆ. ಕುಟುಂಬ ರಾಜಕಾರಣ ಕಾಣುತ್ತಿದ್ದೇವೆ, ಹಣದ ಶಕ್ತಿಯೊಂದೇ ಕೆಲಸ ಮಾಡುತ್ತಿದೆ. ಇದಕ್ಕೆ ಬ್ರೇಕ್ ಹಾಕಬೇಕಿದೆ’ ಎಂದು ಮುಖಂಡ ಸೋಸಲೆ ಸಿದ್ದರಾಜು ಹೇಳಿದರು.

ಬರಗೂರು ಸಾಂಸ್ಕೃತಿಕ ಸ್ನೇಹಗೌರವ ಕಾರ್ಯಕ್ರಮದಲ್ಲಿ ವೀರಪ್ಪ ಮೊಯಿಲಿ

ಏಕಸಂಸ್ಕೃತಿ ಹೇರುವವರು ಭಾರತೀಯರೇ ಅಲ್ಲ

ಪ್ರಜಾವಾಣಿ ವಾರ್ತೆ

ಸಾಹಿತಿ ಬರಗೂರು ರಾಮಚಂದ್ರಪ್ಪ ಅವರಿಗೆ ‘ಸಾಂಸ್ಕೃತಿಕ ಸ್ನೇಹಗೌರವ’ ನೀಡಿ ಸನ್ಮಾನಿಸಲಾಯಿತು. ಕೇರಳದ ಮಾಜಿ ಸಚಿವೆ ಶೈಲಜಾ ಟೀಚರ್‌, ಬರಗೂರು ರಾಮಚಂದ್ರಪ್ಪ ಅವರ ಸೊಸೆ, ಮೊಮ್ಮಗ, ಮಗ, ವಿಧಾನಪರಿಷತ್ ಸದಸ್ಯ ಪುಟ್ಟಣ್ಣ, ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ, ಸಾಹಿತಿ ಚಂದ್ರಶೇಖರ ಕಂಬಾರ ಮತ್ತು ಮರಾಠಿ ಲೇಖಕ ಶರಣಕುಮಾರ್ ಲಿಂಬಾಳೆ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ಬಹುರೂಪವೇ ಭಾರತೀಯ ಸಂಸ್ಕೃತಿ. ಅದನ್ನು ಗುರುತಿಸದವರು, ಏಕರೂಪ ಹೇರುವ ಸಂಕುಚಿತ ಮನಸ್ಥಿತಿಯವರು ಭಾರತೀಯರೆಂದು ಕರೆಸಿಕೊಳ್ಳಲು ಅನರ್ಹರು ಎಂದು ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ ಪ್ರತಿಪಾದಿಸಿದರು.

ಬರಗೂರು ರಾಮಚಂದ್ರಪ್ಪ 75 ವರ್ಷ ದಾಟಿದ ಪ್ರಯುಕ್ತ ಬರಗೂರು ಸ್ನೇಹಬಳಗ ಭಾನುವಾರ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಸ್ನೇಹಗೌರವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಶವು ಬಹುಭಾಷೆ, ಬಹುಸಂಸ್ಕೃತಿಯಿಂದ ಕೂಡಿದೆ. ಒಂದು ಪ್ರಧಾನ ಸಂಸ್ಕೃತಿ, ಪ್ರಧಾನ ಭಾಷೆ ಎಂಬುದಿಲ್ಲ. ಎಲ್ಲವೂ ಪ್ರಧಾನ ಸಂಸ್ಕೃತಿ, ಭಾಷೆಗಳೇ ಆಗಿವೆ. ಎಲ್ಲ ಭಾಷೆಗಳನ್ನು ಅಭಿವೃದ್ಧಿ ಮಾಡಲು ಕೇಂದ್ರ ಸರ್ಕಾರ ಕ್ರಮ ವಹಿಸಬೇಕು. ಆಯಾ ರಾಜ್ಯಗಳು ರಾಜ್ಯದ ಭಾಷೆಗಳನ್ನು ಬೆಳೆಸಬೇಕು ಎಂದು ಸಲಹೆ ನೀಡಿದರು.

ಬರಗೂರು ಅವರ ವ್ಯಕ್ತಿತ್ವವು ಬಂಡಾಯಕ್ಕೆ ಸೀಮಿತವಾದುದಲ್ಲ. ಅದನ್ನು ಮೀರಿ ಬೆಳೆದವರು. ಬಹುಮುಖಿ ಚಿಂತನೆಯ ಅವರು ಬಹುತ್ವದ ರಾಷ್ಟ್ರೀಯ ವಕ್ತಾರ ಎಂದು ಬಣ್ಣಿಸಿದರು.

ಕೇರಳದ ಮಾಜಿ ಸಚಿವೆ ಶೈಲಜಾ ಟೀಚರ್ ಮಾತನಾಡಿ, ‘ಪ್ರಜಾಪ್ರಭುತ್ವ, ಜಾತ್ಯತೀತ, ಸಮಾಜವಾದಿ, ಸಾರ್ವಭೌಮ ತತ್ವಗಳನ್ನು ಇಟ್ಟುಕೊಂಡು ಅನೇಕರೊಂದಿಗೆ ಚರ್ಚಿಸಿ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನವನ್ನು ರಚಿಸಿದ್ದರು. ಇಂದು ಈ ತತ್ವಗಳಿಗೆ ಸಂಚಕಾರ ಬಂದಿದೆ. ಸಮಾನತೆ ಮತ್ತು ಅವಕಾಶಗಳು ಎಲ್ಲರಿಗೂ ಸರಿಯಾಗಿ ಸಿಗಬೇಕು ಎಂಬ ಚಿಂತನೆಗೆ ತೊಡಕು ಉಂಟಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಮರಾಠಿ ಲೇಖಕ ಶರಣಕುಮಾರ್ ಲಿಂಬಾಳೆ ಮಾತನಾಡಿ, ‘ಬರಗೂರು ಕೇವಲ ಬರಹಗಾರನಲ್ಲ, ಅವರೊಬ್ಬ ಸಾಮಾಜಿಕ ಕಾರ್ಯಕರ್ತನೂ ಹೌದು. ಶರಣ ಚಳವಳಿಯ ಆಧುನಿಕ ರೂಪವೇ ಬಂಡಾಯ ಸಾಹಿತ್ಯ’ ಎಂದು ವಿಶ್ಲೇಷಿಸಿದರು.

ಸಾಹಿತಿ ಬರಗೂರು ರಾಮಚಂದ್ರಪ್ಪ ಮಾತನಾಡಿ, ‘ಸುಳ್ಳಿನ ಸಾಮ್ರಾಜ್ಯವನ್ನೇ ಕಟ್ಟುವವರ ಮುಂದೆ ಸತ್ಯ ಸೋಲು ಕಾಣಬಹುದು ಎಂಬ ಆತಂಕವಿದೆ. ಈ ಕಾಲದಲ್ಲಿ ಬರಹಗಾರ ಮಾತ್ರವಲ್ಲ, ಎಲ್ಲ ಮರ್ಯಾದಸ್ಥ ಮನುಷ್ಯರು ಜನರಿಗೆ ಸತ್ಯ, ಸಮಾನತೆ, ಸ್ವಾತಂತ್ರ್ಯ ಮತ್ತು ಮಾನವೀಯತೆಯನ್ನು ಮುಟ್ಟಿಸುವ ಸೇತುವೆಗಳಾಗಬೇಕು. ಕಟ್ಟ ಕಡೆಯ ವ್ಯಕ್ತಿಗೆ ಗೌರವ ನೀಡುವುದೇ ಮೊಟ್ಟ ಮೊದಲ ಆದ್ಯತೆಯಾಗಬೇಕು’ ಎಂದು ತಿಳಿಸಿದರು.

ಯಲ್ಲಪ್ಪ ಹಿಮ್ಮಡಿ ಸಂಪಾದಿಸಿದ ‘ಬರಗೂರ್ ಬುಕ್’ ಮತ್ತು ರಾಜು ಗುಂಡಾಪುರ, ಬಿ.ರಾಜಶೇಖರಮೂರ್ತಿ ಸಂಪಾದಿಸಿದ ‘ನಮ್ಮ ಬರಗೂರ್ ಮೇಸ್ಟ್ರು’ ಕೃತಿಗಳನ್ನು ಸಾಹಿತಿ ಚಂದ್ರಶೇಖರ ಕಂಬಾರ ಅವರು ಜನಾರ್ಪಣೆ ಮಾಡಿದರು. ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಶುಭ ಹಾರೈಸಿದರು.

ಸೋಮವಾರ, ಜುಲೈ 29, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 210 | ಪುಟ 14
www.prajavani.net
prajavani.net prajavani Prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿದೇಶ ವಿದ್ಯಮಾನ
ಶಸ್ತ್ರಾಸ್ತ್ರ ಪೈಪೋಟಿ ಆತಂಕ
‘ಬೈಡನ್ ವಿರುದ್ಧ ಸ್ವಪಕ್ಷದಿಂದ ಷಡ್ಯಂತರ’ 9
‘ಬಜೆಟ್: ಕರ್ನಾಟಕಕ್ಕೆ ಅನ್ಯಾಯ ಆಗಿಲ್ಲ’ 8

ಒಲಿಂಪಿಕ್ಸ್ ಶೂಟಿಂಗ್: ಮಹಿಳೆಯರ ವಿಭಾಗದಲ್ಲಿ ಭಾರತಕ್ಕೆ ಒಲಿದ ಮೊದಲ ಪದಕ

ಮನು ಭಾಕರ್‌ಗೆ ಕಂಚಿನ ಹಾರ

ಪ್ಯಾರಿಸ್(ಪಿಟಿಐ): ಭಾರತದ ಮನು ಭಾಕರ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾನುವಾರ ನಡೆದ ಮಹಿಳೆಯರ 10 ಮೀಟರ್ಸ್ ಪಿಸ್ತೂಲ್ ಶೂಟಿಂಗ್‌ನಲ್ಲಿ ಕಂಚಿನ ಪದಕ ಜಯಿಸಿದರು. ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ಪದಕ ಸಾಧನೆ ಮಾಡಿದ ಭಾರತದ ಮೊದಲ ಮಹಿಳೆಯೆಂಬ ಹೆಗ್ಗಳಿಕೆಗೆ ಪಾತ್ರರಾದರು.

- ದಕ್ಷಿಣ ಕೊರಿಯಾದವರಾದ ಜಿನ್ ಯೆ ಒಹ್ (243.2) ಹಾಗೂ ಕಿಮ್ ಯಾಜಿ (241.3) ಕ್ರಮವಾಗಿ ಚಿನ್ನ, ಬೆಳ್ಳಿ ಪದಕ ಗೆದ್ದರು.
- ಹೋದ ವರ್ಷದ ವಿಶ್ವ ಶೂಟಿಂಗ್‌ನಲ್ಲಿ ಮಹಿಳೆಯರ 25 ಮೀ ಪಿಸ್ತೂಲ್ ಸ್ಪರ್ಧೆಯಲ್ಲಿ ಮನು ಚಿನ್ನ ಜಯಿಸಿದ್ದರು
- ಮನು ಅವರು ಹರಿಯಾಣದ ಝಜ್ಜರ್ ಜಿಲ್ಲೆಯ ಗೊರಿಯಾ ಗ್ರಾಮದಲ್ಲಿ ಜನಿಸಿದವರು. ಅವರಿಗೆ ಈಗ 22 ವರ್ಷ.
- ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ಭಾರತಕ್ಕೆ 12 ವರ್ಷಗಳ ನಂತರ ಸಂದ ಪದಕ

221.7 ಮನು ಭಾಕರ್ ಗಳಿಸಿದ ಸ್ಕೋರ್

ಭಾರತದ ಕ್ರೀಡಾಪಟುಗಳ ಭಾನುವಾರದ ಸಾಧನೆ

- ಶೂಟಿಂಗ್: ಮಹಿಳೆಯರ 10 ಮೀ ಏರ್ ರೈಫಲ್ ಸ್ಪರ್ಧೆಯ ಫೈನಲ್‌ಗೆ ರಮಿತಾ ಜಿಂದಾಲ್
- ಬ್ಯಾಡ್ಮಿಂಟನ್: ಮೊದಲ ಪಂದ್ಯದಲ್ಲಿ ಪಿ.ವಿ. ಸಿಂಧು, ಎಚ್.ಎಸ್. ಪ್ರಣಯ್ ಜಯಭೇರಿ
- ಬಾಕ್ಸಿಂಗ್: ಮಹಿಳೆಯರ ಫ್ಲೈವೇಟ್ ವಿಭಾಗದ ಪ್ರೀ ಕ್ವಾರ್ಟರ್‌ಫೈನಲ್‌ಗೆ ನಿಖತ್ ಜರೀನ್
- ಟಿಟಿ: ಮಹಿಳೆಯರ ಸಿಂಗಲ್ಸ್‌ನಲ್ಲಿ ಮಣಿಕಾ ಬಾತ್ರಾ, ಶ್ರೀಜಾ ಅಕುಲಾ ಶುಭಾರಂಭ
- ಶೂಟಿಂಗ್: ಪುರುಷರ 10 ಮೀ ಏರ್ ರೈಫಲ್ ಸ್ಪರ್ಧೆ ಫೈನಲ್‌ಗೆ ಅರ್ಜುನ್ ಬಬುತಾ

ಇನ್ನಷ್ಟು ಸುದ್ದಿಗಳು 11 12

ವಾಲ್ಮೀಕಿ ಅಭಿವೃದ್ಧಿ ನಿಗಮದ ಪ್ರಭಾರ ಎಂ.ಡಿಯಿಂದ ದೋಷಾರೋಪಣೆ ಪಟ್ಟಿ

‘ನಿಗಮ ಅಕ್ರಮ: ಎಂ.ಡಿ ಹೊಣೆ’

• ರಾಜೇಶ್ ರೈ ಚಟ್ಲ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ₹89.63 ಕೋಟಿ ಅನುದಾನ ದುರುಪಯೋಗಕ್ಕೆ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ. ಪದ್ಮನಾಭ ಅವರೇ ಕಾರಣ ಎಂದು ನಿಗಮದ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ ಕೆ.ಆರ್. ರಾಜಕುಮಾರ್ ಅವರು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದಾರೆ.

ಒಟ್ಟು 241 ಪುಟಗಳ ಈ ಪಟ್ಟಿಯಲ್ಲಿ, ಪದ್ಮನಾಭ ಅವರ ಮೇಲೆ ಹೊರಿಸಲಾದ ಒಟ್ಟು 11 ಆರೋಪಗಳು, ಅದಕ್ಕೆ ಸಂಬಂಧಿಸಿದ ಸಮಗ್ರ ವಿವರಣೆ, ದಾಖಲೆಗಳು ಮತ್ತು ಸಾಕ್ಷಿಯ ವಿವರ ನೀಡಲಾಗಿದೆ. ಈ ಆರೋಪ ಪಟ್ಟಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

ಎಂ.ಜಿ. ರಸ್ತೆಯಲ್ಲಿರುವ ಯೂನಿಯನ್ ಬ್ಯಾಂಕಿನ ಖಾತೆಯಲ್ಲಿದ್ದ ಸರ್ಕಾರದ ಅನುದಾನವನ್ನು 2024ರ ಮಾರ್ಚ್ 5ರಿಂದ ಮೇ 6ರ ಮಧ್ಯೆ ಅನಾಮಧೇಯ ವ್ಯಕ್ತಿಗಳು ‘ಡ್ರಾ’ ಮಾಡಿಕೊಂಡಿದ್ದರೂ ಗಮನಿಸದಿರುವುದು ಪದ್ಮನಾಭ ಅವರ ಕರ್ತವ್ಯ ಲೋಪ, ನಿರ್ಲಕ್ಷ್ಯ. ಆರ್ಥಿಕ ನಿಯಮಗಳ ಉಲ್ಲಂಘನೆ. ಅನಾಮಧೇಯ ಖಾತೆಗಳಿಗೆ ಹಣ ವರ್ಗಾವಣೆಯಾಗಲು ಪದ್ಮನಾಭ ಕಾರಣ ಎಂದು ದೋಷಾರೋಪಣೆ ಪಟ್ಟಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಎಲ್ಲ ನಿಗಮಗಳು ವಿವಿಧ ಬ್ಯಾಂಕ್‌ಗಳಲ್ಲಿ ಇರಿಸಿದ್ದ ಹಣವನ್ನು ಪಿ.ಡಿ ಖಾತೆಗೆ ವರ್ಗಾಯಿಸಿ, ಅಲ್ಲಿಂದಲೇ ಆರ್ಥಿಕ ವ್ಯವಹಾರ ನಡೆಸುವಂತೆ ಆರ್ಥಿಕ ಇಲಾಖೆ ಸ್ಪಷ್ಟ ಸೂಚನೆ ನೀಡಿತ್ತು. ಆ ನಿರ್ದೇಶನವನ್ನು ಪದ್ಮನಾಭ ಪಾಲಿಸದಿರುವುದೇ ದೊಡ್ಡ ಮೊತ್ತ ದುರುಪಯೋಗಕ್ಕೆ ಕಾರಣ ಎಂದು ಆರೋಪಿಸಲಾಗಿದೆ.

ವಸಂತನಗರದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಶಾಖೆಯಲ್ಲಿ ನಿಗಮದ ಎಂ.ಡಿ ಹೆಸರಿನಲ್ಲಿದ್ದ ಖಾತೆಯನ್ನು ಸರ್ಕಾರ ಅಥವಾ ಮಂಡಳಿಯ ಅನುಮೋದನೆ ಪಡೆಯದೆ ಎಂ.ಜಿ ರಸ್ತೆಯ ಶಾಖೆಗೆ ವರ್ಗಾಯಿಸಲು ಶಾಖಾ ವ್ಯವಸ್ಥಾಪಕರಿಗೆ ಪದ್ಮನಾಭ ಅವರು ಏಕಪಕ್ಷೀಯವಾಗಿ ಪತ್ರ ಬರೆದಿರುವುದು ನಿಯಮಬಾಹಿರ. ಆರ್ಥಿಕ ಇಲಾಖೆಯ 2017ರ ಜ. 31ರಂದು ಹೊರಡಿಸಿದ್ದ ಸುತ್ತೋಲೆಯಲ್ಲಿರುವ ಮಾರ್ಗಸೂಚಿಯ ಉಲ್ಲಂಘನೆ. ಹೀಗೆ ವರ್ಗಾಯಿಸಿದ ನಂತರ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಲೆಕ್ಕಾಧಿಕಾರಿಯವರ ದೂರವಾಣಿ ಸಂಖ್ಯೆ ಇ-ಮೇಲ್ ಹಾಗೂ ಕೆವೈಸಿ ದತ್ತಾಂಶಗಳನ್ನು ಅಪ್‌ಡೇಟ್ ಮಾಡದೆ ಉದ್ದೇಶಪೂರ್ವವಾಗಿ ತಪ್ಪು ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ಅಪ್‌ಡೇಟ್ ಮಾಡಲಾಗಿದೆ. ಆ ಮೂಲಕ, ಪದ್ಮನಾಭ ಪಾರದರ್ಶಕತೆ ಕಾಯ್ದುಕೊಳ್ಳಲು ವಿಫಲರಾಗಿದ್ದಾರೆ ಎಂದೂ ದೋಷಾರೋಪಣೆಯಲ್ಲಿದೆ.

ಸಿದ್ದಯ್ಯ ರಸ್ತೆ ಮತ್ತು ವಾಣಿವಿಲಾಸ ರಸ್ತೆಯಲ್ಲಿರುವ ಬ್ಯಾಂಕ್ ಆಫ್ ಬರೋಡಾ ಶಾಖೆಗಳಲ್ಲಿ ನಿಗಮದ ಖಾತೆಯಿಂದ ಮತ್ತು ಖಜಾನೆಯಿಂದ ₹187.33 ಕೋಟಿಯನ್ನು ಎಂ.ಜಿ. ರಸ್ತೆಯ ಶಾಖೆಗೆ ವರ್ಗಾಯಿಸಲು ಸರ್ಕಾರ ಮತ್ತು ಮಂಡಳಿಯ ಅನುಮೋದನೆ ಪಡೆದಿಲ್ಲ. ಇದು ಆರ್ಥಿಕ ಇಲಾಖೆ ಅನುಮತಿಸಿದ ವಿತ್ತೀಯ ಮಿತಿಯ ಉಲ್ಲಂಘನೆಯಾಗಿದೆ.

4ನೇ ಪುಟ ನೋಡಿ

‘ಅಕ್ರಮ ಗೊತ್ತಿದ್ದೂ ಮರೆಮಾಚಿದ್ದ ಎಂ.ಡಿ’

ಪದ್ಮನಾಭ ಮತ್ತು ಲೆಕ್ಕಾಧಿಕಾರಿಯ ಸಹಿಯಲ್ಲಿ ₹50 ಕೋಟಿ ಒಂದು ವರ್ಷಕ್ಕೆ ನಿಶ್ಚಿತ ಠೇವಣಿ ಮಾಡಲು ಸರ್ಕಾರ ಅಥವಾ ನಿರ್ದೇಶಕರ ಮಂಡಳಿಯ ಅನುಮೋದನೆ ಪಡೆದಿಲ್ಲ. ಸಾಲ ಪಡೆಯಲು ನಿಗಮಕ್ಕೆ ಅವಕಾಶವಿಲ್ಲ. ಆದರೂ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಲೆಕ್ಕಾಧಿಕಾರಿಯು ₹44.62 ಕೋಟಿಯ ಓವರ್ ಡ್ರಾಫ್ಟ್ (ಒ.ಡಿ) ಪಡೆದಿದ್ದಾರೆ. ಎಂ.ಜಿ ರಸ್ತೆಯ ಶಾಖೆಯಲ್ಲಿ ನಿಗಮದ ಎಸ್.ಬಿ ಖಾತೆಯಲ್ಲಿ ಲಭ್ಯವಿದ್ದ ಮೊತ್ತದಲ್ಲಿ ₹89.63 ಕೋಟಿಯನ್ನು ವ್ಯವಸ್ಥಾಪಕ ನಿರ್ದೇಶಕ ಮತ್ತು ಲೆಕ್ಕಾಧಿಕಾರಿಯ ಜಂಟಿ ಸಹಿ ಮಾಡಿದ ಆರ್‌ಟಿಜಿಎಸ್ ಪತ್ರಗಳನ್ನು ಆಧರಿಸಿ 18 ಅನಾಮಧೇಯ ಖಾತೆಗಳಿಗೆ ವರ್ಗಾಯಿಸಲಾಗಿದೆ. ಮೇ 22 ರಂದೇ ಈ ವಿಷಯ ಮತ್ತು ಈ ಮೊತ್ತದಲ್ಲಿ ₹5 ಕೋಟಿಯನ್ನು ನಿಗಮದ ಖಾತೆಗೆ ಯಾವ ವ್ಯಕ್ತಿ, ಯಾವ ಖಾತೆಯಿಂದ ಹಿಂದಿರುಗಿಸಿದ್ದಾರೆಂದು ಗೊತ್ತಿದ್ದೂ ಪದ್ಮನಾಭ ಮರೆ ಮಾಚಿದ್ದರು. ಆತ್ಮಹತ್ಯೆ ಮಾಡಿಕೊಂಡ ಚಂದ್ರಶೇಖರ್ ಪತ್ನಿ ಕವಿತಾ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ, ‘ನನ್ನ ಗಂಡನ ಮರಣ ಹೇಳಿಕೆಯಲ್ಲಿ, ನಿಗಮದಲ್ಲಿ ನಡೆದಿರುವ ಹಣ ಅಕ್ರಮ ವರ್ಗಾವಣೆ ಮತ್ತು ನನ್ನ ಸಾವಿಗೆ ಜೆ.ಜಿ. ಪದ್ಮನಾಭ ಕಾರಣ’ ಎಂದು ತಿಳಿಸಿದ್ದಾರೆ. ಈ ಕುರಿತು ಪ್ರಕರಣ ದಾಖಲಾಗಿದೆ ಎಂದೂ ದೋಷಾರೋಪಣೆ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಆರೋಪ ಸಮರ್ಥನೆಗೆ ದಾಖಲೆಗಳು

- ಎಂ.ಜಿ. ರಸ್ತೆ ಶಾಖೆಗೆ ಖಾತೆ ಬದಲಿಸುವಂತೆ 2024ರ ಫೆ. 19ರಂದು ಬರೆದ ಪತ್ರ
- ಎಂ.ಜಿ. ರಸ್ತೆ ಶಾಖೆಯಲ್ಲಿರುವ ನಿಗಮದ ಎಸ್.ಬಿ ಖಾತೆಯ ‘ಸ್ಟೇಟ್‌ಮೆಂಟ್’
- ಎಂ.ಜಿ. ರಸ್ತೆ ಶಾಖೆಯವರು ನೀಡಿರುವ ಒ.ಡಿ ಖಾತೆಯ ‘ಸ್ಟೇಟ್‌ಮೆಂಟ್’
- ಹಣ ವರ್ಗಾವಣೆಗೆ ಸಂಬಂಧಿಸಿದ 2023–24ರ ಕಡತ
- ₹187.33 ಕೋಟಿ ವರ್ಗಾವಣೆಯಾದ ‘ಸ್ಟೇಟ್‌ಮೆಂಟ್’ಗಳ ವಿವರ
- ಆರೋಪಗಳ ಬಗ್ಗೆ ಸಾಕ್ಷಿ: ಎಸ್.ಎನ್. ಪ್ರಶಾಂತ ಕುಮಾರ್ ನಾಯಕ, ಸಹಾಯಕ ಪ್ರಧಾನ ವ್ಯವಸ್ಥಾಪಕ–1, ವಾಲ್ಮೀಕಿ ಪರಿಶಿಷ್ಟ ಪಂಡಗಳ ಅಭಿವೃದ್ಧಿ ನಿಗಮ

‘ನ್ಯಾಯ’ ಕೊಡ್ತೇನೆ ಎಂದು ಹಣ ದೋಚಿದಿರಿ’

‘ಚುನಾವಣಾ ಪ್ರಚಾರದಲ್ಲಿ, ಪ್ರಣಾಳಿಕೆಯಲ್ಲಿ ‘ನ್ಯಾಯ’ ನೀಡುತ್ತೇವೆ ಎಂದು ನಿಮ್ಮ ಪಕ್ಷದ ನಾಯಕರು ಹೇಳುತ್ತಿದ್ದರು. ಈಗ ವಾಲ್ಮೀಕಿ ಜನರ, ಪರಿಶಿಷ್ಟ ಜನರ ಹಣವನ್ನು ದೋಚಿ ಅವರಿಗೆ ‘ಅನ್ಯಾಯ’ ಮಾಡಿದ್ದೀರಿ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಆರೋಪಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ದುರ್ಬಳಕೆ ಆಗಿರುವುದು ₹187 ಕೋಟಿಯಲ್ಲ, ₹89 ಕೋಟಿ ಎಂದಿದ್ದೀರಿ. ₹89 ಕೋಟಿ ದೋಚಿದ್ದರೂ ಅದು ಹಗರಣವಲ್ಲವೇ. ಇದನ್ನು ನೀವೇ ಒಪ್ಪಿಕೊಂಡಿದ್ದೀರಿ. ಆದರೆ, ಕೇಂದ್ರ ಸರ್ಕಾರದ ಮೇಲೆ ಆರೋಪ ಹೊರಿಸುತ್ತಿದ್ದೀರಿ’ ಎಂದರು.

‘ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಣ ದುರ್ಬಳಕೆ ಪ್ರಕರಣದಲ್ಲಿ ನನ್ನನ್ನು ಪ್ರಶ್ನಿಸುವ ಅಥವಾ ನನ್ನ ರಾಜೀನಾಮೆ ಕೇಳುವ ಹಕ್ಕು ಸಿದ್ದರಾಮಯ್ಯ ಅವರಿಗೆ ಇಲ್ಲ’ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ಈ ಹಗರಣದಲ್ಲಿ ನಾವು ಬ್ಯಾಂಕಿನ ಅಧಿಕಾರಿಗಳ ವಿರುದ್ಧ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಸಿದ್ದರಾಮಯ್ಯ ಸರ್, ನೀವು ಹಣಕಾಸು ಇಲಾಖೆಯ ಮುಖ್ಯಸ್ಥರು. ನೀವು ನ್ಯಾಯಯುತವಾಗಿ ಇದ್ದಿದ್ದೇ ಆಗಿದ್ದರೆ ನೀವೇ ಮೊದಲು ಕ್ರಮ ತೆಗೆದುಕೊಳ್ಳಬೇಕಿತ್ತು. ಈ ಬ್ಯಾಂಕಿನ ಅಧಿಕಾರಿಗಳು ನಮ್ಮ ವಾಲ್ಮೀಕಿ ಜನರ ಹಣವನ್ನು ಕದ್ದಿದ್ದಾರೆ ಎಂದು ಪೊಲೀಸರಿಗೆ ನೀವೇ ಹಿಡಿದುಕೊಡಬೇಕಿತ್ತು. ಆಗ ನನ್ನ ರಾಜೀನಾಮೆ ಕೇಳುವ ಹಕ್ಕು ನಿಮಗೆ ಇರುತ್ತಿತ್ತು’ ಎಂದರು.

ಮಾಲೀಕ, ನಿರ್ವಾಹಕ ಸೆರೆ

ದೆಹಲಿ: ಕೋಚಿಂಗ್ ಸೆಂಟರ್‌ಗೆ ನೀರು ನುಗ್ಗಿ ಮೂರು ಸಾವು

ನವದೆಹಲಿ (ಪಿಟಿಐ): ಕೋಚಿಂಗ್ ಸೆಂಟರ್‌ನ ನೆಲಮಹಡಿಗೆ ಮಳೆ ನೀರು ನುಗ್ಗಿ ಮೂವರು ವಿದ್ಯಾರ್ಥಿಗಳು ಮೃತಪಟ್ಟಿರುವುದಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ತರಬೇತಿ ಕೇಂದ್ರದ ಮಾಲೀಕ ಹಾಗೂ ನಿರ್ವಾಹಕರನ್ನು ಭಾನುವಾರ ಬಂಧಿಸಿದ್ದಾರೆ.

ಘಟನೆಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮಕೈಗೊಳ್ಳುವಂತೆ ಆಗ್ರಹಿಸಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರಿಂದ ಸ್ಥಳದಲ್ಲಿ ಬಿಗುವಿನ ಸ್ಥಿತಿ ನಿರ್ಮಾಣವಾಯಿತು. ಈ ದುರಂತವು ಬಿಜೆಪಿ ಮತ್ತು ಎಎಪಿ ನಾಯಕರ ನಡುವೆ ವಾಕ್ಸಮರಕ್ಕೂ ಕಾರಣವಾಗಿದೆ.

ಶನಿವಾರ ಸಂಜೆ ಸುರಿದ ಭಾರಿ ಮಳೆಗೆ ದೆಹಲಿಯ ಓಲ್ಡ್ ರಾಜೇಂದ್ರ ನಗರದಲ್ಲಿರುವ ‘ರಾವ್ಸ್ ಐಎಎಸ್ ಸ್ಟಡಿ ಸರ್ಕಲ್’ ಕಟ್ಟಡದ ನೆಲಮಹಡಿಗೆ ನೀರು ನುಗ್ಗಿದೆ. ಈ ವೇಳೆ ಮೂವರು ಹೊರಬರಲಾರದೆ ಮುಳುಗಿ ಮೃತಪಟ್ಟಿದ್ದಾರೆ.

‘ನೆಲಮಹಡಿ ಕೆಲವೇ ನಿಮಿಷಗಳಲ್ಲಿ ಮುಳುಗಿದ್ದರಿಂದ ಕೆಲವರಿಗೆ ಹೊರಬರಲು ಸಾಧ್ಯವಾಗಲಿಲ್ಲ. ಕಾರ್ಯಾಚರಣೆ ವೇಳೆ ಮೂರು ಮೃತದೇಹಗಳು ದೊರೆತವು’ ಎಂದು ಡಿಸಿಪಿ (ಕೇಂದ್ರ ದೆಹಲಿ) ಎಂ. ಹರ್ಷವರ್ಧನ ತಿಳಿಸಿದರು.

ಇನ್ನಷ್ಟು ಸುದ್ದಿಗಳು 10

ದೆಹಲಿಯ ಕರೋಲ್ ಬಾಗ್ ಮೆಟ್ರೊ ನಿಲ್ದಾಣದ ಬಳಿ ವಿದ್ಯಾರ್ಥಿಗಳು ಭಾನುವಾರ ಪ್ರತಿಭಟನೆ ನಡೆಸಿದರು — ಪಿಟಿಐ ಚಿತ್ರ

ಇದು ಕೊಲೆಯೇ ಹೊರತು ದುರ್ಘಟನೆಯಲ್ಲ. ಎಎಪಿ ಆಡಳಿತದಲ್ಲಿನ ಭ್ರಷ್ಟಾಚಾರವೇ ಇದಕ್ಕೆ ಕಾರಣ. ಮೃತರ ಕುಟುಂಬಕ್ಕೆ ತಲಾ ₹3 ಕೋಟಿ ಪರಿಹಾರ ನೀಡಬೇಕು
ವೀರೇಂದ್ರ ಸಚ್‌ದೇವ್ ದೆಹಲಿ ಬಿಜೆಪಿ ಅಧ್ಯಕ್ಷ

ಬಿಜೆಪಿ ತನ್ನ 15 ವರ್ಷಗಳ ಆಡಳಿತದಲ್ಲಿ ನಗರದ ಚರಂಡಿ ವ್ಯವಸ್ಥೆಯನ್ನು ಕಡೆಗಣಿಸಿತು. ರಾಜಕೀಯ ಕೆಸರೆರಚಾಟದ ಬದಲು ಘಟನೆ ಬಗ್ಗೆ ಪಾರದರ್ಶಕ ತನಿಖೆ ನಡೆಯಲಿ
ದುರ್ಗೇಶ್ ಪಾಠಕ್, ಎಎಪಿ ಶಾಸಕ

‘ವೇಗದ ಸಂಚಾರಕ್ಕೆ ಕಡಿವಾಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇಗದ ಸಂಚಾರಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಆಗಸ್ಟ್ 1ರಿಂದ 130 ಕಿ.ಮೀ ಗಿಂತ ಹೆಚ್ಚಿನ ವೇಗದಲ್ಲಿ ಸಂಚರಿಸುವ ವಾಹನಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗುವುದು. ರಾಜ್ಯದಾದ್ಯಂತ ಈ ಕ್ರಮ ಜಾರಿಗೆ ಬರಲಿದೆ ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗ) ಅಲೋಕ್ ಕುಮಾರ್ ತಿಳಿಸಿದ್ದಾರೆ.

ಅಲೋಕ್

ಈ ಕುರಿತು ‘ಎಕ್ಸ್’ ಖಾತೆಯಲ್ಲಿ ಸಂದೇಶ ಪೋಸ್ಟ್ ಮಾಡಿರುವ ಅವರು, ‘ಸ್ಪಾಟ್ ಸ್ಪೀಡ್ ಮತ್ತು ಸೆಕ್ಷನಲ್ ಸ್ಪೀಡ್ ಆಧಾರದಲ್ಲಿ ವಾಹನ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿ, ದಂಡ ವಿಧಿಸಲಾಗುವುದು’ ಎಂದು ಮಾಹಿತಿ ನೀಡಿದ್ದಾರೆ.

ಈ ರೀತಿಯ ಪ್ರಕರಣಗಳಲ್ಲಿ ₹2 ಸಾವಿರ ವರೆಗೆ ದಂಡ ಅಥವಾ ಆರು ತಿಂಗಳು ಜೈಲು ಶಿಕ್ಷೆ ವಿಧಿಸಲು ಅವಕಾಶವಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಖಾದಿ ಉತ್ಪನ್ನ ಜನಪ್ರಿಯತೆ ಹೆಚ್ಚಳ: ಪ್ರಧಾನಿ ಮೋದಿ 10

ಜಾಮೀನು ನೀಡದೇ ಇರುವ ಪ್ರವೃತ್ತಿ ಹೆಚ್ಚಳ: ಸಿಜೆಐ ಚಂದ್ರಚೂಡ್ ಕಳವಳ

‘ಹೊಣೆ ದಾಟಿಸುವ ನ್ಯಾಯಾಧೀಶರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪರಾಧ ಪ್ರಕರಣಗಳಲ್ಲಿ ಜಾಮೀನು ನೀಡಬಹುದಾಗಿದ್ದರೂ ನೀಡದೆ, ವಿಚಾರಣಾ ನ್ಯಾಯಾಲಯಗಳ ನ್ಯಾಯಾಧೀಶರು ಹೊಣೆಗಾರಿಕೆಯನ್ನು ಉನ್ನತ ನ್ಯಾಯಾಲಯಗಳಿಗೆ ದಾಟಿಸುವುದು ಈಚೆಗೆ ಹೆಚ್ಚಾಗುತ್ತಿದೆ’ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಕಳವಳ ವ್ಯಕ್ತಪಡಿಸಿದರು.

ಬೆಂಗಳೂರಿನ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ ಮತ್ತು ಆಕ್ಸ್‌ಫರ್ಡ್ ಹ್ಯೂಮನ್ ರೈಟ್ಸ್ ಹಬ್ ನಗರದಲ್ಲಿ ಭಾನುವಾರ ಆಯೋಜಿಸಿದ್ದ ‘ಬರ್ಕ್ಲಿ ಸೆಂಟರ್ ಫಾರ್ ಕಂಪೇರಿಟಿವ್ ಈಕ್ವಲಿಟಿ ಮತ್ತು ಆ್ಯಂಟಿ ಡಿಸ್ಕ್ರಿಮಿನೇಷನ್’ನ 11ನೇ ವಾರ್ಷಿಕ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಸಾಮಾಜಿಕ ಕಾರ್ಯಕರ್ತರು, ಪತ್ರಕರ್ತರು ಮತ್ತು ವಿರೋಧ ಪಕ್ಷಗಳ ನಾಯಕರು– ಮುಖ್ಯಮಂತ್ರಿಯನ್ನೂ ರಾಜಕೀಯ ಪ್ರೇರಿತವಾಗಿ ಬಂಧಿಸುವ ಕೆಲಸ ನಡೆಯುತ್ತಿದೆ. ಕಾನೂನುಬಾಹಿರವಾಗಿ ಅವರನ್ನು ಬಂಧನದಲ್ಲಿ ಇರಿಸಲಾಗುತ್ತಿದೆ ಎಂದು ಸಭಿಕರೊಬ್ಬರು ಪ್ರಸ್ತಾಪಿಸಿದರು.

ಚಂದ್ರಚೂಡ್

ಇದಕ್ಕೆ ಪ್ರತಿಕ್ರಿಯಿಸಿದ ಸಿಜೆಐ ಚಂದ್ರಚೂಡ್ ಅವರು, ‘ಜಾಮೀನು ನೀಡುವಲ್ಲಿ ನ್ಯಾಯಾಧೀಶರು ಪ್ರತಿ ಪ್ರಕರಣದ ಆಳ– ಅಗಲವನ್ನು ಪರಿಶೀಲಿಸಿ, ವಿವೇಚನೆ ಬಳಸಬೇಕು’ ಎಂದರು.

‘ವಿಚಾರಣಾ ನ್ಯಾಯಾಲಯ ಮತ್ತು ಕೆಳ ಹಂತದ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರು ಜಾಮೀನು ನೀಡಿದರೆ, ಅವರ ನಿರ್ಧಾರವನ್ನು ಅನುಮಾನದಿಂದ ನೋಡಲಾಗುತ್ತಿದೆ. ಇದು ಅತ್ಯಂತ ದೊಡ್ಡ ಸಮಸ್ಯೆ. ಈ ಕಾರಣದಿಂದಲೇ ನ್ಯಾಯಾಧೀಶರು ಹೊಣೆಗಾರಿಕೆಯನ್ನು ಉನ್ನತ ನ್ಯಾಯಾಲಯಗಳಿಗೆ ದಾಟಿಸುತ್ತಿದ್ದಾರೆ. ನ್ಯಾಯಾಧೀಶರ ಮೇಲೆ ನಂಬಿಕೆ ಇರಿಸುವ ಕೆಲಸವನ್ನು ನಾವೂ ಮಾಡಬೇಕು’ ಎಂದು ಹೇಳಿದರು.

‘ವಿಚಾರಣಾ ನ್ಯಾಯಾಲಯಗಳಲ್ಲೇ ಜಾಮೀನು ಸಿಗಬೇಕಾದವರಿಗೆ ಅಲ್ಲಿ ಜಾಮೀನು ಸಿಗುತ್ತಿಲ್ಲ. ಅಂತಹವರು ಹೈಕೋರ್ಟ್‌ಗಳಿಗೆ ಹೋಗುತ್ತಿದ್ದಾರೆ. ಹೈಕೋರ್ಟ್‌ಗಳಲ್ಲೇ ಜಾಮೀನು ಸಿಗಬೇಕಾದವರಿಗೆ ಅಲ್ಲಿ ಜಾಮೀನು ಸಿಗುತ್ತಿಲ್ಲ. ಅಂತಹವರು ಸುಪ್ರೀಂ ಕೋರ್ಟ್‌ಗೆ ಬರುತ್ತಿದ್ದಾರೆ. ಪರಿಣಾಮವಾಗಿ, ಅಕ್ರಮವಾಗಿ ಅಥವಾ ಅನಗತ್ಯವಾಗಿ ಬಂಧನದಲ್ಲಿ ಇರುವವರು ಮತ್ತಷ್ಟು ದಿನ ಬಂಧನದಲ್ಲೇ ಇರುವಂತೆ ಆಗುತ್ತಿದೆ’ ಎಂದು ಅವರು ಕಳವಳ ವ್ಯಕ್ತಪಡಿಸಿದರು.

‘ಸುಪ್ರೀಂ ಕೋರ್ಟ್‌ಗೆ ಹೀಗೆ ಬರುವ ಜಾಮೀನು ಅರ್ಜಿಗಳಿಗೇ ನಾವು ಆದ್ಯತೆ ನೀಡುತ್ತಿದ್ದೇವೆ. ನ್ಯಾಯಾಂಗ ವ್ಯವಸ್ಥೆಯ ಆರಂಭಿಕ ಹಂತದಲ್ಲಿ ಇರುವವರೂ ತಮ್ಮ ನಿರ್ಧಾರಕ ಅಧಿಕಾರದ ಕರ್ತವ್ಯವನ್ನು ನಿರ್ವಹಿಸಬೇಕು ಎಂಬ ಸಂದೇಶ ಹೋಗಬೇಕು ಎಂದೇ ಹೀಗೆ ಮಾಡುತ್ತಿದ್ದೇವೆ’ ಎಂದರು.

ರಾಯರ ಏಕಶಿಲಾ ವೃಂದಾವನ, ಮಂತ್ರಾಲಯದ ಸ್ನಾನಘಟ್ಟ ಜಲಾವೃತ

ಬೆಳಗಾವಿ: 41 ಸೇತುವೆಗಳು ಮುಳುಗಡೆ

ರಾಯಚೂರು ತಾಲ್ಲೂಕಿನ ಎಲೆಬಿಚ್ಚಾಲಿ ಗ್ರಾಮದಲ್ಲಿರುವ ರಾಯರ ಏಕಶಿಲಾ ವೃಂದಾವನ ಹಾಗೂ ಜಪದ ಕಟ್ಟೆ ಜಲಾವೃತವಾಗಿದೆ

ಇನ್ನಷ್ಟು ಸುದ್ದಿಗಳು 4

ಪ್ರಜಾವಾಣಿ ವಾರ್ತೆ

ಬೆಳಗಾವಿ/ರಾಯಚೂರು: ರಾಜ್ಯದ ವಿವಿಧೆಡೆ ಭಾನುವಾರ ಮಳೆಯ ಅಬ್ಬರ ಕಡಿಮೆಯಾಗಿದೆ. ಆದರೆ ಮಹಾರಾಷ್ಟ್ರದ ಪಶ್ಚಿಮಘಟ್ಟ ಹಾಗೂ ಜಲಾನಯನ ಪ್ರದೇಶಗಳಲ್ಲಿ ಮಳೆ ಮುಂದುವರಿದಿದ್ದು, ಕೃಷ್ಣಾ ನದಿಯಲ್ಲಿ ಒಳಹರಿವು ಹೆಚ್ಚಿದೆ. ಬೆಳಗಾವಿ ಜಿಲ್ಲೆಯಲ್ಲಿ 41 ಸೇತುವೆಗಳು ಮುಳುಗಡೆಯಾಗಿವೆ.

ರಾಯಚೂರು ಜಿಲ್ಲೆಯಲ್ಲಿ ಕೃಷ್ಣಾ ಹಾಗೂ ತುಂಗಭದ್ರಾ ನದಿಗಳು ತುಂಬಿ ಹರಿಯುತ್ತಿವೆ. ಕೃಷ್ಣಾ ಪ್ರವಾಹದಲ್ಲಿ ಎರಡು ಸೇತುವೆಗಳು, ಒಂದು ಬ್ಯಾರೇಜ್ ಮುಳುಗಡೆಯಾಗಿವೆ. ಎಲೆಬಿಚ್ಚಾಲಿ ಗ್ರಾಮದಲ್ಲಿರುವ ರಾಯರ ಏಕಶಿಲಾ ವೃಂದಾವನ ಹಾಗೂ ಜಪದ ಕಟ್ಟೆ ತುಂಗಭದ್ರಾ ನದಿ ನೀರಿನಿಂದ ಜಲಾವೃತವಾಗಿವೆ. ರಾಯರ ವೃಂದಾವನಕ್ಕೆ ನೀರಿನಲ್ಲೇ ತೆರಳಿ ಅರ್ಚಕರು ಪೂಜೆ ಸಲ್ಲಿಸಿದರು. ನದಿ ದಂಡೆದಲ್ಲಿರುವ ಚಿಕ್ಕಮಂಚಾಲಿ ಗ್ರಾಮಸ್ಥರು ನೆರೆ ಭೀತಿಯಲ್ಲಿದ್ದಾರೆ.

ಮಂತ್ರಾಲಯದ ಸ್ನಾನಘಟ್ಟ ಮುಳುಗಿದೆ. ಗಂಗಮ್ಮ ದೇವಿ ದೇವಸ್ಥಾನದವರೆಗೂ ನೀರು ಬಂದಿದೆ. ಭಕ್ತರು ನದಿ ದಂಡೆಯಲ್ಲಿ ನೀರಿನಲ್ಲಿ ಮುಳುಗಿ ಪೂಜೆ ಸಲ್ಲಿಸಿದರು.

ರಾಜ್ಯದಲ್ಲಿ ತಗ್ಗಲಿದೆ ಗಾಳಿ–ಮಳೆಯ ತೀವ್ರತೆ

ಬೆಂಗಳೂರು: ಕರಾವಳಿ ಸೇರಿ ರಾಜ್ಯದ ವಿವಿಧೆಡೆ ಗಾಳಿ–ಮಳೆಯ ತೀವ್ರತೆ ಸೋಮವಾರದಿಂದ ತಗ್ಗುವ ಸಾಧ್ಯತೆಯಿದ್ದು, ಮುಂದಿನ ಒಂದು ವಾರ ಕೆಲವೆಡೆ ಸಾಧಾರಣ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಕನ್ನಡ ಜಿಲ್ಲೆಗೆ ಮಾತ್ರ ಸೋಮವಾರ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದ್ದು, ಭಾರಿ ಮಳೆ ಮುಂದುವರಿಯುವ ಸಾಧ್ಯತೆಯಿದೆ. ಕರಾವಳಿಯ ಉಳಿದ ಜಿಲ್ಲೆಗಳು ಹಾಗೂ ಒಳನಾಡಿನ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ 30ರಿಂದ 40 ಕಿ.ಮೀ ವೇಗದಲ್ಲಿ ನಿರಂತರ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಉದ್ದಕ್ಕೂ ಬಿರುಗಾಳಿಯಿಂದ ಕೂಡಿದ ಹವಾಮಾನ ಇರಲಿದೆ. ಗಂಟೆಗೆ 35ರಿಂದ 55 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ, ಮೀನುಗಾರರು ಎಚ್ಚರಿಕೆ ವಹಿಸಬೇಕು ಎಂದು ಹೇಳಿದೆ.

ರಸ್ತೆ ಗುಂಡಿ ಗುರುತಿಸಲು ಮೊಬೈಲ್ ಅಪ್ಲಿಕೇಶನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ರಸ್ತೆ ಗುಂಡಿಗಳನ್ನು ಗುರುತಿಸಲು ಮತ್ತು ನಿಗದಿತ ಅವಧಿಯಲ್ಲಿ ದುರಸ್ತಿ ಕಾಮಗಾರಿ ಕೈಗೊಳ್ಳಲು ಬಿಬಿಎಂಪಿ 'ರಸ್ತೆ ಗುಂಡಿ ಗಮನ- ಮೊಬೈಲ್ ಅಪ್ಲಿಕೇಷನ್' ತಯಾರಿಸಿದೆ.

ಪಾಲಿಕೆ ವ್ಯಾಪ್ತಿಯ ಎಲ್ಲ ರಸ್ತೆಗಳನ್ನು ಜಿಪಿಎಸ್ ಆಧಾರದ ಮೇಲೆ ಗುರುತಿಸಲಾಗುತ್ತದೆ. ಆ ರಸ್ತೆಗಳಲ್ಲಿ ಉಂಟಾಗಬಹುದಾದ ಗುಂಡಿಗಳನ್ನು ಅಕ್ಷಾಂಶ ಮತ್ತು ರೇಖಾಂಶದಲ್ಲಿ ನಿಖರವಾಗಿ ಗುರುತಿಸಿ, ಮೊಬೈಲ್‌ನಲ್ಲಿ ಗುಂಡಿಯ ಅಳತೆಯನ್ನು ನಮೂದಿಸಲಾಗುತ್ತದೆ. ಪ್ರತ್ಯೇಕ ಕಾರ್ಯಾದೇಶ ತಯಾರಿಸಿ ಗುಂಡಿ ಮುಚ್ಚಲು ಕ್ರಮವಹಿಸುವ ಪದ್ಧತಿಯನ್ನು ಮೊಬೈಲ್ ಆ್ಯಪ್‌ನಲ್ಲಿ ಅಳವಡಿಸಲಾಗಿದೆ.

ಈ ತಂತ್ರಾಂಶ ಅಳವಡಿಸುವುದರಿಂದ ರಸ್ತೆ ಗುಂಡಿ ಗುರುತಿಸುವ ಮತ್ತು ಅವುಗಳನ್ನು ಮುಚ್ಚುವ ಪ್ರಕ್ರಿಯೆ ಪಾರದರ್ಶಕವಾಗಿ ನಡೆಯಲಿದೆ. ವೆಚ್ಚದ ಮೇಲೆ ನಿಯಂತ್ರಣ ಇಡಲು ಸಾಧ್ಯವಾಗುತ್ತದೆ. ನಿಗಾ ಇಡುವುದು ಸುಲಭವಾಗುತ್ತದೆ. ಸಾಂದರ್ಭಿಕ ಅಂದಾಜು ವೆಚ್ಚದ ಪಟ್ಟಿ ತಯಾರಿ ಸಹಿತ ಅನೇಕ ಕಾರ್ಯಗಳ ಅಗತ್ಯ ಇರುವುದಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಗುಂಡಿ ಮುಚ್ಚಲು 2024-25ನೇ ಸಾಲಿನಲ್ಲಿ ಪ್ರತಿ ವಾರ್ಡ್‌ಗಳಿಗೆ ₹15 ಲಕ್ಷದಂತೆ 225 ವಾರ್ಡ್‌ಗಳಿಗೆ ₹33.75 ಕೋಟಿ ಮೀಸಲಿಡಲಾಗಿದೆ.

ರಸ್ತೆಜಾಲ: ನಗರದಲ್ಲಿ 12,828 ಕಿ.ಮೀ ಉದ್ದದ ರಸ್ತೆ ಜಾಲವಿದೆ. ಈ ಪೈಕಿ 1,344 ಕಿ.ಮೀ ಪ್ರಮುಖ ರಸ್ತೆಗಳು ಹಾಗೂ 11,533 ಕಿ.ಮೀ ವಲಯ ಮಟ್ಟದ ರಸ್ತೆಗಳು ಇವೆ. ಈ ರಸ್ತೆಗಳ ತಳಭಾಗದಲ್ಲಿ ಬೆಸ್ಕಾಂ ಕೇಬಲ್, ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆಗಳು, ಅನಿಲ ಕೊಳವೆಗಳು, ಒಎಫ್‌ಸಿ, ಕೆಪಿಟಿಸಿಎಲ್‌ನ ಹೆಚ್ಚಿನ ಸಾಮರ್ಥ್ಯದ ಕೇಬಲ್‌ಗಳ ಅಳವಡಿಕೆಯಿಂದ ರಸ್ತೆಗಳ ಮೇಲ್ಮೈ ಭಾಗವು ಶಿಥಿಲಗೊಂಡು ರಸ್ತೆಗಳಲ್ಲಿ ಗುಂಡಿಗಳು ಬೀಳುತ್ತಿವೆ.

ಸಾರ್ವಜನಿಕರಿಗೂ ಅವಕಾಶ: 'ರಸ್ತೆ ಗುಂಡಿ ಗಮನ' ತಂತ್ರಾಂಶದಲ್ಲಿ ಬಿಬಿಎಂಪಿ ಅಧಿಕಾರಿಗಳು, ಸಂಚಾರ ಠಾಣೆಗಳ ಪೊಲೀಸರು ಮಾತ್ರವಲ್ಲದೇ ಸಾರ್ವಜನಿಕರೂ ಗುಂಡಿಗಳ ಬಗ್ಗೆ ಮಾಹಿತಿ ಅಪ್‌ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ಆ್ಯಪ್ ಡೌನ್‌ಲೋಡ್ (https://play.google.com/store/apps/details?id=com.indigo.bbmp.fixpothole) ಮಾಡಿಕೊಂಡು ಗುಂಡಿಗಳ ಫೋಟೊ, ದುರಸ್ತಿ ಫೋಟೊಗಳ ಸಹಿತ ಮಾಹಿತಿ ನೀಡಬಹುದು ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

₹650 ಕೋಟಿ ಬಾಕಿ ಭಾರ

ಯೋಜನೆಗಳಿಗೆ ಅನುದಾನ ನೀಡಲಾಗದೆ ಇಕ್ಕಟ್ಟಿಗೆ ಸಿಲುಕಿರುವ ಜಲಮಂಡಳಿ

• ಸ್ನೇಹಾ ರಮೇಶ್

ಬೆಂಗಳೂರು: ತನ್ನ ಹೊಸ ಯೋಜನೆಗಳಿಗೆ ಅನುದಾನ ಒದಗಿಸಲು ಸಾಧ್ಯವಾಗದೇ ಇಕ್ಕಟ್ಟಿಗೆ ಸಿಲುಕಿರುವ ಬೆಂಗಳೂರು ಜಲಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ), ವಿವಿಧ ವರ್ಗದ ಗ್ರಾಹಕರು ಉಳಿಸಿಕೊಂಡಿರುವ ₹650 ಕೋಟಿಗಳಷ್ಟು ಹಿಂಬಾಕಿ ವಸೂಲಿಗೆ ಹರಸಾಹಸಪಡುತ್ತಿದೆ.

ಗೃಹ ಬಳಕೆ ಗ್ರಾಹಕರು, ವಾಣಿಜ್ಯ ಬಳಕೆ ಗ್ರಾಹಕರು, ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು, ಸಂಸ್ಥೆಗಳಿಂದ ಒಟ್ಟು ₹649.66 ಕೋಟಿಯಷ್ಟು ಶುಲ್ಕವು ದೀರ್ಘ ಕಾಲದಿಂದ ವಸೂಲಿಯಾಗದೇ ಉಳಿದಿದೆ ಎಂಬ ಮಾಹಿತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಮಂಡಳಿಯ ತಿಂಗಳ ವರಮಾನ ₹130 ಕೋಟಿಯಿಂದ ₹150 ಕೋಟಿಗಳಷ್ಟಿದೆ. ಗ್ರಾಹಕರು ಹಿಂಬಾಕಿ ಉಳಿಸಿಕೊಂಡಿರುವ ಮೊತ್ತವು ಮಂಡಳಿಯ ಐದು ತಿಂಗಳ ವರಮಾನಕ್ಕಿಂತಲೂ ಹೆಚ್ಚಾಗಿದೆ.

ಗ್ರಾಹಕರಿಂದ ಸಂಗ್ರಹಿಸುವ ನೀರಿನ ಶುಲ್ಕದಲ್ಲೇ ಜಲಮಂಡಳಿಯ ದೈನಂದಿನ ಕೆಲಸಗಳ ನಿರ್ವಹಣೆ ಆಗುತ್ತಿದೆ. ನೀರಿನ ದರ ಏರಿಕೆ ಪ್ರಸ್ತಾವಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ನೀಡುತ್ತಿಲ್ಲ. ಈಗ ಗ್ರಾಹಕರು ಉಳಿಸಿಕೊಂಡಿರುವ ಹಿಂಬಾಕಿ ಜಲಮಂಡಳಿ ಪಾಲಿಗೆ ಭಾರವಾಗಿ ಪರಿಣಮಿಸಿದೆ ಎನ್ನುತ್ತಾರೆ ಮಂಡಳಿಯ ಅಧಿಕಾರಿಗಳು.

'ಈಗ ಜಲಮಂಡಳಿಯು ಗ್ರಾಹಕರಿಂದ ಸಂಗ್ರಹಿಸುವ ಶುಲ್ಕದ ಮೇಲೆ ಅವಲಂಬಿತವಾಗಿದೆ. ನೀರಿನ ದರ ಏರಿಕೆಗೆ ಅವಕಾಶ ಸಿಗದೇ ಇರುವುದರಿಂದ ವರಮಾನ ಸಂಗ್ರಹದಲ್ಲಿ ಸುಧಾರಣೆ ತರುವತ್ತ ನಾವು ಗಮನಹರಿಸಲೇಬೇಕಾಗಿದೆ. ನೀರು ಮೂಲ ಅಗತ್ಯಗಳಲ್ಲಿ ಒಂದಾಗಿರುವುದರಿಂದ ಬಾಕಿ ಉಳಿಸಿಕೊಂಡಿರುವ ಗ್ರಾಹಕರಿಗೆ ನೀರು ಪೂರೈಕೆ ಸಂಪರ್ಕ ಕಡಿತ ಮಾಡುವುದು ಕಷ್ಟ' ಎನ್ನುತ್ತಾರೆ ಬಿಡಬ್ಲ್ಯುಎಸ್‌ಎಸ್‌ಬಿಯ ಹಿರಿಯ ಅಧಿಕಾರಿಯೊಬ್ಬರು.

ಮೂಲಗಳ ಪ್ರಕಾರ, ಹಲವು ಪ್ರಭಾವಿ ವ್ಯಕ್ತಿಗಳು ದೊಡ್ಡ ಮೊತ್ತದ ನೀರಿನ ಶುಲ್ಕವನ್ನು ಬಾಕಿ ಉಳಿಸಿಕೊಂಡಿದ್ದಾರೆ. ಪ್ರಭಾವಿಗಳು ಹೊಂದಿರುವ ಸ್ಥಾನಮಾನ ಮತ್ತು ಅಧಿಕಾರದ ಕಾರಣದಿಂದಾಗಿ ಅವರಿಂದ ಹಿಂಬಾಕಿ ವಸೂಲಿ ಮಾಡುವುದು ಜಲಮಂಡಳಿಗೆ ಕಷ್ಟವಾಗುತ್ತಿದೆ.

ಒಂದೆಡೆ ಪ್ರಭಾವಿಗಳಿಂದ ನೀರಿನ ಕರದ ಬಾಕಿ ವಸೂಲಿ ಮಾಡುವುದು ಕಷ್ಟವಾಗಿದ್ದರೆ, ಮತ್ತೊಂದೆಡೆ ಸರ್ಕಾರದ ವಿವಿಧ ಸಂಸ್ಥೆಗಳು ಉಳಿಸಿಕೊಂಡಿರುವ ಬಾಕಿ ವಸೂಲಿಯೂ ಜಲಮಂಡಳಿ ಪಾಲಿಗೆ ದುಸ್ತರವಾಗಿದೆ.

'ಇಂದಿರಾ ಕ್ಯಾಂಟೀನ್‌ಗಳು, ಹಲವು ಸರ್ಕಾರಿ ಆಸ್ಪತ್ರೆಗಳು, ರಕ್ಷಣಾ ಇಲಾಖೆಯ ಸಂಸ್ಥೆಗಳು ಸೇರಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಸಂಸ್ಥೆಗಳು ಜಲಮಂಡಳಿಗೆ ಶುಲ್ಕ ಪಾವತಿ ಬಾಕಿ ಉಳಿಸಿಕೊಂಡಿವೆ. ಹಲವು ಬಾರಿ ನೋಟಿಸ್ ನೀಡಿದ್ದರೂ ಸ್ಪಂದಿಸಿಲ್ಲ. ಸರ್ಕಾರಿ ಸಂಸ್ಥೆಗಳಿಗೆ ನೀರು ಪೂರೈಕೆ ಕಡಿತ ಮಾಡಿದರೆ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ. ಹೀಗಾಗಿ ಬಾಕಿ ವಸೂಲಿ ಕಷ್ಟವಾಗಿದೆ' ಎನ್ನುತ್ತಾರೆ ಜಲಮಂಡಳಿಯ ಮತ್ತೊಬ್ಬ ಅಧಿಕಾರಿ.

ಬಾಕಿ ಮೊತ್ತದ ವಿವರ (ಕೋಟಿಗಳಲ್ಲಿ)

ಗ್ರಾಹಕ ವರ್ಗ	ಬಾಕಿ ಮೊತ್ತ (ಮೇ 2024ರವರೆಗೆ)
ಗೃಹಬಳಕೆ	₹ 288.75
ವಾಣಿಜ್ಯ	₹ 288.75
ಸರ್ಕಾರಿ ಸಂಸ್ಥೆಗಳು	₹ 176.41

'ವಿಶೇಷ ಅಭಿಯಾನಕ್ಕೆ ನಿರ್ಧಾರ'

'ಬಾಕಿ ಇರುವ ನೀರಿನ ಕರ ವಸೂಲಿ ಕುರಿತು ರಾಜ್ಯ ಸರ್ಕಾರದ ಜತೆ ಚರ್ಚಿಸಲು ಜಲಮಂಡಳಿ ನಿರ್ಧರಿಸಿದೆ. ಹಳೆಯ ಬಾಕಿ ವಸೂಲಿಗೆ ವಿಶೇಷ ಅಭಿಯಾನವೊಂದನ್ನು ಆರಂಭಿಸುವುದಕ್ಕೂ ನಿರ್ಧರಿಸಲಾಗಿದೆ' ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ವಿ. ರಾಮ್‌ಪ್ರಸಾತ್ ಮನೋಹರ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ವಿವಿಧ ಇಲಾಖೆಗಳೊಂದಿಗೆ ಮಂಡಳಿಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಲು ಸಭೆ ನಡೆಸಲು ಸಮಯ ನಿಗದಿಪಡಿಸುವಂತೆ ಕೋರಲಾಗಿದೆ. ಈ ಬಾಕಿಗಳೆಲ್ಲವೂ ತುಂಬಾ ಹಳೆಯವು. ವಸೂಲಿ ವಿಳಂಬವಾಗುತ್ತದೆ. ವಸೂಲಿ ಪ್ರಕ್ರಿಯೆಗೆ ವೇಗ ನೀಡಲು ವಿಶೇಷ ಅಭಿಯಾನ ನಡೆಸಲಾಗುವುದು' ಎಂದರು.

ಸುದ್ದಿ 2 ನಿಮಿಷ

ವೈದ್ಯರ ಮೇಲೆ ಹಲ್ಲೆ ನಡೆಸಿದರೆ ಕಠಿಣಶಿಕ್ಷೆ: ಸಚಿವ ದಿನೇಶ್

ಯಲಹಂಕ: ವೈದ್ಯರು ಹಾಗೂ ಸಿಬ್ಬಂದಿ ಮೇಲೆ ಹಲ್ಲೆ, ನಿಂದನೆ, ಅಗೌರವ ತೋರಿದವರ ವಿರುದ್ಧ ಕ್ರಮಕೈಗೊಳ್ಳಲು ಕಠಿಣ ಕಾನೂನು ಜಾರಿಗೆ ತರಲಾಗಿದೆ. ನಕಲಿ ವೈದ್ಯರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಎಚ್ಚರಿಕೆ ನೀಡಿದರು.

ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ನವರತ್ನ ಅಗ್ರಹಾರ ಬಳಿ ಆಯೋಜಿಸಿದ್ದ ಬೆಂಗಳೂರು ಸರ್ಜಿಕಲ್ ಸೊಸೈಟಿಯ ಸುವರ್ಣ ಮಹೋತ್ಸವ ಸಮಾರಂಭ ಹಾಗೂ ಸಾಧಕ ವೈದ್ಯರಿಗೆ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರಿನ ಸರ್ಜಿಕಲ್ ಸೊಸೈಟಿಗೆ 50 ವರ್ಷ ತುಂಬಿರುವುದು ದೊಡ್ಡ ಸಾಧನೆಯಾಗಿದೆ. ಸೊಸೈಟಿಯ ಕಚೇರಿಗಾಗಿ ಜಾಗ ನೀಡುವಂತೆ ಪದಾಧಿಕಾರಿಗಳು ಮನವಿ ಮಾಡಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗೆ ಮನವಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ಬೆಂಗಳೂರು ಸರ್ಜಿಕಲ್ ಸೊಸೈಟಿಯ ಅಧ್ಯಕ್ಷ ಡಾ. ರಾಜಶೇಖರ್ ಸಿ.ಜಾಕಾ, ಮುಖ್ಯಮಂತ್ರಿಯವರ ವೈದ್ಯಕೀಯ ಸಲಹೆಗಾರ ಡಾ. ರವಿಕುಮಾರ್, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ಕುಲಪತಿ ಡಾ.ಎಂ.ಕೆ.ರಮೇಶ್, ಬೆಂಗಳೂರು ಸರ್ಜಿಕಲ್ ಸೊಸೈಟಿಯ ಕಾರ್ಯದರ್ಶಿ ಡಾ.ಮುನಿರೆಡ್ಡಿ ಎಂ.ವಿ. ಉಪಸ್ಥಿತರಿದ್ದರು.

ದೃಷ್ಟಿದೋಷ: ಅರಿವಿನ ಓಟ

ಬೆಂಗಳೂರು: ನಾರಾಯಣ ನೇತ್ರಾಲಯವು ನಗರದಲ್ಲಿ ಭಾನುವಾರ 'ಮಯೋಪಿಯಾ ಓಟ' ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳುವ ಮೂಲಕ ಮಯೋಪಿಯಾ (ಸಮೀಪ ದೃಷ್ಟಿ) ಸಮಸ್ಯೆ ಬಗ್ಗೆ ಜಾಗೃತಿ ಮೂಡಿಸಿತು.

ಕಬ್ಬನ್ ರಸ್ತೆಯಲ್ಲಿ ಇರುವ ರಾಜೇಂದ್ರ ಸಿಂಗ್‌ಜಿ ಸೇನಾ ಅಧಿಕಾರಿಗಳ ಸಂಸ್ಥೆಯಲ್ಲಿ ಬೆಳಿಗ್ಗೆ 7.30ರ ವೇಳೆಗೆ ಓಟಕ್ಕೆ ಚಾಲನೆ ನೀಡಲಾಯಿತು. ಮೇಜರ್ ಜನರಲ್ ವಿನೋದ್ ಟಾಮ್ ಮ್ಯಾಥ್ಯೂ, ಐಪಿಎಸ್ ಅಧಿಕಾರಿ ರಮಣ್ ಗುಪ್ತ, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಓಟಕ್ಕೆ ಚಾಲನೆ ನೀಡಿದರು. ಮಹಿಳೆಯರು, ಮಕ್ಕಳು ಸೇರಿ 800 ಮಂದಿ ಓಟದಲ್ಲಿ ಭಾಗವಹಿಸಿದ್ದರು.

ನಾರಾಯಣ ನೇತ್ರಾಲಯದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಕೆ. ಮಿತ್ತಲ್, ಡಾ. ಸುಮಿತಾ ಮಾತನಾಡಿದರು.

'ಸುಗಮ ಸಂಗೀತ ಅಕಾಡೆಮಿ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಡಿನ ಭಾಷೆ-ಸಂಸ್ಕೃತಿಯನ್ನು ಪ್ರಪಂಚದಾದ್ಯಂತ ಪಸರಿಸುತ್ತಿರುವ ಸುಗಮ ಸಂಗೀತ ಕ್ಷೇತ್ರಕ್ಕೆ ಪ್ರತ್ಯೇಕ ಅಕಾಡೆಮಿ ಸ್ಥಾಪಿಸಬೇಕು' ಎಂದು ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಆಗ್ರಹಿಸಿದರು.

ಆದರ್ಶ ಸುಗಮ ಸಂಗೀತ ಅಕಾಡೆಮಿ ನಗರದಲ್ಲಿ ಹಮ್ಮಿಕೊಂಡಿದ್ದ ಚಿಣ್ಣರ ಚಿಲಿಪಿಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸರ್ಕಾರಿ ಕಾರ್ಯಕ್ರಮಗಳು ಸೇರಿ ಎಲ್ಲ ಕಾರ್ಯಕ್ರಮಗಳಲ್ಲಿ ಸುಗಮ ಸಂಗೀತ ಅವಿಭಾಜ್ಯ ಅಂಗವಾಗಿದೆ. ಪ್ರತ್ಯೇಕ ಅಕಾಡೆಮಿಯಿಂದ ಭಾಷೆಯೂ ಬೆಳವಣಿಗೆ ಹೊಂದಲಿದೆ' ಎಂದು ಹೇಳಿದರು. ಉದಯಭಾನು ಕಲಾ ಸಂಘದ ಕಾರ್ಯದರ್ಶಿ ನರಸಿಂಹ, ಗಾಯಕರಾದ ಶಿವಶಂಕರ್, ಪಿ.ಎನ್. ಜಯರಾಂ ಉಪಸ್ಥಿತರಿದ್ದರು.

ಹೆಪಟೈಟಿಸ್: ಜಾಗೃತಿ, ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಹೆಪಟೈಟಿಸ್ ದಿನದ ಪ್ರಯುಕ್ತ ನಾಲೆಡ್ಜಿಯಮ್ ಅಕಾಡೆಮಿ, ಜೈನ್ ಗ್ರೂಪ್ ಮತ್ತು ಆಸ್ಟರ್ ಆರ್.ವಿ ಆಸ್ಪತ್ರೆ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಹೆಪಟೈಟಿಸ್' (ಯಕೃತ್ತಿನ ಉರಿಯೂತ) ಸಮಸ್ಯೆ ಬಗ್ಗೆ ಜಾಗೃತಿ ಮೂಡಿಸಿ, ತಪಾಸಣೆ ನಡೆಸಲಾಯಿತು.

ಉಚಿತ ಆರೋಗ್ಯ ಶಿಬಿರದಲ್ಲಿ ಅಧಿಕ ರಕ್ತದೊತ್ತಡ, ರ್‍ಯಾಪಿಡ್ ಹೆಪಟೈಟಿಸ್ ಬಿ ಮತ್ತು ಸಿ ತಪಾಸಣೆ ಸೇರಿ ವಿವಿಧ ಪರೀಕ್ಷೆಗಳನ್ನು ಉಚಿತವಾಗಿ ನಡೆಸಿದ ವೈದ್ಯರು, ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಸಲಹೆ ನೀಡಿದರು.

'ಹೆಪಟೈಟಿಸ್ ವೈರಾಣುವನ್ನು ಆರಂಭದಲ್ಲೇ ಪತ್ತೆ ಹಚ್ಚಿದರೆ ಯಕೃತ್ತಿಗೆ ಹಾನಿಯನ್ನು ತಡೆಯಬಹುದು. ಕೆಲ ಪ್ರಕರಣಗಳಲ್ಲಿ ಸೋಂಕಿತರಿಗೆ ಲಕ್ಷಣಗಳು ಕೊನೆ ಹಂತದವರೆಗೆ ಗೋಚರಿಸುವುದಿಲ್ಲ. ಹೀಗಾಗಿ ನಿಯಮಿತ ತಪಾಸಣೆ ಅಗತ್ಯ' ಎಂದರು.

ಆರಂಭಿಕ ಹಂತದಲ್ಲೇ ಹೆಪಟೈಟಿಸ್ ಪತ್ತೆ ಮಹತ್ವದ ಬಗ್ಗೆ ಮಾತನಾಡಿದ ಆಸ್ಟರ್ ಆಸ್ಪತ್ರೆಯ ಡಾ.ನವೀನ್ ಗಂಜೂ, 'ಹೆಪಟೈಟಿಸ್ ಸೋಂಕು ಆಹಾರ, ಜೀವನಶೈಲಿ ಬದಲಾವಣೆಗಳಿಂದ ಬರುತ್ತದೆ. ಮಾನವನ ಅಂಗಾಂಗಗಳಲ್ಲಿ ಯಕೃತ್ತಿನ ಆರೈಕೆಗೆ ಆದ್ಯತೆ ನೀಡಬೇಕು. ಹೆಪಟೈಟಿಸ್ ಬಿ ಮತ್ತು ಸಿ ವೈರಾಣು ಯಕೃತ್ತಿಗೆ ಹಾನಿ ಮಾಡುತ್ತವೆ' ಎಂದರು.

'ಹೆಪಟೈಟಿಸ್ ಎ ಮತ್ತು ಇ ಸೋಂಕು ಮಲ, ಕಲುಷಿತ ಆಹಾರ ಮತ್ತು ನೀರಿನಿಂದ ಹರಡುತ್ತದೆ. ಹೆಪಟೈಟಿಸ್ ಬಿ ಮತ್ತು ಸಿ ಸೋಂಕು ರಕ್ತ, ಲೈಂಗಿಕ ಮಾರ್ಗದ ಮೂಲಕ ಹರಡುತ್ತದೆ. ದೇಶದಲ್ಲಿ ಸುಮಾರು 3.5 ಕೋಟಿ ಜನರು ಹೆಪಟೈಟಿಸ್ ಬಿ ಮತ್ತು ಸಿ ಸಮಸ್ಯೆ ಎದುರಿಸುತ್ತಿದ್ದಾರೆ. ನಿಯಮಿತ ತಪಾಸಣೆ ಮಾಡಿಸಿಕೊಳ್ಳದಿರುವುದೇ ಪ್ರಕರಣ ಏರಿಕೆಗೆ ಕಾರಣ' ಎಂದು ಹೇಳಿದರು.

ವಾಕಾಥಾನ್... ವಿಶ್ವ ಹೆಪಟೈಟಿಸ್ ದಿನದ ಅಂಗವಾಗಿ ಕರ್ನಾಟಕ ಗ್ಯಾಸ್ಟ್ರೊ ಸೆಂಟರ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಾಕಾಥಾನ್‌ನಲ್ಲಿ ನರ್ಸಿಂಗ್ ವಿದ್ಯಾರ್ಥಿಗಳು ಹೆಪಟೈಟಿಸ್ ಸಮಸ್ಯೆ ಬಗ್ಗೆ ಜಾಗೃತಿ ಮೂಡಿಸಿದರು

ಬಿಬಿಎಂಪಿ ಕಸದ ಲಾರಿ ಡಿಕ್ಕಿ; ಇಬ್ಬರ ದುರ್ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಕಸದ ಲಾರಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸವಾರರಿಬ್ಬರು ಮೃತಪಟ್ಟಿದ್ದಾರೆ. ಬಾಣಸವಾಡಿ ನಿವಾಸಿಗಳಾದ ಪ್ರಶಾಂತ್, ಶಿಲ್ಪಾ ಮೃತರು.

ಈ ಇಬ್ಬರು ದ್ವಿಚಕ್ರ ವಾಹನದಲ್ಲಿ ಭಾನುವಾರ ರಾತ್ರಿ ಮೆಜೆಸ್ಟಿಕ್‌ನಿಂದ ಕೆ.ಆರ್.ವೃತ್ತದ ಕಡೆ ಬರುತ್ತಿದ್ದ ವೇಳೆ ವೇಗವಾಗಿ ಬಂದ ಲಾರಿ ಇವರಿಗೆ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಕೆಳಗೆ ಬಿದ್ದ ಇವರ ಮೇಲೆ ಲಾರಿ ಹರಿದಿದೆ.

ತೀವ್ರ ಗಾಯಗೊಂಡ ಇಬ್ಬರನ್ನು ಆಸ್ಪತ್ರೆಗೆ ಸಾಗಿಸುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಲಾರಿ ಚಾಲಕ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ಹಲಸೂರು ಗೇಟ್ ಸಂಚಾರಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ನಗರದಲ್ಲಿ ಇಂದು

'ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಸಮಗ್ರ ಕೃತಿಜಗತ್ತು 14 ಸಂಪುಟಗಳು, ತೇಜಸ್ವಿ ಸಾಹಿತ್ಯ-ಸಾಂಸ್ಕೃತಿಕ ಹಬ್ಬ' ರಾಷ್ಟ್ರೀಯ ವಿಚಾರ ಸಂಕಿರಣ: ಬೆಳಿಗ್ಗೆ 10ಕ್ಕೆ 'ತೇಜಸ್ವಿ ಸಾಹಿತ್ಯ ಚಲನಚಿತ್ರಗಳ ಪ್ರಯೋಗ' ಕುರಿತು ಗೋಷ್ಠಿ: ಕೋಟಿಗಾನಹಳ್ಳಿ ರಾಮಯ್ಯ, ಶಶಾಂಕ್ ಸೊಗಾಲ್, ಜ್ಯೋತಿ, ಪಾರ್ವತಿ ಎಂ., ಬೆಳಿಗ್ಗೆ 11ಕ್ಕೆ 'ತೇಜಸ್ವಿ ಅನುವಾದ ಸಾಹಿತ್ಯ' ಕುರಿತು ಗೋಷ್ಠಿ: ವಿ.ಬಿ. ತಾರಕೇಶ್ವರ್, ಚಂದ್ರಶೇಖರ್ ಬೆಟ್ಟಹಳ್ಳಿ, ಶಿವಕುಮಾರ್ ಕಾರೇಪುರ, ಮಧ್ಯಾಹ್ನ 12ಕ್ಕೆ 'ತೇಜಸ್ವಿ ಎಂಬ ವಿಸ್ಮಯ' ಸಾಕ್ಷ್ಯಚಿತ್ರ ಸರಣಿ ಪ್ರದರ್ಶನ, ಮಧ್ಯಾಹ್ನ 2ಕ್ಕೆ 'ತೇಜಸ್ವಿ ಸಾಹಿತ್ಯ ಹೊಸ ಓದು ಪ್ರಭಾವ ಪರಿಣಾಮ ಹಾಗೂ ರಂಗಪ್ರಯೋಗ'ದ ಸಂವಾದ: ನಟರಾಜ್ ಹೊನ್ನವಳ್ಳಿ, ವಿಜಯಕುಮಾರ್ ವಿಶ್ವಮಾನವ, ಶೋಭಾರಾಣಿ ಕಿಶೋರ್ ಕೆ., ಮಧ್ಯಾಹ್ನ 3.30ಕ್ಕೆ 'ತೇಜಸ್ವಿ ಒಡನಾಡಿಗಳೊಂದಿಗೆ' ಸಂವಾದ, ಸಂಜೆ 6ಕ್ಕೆ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಸಮಗ್ರ ಕೃತಿಜಗತ್ತು 14 ಸಂಪುಟಗಳು ಬಿಡುಗಡೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಸರೋಜ ಎಂ. ಚಂದ್ರಶೇಖರ್, ಆಯೋಜನೆ: ಮೂನಿಸ್ವಾಮಿ ಆ್ಯಂಡ್ ಸನ್ಸ್, ಎಂ. ಚಂದ್ರಶೇಖರ್ ಪ್ರತಿಷ್ಠಾನ, ಪೂರ್ಣಚಂದ್ರ ಸಾಂಸ್ಕೃತಿಕ ಅಧ್ಯಯನ ಕೇಂದ್ರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ.

'ವಿಮುಕ್ತ ದನಿ' ಪತ್ರಿಕೆ, 'ಪರಿವರ್ತನೆ ಅಲೆಗಳು-ಹತ್ತು ವರ್ಷದ ಸಬಲೀಕರಣ' ಸಾಕ್ಷ್ಯಚಿತ್ರ ಬಿಡುಗಡೆ: ಇಂದೂಧರ ಹೊನ್ನಾಪುರ, ಕೆ. ರತ್ನಪ್ರಭಾ, ಅಧ್ಯಕ್ಷತೆ: ದಾಸಪ್ಪ ನಿಲೋಗಲ್, ಆಯೋಜನೆ: ವಿಮುಕ್ತ ದೇವದಾಸಿ ಮಹಿಳಾ ವೇದಿಕೆ, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11

ನವೀಕೃತ ಫಿಲಾಟೆಲಿ ಬ್ಯೂರೊ ಉದ್ಘಾಟನೆ: ಎಸ್.ರಾಜೇಂದ್ರ ಕುಮಾರ್. ಸ್ಥಳ: ಪ್ರಧಾನ ಅಂಚೆ ಕಚೇರಿ, ಬೆಳಿಗ್ಗೆ 11.30

ಒಲಿಂಪಿಕ್ಸ್ ಅಂಚೆ ಚೀಟಿ ಪ್ರದರ್ಶನ: ಪ್ಯಾರಿಸ್ ಒಲಿಂಪಿಕ್ಸ್ ಅಂಗವಾಗಿ, ನಗರದ ಫಿಲಾಟೆಲಿಸ್ಟ್ ಜಗನ್ನಾಥ ಮಣಿ ಅವರು ಸಂಗ್ರಹಿಸಿರುವ ಒಲಿಂಪಿಕ್ ಕ್ರೀಡೆಗಳ ಅಂಚೆಚೀಟಿ, ವಿಶೇಷ ಕವರ್‌ಗಳ ಪ್ರದರ್ಶನ ನಗರದ ಮ್ಯೂಸಿಯಂ ರಸ್ತೆಯಲ್ಲಿರುವ ಅಂಚೆ ಕಚೇರಿಯ 'ಸಂದೇಶ' ಮ್ಯೂಸಿಯಂನಲ್ಲಿ ನಡೆಯಲಿದೆ.

ಸೋಮವಾರ ಮಧ್ಯಾಹ್ನ 12 ಗಂಟೆಗೆ ಪ್ರದರ್ಶನದ ಉದ್ಘಾಟನೆಯನ್ನು ಪದ್ಮಶ್ರೀ ಪುರಸ್ಕೃತ ಪ್ಯಾರಾ ಅಥ್ಲೀಟ್ ಕೆ.ವೈ. ವೆಂಕಟೇಶ್ ನೆರವೇರಿಸುವರು. ಆಗಸ್ಟ್ ಕೊನೆಯವರೆಗೆ ಈ ಪ್ರದರ್ಶನ ಇರಲಿದೆ.

ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ. nagaradalli_indu@prajavani.co.in

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು–560 029. ಫೋನ್: 25536625, 25536789

IFT No: ಕಹಾಮ/ಅಭಿ/Mother Diary-T-fit /1911/2024-25 ದಿನಾಂಕ: 26-07-2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರ ಹಾಲು ಮಂಡಳ ವತಿಯಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಅರ್ಹ ಸಂಸ್ಥೆಯವರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ವಿನ್ಯಾಸ, ಸರಬರಾಜು ಹಾಗೂ ಅಳವಡಿಕೆ ಕೆಲಸಗಳಿಗಾಗಿ KPP Portal ಮುಖೇನ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಯವರುಗಳು ವೆಬ್‌ಸೈಟ್ https://www.kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

ಕ್ರಮ ಸಂಖ್ಯೆ	ಕೆಲಸದ ಹೆಸರು	ಪರಿಮಾಣ	ಇ.ಎಂ.ಡಿ. ರೂ. ಗಳಲ್ಲಿ	ಮುಕ್ತಾಯದ ಅವಧಿ
1	ಯಲಹಂಕದ ಮದರ್ ಡೇರಿ ಘಟಕದ ಹಾಲು ಸಂಸ್ಕರಣೆ ಹಾಗೂ ಪ್ಯಾಕಿಂಗ್ ವಿಭಾಗಗಳ chilled water and milk/product pipe line ಗಳಿಗೆ T-fit insulationsಗಳ ವಿನ್ಯಾಸ, ಸರಬರಾಜು ಹಾಗೂ ಅಳವಡಿಕೆ ಕೆಲಸಗಳು.	1 ಜಾಬ್	50,000/–	3 ತಿಂಗಳು

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 29–07–2024 ರಿಂದ 12–08–2024 ರ ಸಾಯಂಕಾಲ 4:00 ಗಂಟೆಯವರೆಗೆ. 2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 13–08–2024 ಸಾಯಂಕಾಲ 4:00 ಗಂಟೆಯವರೆಗೆ. 3. ಟೆಂಡರುಗಳನ್ನು (Cover - 1) ತೆರೆಯುವ ದಿನಾಂಕ: 16–08–2024 ಸಾಯಂಕಾಲ 4:30 ಗಂಟೆಗೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಅಭಿಯಂತರ–2)

PUBLIC NOTICE

It is informed to general public that our client. **Sri. SHASHIKUMAR.G.V,** S/o. Sri.Venu.G.H, **2. Smt. LATHA.L,** W/o Sri.Shashikumar.G.V. Residing at No.106/100, 2nd Main, Railway Pipe Line Road, Vijayanagar 2nd Stage, Bangalore-560040 are interested in purchase of the below mentioned schedule property, from **Sri. RENUKAPPA.S.** S/o Sri. Siddagangappa, Residing at Flat No.10 and 11, J.M.Layout, Kodigehalli Grama Post, Yeshwanthpura Hobli, Bangalore North Taluk, Bangalore-560112, he now being the owner of the same.

It is also informed and brought to the notice of all that if any interested individual person / company/ financial institutions / Nationalized Bank /co-operative Bank/BDA/KIADB/etc.,if anybody is having any claim over the Schedule property, they may contact the below mentioned address/Mobile numbers with documents, within 15 days from the date of publication of this public notice, otherwise my client will purchase the schedule property and my client is not at all responsible for any claim, that comes after 15 days.

SCHEDULE PROPERTY

All that piece and parcel of the Immoveable property bearing No.2121 in BBMP Katha No.1023/2121/1015, Situated at KENGERI SATELLITE TOWN, and measuring East to West: 30-0 ft., and North to South : 45-0 ft., totally measuring 1350 sq.ft., and coming the under limits of Bruhath Bangalore MahanagaraPalike, Ward No.159 and bounded on:- **East by:** Site No.2120, **West by:** Site No.2122, **North by:** Road, **South by:** Site No.2116.

R.SREENIVASA RAO, ADVOCATE,
No.213, I- B main Road, Kengeri Satellite Town, BANGALURU-560 060, **CONTACT NOs:** Mobile No: 94480-85270, 87927 44471, 94494 86214

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

WANTED ACCOUNTANTS B.Com/ M.Com for Reputed Printing Industry Located in Majestic, Accommodation Provided, Send Resume: bangaloreoffset@yahoo.co.in . 9845151730/ 9900691118.

Teachers/ Professors

WANTED TEACHER for High School. B.A. B.Ed, Gents or Ladies (English & Social). Mathikere, Yeshwanthapura, Bangalore. Contact:9379191544

PUBLIC NOTICE

BUSINESS

Business to Business

Business

WANTED BUSINESS PARTNER HOTEL BUSINESS CONTACT: 8892501007/ 9606701007

Shares

WE ARE providing PMS Service with good returns in Short Term Equity for HNI Investors, Whatsapp 9003489155

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

PUBLIC NOTICE

My client has negotiated to enter into a Joint Development Agreement with regard to Property, which is more fully described in the Schedule below from it's Owner Mr. M. Jaikishan, son of late V.K. Mukunda Raj, residing at "Soundharya", # 1245, 60 Feet Main Road, 2nd Block, B.E.L. Layout, Vidyaranyapura, Bengaluru-560097.

Any Person/s having any right, title, interest, lien, charge or claim whatsoever in, upon or to the Schedule Property or to any portion thereof, by way of any easement or under agreements, arrangements, lease, trust, inheritance, gift, partition, bequest, possession, mortgage, exchange or under any deed/instrument easement or however otherwise, may submit his/her/its/their objection/s claims/s, in writing to me at the under mentioned address, through Registered Post, along with the supporting documentary evidence, within FIFTEEN days, of the issuance of this notice, failing which, my client will proceed on the basis that there are no claims over this Schedule Property.

SCHEDULE

All that Property presently bearing Municipal No. 270, (Old No. 343), situated at 18th Cross, Sampige Road (II Main), Malleswaram, Aramanenagar Ward No.35, Bengaluru, PID No.5-4-270, measuring East to West:120 Feet and North to South:30 Feet,in all measuring 3600 Square Feet and bounded as follows:- ON THE EAST WEST: Sampige Road (II Main) WEST: Conservancy Lane NORTH: 18th Cross Road, SOUTH: Private Property

(K.S. MADANAGOPAL) Advocate,
No.1, Ground Floor, Royal Park, No. 34, Park Road,
Bengaluru-560051 Ph: 41130082, 22864065.

ADMISSION CORNER

ಸಹಕಾರ ಭೀಷ್ಮ ಶ್ರೀ ಕೆ.ಎಚ್. ಪಾಟೀಲ ಮೆಮೋರಿಯಲ್ ಟ್ರಸ್ಟ್
ಕೆ.ಎಚ್.ಪಾಟೀಲ ಕಾನೂನು ಶಾಲೆ, ಬೆಂಗಳೂರು
ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯ ಸಂಯೋಜಿತ ಬಾರ್ ಕೌನ್ಸಿಲ್ ಆಫ್ ಇಂಡಿಯಾದ ಮಾನ್ಯತೆ ಪಡೆದಿದೆ.
38/2, ತಿರುಮೇನಹಳ್ಳಿ, ಯಲಹಂಕ ಹೋಬಳಿ, ಬೆಂಗಳೂರು–560064
ಇ–ಮೇಲ್ ವಿಳಾಸ: khpsl.blr@gmail.com | ಜಾಲತಾಣ: https://www.khplawschool.in

5 ವರ್ಷದ ಕಾನೂನು ಪದವಿ ಕೋರ್ಸ್ ಪ್ರವೇಶ
(ಪಿ.ಯು.ಸಿ. ನಂತರ) 5 ವರ್ಷದ ಬಿ.ಎ.,ಎಲ್‌ಎಲ್.ಬಿ. ಮತ್ತು ಬಿ.ಕಾಂ.,ಎಲ್‌ಎಲ್.ಬಿ. ಪದವಿ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ

ಕನಿಷ್ಠ ಅರ್ಹತೆ: ಅರ್ಹತಾ ಪರೀಕ್ಷೆಯಲ್ಲಿ (ಪಿ.ಯು.ಸಿ/10+2/ ತತ್ಸಮಾನ) ಸಾಮಾನ್ಯ ವರ್ಗದವರಿಗೆ ಕನಿಷ್ಠ 45%, ಓಬಿಸಿ ಪ್ರವರ್ಗದವರಿಗೆ 42% ಅಂಕಗಳು, ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 ದವರಿಗೆ ಕನಿಷ್ಠ 40% ಅಂಕಗಳು.

ಅರ್ಜಿ ಸಲ್ಲಿಸುವ ಕ್ರಮ: ಅರ್ಹ ಅಭ್ಯರ್ಥಿಗಳು ವಯ್ಯಕ್ತಿಕವಾಗಿ ಅಥವಾ ಅಂಚೆ ಮೂಲಕ ನಿಗದಿತ ಅರ್ಜಿ ನಮೂನೆಯನ್ನು ಭರ್ತಿಮಾಡಿ ರೂ. 200/– ಶುಲ್ಕದೊಂದಿಗೆ ಸಲ್ಲಿಸುವುದು. ನಿಗದಿತ ಅರ್ಜಿಯು ಕಾಲೇಜು ಕಛೇರಿಯಲ್ಲಿ ಲಭ್ಯವಿರುವವು.

ಅಂಚೆ ಮೂಲಕ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು **https://www.khplawschool.in** ವೆಬ್‌ಸೈಟ್‌ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿಮಾಡಿ, **ಪ್ರಾಂಶುಪಾಲರು, ಕೆ.ಎಚ್. ಪಾಟೀಲ ಸ್ಕೂಲ್ ಆಫ್ ಲಾ, ಬೆಂಗಳೂರು** ಇವರಿಗೆ ಸಂದಾಯವಾಗುವಂತೆ **ರೂ.200/– ಡಿ.ಡಿ. ಅಥವಾ ಬ್ಯಾಂಕ್ ಖಾತೆ ಸಂಖ್ಯೆ: 7823833175, IFSC: IDIB000T135ಗೆ** ವರ್ಗಾಯಿಸಿ ಪ್ರತಿ ಲಗತ್ತಿಸಿ ಕಳುಹಿಸುವುದು.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಪ್ರಾಂಶುಪಾಲರು:
9008733066 / 9449353162 ಅಥವಾ
khpsl.blr@gmail.com ಗೆ ಇ–ಮೇಲ್ ಮಾಡಬಹುದು

ಅರ್ಹ ಹಾಗೂ ಅನುಭವಿ ಪ್ರಾಧ್ಯಾಪಕರು ಮತ್ತು ಕಾನೂನು ತಜ್ಞರಿಂದ ಅತ್ಯುತ್ತಮ ಕಾನೂನು ಶಿಕ್ಷಣ ಲಭ್ಯ ನಮ್ಮ ಸಂಸ್ಥೆಯನ್ನು ಸೇರಿ ವಿಶೇಷ ರೀತಿಯಲ್ಲಿ ಕಾನೂನು ಶಿಕ್ಷಣವನ್ನು ಪಡೆಯಿರಿ.
ಸಹಿ/– ಪ್ರಾಂಶುಪಾಲರು

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036
*Conditions apply

PUBLIC NOTICE

Our client intends to purchase the lands situated at Bikkanahalli Village, Sarjapura Hobli, Anekal Taluk, Bangalore Urban District, from its owners mentioned in the Schedule below:-

Any persons having any right, title, claim or interest over the below said lands must notify the undersigned with documentary proof thereof within 15 (Fifteen) days of this publication. In case no such notice is received by us within 15 (Fifteen) days from the date of publication of this notice, it shall be presumed that the title of the owners with respect to below said lands are clear, marketable and free from encumbrance/s of any kind whatsoever and no person has any right, title or interest of any nature whatsoever in respect of below said lands or any part thereof. Claims or alleged interest, if any, which are not received within 15 (Fifteen) days from the date of publication of this notice shall be deemed to have been waived and disregarded for all intents and purposes and shall not be binding on our client.

SCHEDULE

Sl. Nos.	Sy. Nos.	Extents Acres	Extents Guntas	Boundaries East By: E; West By: W; North By: N; South By: S	Owners
1.	10/2	00	32	E : Land in Sy.No.8/2 W: Raja Kaluve N : Land in Sy.No.10/1 S : Remaining Portion of Sy.No.10/2	Sri. Kishan S Reddy S/o Late Srinivasa Reddy
2.	128	00	19.08	E : Remaining Portion of Sy.No.128 W: Land in Sy.No.180/3 N : Land in Sy.No.180/2 S : Remaining Portion of Sy.No.128	Sri. Muniyappa S/o Late Yellamma and others
3.	141/1	01	24	E : Raja Kaluve W: Land in Sy.No.143/1 N : Raja Kaluve S : Remaining Portion of Sy.No.141/1	Sri. Kusumadhar.B.C S/o Late B.C.Channa Reddy
4.	142/1	00	17	E : Land in Sy.No.142/5 W: Land in Sy.No.142/2 N : Land in Sy.No.141/1 S : Land in Sy.No.143/2	Sri.Praveen M Reddy S/o R.Muniswamy Reddy
5.	168/3	01	24	E : Land in Sy.No.168/4 & 168/8 W: Land in Sy.No.168/1 & 168/2 and Remaining of Sy.No.168/3 N : B Hosahalli Border S : Land in Sy.No.165/1.	Smt. Bhadramma Smt. Lakshmamma wives of Late Thimma Reddy and others
6.	171/3	00	20	E : Remaining Portion of Sy.No.171/3 W: Land in Sy.No.174/4 N : Land in Sy.No.171/8 S : Remaining Portion of Sy.No.171/3	Smt. Khanthamma W/o Late Ramakrishna Reddy and others

Place: Bengaluru
Date : 27.07.2024

Sumithra. S,
Advocate, No.12, Okalipuram, Bangalore - 560 021
Mobile No +91 7259273736

ಬಿ.ಎಸ್‌.ಯಡಿಯೂರಪ್ಪ, ಎಚ್‌ಡಿಕೆ ಭಾಗಿ • ಸಮನ್ವಯ ಸಮಿತಿ ಸಭೆಯಲ್ಲಿ ತೀರ್ಮಾನ

‘ಪಾದಯಾತ್ರೆ ಮೂಲಕ ಜನಾಂದೋಲನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ, ಮುಡಾ ಹಗರಣವನ್ನು ಖಂಡಿಸಿ ಆ.3ರಿಂದ ನಡೆಸುವ ಪಾದಯಾತ್ರೆಯನ್ನು ಕಾಂಗ್ರೆಸ್ ಸರ್ಕಾರದ ಎಲ್ಲ ಅಕ್ರಮಗಳು ಮತ್ತು ಭ್ರಷ್ಟಾಚಾರ ವಿರುದ್ಧದ ಜನಾಂದೋಲನವಾಗಿ ರೂಪಿಸಲು ಬಿಜೆಪಿ–ಜೆಡಿಎಸ್ ತೀರ್ಮಾನಿಸಿವೆ.

ಎರಡೂ ಪಕ್ಷಗಳ ಸಮನ್ವಯ ಸಮಿತಿ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಸಲಾಗಿದೆ. ಎರಡೂ ಪಕ್ಷಗಳು ಜಂಟಿಯಾಗಿ ನಡೆಸುತ್ತಿರುವ ಈ ಹೋರಾಟವನ್ನು ದೊಡ್ಡ ಮಟ್ಟದಲ್ಲಿ ಯಶಸ್ವಿ ಮಾಡಲು ತೀರ್ಮಾನಿಸಲಾಗಿದೆ.

ಜೆಡಿಎಸ್ ಪ್ರಾಬಲ್ಯವಿರುವ ಕ್ಷೇತ್ರಗಳಲ್ಲಿ ಪಾದಯಾತ್ರೆ ಹಾದು ಹೋಗುವುದರಿಂದ ಹೆಚ್ಚು ಜನರನ್ನು ಸೇರಿಸಲು ಉದ್ದೇಶಿಸಲಾಗಿದೆ. ಇತ್ತೀಚೆಗೆ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಹೆಸರು ಬದಲಾಯಿಸಲು ತೀರ್ಮಾನಿಸಿರುವುದನ್ನು ಜೆಡಿಎಸ್‌ಗೆ ಎಸೆದಿರುವ ಸವಾಲು ಎಂದೇ ಜೆಡಿಎಸ್ ನಾಯಕರು ಭಾವಿಸಿದ್ದಾರೆ.

ಪಾದಯಾತ್ರೆಗೆ ಮಾತ್ರ ಸೀಮಿತರಾಗದೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವವರೆಗೆ ವಿವಿಧ ಸ್ವರೂಪದ ಹೋರಾಟಗಳನ್ನು ಹಮ್ಮಿಕೊಳ್ಳಲು ಉಭಯ ಪಕ್ಷಗಳ ನಾಯಕರು ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಾದಯಾತ್ರೆಯಲ್ಲಿ ಬಿಎಸ್‌ವೈ, ಎಚ್‌.ಡಿ.ಕೆ: ಪಾದಯಾತ್ರೆಯಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಮತ್ತು ಎಚ್‌.ಡಿ.ಕುಮಾರಸ್ವಾಮಿ ಅವರೂ ಭಾಗವಹಿಸಲಿದ್ದಾರೆ ಎಂದು ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆಯಲ್ಲಿ ತಲುಪಲು ಏಳು ದಿನಗಳು ಬೇಕಾಗಲಿದೆ. ಕಾರ್ಯಕ್ರಮವನ್ನು ಯಡಿಯೂರಪ್ಪ ಮತ್ತು ಕುಮಾರಸ್ವಾಮಿ ಉದ್ಘಾಟಿಸಲಿದ್ದಾರೆ. ಆ.10 ರಂದು ಮೈಸೂರಿನಲ್ಲಿ ಸಮಾರೋಪ ನಡೆಯಲಿದೆ. ಇದರಲ್ಲಿ ಬಿಜೆಪಿ ರಾಷ್ಟ್ರೀಯ ನಾಯಕರು ಭಾಗವಹಿ ಸಲಿದ್ದಾರೆ ಎಂದರು.

ಬಿ.ಎಸ್.ಯಡಿಯೂರಪ್ಪ ಮಾತನಾಡಿ, ಭ್ರಷ್ಟ ಸರ್ಕಾರವನ್ನು ಕಿತ್ತೊಗೆಯುವ ಹೋರಾಟದಲ್ಲಿ ಜನ ಸ್ವಯಂಪ್ರೇರಿತರಾಗಿ ಭಾಗವಹಿಸಬೇಕು. ಎರಡು ಪಕ್ಷಗಳು ಸೇರಿ ನಡೆಸುವ ಪಾದಯಾತ್ರೆಯಲ್ಲಿ ಹತ್ತಾರು ಸಾವಿರ ಜನ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಮುಖ್ಯಮಂತ್ರಿ ರಾಜೀನಾಮೆ ಕೊಡುವವರೆಗೂ ಹೋರಾಟ ನಿಲ್ಲುವುದಿಲ್ಲ. ಲೋಕಸಭೆ, ರಾಜ್ಯಸಭೆಯಲ್ಲೂ ಇದರ ಕುರಿತು ಚರ್ಚೆ ಆಗಿದೆ. ಮುಖ್ಯಮಂತ್ರಿಗಳಿಗೆ ಕಿಂಚಿತ್ತು ಗೌರವ ಇದ್ದರೆ, ಮಾಡಿರುವ ಅಪರಾಧ ಒಪ್ಪಿಕೊಂಡು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, ರಾಜ್ಯದಲ್ಲಿ ಶೇ 100 ರಷ್ಟು ಭ್ರಷ್ಟ ಸರ್ಕಾರ ಆಡಳಿತ ನಡೆಸುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಶೇ 100 ಭ್ರಷ್ಟ ಎಂಬ ಬಿರುದು ಪಡೆದವರು. ಹಾಗಾಗಿ, ಜನಜಾಗೃತಿಗೆ ಹೋರಾಟ, ಕಾನೂನು ಹೋರಾಟವನ್ನು ಅತ್ಯಂತ ಗಟ್ಟಿಯಾಗಿ ಮುಂದುವರೆಸುತ್ತವೆ ಎಂದು ಹೇಳಿದರು.

ಎಚ್‌.ಡಿ.ಕುಮಾರಸ್ವಾಮಿ ಮೂಗಿನಿಂದ ರಕ್ತ ಸ್ರಾವ

ಎಚ್‌ಡಿ.ಕುಮಾರಸ್ವಾಮಿ ಅವರ ಮೂಗಿನಿಂದ ರಕ್ತ ಸುರಿಯಲಾರಂಭಿಸಿದಾಗ, ಪುತ್ರ ನಿಖಿಲ್ ಅವರ ಜತೆ ಸಂಭಾಷಣೆಯಲ್ಲಿ ತೊಡಗಿದ್ದರು

ಬಿಜೆಪಿ– ಜೆಡಿಎಸ್ ಪಕ್ಷಗಳ ಸಮನ್ವಯ ಸಮಿತಿ ಸಭೆಯ ಬಳಿಕ ಸುದ್ದಿಗೋಷ್ಠಿ ನಡೆಸುವಾಗ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರ ಮೂಗಿನಿಂದ ಏಕಾಏಕಿ ರಕ್ತ ಸುರಿಯಲಾರಂಭಿಸಿತು. ತಕ್ಷಣವೇ ಸುದ್ದಿಗೋಷ್ಠಿಯನ್ನು ಮೊಟಕುಗೊಳಿಸಿ ಅವರನ್ನು ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಬಳಿಕ ಮನೆಗೆ ಕರೆದೊಯ್ಯಲಾಯಿತು.

ಕುಮಾರಸ್ವಾಮಿ ಮಾತನಾಡುವಾಗಲೇ ರಕ್ತ ತೊಟ್ಟಿಕ್ಕಲಾರಂಭಿಸಿತು. ಆಗ ಕರವಸ್ತ್ರದಿಂದ ಒರೆಸಿಕೊಳ್ಳಲಾರಂಭಿಸಿದರು. ಅವರ ಅಂಗಿಯ ಮೇಲೆಲ್ಲಾ ರಕ್ತದ ಕಲೆಗಳಾಯಿತು. ಪಕ್ಕದಲ್ಲೇ ಇದ್ದ ನಿಖಿಲ್ ಕುಮಾರಸ್ವಾಮಿ ಅವರನ್ನು ಅಲ್ಲಿಂದ ಕರೆದೊಯ್ದರು. ಜತೆಯಲ್ಲೇ ಇದ್ದ ಬಿ.ಎಸ್.ಯಡಿಯೂರಪ್ಪ ಮತ್ತು ಬಿ.ವೈ.ವಿಜಯೇಂದ್ರ ಅವರು ಆತಂಕಗೊಂಡರು.

ಕುಮಾರಸ್ವಾಮಿ ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅವರ ಆಪ್ತ ಮೂಲದ ಪ್ರಕಾರ, ‘ದೇಹದ ಉಷ್ಣತೆ ಹೆಚ್ಚಾಗಿ ಮೂಗಿನ ಬಳಿಯ ರಕ್ತನಾಳ ಒಡೆದ ಕಾರಣ ರಕ್ತ ಸೋರಿಕೆಯಾಗಿದೆ. ಗಾಬರಿಯಾಗುವ ಅಗತ್ಯವಿಲ್ಲ’.

ನಿಖಿಲ್ ಕುಮಾರಸ್ವಾಮಿ ಹೇಳಿಕೆ ನೀಡಿ, ‘ಕುಮಾರಸ್ವಾಮಿ ಅವರು ಬಹಳದ ದಿನಗಳಿಂದ ವಿಶ್ರಾಂತಿ ತೆಗೆದುಕೊಳ್ಳದ ಕಾರಣ ದಣಿದಿದ್ದಾರೆ. ಬೇರೆ ಯಾವುದೇ ಸಮಸ್ಯೆ ಇಲ್ಲ. ಯಾರೂ ಗಾಬರಿ ಆಗಬೇಕಿಲ್ಲ’ ಎಂದು ಪ್ರತಿಕ್ರಿಯೆ ನೀಡಿದ್ದಾರೆ.

‘ಸಿದ್ದರಾಮಯ್ಯ ವಿರುದ್ಧ ಷಡ್ಯಂತ್ರ’

ಬಿ.ಎಸ್. ಶಿವಣ್ಣ

ಬೆಂಗಳೂರು: ‘ಸಾರ್ವಜನಿಕ ಸ್ವತ್ತನ್ನು ನುಂಗಿ ನೀರು ಕುಡಿದವರು, ಭೂಗಳ್ಳರು ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಭೂ ಅಕ್ರಮದ ಆರೋಪ ಮಾಡುತ್ತಿದ್ದಾರೆ’ ಎಂದು ರಾಮ ಮನೋಹರ್ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್. ಶಿವಣ್ಣ ಟೀಕಿಸಿದ್ದಾರೆ.

‘ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ ಕುಟುಂಬ ವರ್ಗ ಅಧಿಕಾರದಲ್ಲಿ ಇದ್ದಾಗ ನಡೆಸಿದ ಭೂ ಹಗರಣಗಳ ವಿವರವನ್ನು ಜನರ ಮುಂದೆ ಇಡಲಾಗಿದೆ. ಜೆಡಿಎಸ್ ನಾಯಕರು ಅನಗತ್ಯವಾಗಿ ಗೊಂದಲ ಮೂಡಿಸಲು ನಿರಂತರ ಅಪಪ್ರಚಾರದಲ್ಲಿ ತೊಡಗಿದ್ದಾರೆ. ಖುದ್ದು ಭೂ ಹಗರಣದಲ್ಲಿ ಭಾಗಿಯಾಗಿರುವ ಇವರ ಮಾತುಗಳನ್ನು ಕೇಳಿದರೆ ದೆವ್ವದ ಬಾಯಲ್ಲಿ ಭಗವದ್ಗೀತೆ ಕೇಳಿದಂತೆ ಭಾಸವಾಗುತ್ತದೆ. ಸಿದ್ದರಾಮಯ್ಯ ಅವರ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ಮುಡಾ ಪ್ರಹಸನವನ್ನು ಮುಂದಿಟ್ಟುಕೊಂಡು, ಬಿಜೆಪಿ ಮತ್ತು ಜೆಡಿಎಸ್ ಮೈಸೂರಿಗೆ ಪಾದಯಾತ್ರೆ ಮಾಡುತ್ತಿವೆ’ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ವಾಸ್ತವದಲ್ಲಿ ಬಿಜೆಪಿ ಮತ್ತು ಜೆಡಿಎಸ್ ನವದೆಹಲಿಗೆ ಪಾದಯಾತ್ರೆ ಮಾಡಬೇಕು. ಕೇಂದ್ರ ಸರ್ಕಾರವು ನಿರಂತರವಾಗಿ ಮಾಡುತ್ತಿರುವ ಅನ್ಯಾಯವನ್ನು ಪ್ರಶ್ನಿಸಬೇಕು. ಆದರೆ, ರಿಯಲ್ ಎಸ್ಟೇಟ್ ಏಜೆಂಟ್‌ಗಳ ರೀತಿಯಲ್ಲಿ ದಿನಕ್ಕೊಂದು ಕಥೆ ಹೇಳುತ್ತಾ ಪಾದಯಾತ್ರೆ ನಡೆಸಿದರೆ ಜನರು ನಂಬುತ್ತಾರೆಯೆ? ಅಧಿಕಾರ ಹಾಗೂ ಸುಳ್ಳು ಪ್ರತಿಪಾದನೆಗಾಗಿ ದೇಶದಲ್ಲಿ ನಡೆದ ಹೋರಾಟಗಳು ಅರ್ಥಕ್ಕೆ ಮುಳುಗಿ ಹೋಗಿವೆ. ಸಾಧ್ಯವಿದ್ದರೆ ನೀಟ್ ಅಕ್ರಮ, ಒಂದು ದೇಶ ಒಂದು ಚುನಾವಣೆ, ಕ್ಷೇತ್ರ ಪುನರ್ ವಿಂಗಡಣೆಯಂತಹ ವಿಷಯಗಳ ಬಗ್ಗೆ ಧ್ವನಿಯೆತ್ತಿ’ ಎಂದು ಆಗ್ರಹಿಸಿದ್ದಾರೆ.

‘ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣ ಕಾಂಗ್ರೆಸ್‌ನಿಂದ ದುರ್ಬಳಕೆ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕಾಂಗ್ರೆಸ್ ಸರ್ಕಾರ ರಾಜಕೀಯ ಲಾಭಕ್ಕಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲು ಅನುದಾನವನ್ನು ದುರ್ಬಳಕೆ ಮಾಡಿಕೊಂಡು ದಲಿತರಿಗೆ ಅನ್ಯಾಯ ಮಾಡುತ್ತಿದೆ ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್.ಪಿ.ಐ-ಅಠವಾಳೆ) ರಾಷ್ಟ್ರೀಯ ಕಾರ್ಯಾಧ್ಯಕ್ಷ ಎಂ.ವೆಂಕಟಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಕೆ.ಆರ್.ಪುರ ಸಮೀಪದ ವಿಜಿನಾಪುರದಲ್ಲಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಮತ್ತು ಸಮತಾ ಸೈನಿಕ ದಳದ ಕೆ.ಆರ್. ಪುರ ಮತ್ತು ವಿಜಿನಾಪುರ ನೂತನ ಶಾಖೆಗಳನ್ನು ಉದ್ಘಾಟಿಸಿ ಮಾತನಾಡಿದರು.

ಸರ್ಕಾರ ದಲಿತರ ಹಣವನ್ನು ಬೇರೆ ಯೋಜನೆಗಳಿಗೆ ಬಳಸುವ ನಿರ್ಧಾರವನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು.

ಆರ್‌ಪಿಐ ರಾಜ್ಯ ಯುವ ಘಟಕದ ಪ್ರಧಾನ ಕಾರ್ಯದರ್ಶಿ ದಲಿತ ಚಳವಳಿ ನಾಗೇಶ್ ಮಾತನಾಡಿ, ‘ವಿಜಿನಾಪುರ ಭಾಗದಲ್ಲಿ ಸುಮಾರು ವರ್ಷಗಳಿಂದ ನೂರಾರು ಬಡ ಕುಟುಂಬಗಳು ವಾಸಿಸುತ್ತಿವೆ. ಯಾವುದೇ ಸರ್ಕಾರ ಬಂದರೂ ಇಲ್ಲಿನ ಜನರಿಗೆ ಹಕ್ಕುಪತ್ರ ನೀಡುತ್ತಿಲ್ಲ. ಹಾಗಾಗಿ ಹೋರಾಟ ಅನಿವಾರ್ಯ’ ಎಂದು ಎಚ್ಚರಿಸಿದರು.

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಅಠವಾಳೆ) ರಾಜ್ಯ ಘಟಕದ ಅಧ್ಯಕ್ಷ ಸತೀಶ್, ರಾಜ್ಯ ಸಮಿತಿ ಸದಸ್ಯ ಅಂಬರೀಶ್, ರೂಪಕಲಾ, ನಾರಾಯಣಪ್ಪ, ಶ್ರೀನಿವಾಸ್, ಮರಿಯಪ್ಪ, ರಾಜೇಶ್ ಭಾಗವಹಿಸಿದ್ದರು.

ನಕಲಿ ದಾಖಲೆ: ಎಫ್‌ಐಆರ್

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಪಿಯೊಬ್ಬರಿಗೆ ಜಾಮೀನು ಮಂಜೂರಾತಿ ಸಂದರ್ಭದಲ್ಲಿ ಭದ್ರತೆ ನೀಡಲು ನಗರದ ನಾಲ್ಕನೇ ತ್ವರಿತ ವಿಶೇಷ ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ನೀಡಿದ್ದ ಆರೋಪದ ಮೇಲೆ ಇಬ್ಬರ ವಿರುದ್ಧ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವೊಂದರಲ್ಲಿ ಆರೋಪಿಯಾಗಿರುವ ಫಿರ್ದೋಸ್ ಎಂಬುವವರಿಗೆ ನಗರದ ನಾಲ್ಕನೇ ತ್ವರಿತ ವಿಶೇಷ ನ್ಯಾಯಾಲಯದಲ್ಲಿ ಜಾಮೀನು ಮಂಜೂರಾಗಿತ್ತು. ನ್ಯಾಯಾಲಯ ವಿಧಿಸಿದ್ದ ಷರತ್ತುಗಳನ್ನು ಪೂರೈಸಲು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಲಿಂಗಪುರ ಗ್ರಾಮದ ಆಂಜನಪ್ಪ (38), ದೊಡ್ಡಬಳ್ಳಾಪುರ ತಾಲ್ಲೂಕಿನ ವೀರಪುರ ಗ್ರಾಮದ ರಾಮಚಂದ್ರಪ್ಪ (37) ಎಂಬುವವರು ಭದ್ರತೆ ಒದಗಿಸಿದ್ದರು. ಈ ಇಬ್ಬರೂ ಆರೋಪಿಗಳು ನಕಲಿ ಆಧಾರ್ ಕಾರ್ಡ್ ಹಾಗೂ ಸುಳ್ಳು ಪ್ರಮಾಣ ಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರಗಳನ್ನು ಸಲ್ಲಿಸಿದ ಆರೋಪದ ಮೇಲೆ ಇವರಿಬ್ಬರನ್ನೂ ಬಂಧಿಸುವಂತೆ ಸಿಟಿ ಸಿವಿಲ್ ನ್ಯಾಯಾಲಯದ ಸಹಾಯಕ ರಿಜಿಸ್ಟ್ರಾರ್ ದೂರು ನೀಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಜಾಮೀನಿಗಾಗಿ ಭದ್ರತೆ ನೀಡಿದ್ದ ಆಂಜನಪ್ಪ ಹಾಗೂ ರಾಮಚಂದ್ರಪ್ಪ ಅವರ ವಿಳಾಸವನ್ನು ಖಚಿತಪಡಿಸಿಕೊಳ್ಳಲು ವಿಲ್ಸನ್ ಗಾರ್ಡನ್ ಪೊಲೀಸರು ಪರಿಶೀಲನೆ ನಡೆಸಿದ್ದರು. ಈ ಬಗ್ಗೆ ಕಂದಾಯ ಇಲಾಖೆಯ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡು ನ್ಯಾಯಾಲಯ ಕ್ಕೆ ವರದಿ ಸಲ್ಲಿಸಿದ್ದರು. ಬೇರೆಯವರ ಹೆಸರಿನಲ್ಲಿರುವ ಜಮೀನು ಒಡೆತನದ ದಾಖಲಾತಿಗಳು, ಪ್ರಮಾಣ ಪತ್ರಗಳು ಹಾಗೂ ನಕಲಿ ಆಧಾರ್ ಕಾರ್ಡ್‌ಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಆರೋಪಿ ಫಿರ್ದೋಸ್ ಜಾಮೀನು ಪಡೆಯಲು ಸಹಕರಿಸಿದ್ದರು. ಆದ್ದರಿಂದ, ಇವರಿಬ್ಬರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

‘ರಸ್ತೆಯಲ್ಲಿನ ಕಸ ತೆರವುಗೊಳಿಸಿ’

ರಸ್ತೆಯಲ್ಲಿ ಹಾಕಿರುವ ಕಸ

ಬಿಬಿಎಂಪಿ ವ್ಯಾಪ್ತಿಯ ವಾರ್ಡ್ ಸಂಖ್ಯೆ 106ರ ಮೂರನೇ ಮುಖ್ಯರಸ್ತೆಯ ಇಂಡಸ್ಟ್ರಿಯಲ್ ಎಸ್ಟೇಟ್‌ನ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ಕಚೇರಿ ಹತ್ತಿರದ ರಸ್ತೆಯಲ್ಲಿ ಕಸ ಸುರಿಯಲಾಗಿದೆ. ಸದ್ಯ ಇದು ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಬದಲಾಗಿದೆ. ಈ ಪ್ರದೇಶವೆಲ್ಲ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಬಿಬಿಎಂಪಿ ಅಧಿಕಾರಿಗಳು ಇಲ್ಲಿ ರಾಶಿ ಹಾಕಿರುವ ಕಸವನ್ನು ವಿಲೇವಾರಿ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದರ ಮೂಲಕ ನಗರದ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ಬಾಲಸ್ವಾಮಿ, ಸ್ಥಳೀಯ ನಿವಾಸಿ

ಯಶವಂತಪುರ ಎಪಿಎಂಸಿ ಯಾರ್ಡ್‌ಗೆ ಸಂಪರ್ಕ ಕಲ್ಪಿಸುವ ರಸ್ತೆ

‘ಕೆಸರು ಗದ್ದೆಯಂತಾದ ರಸ್ತೆ’

ಕೃಷ್ಣಾನಂದನಗರದಿಂದ ಯಶವಂತಪುರದ ಎಪಿಎಂಸಿ ಯಾರ್ಡ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಯು ಮಳೆಗಾಲದಲ್ಲಿ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಇಂತಹ ರಸ್ತೆಯಲ್ಲಿ ಪ್ರತಿದಿನ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ಹಾಳಾದ ಪರಿಣಾಮ ವಾಹನ ಸಂಚಾರಕ್ಕೆ ಅನನುಕೂಲವಾಗಿದ್ದು, ಸಂಚಾರ ದಟ್ಟಣೆ ಆಗುತ್ತಿದೆ. ರಸ್ತೆ ಅಭಿವೃದ್ಧಿಪಡಿಸುವಂತೆ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ನಾರಾಯಣ್, ಕೃಷ್ಣಾನಂದನಗರ

‘ಪಾದಚಾರಿ ಮಾರ್ಗದಲ್ಲಿ ಬಾಯ್ತೆರೆದ ಗುಂಡಿ’

ರಾಮಮೂರ್ತಿನಗರದ ಟಿ.ಸಿ. ಪಾಳ್ಯ ಮುಖ್ಯರಸ್ತೆಯ 14ನೇ ಕ್ರಾಸ್‌ನ ಲೋಟಸ್ ಕನ್ವೆನ್ಷನ್ ಹಾಲ್ ಪಕ್ಕದ ಪಾದಚಾರಿ ಮಾರ್ಗದಲ್ಲಿ ಗುಂಡಿ ಬಿದ್ದಿದ್ದು, ಪಾದಚಾರಿ ಮಾರ್ಗ ಕುಸಿಯುವ ಭೀತಿ ಎದುರಾಗಿದೆ. ಇಲ್ಲಿನ ಚರಂಡಿಯ ಮೇಲೆ ಹಾಕಿರುವ ಹಾಸುಗಲ್ಲುಗಳು ಕುಸಿಯುವ ಹಂತಕ್ಕೆ ತಲುಪಿವೆ. ಇದರಿಂದ, ಸಾರ್ವಜನಿಕರು ಮುಖ್ಯರಸ್ತೆಯಲ್ಲಿ ಓಡಾಡುತ್ತಿದ್ದಾರೆ. ಬಿಬಿಎಂಪಿ ಕೂಡಲೇ ಇಲ್ಲಿನ ಪಾದಚಾರಿ ಮಾರ್ಗ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಮಂಜುನಾಥ್ ಕುಮಾರ್ ಆರ್., ರಾಮಮೂರ್ತಿನಗರ

ಪಾದಚಾರಿ ಮಾರ್ಗದ ದುಃಸ್ಥಿತಿ.

‘ಪಾದಚಾರಿ ಮಾರ್ಗದ ಅತಿಕ್ರಮಣ’

ವಿದ್ಯಾರಣ್ಯಪುರ ಮುಖ್ಯರಸ್ತೆಯಲ್ಲಿ ಒಂದು ವರ್ಷದಿಂದ ಕಟ್ಟಡವೊಂದರ ನಿರ್ಮಾಣ ಕಾರ್ಯ ನಡೆಯುತ್ತಿದೆ. ಕಟ್ಟಡ ನಿರ್ಮಾಣಕ್ಕೆ ಬೇಕಾದ ಎಂ.ಸ್ಯಾಂಡ್, ಜಲ್ಲಿ ಕಲ್ಲನ್ನು ಪಾದಚಾರಿ ಮಾರ್ಗದ ಮೇಲೆ ರಾಶಿ ಹಾಕಿದ್ದಾರೆ, ಪಾದಚಾರಿ ಮಾರ್ಗವೆಲ್ಲ ಸಂಪೂರ್ಣ ಹಾಳಾಗಿದೆ. ಇದರಿಂದ, ಸಾರ್ವಜನಿಕರ ಓಡಾಟಕ್ಕೆ ಸಮಸ್ಯೆ ಆಗುತ್ತಿದೆ. ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ವಾಹನಗಳ ನಿಲುಗಡೆ ಮತ್ತು ಕಟ್ಟಡ ನಿರ್ಮಾಣ ಸಾಮಗ್ರಿಗಳ ದಾಸ್ತಾನಿಗೆ ಮುಖ್ಯರಸ್ತೆಯನ್ನೂ ಆಕ್ರಮಿಸಿಕೊಂಡಿದ್ದಾರೆ. ವಾಹನ ಸವಾರರು, ಅದಕ್ಕಿಂತ ಮುಖ್ಯವಾಗಿ ಪಾದಚಾರಿಗಳು ಜೀವವನ್ನು ಅಪಾಯಕ್ಕೆ ಒಡ್ಡಿಕೊಂಡು ಸಂಚರಿಸಬೇಕಾಗಿದೆ.

ಎಚ್. ಆನಂದರಾಮ ಶಾಸ್ತ್ರೀ, ವಿದ್ಯಾರಣ್ಯಪುರ

ವಿದ್ಯಾರಣ್ಯಪುರದ ಪಾದಚಾರಿ ಮಾರ್ಗದಲ್ಲಿ ಕಟ್ಟಡ ಸಾಮಗ್ರಿ ಹಾಕಿರುವುದು

ಗುಬ್ಬಲಾಳದಲ್ಲಿ ಜೆಸಿಎಚ್‌ಎಸ್ ಲೇಔಟ್‌ನ 2ನೇ ಹಂತದ ರಸ್ತೆಯ ದುಃಸ್ಥಿತಿ

‘ರಸ್ತೆ ದುರಸ್ತಿಗೊಳಿಸಿ’

ಬಿಬಿಎಂಪಿ ವ್ಯಾಪ್ತಿಯ ಸುಬ್ರಮಣ್ಯಪುರ ವಾರ್ಡ್ ಸಂಖ್ಯೆ 203ರ ವ್ಯಾಪ್ತಿಯ ಗುಬ್ಬಲಾಳದಲ್ಲಿ ಜೆಸಿಎಚ್‌ಎಸ್ ಲೇಔಟ್‌ನ 2ನೇ ಹಂತದ ರಸ್ತೆ ಸಂಪೂರ್ಣ ಹಾಳಾಗಿದೆ. ಕುಡಿಯುವ ನೀರು ಪೂರೈಕೆ ಪೈಪ್‌ಗಳನ್ನು ಅಳವಡಿಸಲು ಇತ್ತೀಚೆಗೆ ಈ ರಸ್ತೆಯನ್ನು ಅಗೆಯಲಾಗಿತ್ತು. ನೀರಿನ ಪೈಪ್‌ಗಳನ್ನು ಅಳವಡಿಸುವ ಕಾಮಗಾರಿ ಮುಗಿದ ನಂತರ ರಸ್ತೆ ದುರಸ್ತಿಗೊಳಿಸದೇ ಹಾಗೆಯೇ ಬಿಡಲಾಗಿದೆ. ಇದರಿಂದ, ಮಕ್ಕಳು, ವೃದ್ಧರು ಹಾಗೂ ಮಹಿಳೆಯರು ರಸ್ತೆಯಲ್ಲಿ ಓಡಾಡುವುದೇ ದುಸ್ತರವಾಗಿದೆ. ಮಳೆಗಾಲ ಇರುವುದರಿಂದ ರಸ್ತೆಯೆಲ್ಲ ಕೆಸರುಮಯವಾಗಿದ್ದು, ವಾಹನ ಸಂಚಾರಕ್ಕೂ ಅನನುಕೂಲವಾಗಿದೆ. ಕೂಡಲೇ ರಸ್ತೆ ದುರಸ್ತಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು.

ವೈ.ವಿ. ಪ್ರಭಾಕರ, ಜೆಸಿಎಚ್‌ಎಸ್ ಲೇಔಟ್

ಅಸಭ್ಯ ವರ್ತನೆ: ಯುವಕನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರ್‍ಯಾಪಿಡೊ ಬೈಕ್ ಟ್ಯಾಕ್ಸಿ ಚಲಾಯಿಸುತ್ತಿದ್ದ ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಯುವಕನನ್ನು ಭಾನುವಾರ ವಶಕ್ಕೆ ಪಡೆಯಲಾಗಿದೆ.

35 ವರ್ಷದ ಮಹಿಳೆ ಈ ಸಂಬಂಧ ಬಾಗಲಗುಂಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಟ್ಯಾಕ್ಸಿ ಬುಕ್ ಮಾಡಿದ್ದ ರಾಜಸ್ಥಾನದ ಜೈಪುರ ಮೂಲದ ಮಹೇಶ್ (27) ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆ.

ಜಾಲಹಳ್ಳಿಯ ಎಚ್‌ಎಂಟಿಯಿಂದ ದಾಸರಹಳ್ಳಿಗೆ ಬರುವ ಮಾರ್ಗ ಮಧ್ಯದಲ್ಲಿ ಯುವಕ ಅಸಭ್ಯವಾಗಿ ವರ್ತಿಸಿದ್ದಾನೆ ಎಂದು ಮಹಿಳೆ ಆರೋಪಿಸಿದ್ದಾರೆ. ಘಟನೆ ಬಳಿಕ ಬೈಕ್ ನಿಲ್ಲಿಸಿ ಹೊಯ್ಸಳ ಪೊಲೀಸರಿಗೆ ಮಹಿಳೆ ಕರೆ ಮಾಡಿದ್ದು, ಸ್ಥಳಕ್ಕೆ ಬಂದು ವಶಕ್ಕೆ ಪಡೆದುಕೊಂಡಿದ್ದಾರೆ.

ಮಾಂಸದಂಗಡಿ, ಹೋಟೆಲ್ ಮಾಲೀಕರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್ ಉದ್ಯಮಿ ಅಬ್ದುಲ್ ರಜಾಕ್ ಅವರಿಂದ ಮಾಂಸ ಖರೀದಿಸುತ್ತಿದ್ದ ಮಾಂಸದಂಗಡಿಗಳು, ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳ ಮಾಲೀಕರಿಗೆ ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಇಲಾಖೆ ನೋಟಿಸ್ ಜಾರಿಗೊಳಿಸಿದೆ.

‘ದಾಖಲೆ ಸಮೇತ ವಿಚಾರಣೆಗೆ ಹಾಜರಾಗುವಂತೆ ಮಾಂಸದಂಗಡಿಗಳು, ಹೋಟೆಲ್ ಮತ್ತು ರೆಸ್ಟೋರೆಂಟ್ ಮಾಲೀಕರಿಗೆ ನೋಟಿಸ್ ಕಳುಹಿಸಲಾಗಿದೆ. ಎಷ್ಟು ವರ್ಷಗಳಿಂದ ಮಾಂಸ ಖರೀದಿಸಲಾಗುತ್ತಿತ್ತು? ಯಾರಿಂದ ಹಾಗೂ ಖರೀದಿ ಮಾಡಿದ್ದ ಮಾಂಸದ ಬೆಲೆ ಎಷ್ಟಿತ್ತು? ಎಂಬುದರ ಮಾಹಿತಿ ಕೇಳಲಾಗಿದೆ. ರಾಜಸ್ಥಾನದಿಂದ ಮಾಂಸ ತರಿಸುತ್ತಿದ್ದ ಉದ್ಯಮಿ ಅಬ್ದುಲ್ ರಜಾಕ್ ಅವರಿಗೂ ಪರವಾನಗಿಯ ದಾಖಲೆ ಸಮೇತ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದರು.

‘ಶನಿವಾರ ಇಬ್ಬರು ವಿಚಾರಣೆಗೆ ಹಾಜರಾಗಿದ್ದರು. ಉಳಿದವರು ಸೋಮವಾರ ವಿಚಾರಣೆಗೆ ಹಾಜರಾಗುವುದಾಗಿ ಹೇಳಿದ್ದಾರೆ’ ಎಂದು ಹೇಳಿದರು.

ರೈಲ್ವೆ ಅಧಿಕಾರಿಗಳಿಗೆ ಪತ್ರ: ನಾಯಿ ಹಾಗೂ ಇತರೆ ಮಾಂಸಗಳನ್ನು ರೈಲಿನ ಮೂಲಕ ನಗರಕ್ಕೆ ತಂದು ಹೋಟೆಲ್‌ಗಳಿಗೆ ಪೂರೈಸಲಾಗುತ್ತಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕಾಟನ್ ಪೇಟೆ ಪೊಲೀಸರು ಮಾಹಿತಿ ಕೇಳಿ ರೈಲ್ವೆ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

‘ಈಗಾಗಲೇ ಪ್ರಕರಣದ ಸಂಬಂಧ ರಾಜಸ್ಥಾನದ ವ್ಯಕ್ತಿಯೊಬ್ಬರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಮಾಂಸವನ್ನು ನಗರಕ್ಕೆ ರವಾನೆ ಮಾಡಿದ ವ್ಯಕ್ತಿಯನ್ನು ಪತ್ತೆ ಮಾಡುವ ಸಲುವಾಗಿ ರೈಲ್ವೆ ಅಧಿಕಾರಿಗಳಿಂದ ಮಾಹಿತಿ ಕೇಳಲಾಗಿದೆ. ಬಳಿಕ ಆತನಿಗೆ ನೋಟಿಸ್ ನೀಡಿ ವಿಚಾರಣೆಗೆ ಕರೆಸಲಾಗುವುದು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಎಲ್ಲಿಂದ ರೈಲಿನಲ್ಲಿ ಮಾಂಸ ತರಲಾಗುತ್ತಿತ್ತು? ಎಷ್ಟು ದಿನಗಳಿಗೊಮ್ಮೆ ಬರುತ್ತಿತ್ತು? ಯಾವ ರೈಲಿನಲ್ಲಿ ಯಾರು ತೆಗೆದುಕೊಂಡು ಬರುತ್ತಿದ್ದರು? ಯಾವ ಪ್ಲಾಟ್‌ಫಾರ್ಮ್‌ಗೆ ರೈಲು ಬರುತ್ತಿತ್ತು? ಮಾಂಸವನ್ನು ಯಾರು ಬಂದು ತೆಗೆದುಕೊಳ್ಳುತ್ತಿದ್ದರು? ಎಂಬ ಬಗ್ಗೆ ವಿವರ ಕೇಳಲಾಗಿದೆ. ಮಾಂಸ ಹೊತ್ತ ರೈಲು ನಿಲುಗಡೆ ಆಗುತ್ತಿದ್ದ ಪ್ಲಾಟ್‌ಫಾರ್ಮ್‌ನಲ್ಲಿರುವ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಒದಗಿಸುವಂತೆ ಕೋರಲಾಗಿದೆ’ ಎಂದು ಹೇಳಿದ್ದಾರೆ.

‘ಜೈಪುರ–ಮೈಸೂರು ಎಕ್ಸ್‌ಪ್ರೆಸ್ ರೈಲು ಮೂಲಕ ಅಂದಾಜು 4,500 ಕೆ.ಜಿ ಮಾಂಸವನ್ನು ಶುಕ್ರವಾರ ನಗರಕ್ಕೆ ತರಲಾಗಿತ್ತು. ಉದ್ಯಮಿ ಅಬ್ದುಲ್ ರಜಾಕ್ ತಾವೇ ಮಾಂಸ ತರಿಸುತ್ತಿದ್ದುದಾಗಿ ಹೇಳಿಕೊಂಡಿದ್ದರು. ಅದರಲ್ಲಿ ಕುರಿ, ಮೇಕೆ ಮಾಂಸದ ಜತೆಗೆ ನಾಯಿ ಮಾಂಸವನ್ನೂ ತರಲಾಗಿದೆ ಎಂದು ಆರೋಪಿಸಲಾಗಿದೆ. ಆಹಾರ ಸುರಕ್ಷತೆ ಇಲಾಖೆ ಅಧಿಕಾರಿಗಳು ನಾಲ್ಕು ಬಾಕ್ಸ್‌ಗಳಲ್ಲಿದ್ದ ಮಾಂಸದ ಮಾದರಿಯನ್ನು ಸಂಗ್ರಹಿಸಿ ಹೈದರಾಬಾದ್ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ. ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಹೈದರಾಬಾದ್ ಪ್ರಯೋಗಾಲಯದ ವರದಿ ಇನ್ನೂ ಬಂದಿಲ್ಲ. ಆದರೆ, ಪಶುವೈದ್ಯಾಧಿಕಾರಿಗಳು ಬಾಕ್ಸ್‌ಗಳಲ್ಲಿ ಇದ್ದಿದ್ದು ನಾಯಿ ಮಾಂಸ ಅಲ್ಲವೆಂದು ವರದಿ ನೀಡಿದ್ದಾರೆ. ಬಾಕ್ಸ್‌ಗಳಲ್ಲಿದ್ದ ಮಾಂಸವು ಸೇವನೆಗೆ ಯೋಗ್ಯವಾಗಿರಲಿಲ್ಲ. ಸ್ವಚ್ಛತೆ ಕೂಡ ಕಾಯ್ದು ಕೊಂಡಿರಲಿಲ್ಲವೆಂಬ ಆರೋಪದ ಹಿನ್ನೆಲೆಯಲ್ಲಿ ಪೂರೈಕೆದಾರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಲಿಂಗಾಯತ ಉದ್ಯಮಿಗಳಿಗೆ ಶೀಘ್ರ ಸಹಕಾರ ಬ್ಯಾಂಕ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗಾಯತ ಸಮುದಾಯಕ್ಕೆ ಸೇರಿದ ಉದ್ಯಮಿಗಳಿಗೆ ಆರ್ಥಿಕ ನೆರವು ನೀಡಲು ಸೌಹಾರ್ದ ಪತ್ತಿನ ಸಹಕಾರ ಬ್ಯಾಂಕ್ ಸ್ಥಾಪಿಸಲಾಗುವುದು ಎಂದು ಅಂತರ ರಾಷ್ಟ್ರೀಯ ಲಿಂಗಾಯತ ಯುವ ವೇದಿಕೆಯ (ಐಎಲ್‌ಐಎಫ್) ನೂತನ ಅಧ್ಯಕ್ಷ ಚಿನ್ಮಯ ಚಿಗಟೇರಿ ತಿಳಿಸಿದರು.

ಅವರು ನಗರದಲ್ಲಿ ಭಾನುವಾರ ವೇದಿಕೆಯ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿ ಮಾತನಾಡಿದರು.

‘ಐಎಲ್‌ವೈಎಫ್ ಎನ್ನುವುದು ಲಿಂಗಾಯತ ಉದ್ಯಮಿಗಳಿಗಾಗಿ ಮೀಸಲಾಗಿರುವ ವ್ಯಾಪಾರ ಜಾಲ. ಇದರ ಅಧ್ಯಕ್ಷನಾಗಿ ಪ್ರಮುಖ ಮೂರು ಯೋಜನೆಗಳನ್ನು ಕಾರ್ಯಗತಗೊಳಿಸುವ ಉದ್ದೇಶ ಇಟ್ಟುಕೊಂಡಿದ್ದೇನೆ. ಉದ್ಯಮಿಗಳಿಗಾಗಿ ‘ಫಂಡಿಂಗ್ ಡೆಸ್ಕ್’ ರಚಿಸುವುದು, ಉದ್ಯಮಿಗಳಿಗೆ ನೆರವು ನೀಡಲು ಸೌಹಾರ್ದ ಪತ್ತಿನ ಸಹಕಾರ ಬ್ಯಾಂಕ್ ಸ್ಥಾಪಿಸುವುದು ಮತ್ತು ನಮ್ಮ ಚಟುವಟಿಕೆಗಳನ್ನು ಇಲ್ಲಿಯವರೆಗೆ ನಮ್ಮ ಉದ್ದಿಮೆಗಳೇ ಇಲ್ಲದ ದೇಶಗಳಿಗೆ ವಿಸ್ತರಿಸುವುದು’ ಎಂದು ವಿವರಿಸಿದರು.

ಐಎಲ್‌ವೈಎಫ್ 2012ರಲ್ಲಿ ಪ್ರಾರಂಭವಾಗಿದ್ದು, ಜಗತ್ತಿನ ಹಲವು ದೇಶಗಳಿಗೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿದೆ. ಸುಮಾರು ₹5,000 ಕೋಟಿ ಸಾಮೂಹಿಕ ವಹಿವಾಟು ನಡೆಸುತ್ತಿದೆ ಎಂದು ತಿಳಿಸಿದರು.

|| Om Shri Manjunathaya Namaha ||

Shri Dharmasthala Manjunatheshwara Educational Society (R), Ujire

President: Dr. D. Veerendra Heggade

FACULTY APPOINTMENTS

Applications are invited for the following faculty positions at

SDM Institute of Technology, Ujire (DK)

Website: sdmit.in Ph: 8762127991

Faculty Positions	Qualification
Professors/ Associate/Asst. Professors In Computer Science/ Information Science/ Artificial Intelligence & Data Sc.	Qualification and experience as per AICTE norms
Asst. Professors In Electronics & Communication Engg.	
Candidates having BE in E&C / EEE and PG specialisation in Computer Sc./ Software courses may also apply.	

Facilities*: Good salary package with PF and gratuity benefits, staff quarters, fee concession to children, subsidized medical insurance.
*conditions apply

Interested candidates may apply along with resume and a recent passport size photo within 7 days from the date of this notification to **The Principal, SDM Institute of Technology, Ujire** or **Email to: office@sdmit.in and principal@sdmit.in**

- SECRETARY

ಹೊಸಪೇಟೆ ಸಮೀಪದ ತುಂಗಭದ್ರಾ ಅಣೆಕಟ್ಟೆಯ ಎಲ್ಲಾ 33 ಕ್ರಸ್ಟ್‌ಗೇಟ್‌ಗಳಿಂದ ನೀರು ಹರಿಸಲಾಯಿತು – ಪ್ರಜಾವಾಣಿ ಚಿತ್ರ/ಮುರಳಿಕಾಂತ ರಾವ್

‘ಕೃಷ್ಣೆ’ಗೆ ಒಳಹರಿವು ಹೆಚ್ಚಳ: ಹೆಚ್ಚಿದ ಆತಂಕ

- ತುಂಗಭದ್ರಾ ಜಲಾಶಯ ವೀಕ್ಷಣೆಗೆ ಜನಸಾಗರ
- ವೀರಭದ್ರೇಶ್ವರ ದೇವಸ್ಥಾನ ಜಲಾವೃತ

ಪ್ರಜಾವಾಣಿ ವಾರ್ತೆ

ಬೆಳಗಾವಿ/ ಹೊಸಪೇಟೆ (ವಿಜಯನಗರ): ಸತತ ಮಳೆ ಕಾರಣ ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣಾ ನದಿಗೆ ಹರಿದು ಬರುವ ನೀರಿನ ಪ್ರಮಾಣ ಭಾನುವಾರ 2.77 ಲಕ್ಷ ಕ್ಯುಸೆಕ್‌ಗೆ ಏರಿಕೆಯಾಗಿದೆ. ಜಿಲ್ಲೆಯ ಸಪ್ತ ನದಿಗಳೂ ಉಕ್ಕಿ ಹರಿಯುತ್ತಿದ್ದು, ಪ್ರವಾಹಪೀಡಿತ ಗ್ರಾಮಗಳ ಪಟ್ಟಿ ಬೆಳೆಯುತ್ತಲೇ ಇದೆ.

ತುಂಗಭದ್ರಾ ಜಲಾಶಯ ತುಂಬಿ ತುಳುಕುತ್ತಿದ್ದು, ಎಲ್ಲಾ 33 ಕ್ರಸ್ಟ್‌ಗೇಟ್‌ಗಳಿಂದ ನೀರು ನದಿಗೆ ಧುಮ್ಮುಕ್ಕುತ್ತಿದೆ. ವೀಕ್ಷಣೆಗೆ ರಾಜ್ಯದ ನಾನಾ ಭಾಗಗಳಲ್ಲದೆ, ಆಂಧ್ರ, ತೆಲಂಗಾಣ, ಮಹಾರಾಷ್ಟ್ರ ಕಡೆಗಳಿಂದ ಪ್ರವಾಸಿಗರು ಬರುತ್ತಿದ್ದಾರೆ.

ಬೆಳಗಾವಿ ಜಿಲ್ಲೆಯಲ್ಲಿ ಕೃಷ್ಣಾ ನದಿತೀರದ ಗ್ರಾಮಸ್ಥರನ್ನು ರಕ್ಷಿಸಿ ಸ್ಥಳಾಂತರಿಸುವ ಕಾರ್ಯ ಮುಂದುವರಿದಿದೆ. ಈವರೆಗೆ ಪ್ರವಾಹಪೀಡಿತ 38 ಗ್ರಾಮಗಳ 2,081 ಕುಟುಂಬಗಳನ್ನು ರಕ್ಷಣೆ ಮಾಡಿ ಕಾಳಜಿ ಕೇಂದ್ರದಲ್ಲಿ ವ್ಯವಸ್ಥೆ ಕಲ್ಪಿಸಲಾಗಿದೆ.

ಚಿಕ್ಕೋಡಿ ತಾಲ್ಲೂಕಿನ ಯಡೂರು ಗ್ರಾಮದ ವೀರಭದ್ರೇಶ್ವರ ದೇವಸ್ಥಾನದ ಗರ್ಭಗುಡಿ ಜಲಾವೃತಗೊಂಡಿದ್ದು ದರ್ಶನ ಸ್ಥಗಿತಗೊಳಿಸಲಾಗಿದೆ. ಗೋಕಾಕ ತಾಲ್ಲೂಕಿನ ಅಡಿಬಟ್ಟಿ, ಹಡಗಿನಾಳ, ಮೆಳವಂಕಿ, ಉದಗಟ್ಟಿ ಮತ್ತಿತರ ಗ್ರಾಮಗಳು ಘಟಪ್ರಭಾ ನದಿ ಪ್ರವಾಹದಿಂದ ನಲುಗಿದ್ದು, ಅಲ್ಲಿನ ಜನರು ಮತ್ತು ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಅಲ್ಲದೆ, ಮೂಡಲಗಿ ತಾಲ್ಲೂಕಿನ ಮಸಗುಪ್ಪಿ, ಹುಣಶ್ಯಾಳ ಪಿ.ವೈ., ಢವಳೇಶ್ವರ ಗ್ರಾಮಗಳು ನಡುಗಡ್ಡೆಯಾಗಿ ಪರಿಣಮಿಸಿವೆ.

ಸೇತುವೆ ಮುಳುಗಡೆ: ಮುಧೋಳ (ಬಾಗಲಕೋಟೆ) ವರದಿ: ಘಟಪ್ರಭಾ ನದಿಯ ಪ್ರವಾಹದಿಂದ ಭಾನುವಾರ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಮುಧೋಳ– ಯಾದವಾಡ ಸೇತುವೆ ಮುಳುಗಡೆಯಾಗಿದ್ದು, ಸುತ್ತಲಿನ ಗ್ರಾಮಗಳಿಗೆ ರಸ್ತೆ ಸಂಪರ್ಕ ಬಂದ್ ಆಗಿದೆ. ಸುಮಾರು 25 ಕಿ.ಮೀ ಅಂತರದಲ್ಲಿ ಪರ್ಯಾಯ ಮಾರ್ಗ ಬಳಸಲಾಗುತ್ತಿದೆ.

ಮುಧೋಳ ನಗರದ ಜುಂಝುರಕೊಪ್ಪ ಗಲ್ಲಿಯಲ್ಲಿ ನೀರು ನುಗ್ಗಿದ್ದು, ನಗರದ ಎಂಕೆಬಿಎಸ್ ಶಾಲೆಯಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದೆ. ತಾಲ್ಲೂಕಿನ ಮಿರ್ಜಿ ಗ್ರಾಮಕ್ಕೆ ನೀರು ನುಗ್ಗಿದ್ದರಿಂದ ಸುಮಾರು 25 ಮನೆಗಳು ಮುಳುಗಡೆ ಆಗಿದ್ದು, ಮಿರ್ಜಿ ಗ್ರಾಮದ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಕಾಳಜಿ ಕೇಂದ್ರ ತೆರೆದು ಜಿಲ್ಲಾ ಹಾಗೂ ತಾಲ್ಲೂಕು ಆಡಳಿತದಿಂದ ಮೂಲ ಸೌಕರ್ಯ ಒದಗಿಸಲಾಗುತ್ತಿದೆ.

ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಹಲವಾಗಲು-ಗರ್ಭಗುಡಿ ಸಂಪರ್ಕ ರಸ್ತೆ ತುಂಗಭದ್ರಾ ನೀರಿನಿಂದ ಜಲಾವೃತವಾಗಿದೆ. ಹೂವಿನಹಡಗಲಿ ತಾಲ್ಲೂಕಿನಲ್ಲಿ ನೂರಾರು ಎಕರೆ ಪ್ರದೇಶಗಳಲ್ಲಿ ಬೆಳೆದ ಭತ್ತ, ಅಡಿಕೆ, ಮೆಕ್ಕಜೋಳ ಬೆಳೆಗಳು ಜಲಾವೃತವಾಗಿವೆ.

ರಾಯಚೂರು ಜಿಲ್ಲೆಯಲ್ಲಿ ಕೃಷ್ಣಾ ನದಿ ಪ್ರವಾಹದಿಂದಾಗಿ ಲಿಂಗಸುಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿ ಸಮೀಪದ ಟಣಮಕಲ್ಲು ಸೇತುವೆ ಹಾಗೂ ಶೀಲಹಳ್ಳಿ ಸೇತುವೆ ಮುಳುಗಡೆಯಾಗಿದ್ದು, ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ರಾಯಚೂರು ತಾಲ್ಲೂಕಿನ ಶಕ್ತಿನಗರ ಬಳಿಯ ಗುರ್ಜಾಪುರ ಬ್ಯಾರೇಜ್ ಶನಿವಾರ ಸಂಜೆ ಮುಳುಗಡೆಯಾಗಿದೆ.

136 ವಿದ್ಯುತ್ ಕಂಬ ಧರೆಗೆ (ಮಡಿಕೇರಿ ವರದಿ): ಕೊಡಗು ಜಿಲ್ಲೆಯಲ್ಲಿ ಮಳೆ ತಗ್ಗಿದ್ದು, ಬಿರುಗಾಳಿಯ ತೀವ್ರತೆ ಕಡಿಮೆಯಾಗಿಲ್ಲ.

ಜೋರಾದ ಗಾಳಿಯಿಂದಾಗಿ ಭಾನುವಾರ ಜಿಲ್ಲೆಯಲ್ಲಿ ಒಟ್ಟು 136 ವಿದ್ಯುತ್ ಕಂಬಗಳು ಉರುಳಿದ್ದು, 6 ಮನೆಗಳಿಗೆ ಹಾನಿಯಾಗಿದೆ. ಹಲವೆಡೆ ಅಂಗಡಿಗಳ ನಾಮಫಲಕಗಳು, ಮನೆಗಳ ಶೀಟ್‌ಗಳು ಹಾರಿ ಹೋಗಿವೆ. ಕಾರ್ಮಿಕರು ತೋಟಗಳಲ್ಲಿ ಕೆಲಸ ಮಾಡಲು ಹೆದರುವಂತಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್ ಎಸ್ *	124.80	122.95	47,293	35,182
ಹಾರಂಗಿ	2,859	2,855.26	8,800	4,100
ಕಬಿನಿ	2,284.00	2,282.51	22,334	8,000
ಹೇಮಾವತಿ	2,922	2,920.05	51,998	37,977
ಲಿಂಗನಮಕ್ಕಿ	1,819	1,807.95	37,450	2,908.94
ಸೂಪಾ (ಮೀ)	564	550.95	35,296	-
ಮಾಣಿ	595	579.12	3,572	1,790
ತುಂಗಭದ್ರಾ	1,633	1,631.09	1,24,361	1,50,798
ಮಲಪ್ರಭಾ	2,079.5	2,073,.20	28,972	1,594
ಘಟಪ್ರಭಾ	2175	2,170.16	50,337	50,337
ಭದ್ರಾ	186	180.7	35,557	206
ಆಲಮಟ್ಟಿ (ಮೀ)	519.6	515.68	2,68,222	3,25,000
ನಾರಾಯಣಪುರ (ಮೀ)	492.25	490.21	3,20,000	3,27,366

* ನೆಲಮಟ್ಟದಿಂದ

ಯಾದಗಿರಿ ಜಿಲ್ಲೆಯ ನಾರಾಯಣಪುರದ ಬಸವಸಾಗರ ಜಲಾಶಯದಿಂದ ಕೃಷ್ಣಾ ನದಿಗೆ ನೀರು ಬಿಟ್ಟಿದ್ದರಿಂದ ಛಾಯಾ ಭಗವತಿ ದೇವಸ್ಥಾನ ಜಲಾವೃತವಾಗಿದೆ

ಎಚ್‌.ಡಿ.ಕೋಟೆ ತಾಲ್ಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ಕಬಿನಿ ಜಲಾಶಯಕ್ಕೆ 50 ವರ್ಷ ತುಂಬಿದ ಕಾರಣ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು

‘ಪ್ರವಾಹಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ’

ಬೆಂಗಳೂರು: ‘ನೆರೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಜನರ ಕಷ್ಟಗಳನ್ನು ಆಲಿಸಬೇಕು ಹಾಗೂ ಅಗತ್ಯ ನೆರವು ಒದಗಿಸಿಕೊಡಬೇಕು’ ಎಂದು ಸಚಿವ ಸಂಪುಟ ಸಹೋದ್ಯೋಗಿಗಳಿಗೆ ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದ್ದಾರೆ.

‘ರಾಜ್ಯದಲ್ಲಿ ಈ ವರ್ಷ ಭಾರಿ ಮಳೆಯಾಗುತ್ತಿದೆ. ಪ್ರವಾಹದಿಂದ ನದಿಗಳು ಉಕ್ಕಿ ಹರಿಯುತ್ತಿವೆ. ಬಹುತೇಕ ಜಲಾಶಯಗಳು ಭರ್ತಿಯಾಗಿ ನೀರಿನ ಹೊರ ಹರಿವು ಹೆಚ್ಚಾದ ಪರಿಣಾಮ ನೆರೆ ಪರಿಸ್ಥಿತಿ ಎದುರಾಗಿದೆ. ನದಿಪಾತ್ರದ ಜನ, ಜಾನುವಾರು, ಆಸ್ತಿ, ಬೆಳೆ ಹಾನಿಗಳ ಬಗ್ಗೆ ವರದಿಯಾಗುತ್ತಿದೆ. ಇಂತಹ ಕಷ್ಟದ ಸಮಯದಲ್ಲಿ ಜನರ ಜೊತೆ ನಿಲ್ಲಬೇಕಿರುವುದು ಸರ್ಕಾರದ ಕರ್ತವ್ಯ. ಹೀಗಾಗಿ ಸಚಿವರು ತಮ್ಮ ಕ್ಷೇತ್ರ ವ್ಯಾಪ್ತಿ ಹಾಗೂ ಇತರ ಪ್ರವಾಹಪೀಡಿತ ಪ್ರದೇಶಗಳ ಶಾಸಕರ ಸಂಪರ್ಕದೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ಸಂತ್ರಸ್ತರ ಅಹವಾಲು ಸ್ವೀಕರಿಸಬೇಕು. ಸಂತ್ರಸ್ತರ ನೆರವಿಗೆ ಧಾವಿಸಬೇಕು’ ಎಂದು ಮನವಿ ಮಾಡಿದ್ದಾರೆ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಯಡೂರು ಗ್ರಾಮದ ವೀರಭದ್ರೇಶ್ವರ ದೇವಸ್ಥಾನ ಭಾನುವಾರ ಕೃಷ್ಣಾ ನದಿ ನೀರಿನಿಂದ ಆವೃತಗೊಂಡಿದೆ –ಪ್ರಜಾವಾಣಿ ಚಿತ್ರ/ ಚಂದ್ರಶೇಖರ ಚಿನಕೇಕರ

ಶಿರೂರು: ಶೋಧಕಾರ್ಯ ಸ್ಥಗಿತ

ಕಾರವಾರ: ಶಿರೂರು ಗುಡ್ಡ ಕುಸಿತ ದುರಂತದಲ್ಲಿ ಕಣ್ಮರೆಯಾಗಿರುವ ಲಾರಿ ಮತ್ತು ಮೂವರಿಗಾಗಿ ಗಂಗಾವಳಿ ನದಿಯಲ್ಲಿ ನಡೆಸಲಾಗುತ್ತಿದ್ದ ಶೋಧ ಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು.

‘ನದಿಯ ಹರಿವು ರಭಸವಾಗಿದೆ. ಮುಳುಗು ತಜ್ಞರು ಕಾರ್ಯಾಚರಣೆ ನಡೆಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ನದಿಯ ಹರಿವು ಕಡಿಮೆ ಆಗುವವರೆಗೂ ಕಾರ್ಯಾಚರಣೆ ನಿಲ್ಲಿಸಲಾಗುತ್ತಿದೆ’ ಎಂದು ಭಾನುವಾರ ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಘೋಷಿಸಿದರು.

ಈಶ್ವರ ಮಲ್ಪೆ ನೇತೃತ್ವದ ತಂಡವು ಎರಡನೇ ದಿನವೂ ನದಿಯಲ್ಲಿ ಮುಳುಗಿ ಕಾರ್ಯಾಚರಣೆ ನಡೆಸಲು ಪ್ರಯತ್ನಿಸಿತು. ನೌಕಾದಳದ ಮುಳುಗು ತಜ್ಞರು, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಸಿಬ್ಬಂದಿಗೆ ಸ್ಥಳೀಯ ಮೀನುಗಾರರು ನೆರವು ನೀಡಿದರು.

‘14 ಬಾರಿ ನದಿಯಲ್ಲಿ ಮುಳುಗಿದೆ. ಗುಡ್ಡ ಕುಸಿತದ ರಭಸಕ್ಕೆ ನದಿ ಸೇರಿರುವ ಆಲದ ಮರ, ಚಹಾ ಅಂಗಡಿಯ ಹಲವು ಅವಶೇಷಗಳಿರುವುದನ್ನು ಪತ್ತೆ ಹಚ್ಚಲಾಯಿತು. ಆದರೆ ಅವುಗಳು ಕಲ್ಲು, ಮಣ್ಣಿನ ರಾಶಿಯ ಮಧ್ಯೆ ಸಿಲುಕಿಕೊಂಡಿವೆ. ರಭಸ ಇದ್ದ ಕಾರಣ ಹೆಚ್ಚು ಹೊತ್ತು ಆಳದಲ್ಲಿ ಇರಲು ಆಗಿಲ್ಲ’ ಎಂದು ಈಶ್ವರ ಮಲ್ಪೆ ಪ್ರತಿಕ್ರಿಯಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಸ್ಥಳಕ್ಕೆ ಭೇಟಿ ನೀಡಿದ್ದರು. ದುರಂತದಲ್ಲಿ ಕಣ್ಮರೆಯಾಗಿರುವ ಕೇರಳದ ಲಾರಿ ಚಾಲಕನ ಸುಳಿವು ಇದುವರೆಗೂ ಸಿಕ್ಕಿಲ್ಲ.

ಸಕಾರಾತ್ಮಕ ಫಲಿತಾಂಶ ಲಭಿಸುವವರೆಗೆ ಶೋಧ ಕಾರ್ಯಾಚರಣೆ ನಡೆಸುವಂತೆ ನಿಮ್ಮ ಆಡಳಿತ ವ್ಯವಸ್ಥೆಗೆ ನಿರ್ದೇಶನ ನೀಡಿ. ಅಗತ್ಯವಿರುವ ಎಲ್ಲ ಉಪಕರಣಗಳನ್ನು ಬಳಸಿಕೊಳ್ಳುವ ಜತೆಗೆ ಮತ್ತಷ್ಟು ಶಕ್ತಿ ತುಂಬಬೇಕು

ಪಿಣರಾಯಿ ವಿಜಯನ್, ಕೇರಳ ಮುಖ್ಯಮಂತ್ರಿ

(ಸಿ.ಎಂ ಸಿದ್ದರಾಮಯ್ಯ ಅವರಿಗೆ ಬರೆದ ಪತ್ರದಲ್ಲಿ ಮನವಿ)

ಆಷಾಢದಲ್ಲಿ ಬಾಗಿನ ಇದೇ ಮೊದಲು

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕೃಷ್ಣರಾಜಸಾಗರ (ಕೆಆರ್‌ಎಸ್) ಅಣೆಕಟ್ಟೆ ಭರ್ತಿಯಾದ ಸಂದರ್ಭದಲ್ಲಿ ಬಾಗಿನ ಅರ್ಪಿಸುವ ಸಂಪ್ರದಾಯ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಕಾಲದಿಂದ ನಡೆದುಕೊಂಡು ಬಂದಿದೆ. ಆಷಾಢ ಮಾಸದಲ್ಲಿ ಜರುಗುತ್ತಿರುವುದು ಇದೇ ಮೊದಲು.

ಶ್ರಾವಣ ಅಥವಾ ಭಾದ್ರಪದ ಮಾಸದಲ್ಲಿ ಜಲಾಶಯ ಭರ್ತಿಯಾಗುತ್ತಿತ್ತು. ಈ ಹಿಂದೆ ಸಾಮಾನ್ಯವಾಗಿ ವರಮಹಾಲಕ್ಷ್ಮಿ ಹಬ್ಬ ಸಮೀಪವಿದ್ದಾಗ ಬಾಗಿನ ಅರ್ಪಣೆ ನಡೆಯುತ್ತಿತ್ತು. ಈ ಬಾರಿ ಅಣೆಕಟ್ಟೆ ಮುಂಚಿತವಾಗಿ ಭರ್ತಿಯಾಗಿದೆ. 1989ರಿಂದ, ಅಂದರೆ 35 ವರ್ಷಗಳಿಂದ ಜ್ಯೋತಿಷಿ ಭಾನುಪ್ರಕಾಶ್ ಶರ್ಮಾ ಅವರೇ ಪೂಜಾ ಕಾರ್ಯಕ್ರಮ ನಡೆಸಿಕೊಂಡು ಬಂದಿದ್ದಾರೆ.

ಜುಲೈ 29ರಂದು ಬೆಳಿಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಾಗಿನ ಸಮರ್ಪಿಸಲಿದ್ದಾರೆ. ಮಧ್ಯಾಹ್ನ 3ಕ್ಕೆ ಮೈಸೂರು ಜಿಲ್ಲೆ ಎಚ್‌.ಡಿ. ಕೋಟೆ ತಾಲ್ಲೂಕಿನ ಬೀಚನಹಳ್ಳಿಯ ಕಬಿನಿ ಜಲಾಶಯಕ್ಕೆ ಬಾಗಿನ ಸಮರ್ಪಣೆ ಮಾಡಲಿದ್ದಾರೆ.

ಬೆಂಗಳೂರು–ಮಂಗಳೂರು ರೈಲು ಸಂಚಾರ ರದ್ದು

ಪ್ರಜಾವಾಣಿ ವಾರ್ತೆ

ಹಾಸನ: ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಯಡಕುಮೇರಿ– ಕಡಗರವಳ್ಳಿ ನಿಲ್ದಾಣಗಳ ನಡುವೆ ಭೂಕುಸಿತವಾದ ಸ್ಥಳದಲ್ಲಿ ದುರಸ್ತಿ ಕಾಮಗಾರಿ ನಡೆಯುತ್ತಿದೆ. ರೈಲು ಮಾರ್ಗದ ಕೆಳಭಾಗದ ಮಣ್ಣು ಸುಮಾರು 500 ಮೀಟರ್ ಆಳಕ್ಕೆ ಕುಸಿದಿದ್ದು, ಕಲ್ಲಿನ ಗೋಡೆ ನಿರ್ಮಿಸುವ ಕಾಮಗಾರಿಯನ್ನು ಮಾಡಲಾಗುತ್ತಿದೆ.

ಅರಣ್ಯದಲ್ಲಿ ಬರುವ ಈ ಪ್ರದೇಶದಲ್ಲಿ ಬೇರೆ ವಾಹನಗಳು ಬರಲು ಸಾಧ್ಯವಿಲ್ಲ. ಹಾಗಾಗಿ ಗೂಡ್ಸ್ ರೈಲಿನ ಮೂಲಕ ಕಲ್ಲುಗಳನ್ನು ತರಲಾಗಿದ್ದು, ಜೆಸಿಬಿ, ಹಿಟಾಚಿಯನ್ನು ಸ್ಥಳಕ್ಕೆ ತರಲಾಗಿದೆ. ಮಳೆಯ ನಡುವೆಯೂ ಕಾರ್ಮಿಕರು ನಿರಂತರವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಈ ಕಾಮಗಾರಿ ನಿರ್ವಹಿಸುವುದು ಕ್ಲಿಷ್ಟಕರವಾಗಿದ್ದು, 5 ದಿನಗಳು ಬೇಕಾಗಬಹುದು ಎಂದು ಅಂದಾಜಿಸಲಾಗಿದೆ. ನೈರುತ್ಯ ರೈಲ್ವೆ ಮೈಸೂರು ವಿಭಾಗದ ಡಿಆರ್‌ಎಂ ಶಿಲ್ಪಿ ಅಗರ್‌ವಾಲ್ ಹಾಗೂ ಅಧಿಕಾರಿಗಳು ಕಾಮಗಾರಿ ವೀಕ್ಷಿಸಿದರು. ತ್ವರಿತವಾಗಿ ಪೂರ್ಣಗೊಳಿಸುವಂತೆ ನಿರ್ದೇಶನ ನೀಡಿದರು.

ಹಾಸನ ಜಿಲ್ಲೆಯ ಯಡಕುಮೇರಿ–ಕಡಗರವಳ್ಳಿ ನಡುವೆ ಭೂಕುಸಿತ ಸಂಭವಿಸಿರುವ ಪ್ರದೇಶದಲ್ಲಿ ನಡೆಯುತ್ತಿರುವ ದುರಸ್ತಿ ಕಾಮಗಾರಿಯನ್ನು ರೈಲ್ವೆ ಅಧಿಕಾರಿಗಳು ಭಾನುವಾರ ಪರಿಶೀಲಿಸಿದರು

ರೈಲುಗಳ ಸಂಚಾರ ರದ್ದು: ಕೆಎಸ್‌ಆರ್ ಬೆಂಗಳೂರು– ಕಣ್ಣೂರು (ರೈ.ಸಂ.16511), ಕೆಎಸ್‌ಆರ್ ಬೆಂಗಳೂರು–ಕಾರವಾರ (ರೈ.ಸಂ. 16595), ಎಸ್‌ಎಂವಿಟಿ ಬೆಂಗಳೂರು–ಮುರ್ಡೇಶ್ವರ (ರೈ.ಸಂ. 16585), ವಿಜಯಪುರ–ಮಂಗಳೂರು (ರೈ.ಸಂ. 07377) ರೈಲುಗಳ ಸಂಚಾರವನ್ನು ಜುಲೈ 29ರಿಂದ ಆ.3ರವರೆಗೆ ರದ್ದುಪಡಿಸಲಾಗಿದೆ.

ಕಣ್ಣೂರು – ಕೆಎಸ್ಆರ್ ಬೆಂಗಳೂರು (ರೈ.ಸಂ. 16512), ಕಾರವಾರ–ಕೆಎಸ್‌ಆರ್ ಬೆಂಗಳೂರು (ರೈ.ಸಂ.16596), ಮುರ್ಡೇಶ್ವರ–ಎಸ್‌ಎಂವಿಟಿ ಬೆಂಗಳೂರು (ರೈ.ಸಂ. 16586), ಮಂಗಳೂರು ಸೆಂಟ್ರಲ್‌–ವಿಜಯಪುರ (ರೈ.ಸಂ. 07378) ರೈಲುಗಳ ಸಂಚಾರ ಜುಲೈ 30ರಿಂದ ಆ.4ರವರೆಗೆ ರದ್ದಾಗಿದೆ.

ಯಶವಂತಪುರ–ಕಾರವಾರ (ರೈ.ಸಂ. 16515) ರೈಲು ಜುಲೈ 29, 31 ಹಾಗೂ ಆ.2ರಂದು, ಕಾರವಾರ–ಯಶವಂತಪುರ (ರೈ.ಸಂ. 16516) ರೈಲು ಸಂಚಾರವನ್ನು ಜುಲೈ 30, ಆ.1 ಮತ್ತು ಆ.3ರಂದು ರದ್ದುಪಡಿಸಲಾಗಿದೆ.

ಯಶವಂತಪುರ–ಮಂಗಳೂರು ಜಂಕ್ಷನ್ (ರೈ.ಸಂ. 16575) ಜುಲೈ 30 ಹಾಗೂ ಆ.1ರಂದು, ಮಂಗಳೂರು ಜಂಕ್ಷನ್–ಯಶವಂತಪುರ (ರೈ.ಸಂ. 16576) ಜುಲೈ 31 ಹಾಗೂ ಆ.2ರಂದು, ಯಶವಂತಪುರ–ಮಂಗಳೂರು ಜಂಕ್ಷನ್ (ರೈ.ಸಂ. 16539) ಆ.3ರಂದು ಹಾಗೂ ಮಂಗಳೂರು ಜಂಕ್ಷನ್–ಯಶವಂತಪುರ (ರೈ.ಸಂ. 16540) ರೈಲು ಸಂಚಾರವನ್ನು ಆ.4ರಂದು ರದ್ದುಪಡಿಸಲಾಗಿದೆ.

ಆಗ ಬರ, ಈಗ ಅತಿವೃಷ್ಟಿಯ ಸರದಿ

• ರಾಮಮೂರ್ತಿ ಪಿ.

ದಾವಣಗೆರೆ: ಕಳೆದ ವರ್ಷ ಅನಾವೃಷ್ಟಿಯಿಂದ ನಷ್ಟ ಅನುಭವಿಸಿದ್ದ ಜಿಲ್ಲೆಯ ರೈತರು, ಇದೀಗ ಅತಿವೃಷ್ಟಿಯಿಂದಾಗಿ ಬೆಳೆ ಹಾನಿಯ ಭೀತಿಯಲ್ಲಿದ್ದಾರೆ.

ಜಿಲ್ಲೆಯಲ್ಲಿ ಈ ವರ್ಷ ವಾಡಿಕೆಗಿಂತ ಹೆಚ್ಚು ಮಳೆ ಸುರಿದಿದ್ದು, ಅತೀವ ತೇವಾಂಶದಿಂದ ಮೆಕ್ಕೆಜೋಳ, ಹತ್ತಿ, ಜೋಳದ ಬೆಳೆ ಹಳದಿ ಬಣ್ಣಕ್ಕೆ ತಿರುಗುತ್ತಿದೆ. ಜಿಲ್ಲೆಯಲ್ಲಿ ಮೂರು ವಾರಗಳಿಂದ ಬಿಟ್ಟೂ ಬಿಡದೇ ಸತತ ಮಳೆ ಸುರಿಯುತ್ತಿದೆ. ಬಿಸಿಲೇ ಇಲ್ಲದ್ದರಿಂದ ಬೆಳೆಗಳು ಕೊಳೆಯಲಾರಂಭಿಸಿವೆ. ಮಳೆ ಇದೇ ರೀತಿ ಮುಂದುವರಿದರೆ ಈ ವರ್ಷವೂ ಸಂಕಷ್ಟ ತಪ್ಪಿದ್ದಲ್ಲ ಎಂಬ ಆತಂಕ ರೈತರಲ್ಲಿ ಆವರಿಸಿದೆ.

ಜಿಲ್ಲೆಯಲ್ಲಿ ಜೂನ್ 1ರಿಂದ ಜುಲೈ 26ರ ವರೆಗೆ 274 ಮಿ.ಮೀ ವಾಡಿಕೆ ಮಳೆ ನಿರೀಕ್ಷಿಸಲಾಗಿತ್ತು. ಈ ಬಾರಿಯ ಮುಂಗಾರು ಚುರುಕು ಪಡೆದಿದ್ದರಿಂದ 396 ಮಿ.ಮೀ. ಮಳೆಯಾಗಿದೆ. ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲೂ ವಾಡಿಕೆಗಿಂತ ಅಧಿಕ ಮಳೆಯಾಗಿದೆ.

ಬೆಳೆಗಳಿಗೆ ದಿನದಿಂದ ದಿನಕ್ಕೆ ಹಳದಿ ರೋಗವೂ ಹೆಚ್ಚಾಗುತ್ತಿದೆ. ಕೆಲವು ದಿನ ಮಳೆ ಬಿಡುವು ನೀಡಿದಿದ್ದರೆ ಹಾಕಿದ ಬಂಡವಾಳ ಕೈಸೇರುವುದಿಲ್ಲ

ಸುಂಕದಕಟ್ಟೆ ಕರಿಬಸಪ್ಪ, ರೈತ ಹೊನ್ನಾಳಿ

ಈಗಾಗಲೇ ಮಳೆಯಿಂದಾಗಿ ಸಾಂಬಾರ್ ಸೌತೆ ಬೆಳೆಯ ಬಳ್ಳಿಯೂ ಕೊಳೆತಿದೆ. ಸೌತೆ ಬೆಳೆ ನಾಶಪಡಿಸಿ ಬೇರೆ ಬೆಳೆ ಬಿತ್ತನೆ ಮಾಡುವ ಚಿಂತನೆಯಲ್ಲಿದ್ದೇವೆ

ಕೆ.ಬಿ.ರವಿ, ರೈತ, ಅಸಗೋಡು

ಜೋರು ಮಳೆ ಸುರಿದು, ಆಗಾಗ ಬಿಡುವು ನೀಡಿದ್ದರೆ, ಬೆಳೆಗಳಿಗೆ ಹೆಚ್ಚಿನ ಹಾನಿಯಾಗುತ್ತಿರಲಿಲ್ಲ. ಆದರೆ, ಒಂದು ದಿನವೂ ಬಿಡುವು ನೀಡದೇ ಮಳೆ ಸುರಿಯುತ್ತಿರುವುದರಿಂದ ಬೆಳೆಗಳು ಹಾಳಾಗುತ್ತಿವೆ.

‘ಜೂನ್ ಆರಂಭದಲ್ಲಿ ಬಿತ್ತಿದ ಬೆಳೆಗಳು ತೇವಾಂಶವನ್ನು ಸಹಿಸಿಕೊಳ್ಳುತ್ತಿವೆ. ತಡವಾಗಿ ಬಿತ್ತನೆ ನಡೆಸಿದ ಬೆಳೆಗಳು ಬೇರು ಗಟ್ಟಿಗೊಳ್ಳದೇ ಕೊಳೆಯಲಾರಂಭಿಸಿವೆ. ಅದರಲ್ಲೂ ಮೆಕ್ಕೆಜೋಳ ಬೆಳೆಯ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತಿವೆ. ತಗ್ಗುಪ್ರದೇಶಗಳಲ್ಲಿರುವ ಜಮೀನುಗಳಲ್ಲಿನ ಬೆಳೆಯು ಪೂರ್ತಿ ಹಾಳಾಗುವ ಭೀತಿ ಉಂಟಾಗಿದೆ’ ಎಂದು ಚನ್ನಗಿರಿ ತಾಲ್ಲೂಕಿನ ಶೆಟ್ಟಿಹಳ್ಳಿ ಗ್ರಾಮದ ರೈತ ಮುನಿ ಎಸ್‌.ಎಂ. ಆತಂಕ ವ್ಯಕ್ತಪಡಿಸಿದರು.

‘ನಮ್ಮ ತಾಲ್ಲೂಕಿನಲ್ಲಿ ಹೆಚ್ಚಾಗಿ ಮೆಕ್ಕೆಜೋಳ ಹಾಗೂ ಹತ್ತಿ ಬೆಳೆ ಬೆಳೆದಿದ್ದೇವೆ. ನಿರಂತರ ಮಳೆಯಿಂದ ಹತ್ತಿ ಬೆಳೆಗೆ ಹೆಚ್ಚಿನ ಹಾನಿಯುಂಟಾಗಿದೆ. ಹತ್ತಿ ಗಿಡದಲ್ಲಿ ಕಾಯಿ ಬಿಡುತ್ತಿದ್ದು, ಮಳೆ ನೀರು ಸೇರಿಕೊಳ್ಳುತ್ತಿರುವುದರಿಂದ ಕೊಳೆಯುತ್ತಿವೆ. ಜಮೀನುಗಳಲ್ಲಿ ನೀರು ನಿಂತಿರುವುದರಿಂದಲೂ ಗಿಡಗಳು ಸಾಯುತ್ತಿವೆ’ ಎಂದು ಜಗಳೂರು ತಾಲ್ಲೂಕಿನ ಅಸಗೋಡು ಗ್ರಾಮದ ರೈತ ಕೆ.ಬಿ.ರವಿ ಸಂಕಷ್ಟ ತೋಡಿಕೊಂಡರು.

‘ಮೆಕ್ಕೆಜೋಳ ಮಾತ್ರವಲ್ಲದೇ ಸೊಪ್ಪು, ತರಕಾರಿ ಬೆಳೆಗೂ ಮಳೆಯಿಂದ ಹೆಚ್ಚಿನ ಹಾನಿ ಸಂಭವಿಸಿದೆ. ತೇವಾಂಶದಿಂದಾಗಿ ಬೇರುಗಳು ಸದೃಢವಾಗಿಲ್ಲ. ಬೆಳೆಗಳಿಗೆ ರಸಗೊಬ್ಬರ ನೀಡಲಾಗುತ್ತಿಲ್ಲ. ರಸಗೊಬ್ಬರ ಹಾಕಿದರೂ, ಸಹಿಸಿಕೊಳ್ಳುವ ಶಕ್ತಿ ಗಿಡಗಳಿಗಿಲ್ಲ. ಬೆಳೆಗಳು ಉಳಿಯಲು ಬಿಸಿಲಿನ ವಾತಾವರಣ ತುರ್ತು ಅವಶ್ಯವಾಗಿದೆ’ ಎಂದು ನ್ಯಾಮತಿ ತಾಲ್ಲೂಕಿನ ರೈತ ಜಿ.ನಿಜಲಿಂಗಪ್ಪ ಹೇಳಿದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಜತೆ ಸೇರಿ ರೂಪುರೇಷೆ–ಶಾಸಕ ರಮೇಶ ಜಾರಕಿಹೊಳಿ

‘ಕೂಡಲಸಂಗಮದಿಂದ ಬಳ್ಳಾರಿಗೆ ಪಾದಯಾತ್ರೆ’

ಪ್ರಜಾವಾಣಿ ವಾರ್ತೆ

ಗೋಕಾಕ (ಬೆಳಗಾವಿ ಜಿಲ್ಲೆ): ‘ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಭಾಗಿಯಾಗಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದಿಂದ ಬಳ್ಳಾರಿಯವರೆಗೆ ಪಾದಯಾತ್ರೆ ಮಾಡಲಿದ್ದೇವೆ. ಇದಕ್ಕಾಗಿ ನಾನು, ಶಾಸಕ ಬಸನಗೌಡ ಪಾಟೀಲ ಯತ್ನಾಳ ಸೇರಿ ರೂಪುರೇಷೆ ಸಿದ್ಧಪಡಿಸುತ್ತೇವೆ’ ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟಿದ್ದ ಹಣವನ್ನು ಅಕ್ರಮವಾಗಿ ಬೇನಾಮಿ ಖಾತೆಗಳಿಗೆ ವರ್ಗಾಯಿಸಿರುವ ಈ ಪ್ರಕರಣ ದೇಶದಲ್ಲೇ ದೊಡ್ಡದು. ಇದರ ವಿರುದ್ಧ ಮಾಡಲಿರುವ ಪಾದಯಾತ್ರೆಯಲ್ಲಿ ನಮ್ಮ ಪಕ್ಷದ ಹಲವು ನಾಯಕರು ಪಾಲ್ಗೊಳ್ಳಲಿದ್ದಾರೆ’ ಎಂದರು.

ರಮೇಶ ಜಾರಕಿಹೊಳಿ

‘ಕಾಂಗ್ರೆಸ್‌ಗೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಹಗರಣ ಶೋಭೆ ತರುವುದಿಲ್ಲ. ಹಣಕಾಸು ಇಲಾಖೆ ನಿರ್ವಹಿಸುತ್ತಿರುವ ಸಿದ್ಧರಾಮಯ್ಯ ಈ ಪ್ರಕರಣದಲ್ಲಿ ಹೇಗೆ ಕಣ್ಣು ಮುಚ್ಚಿ ಕುಳಿತರು? ಈಗ ಅವರ ದಯನೀಯ ಸ್ಥಿತಿ ನೋಡಿ ದುಃಖವಾಗುತ್ತಿದೆ’ ಎಂದು ಹೇಳಿದರು.

‘ಮುಡಾ ಹಗರಣದ ವಿರುದ್ಧ ಬಿಜೆಪಿಯ ನಾಯಕರು ಪಾದಯಾತ್ರೆಗೆ ಮುಂದಾಗಿದ್ದಾರೆ. ಆದರೆ, ಅದಕ್ಕೂ ಮೊದಲು ವಾಲ್ಮೀಕಿ ನಿಗಮದ ಹಗರಣ ಹಾಗೂ ಪರಿಶಿಷ್ಟರ ಅನುದಾನ ದುರ್ಬಳಕೆ ವಿರುದ್ಧ ಪಾದಯಾತ್ರೆ ಮಾಡಲಿ’ ಎಂದರು.

ಸಿ.ಡಿ ಶಿವು ಎಂದು ಮರುನಾಮಕರಣ: ‘ಇತ್ತೀಚೆಗೆ ದೆಹಲಿಯಲ್ಲಿ ನಾನು ಮತ್ತು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಭೇಟಿಯಾದಾಗ, ಡಿ.ಕೆ.ಶಿವಕುಮಾರ್ ಅವರಿಗೆ ‘ಸಿ.ಡಿ ಶಿವು’ ಎಂದು ಹೊಸದಾಗಿ ನಾಮಕರಣ ಮಾಡಿದ್ದೇವೆ. ಈ ಹಿಂದೆ ಡಿಕೆಶಿಯನ್ನು ‘ಮಹಾನ್ ನಾಯಕ’ ಎಂದು ಟೀಕಿಸುತ್ತಿದ್ದೆ. ಆದರೆ, ಆ ಪದ ಅಪಾರ್ಥವಾಗಿ ರಾಷ್ಟ್ರ ನಾಯಕರಿಗೆ ಅವಮಾನ ಮಾಡಿದಂತಾಗುತ್ತಿತ್ತು’ ಎಂದರು. ‘ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಮುಂದುವರಿಯುವುದು, ಬಿಡುವುದು ಆ ಪಕ್ಷದವರ ಆಂತರಿಕ ವಿಷಯ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಬಹುಮತ ಗಳಿಸಲು ಸಿದ್ದರಾಮಯ್ಯ ಅವರೇ ಕಾರಣ. ಆದರೆ, ಕೆಲವರು ಈ ಸರ್ಕಾರ ರಚನೆಯಲ್ಲಿ ನನ್ನ ಪಾತ್ರವೂ ಇದೆ ಎನ್ನುತ್ತಿದ್ದಾರೆ’ ಎಂದು ಪರೋಕ್ಷವಾಗಿ ಶಿವಕುಮಾರ್ ವಿರುದ್ಧ ಆಕ್ರೋಶ ಹೊರಹಾಕಿದರು.

ಮುಖ್ಯಮಂತ್ರಿ ಬದಲಾವಣೆ ಸದ್ಯಕ್ಕಿಲ್ಲ: ಸಚಿವ ಸತೀಶ ಜಾರಕಿಹೊಳಿ

ಮಂಡ್ಯ: ‘ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆ. ಸದ್ಯಕ್ಕೆ ಬದಲಾವಣೆ ಇಲ್ಲ. ಈ ಬಗ್ಗೆ ಚರ್ಚಿಸುವ ಪ್ರಶ್ನೆಯೂ ನಮ್ಮ ಮುಂದಿಲ್ಲ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಬದಲಾವಣೆ ಮಾಡುತ್ತೇವೆ ಎಂದವರು ಯಾರು, ಈಗ ಯಾರು ಚರ್ಚೆ ಮಾಡುತ್ತಿದ್ದಾರೆ? ಮುಂದೆ ಅವಕಾಶ ಸಿಕ್ಕರೆ ಮಾತನಾಡೋಣ’ ಎಂದರು.

‘ಸದ್ಯಕ್ಕೆ ದಲಿತ ಮುಖ್ಯಮಂತ್ರಿ ಬಗ್ಗೆ ಚರ್ಚೆಯೂ ಇಲ್ಲ. ಯಾವುದೇ ಕಾರಣಕ್ಕೂ ಮುಖ್ಯಮಂತ್ರಿ ಬದಲಾವಣೆ ಇಲ್ಲ. ಉಳಿದ ಅವಧಿಗೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿರುತ್ತಾರೆ’ ಎಂದು ಸತೀಶ ಜಾರಕಿಹೊಳಿ ಹೇಳಿದರು.

ಮಹರ್ಷಿ ವಾಲ್ಮೀಕಿ ಹಗರಣದ ಕುರಿತು ಪ್ರತಿಕ್ರಿಯಿಸಿದ ಅವರು, ‘ಯಾರು ಯಾರು ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂಬುದನ್ನು ನೋಡೋಣ. ಮೊದಲು ತನಿಖೆಯಾಗಲಿ’ ಎಂದರು.

‘ನಾಯಿ ಮಾಂಸವಲ್ಲ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ವ್ಯಾಪಾರಿಯೊಬ್ಬರು ರೈಲಿನಲ್ಲಿ ರಾಜಸ್ಥಾನದಿಂದ ಬೆಂಗಳೂರಿಗೆ ತಂದಿದ್ದು ಮೇಕೆ ಮಾಂಸ ಎಂಬುದನ್ನು ಪ್ರಯೋಗಾಲಯದ ವರದಿ ದೃಢಪಡಿಸಿದೆ. ನಾಯಿ ಮಾಂಸ ಎಂಬುದಾಗಿ ದುರುದ್ದೇಶದಿಂದ ಗಲಾಟೆ ಮಾಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

‘ವ್ಯಾಪಾರಿಯೊಬ್ಬರು ರಾಜಸ್ಥಾನದಿಂದ ಮಾಂಸವನ್ನು ರೈಲಿನಲ್ಲಿ ಕರ್ನಾಟಕಕ್ಕೆ ತಂದು ಮಾರಾಟ ಮಾಡುತ್ತಾರೆ. ಹೀಗೆ ತಂದಿರುವುದು ನಾಯಿ ಮಾಂಸ ಎಂಬುದಾಗಿ ಆಕ್ಷೇಪ ವ್ಯಕ್ತವಾಗಿದ್ದರಿಂದ ಆಹಾರ ಸುರಕ್ಷತಾ ಅಧಿಕಾರಿಗಳು ಪರಿಶೀಲಿಸಿದ್ದಾರೆ. ಪ್ರಯೋಗಾಲಯದ ವರದಿಯಲ್ಲಿ ಇದು ಮೇಕೆ ಮಾಂಸ ಎಂಬುದು ಖಚಿತವಾಗಿದೆ’ ಎಂದು ಭಾನುವಾರ ಇಲ್ಲಿ ಸುದ್ದಿಗಾರರಿಗೆ ಮಾಹಿತಿ ನೀಡಿದರು.

‘ಕಾನೂನು ಬಾಹಿರ ಗಣಿಗಾರಿಕೆ ನಡೆಸಿ ರಾಜ್ಯದ ಸಂಪತ್ತು ಲೂಟಿ ಮಾಡುತ್ತಿರುವುದನ್ನು ವಿರೋಧಿಸಿ ಬಳ್ಳಾರಿವರೆಗೆ ಕಾಂಗ್ರೆಸ್ ಪಾದಯಾತ್ರೆ ಮಾಡಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಸುಳ್ಳು ಆರೋಪ ಮಾಡಿ ಬಿಜೆಪಿ ಪಾದಯಾತ್ರೆಗೆ ಮುಂದಾಗಿದೆ. ‘ಮುಡಾ’ ವಿಚಾರದಲ್ಲಿ ಮುಖ್ಯಮಂತ್ರಿ ಯಾವುದೇ ತಪ್ಪು ಮಾಡಿಲ್ಲ ಹಾಗೂ ಕಾನೂನು ಬಾಹಿರ ಕೆಲಸ ಆಗಿಲ್ಲ. ಜನಸಮುದಾಯಕ್ಕೆ ಸತ್ಯ ಮುಟ್ಟಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಲಿದೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಗರಣವನ್ನು ಸರ್ಕಾರ ಸಮರ್ಥಿಸಿಕೊಳ್ಳುತ್ತಿಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸಬೇಕು ಎಂಬ ಕಾರಣಕ್ಕೆ ಸರ್ಕಾರ ವಿಶೇಷ ತನಿಖಾ ತಂಡ ರಚಿಸಿದೆ. ಜಾರಿ ನಿರ್ದೇಶನಾಲಯ, ಸಿಬಿಐ ಕೂಡ ತನಿಖೆ ಮಾಡುತ್ತಿವೆ. ಒಂದು ವೇಳೆ ಸಚಿವರ ಖಾತೆಗೆ ಹಣ ವರ್ಗಾವಣೆ ಆಗಿದ್ದು ಖಚಿತವಾದರೆ ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಈ ವಿಚಾರದಲ್ಲಿ ಮೂಲಾಜು ಇಟ್ಟುಕೊಳ್ಳುವುದಿಲ್ಲ’ ಎಂದು ಹೇಳಿದರು.

‘ನಿಗಮ ಅಕ್ರಮ: ಎಂ.ಡಿ ಹೊಣೆ’

ಒಂದನೇ ಪುಟದಿಂದ...

ಇಂಡಿಯನ್ ಬ್ಯಾಂಕ್ ಸಹಯೋಗದಲ್ಲಿ ಗಂಗಾ ಕಲ್ಯಾಣ ಯೋಜನೆಗೆ ಡಿಬಿಟಿ ತಂತ್ರಜ್ಞಾನ ಸಿದ್ಧಪಡಿಸಲಾಗಿದ್ದು, ಈ ಯೋಜನೆಗೆ ಸಂಬಂಧಿಸಿದ ಅನುದಾನವನ್ನು ಬ್ಯಾಂಕ್‌ಗೆ ಜಮೆ ಮಾಡಲು ಸೂಚಿಸಲಾಗಿತ್ತು. ಗಂಗಾ ಕಲ್ಯಾಣ ಯೋಜನೆಯಡಿ 3ನೇ ಮತ್ತು 4ನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆ ಮಾಡಬೇಕಿದ್ದ ₹43.33 ಕೋಟಿಯನ್ನು ಸರ್ಕಾರದ ನಿರ್ದೇಶನ ಇದ್ದರೂ ನಿಯಮ ಬಾಹಿರವಾಗಿ ಎಂ.ಜಿ. ರಸ್ತೆಯ ಶಾಖೆಗೆ ವರ್ಗಾವಣೆ ಮಾಡಲಾಗಿದೆ.

ನಿಗದಿತ ಅವಧಿಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ಪೂರ್ಣಗೊಳಿಸಿ, ಆರ್ಥಿಕ ವರ್ಷದ ಕೊನೆಯಲ್ಲಿ ವ್ಯವಸ್ಥಿತವಾಗಿ ಲೆಕ್ಕಪತ್ರ ಇಡುವುದು ಮತ್ತು ಉಳಿದ ಅನುದಾನವನ್ನು ಆರ್ಥಿಕ ಇಲಾಖೆಗೆ ಮರಳಿಸುವುದು ವ್ಯವಸ್ಥಾಪಕ ನಿರ್ದೇಶಕರ ಕರ್ತವ್ಯ. ಆ ಕೆಲಸವನ್ನು ಪದ್ಮನಾಭ ಮಾಡಿಲ್ಲ ಎಂದೂ ದೋಷಾರೋಪಣೆ ಹೊರಿಸಲಾಗಿದೆ.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಜೀವವಿಜ್ಞಾನಕ್ಕೆ ಅವಕಾಶಗಳು ಹೇಗಿವೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

- **ನನ್ನ ಮಗಳು ಪ್ರಥಮ ಪಿಯುನಲ್ಲಿ ಓದುತ್ತಿದ್ದು, ನೀಟ್ ಪರೀಕ್ಷೆಗಾಗಿ ತಯಾರಿ ನಡೆಸುತ್ತಿದ್ದಾಳೆ. ವೈದ್ಯಕೀಯ ಕೋರ್ಸ್ ಬಿಟ್ಟು ಜೀವವಿಜ್ಞಾನ ಸಂಬಂಧಿತ ಯಾವ ಕೋರ್ಸ್ ಮಾಡಬಹುದು?**

ಶ್ರೀರಂಜನಿ, ಬೆಂಗಳೂರು.

ಪಿಯುಸಿ ನಂತರ ವೈದ್ಯಕೀಯ ಕೋರ್ಸ್ ಅಲ್ಲದೆ ಬಿ.ಎಸ್ಸಿ (ಪ್ಯಾರಾ ಮೆಡಿಕಲ್-20ಕ್ಕೂ ಹೆಚ್ಚು ಆಯ್ಕೆಗಳು), ಬಿ.ಎಸ್ಸಿ (ಜೀವವಿಜ್ಞಾನ, ಫಾರೆಸ್ಟ್ರಿ, ಕೃಷಿ, ತೋಟಗಾರಿಕೆ ಸೇರಿ ಹಲವು ಆಯ್ಕೆಗಳು) ಎಂಜಿನಿಯರಿಂಗ್ (ಬಯೋಟೆಕ್, ಬಯೋಮೆಡಿಕಲ್, ಜೆನೆಟಿಕ್, ಬಯೋಮಾಲಿಕ್ಯುಲಾರ್ ಇತ್ಯಾದಿ.

ಹೆಚ್ಚಿನ ಪ್ರಶ್ನೋತ್ತರಗಳಿಗೆ https://www.prajavani.net/education-career/education ಓದಿ.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.inಕ್ಕೆ ಕಳಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಸಮಾಜವಿಜ್ಞಾನ

ಸಮಾಜ ವಿಜ್ಞಾನ : ಭೂಗೋಳಶಾಸ್ತ್ರ

ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು

ಪ್ರಶ್ನೋತ್ತರ:-

26) ಭಾರತದ ಭೂಸ್ವರೂಪಗಳಲ್ಲಿ ಅತಿದೊಡ್ಡದು ಯಾವುದು?
ಉತ್ತರ:- ಪರ್ಯಾಯ ಪ್ರಸ್ಥಭೂಮಿ

24) ಭಾರತದ ಭೂಸ್ವರೂಪಗಳಲ್ಲಿ ಅತಿಪುರಾತನವಾದದ್ದು ಯಾವುದು?
ಉತ್ತರ:- ಪರ್ಯಾಯ ಪ್ರಸ್ಥಭೂಮಿ

25) ಪರ್ಯಾಯ ಪ್ರಸ್ಥಭೂಮಿಯ ವಿಸ್ತಾರ ಎಷ್ಟು?
ಉತ್ತರ:- ಸುಮಾರು 16 ಲಕ್ಷ ಚ.ಕಿ.ಮೀ.

26) ದಖನ್ ಪ್ರಸ್ಥಭೂಮಿಯ ಉತ್ತರದಲ್ಲಿರುವ ಬೆಟ್ಟಗಳನ್ನು ಹೆಸರಿಸಿ
ಉತ್ತರ:- ಮಹಾದೇವ, ಮೈಕಲ್ ಶ್ರೇಣಿ, ಅಮರ ಕಂಟಕ ಬೆಟ್ಟಗಳು, ರಾಜಮಹಲ ಬೆಟ್ಟಗಳು

27) ದಕ್ಷಿಣ ಭಾರತದಲ್ಲಿ ಅತ್ಯುನ್ನದ ಪ್ರದೇಶ/ಅತ್ಯುನ್ನತ ಶಿಖರ ಯಾವುದು?
ಉತ್ತರ:- ಅಣ್ಣಾಮಲೈ ಶ್ರೇಣಿಯಲ್ಲಿರುವ ಆನೈಮುಡಿ ಶಿಖರ

28) ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು ಎಲ್ಲಿ ಸಂಧಿಸುತ್ತವೆ?
ಉತ್ತರ:- ನೀಲಗಿರಿ ಬೆಟ್ಟ

29) ಯಾವ ಮೈದಾನಗಳನ್ನು ಡೂನ್‌ಗಳೆಂದು ಕರೆಯುತ್ತಾರೆ?
ಉತ್ತರ:- ಹಿಮಾಲಯದಲ್ಲಿ ಸಮತಟ್ಟಾದ ಕಿರಿದಾದ ಮೈದಾನಗಳಿವೆ ಈ ಮೈದಾನಗಳನ್ನು ಡೂನ್‌ಗಳು ಎಂದು ಕರೆಯುವರು. ಉದಾ : ಡೆಹರಾಡೂನ್, ಕೋಟಾ, ಪಾಟ್ಲಿ ಚೌಕಾಂಬಾ, ಉದಾಂಪೂರ ಮತ್ತು ಕೋಟ್ಲಾಗಳು.

30) ಹಿಮಾಚಲ/ ಮಧ್ಯ ಹಿಮಾಲಯದಲ್ಲಿರುವ ಕಣಿವೆಗಳನ್ನು ಹೆಸರಿಸಿ
ಉತ್ತರ:- ಹಿಮಾಚಲ/ ಮಧ್ಯ ಹಿಮಾಲಯದಲ್ಲಿರುವ ಕಣಿವೆಗಳೆಂದರೆ ಕಂಗ್ರಾ, ಕುಲು ಕಣಿವೆಗಳಾಗಿವೆ.

31) ಹಿಮಾಚಲ/ ಮಧ್ಯ ಹಿಮಾಲಯದಲ್ಲಿರುವ ಗಿರಿಧಾಮಗಳನ್ನು ಹೆಸರಿಸಿ
ಉತ್ತರ:- ಶಿಮ್ಲಾ, ಮಸ್ಸೂರಿ, ನೈನಿತಾಲ್, ರಾಣಿಖೇಟ್, ಚಕ್ರಾತ ಮತ್ತು ಡಾರ್ಜಿಲಿಂಗ್ ಮೊದಲಾದ ಗಿರಿಧಾಮಗಳಿವೆ.

32) ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರವಾದ ಮೌಂಟ್ ಎವರೆಸ್ಟ್ ಹಿಮಾಲಯದ ಎಲ್ಲಿದೆ?
ಉತ್ತರ:- ಮಹಾಹಿಮಾಲಯ ಹಿಮಾದ್ರಿ

33) ಮೌಂಟ್ ಎವೆರೆಸ್ಟ್‌ನ ಎತ್ತರ ಎಷ್ಟು?
ಉತ್ತರ:- 8848 ಮೀ

34) ಮಹಾ ಹಿಮಾಲಯದಲ್ಲಿರುವ ಪ್ರಮುಖ ಶಿಖರಗಳನ್ನು ಹೆಸರಿಸಿ
ಉತ್ತರ:- ಕಾಂಚನ ಗಂಗಾ, ಧವಳಗಿರಿ, ನಂದಾದೇವಿ ಗೌರಿಶಂಕರ.

35) ಭಾರತದಲ್ಲಿರುವ ಅತಿಎತ್ತರವಾದ ಶಿಖರ ಯಾವುದು?
ಉತ್ತರ:- ಗಾಡ್ವಿನ್‌ಆಸ್ಟಿನ್ ಅಥವಾ K2

36) ಗಾಡ್ವಿನ್‌ಆಸ್ಟಿನ್ ಅಥವಾ K2 ಶಿಖರದ ಎತ್ತರ ಎಷ್ಟು?
ಉತ್ತರ:- 8,611 ಮೀ.

37) ಬಬರ್ ಮಣ್ಣು ಎಲ್ಲಿ ನೋಡಬಹುದಾದಿದೆ?
ಉತ್ತರ:- ಹಿಮಾಲಯದ ತಪ್ಪಲಿನಲ್ಲಿ ನದಿಗಳು ಮೈದಾನವನ್ನು ಪ್ರವೇಶಿಸುವ ಕಡೆ ಅವುಗಳು ಹೊತ್ತು ತಂದ ದಪ್ಪ ಶಿಲಾ ಚೂರುಗಳನ್ನು ಸಂಚಯಿಸಿದೆ. ಇದನ್ನೆ ಬಬರ್ ಎಂದು ಕರೆಯುವರು. ಹೀಗಾಗಿ ಇಲ್ಲಿಯೇ ಬಬರ್ ಮಣ್ಣನ್ನು ನೋಡಬಹುದಾಗಿದೆ.

38) ಯಾವುದನ್ನು ಭಂಗರ್ ಮಣ್ಣು ಎಂದು ಕರೆಯುವರು?
ಉತ್ತರ:- ಪುರಾತನ ಕಾಲದಲ್ಲಿ ಸಂಚಯಿತವಾಗಿರುವ ಮೆಕ್ಕಲು ಮಣ್ಣಿನ ವಲಯವನ್ನು ಭಂಗರ್ ಎಂದು ಕರೆಯುವರು.

39) ಖಿದರ್ ಮಣ್ಣು ಯಾವುದನ್ನು ಎಂದು ಕರೆಯುವರು?
ಉತ್ತರ:- ಇತ್ತೀಚಿನ ಅವಧಿಯಲ್ಲಿ ಸಂಚಯಿತಗೊಂಡು ನಿರ್ಮಿತವಾಗಿರುವ ಮೆಕ್ಕಲು ಮಣ್ಣನ್ನು ಖಿದರ್ ಎಂದು ಕರೆಯುವರು

40) ರಾಧಾನಾಥ್ ಸಿಕ್ದರ್ ಯಾರು?
ಉತ್ತರ:- ಮೌಂಟ್ ಎವರೆಸ್ಟ್ ಪರ್ವತದ ಎತ್ತರವನ್ನು ಮೊದಲ ಬಾರಿಗೆ ನಿಖರವಾಗಿ ಗುರುತಿಸಿದ ಭಾರತೀಯ.

41) ಯಾಕೆ ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಪ್ರಾಮುಖ್ಯತೆಯನ್ನು ಪಡೆದಿದೆ ?
ಉತ್ತರ:- ಪರ್ಯಾಯ ಪ್ರಸ್ಥಭೂಮಿ ಆರ್ಥಿಕವಾಗಿ ಪ್ರಾಮುಖ್ಯತೆಯನ್ನು ಪಡೆದಿದೆ ಏಕೆಂದರೆ ಇಲ್ಲಿ ಅಪಾರವಾದ ಖನಿಜ ಸಂಪನ್ಮೂಲಗಳಿವೆ. ಇಲ್ಲಿನ ನದಿಗಳು ಜಲಪಾತಗಳಿಂದ ಕೂಡಿರುವುದರಿಂದ ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಅನುಕೂಲವಾಗಿವೆ.

42) ಭಾರತದ ಕರಾವಳಿಗಳನ್ನು ಎಷ್ಟು ಭಾಗಗಳಾಗಿ ವಿಗಂಡಿಸಿದೆ? ಅವುಗಳನ್ನು ಹೆಸರಿಸಿ
ಉತ್ತರ:- ಭಾರತದ ಕರಾವಳಿಯನ್ನು 'ಪಶ್ಚಿಮ ಕರಾವಳಿ' ಮತ್ತು 'ಪೂರ್ವ ಕರಾವಳಿ' ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ

43) ಭಾರತದಲ್ಲಿರುವ ಲಗೂನ್ ಅಥವಾ ಉಪ್ಪು ನೀರಿನ ಸರೋವರಗಳು ಯಾವುವು?
ಉತ್ತರ:- ಒಡಿಶಾದ ಚಿಲ್ಕಾ, ತಮಿಳುನಾಡಿನ 'ಪುಲಿಕಾಟ್' ಸರೋವರಗಳು

41) ಉತ್ತರದ ಮಹಾ ಮೈದಾನ ಬಗ್ಗೆ ಬರೆಯಿರಿ.
ಉತ್ತರ : ಉತ್ತರ ಭಾರತದ ಮಹಾ ಮೈದಾನವನ್ನು ಸಟ್ಲೇಜ್ ಗಂಗಾ ಮೈದಾನವೆಂತಲೂ ಕರೆಯುವರು. ಇದು ಉತ್ತರದಲ್ಲಿ ಹಿಮಾಲಯ ಪರ್ವತಗಳು ಹಾಗೂ ದಕ್ಷಿಣದಲ್ಲಿ ಪರ್ಯಾಯ ಪ್ರಸ್ಥಭೂಮಿಯ ನಡುವೆ ಕಂಡು ಬರುವುದು. ಇದು ಪಶ್ಚಿಮದಲ್ಲಿ ಸಿಂಧೂ ನದಿಯ ಮೈದಾನದಿಂದ ಪೂರ್ವದಲ್ಲಿ ಬ್ರಹ್ಮಪುತ್ರ ಕಣಿವೆಯವರೆಗೂ ಹಬ್ಬಿದೆ. ಇದು ಪೂರ್ವ ಮತ್ತು ಪಶ್ಚಿಮವಾಗಿ ಸುಮಾರು 2400 ಕಿ. ಮೀ ಉದ್ದವಾಗಿದೆ. ಈ ಮೈದಾನವು 70 ರಿಂದ 500 ಕಿ. ಮೀ. ಅಗಲವಾಗಿದೆ. ಈ ಮೈದಾನವು ಬಹುತೇಕವಾಗಿ ಸಮತಟ್ಟಾಗಿದೆ. ಉತ್ತರ ಭಾರತದ ಮೈದಾನವು, ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿರುವ ಸಂಚಯನ ಮೈದಾನವಾಗಿದೆ.

42) ಪರ್ಯಾಯ ಪ್ರಸ್ಥಭೂಮಿ ಕುರಿತು ಬರೆಯಿರಿ
ಉತ್ತರ: ಪರ್ಯಾಯ ಪ್ರಸ್ಥಭೂಮಿಯು ಭಾರತದ ಭೂಸ್ವರೂಪ ವಿಭಾಗಗಳಲ್ಲಿ ಅತಿ ದೊಡ್ಡದು. ಅಲ್ಲದೆ ಭೂ ಇತಿಹಾಸದ ಪ್ರಕಾರ ಇದು 'ಅತಿ ಪುರಾತನ'ವಾಗಿದ್ದು ಭೂ ಖಂಡಗಳ ಆರಂಭದಲ್ಲಿದ್ದ ಗೊಂಡ್ವಾನ ಭೂರಾಶಿಯ ಒಂದು ಭಾಗವಾಗಿದೆಯೆಂದು ಭೂ-ವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ. ಈ ಪ್ರಸ್ಥಭೂಮಿಯು ಸಟ್ಲಜ್-ಗಂಗಾ ಮೈದಾನದ ದಕ್ಷಿಣದಲ್ಲಿ ಹಿಂದೂ ಮಹಾಸಾಗರದವರೆಗೂ ಚಾಚಿಕೊಂಡಿದೆ. ಇದರ ಒಟ್ಟು ಕ್ಷೇತ್ರ ಸುಮಾರು 16 ಲಕ್ಷ ಚ.ಕಿ.ಮೀ. ಇದು ಉತ್ತರದಲ್ಲಿ ಅರಾವಳಿ ಪರ್ವತದಿಂದ ದಕ್ಷಿಣದ ಕನ್ಯಾಕುಮಾರಿಯವರೆಗೂ ಹರಡಿದೆ. ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳಿಂದ ಪೂರ್ವದಲ್ಲಿ 'ಜಾರ್ಖಂಡ್'ನ ರಾಜಮಹಲ್ ಬೆಟ್ಟಗಳವರೆಗೆ ಸುಮಾರು 1400 ಕಿ.ಮೀ ಅಗಲವಾಗಿದೆ. ಈ ಪರ್ಯಾಯ ಪ್ರಸ್ಥಭೂಮಿಯು ತ್ರಿಕೋನಾಕೃತಿಯಲ್ಲಿದ್ದು ಉತ್ತರದಲ್ಲಿ ಅಗಲವಾಗಿದ್ದು ದಕ್ಷಿಣದ ಕಡೆಗೆ ಕಿರಿದಾಗಿದೆ. ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ಪೂರ್ವದಲ್ಲಿ ಬಂಗಾಳಕೊಲ್ಲಿ ಹಾಗೂ ದಕ್ಷಿಣದಲ್ಲಿ ಹಿಂದೂ ಮಹಾಸಾಗರಗಳನ್ನು ಇದು ಒಳಗೊಂಡಿದೆ

ಈ ಪ್ರಸ್ಥಭೂಮಿಯ ಉತ್ತರ ಭಾಗದಲ್ಲಿ ಪ್ರಮುಖವಾಗಿ ವಿಂಧ್ಯ ಪರ್ವತಗಳು, ಸಾತ್ಪುರಾ ಬೆಟ್ಟ, ಅರಾವಳಿ ಬೆಟ್ಟಗಳು, ಮಾಳ್ವ ಪ್ರಸ್ಥಭೂಮಿಗಳಿದ್ದು ಇವುಗಳ ಮಧ್ಯದಲ್ಲಿ ನರ್ಮದಾ ಮತ್ತು ತಪತಿ ನದಿ ಹಾಗೂ ದಾಮೋದರ ನದಿಗಳಲ್ಲದೇ ಅನೇಕ ಚಿಕ್ಕ ನದಿಗಳು ಹರಿಯುತ್ತವೆ. ಇವೆಲ್ಲವುಗಳನ್ನು ಕೇಂದ್ರ ಪ್ರಸ್ಥಭೂಮಿ ಎನ್ನುವರು. ಇವುಗಳ ದಕ್ಷಿಣದಲ್ಲಿ ದಖನ್ ಪ್ರಸ್ಥಭೂಮಿಯಿದ್ದು, ಮಹಾದೇವ, ಮೈಕಲ್ ಶ್ರೇಣಿ, ಅಮರ ಕಂಟಕ ಬೆಟ್ಟಗಳು, ರಾಜಮಹಲ ಬೆಟ್ಟಗಳು ಇದರ ಉತ್ತರದಲ್ಲಿವೆ. ದಖನ್ ಪ್ರಸ್ಥಭೂಮಿಯ ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳಿವೆ. ಇವುಗಳನ್ನು ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಸಹ್ಯಾದ್ರಿ ಎಂದು ಕರೆಯುತ್ತಾರೆ.

ಅಣ್ಣಾಮಲೈ ಸರಣಿಯ ಆನೈಮುಡಿ ಶಿಖರ ದಕ್ಷಿಣ ಭಾರತದಲ್ಲಿಯೇ ಅತ್ಯುನ್ನತ ಪ್ರದೇಶವಾಗಿದೆ. (ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC MATHS

Inverse trigonometric functions

24. If $\tan^{-1}x+\tan^{-1}y+\tan^{-1}z=\pi$, prove that $x+y+z=xyz$.

Soln:- We know that

$$\tan^{-1}x+\tan^{-1}y+\tan^{-1}z=\tan^{-1}\frac{x+y+z-xyz}{1-(xy+yz+zx)}$$

And also, $\tan^{-1}\left\{\frac{x+y+z-xyz}{1-(xy+yz+zx)}\right\}=\pi$

$$\Rightarrow \frac{x+y+z-xyz}{1-(xy+yz+zx)}=\tan\pi=0$$

$$\Rightarrow x+y+z-xyz=0$$

$$\Rightarrow x+y+z=xyz$$

25. Prove that

$$\tan^{-1}\frac{a-b}{1+ab}+\tan^{-1}\frac{b-c}{1+bc}+\tan^{-1}\frac{c-a}{1+ca}=0.$$

Soln :– Consider,

$$\tan^{-1}\frac{a-b}{1+ab}+\tan^{-1}\frac{b-c}{1+bc}+\tan^{-1}\frac{c-a}{1+ca}$$

$$\Rightarrow(\tan^{-1}a-\tan^{-1}b)+(\tan^{-1}b-\tan^{-1}c)+(\tan^{-1}c-\tan^{-1}a)$$

$$\Rightarrow 0=\text{RHS}$$

26. If $\cos^{-1}x+\cos^{-1}y+\cos^{-1}z=\pi$, prove that $x^2+y^2+z^2+2xyz=1$

Soln :– Let $\cos^{-1}z=\theta$, so that $\cos\theta=z$

$$\Rightarrow \cos^{-1}x+\cos^{-1}y=\pi-\cos^{-1}z$$

We also know that,

$$\cos^{-1}\left\{xy-\sqrt{1-x^2}\sqrt{1-y^2}\right\}=\pi-\theta$$

$$\therefore xy-\sqrt{1-x^2}\sqrt{1-y^2}=\cos(\pi-\theta)$$

$$\Rightarrow xy-\sqrt{1-x^2}\sqrt{1-y^2}=-\cos\theta=-z$$

$$\therefore xy+z=-\sqrt{1-x^2}\sqrt{1-y^2}$$

Squaring both sides, we get

$$(xy+z)^2=(1-x^2)^2(1-y^2)^2$$

$$x^2y^2+2xyz+z^2=1-x^2-y^2+x^2y^2$$

$$\therefore x^2+y^2+z^2+2xyz=1$$

27. Prove that:

$$\sin^{-1}x=\cos^{-1}\sqrt{1-x^2}=\tan^{-1}\frac{x}{\sqrt{1-x^2}}=\sec^{-1}\frac{1}{\sqrt{1-x^2}}=\cot^{-1}\frac{\sqrt{1-x^2}}{x}=\operatorname{cosec}^{-1}\frac{1}{x}$$

Proof: (i) Let $\sin^{-1}x=\theta$

$\Rightarrow \sin\theta = x$ where $\theta\in\left[-\frac{\pi}{2},\frac{\pi}{2}\right]$ and $x\in[-1, 1]$

$$\therefore \cos\theta=\sqrt{1-\sin^2\theta}=\sqrt{1-x^2};$$

$$\tan\theta=\frac{\sin\theta}{\cos\theta}=\frac{x}{\sqrt{1-x^2}};$$

$$\operatorname{cosec}\theta=\frac{1}{\sin\theta}=\frac{1}{x};$$

$$\sec\theta=\frac{1}{\cos\theta}=\frac{1}{\sqrt{1-x^2}};$$

$$\cot\theta=\frac{1}{\tan\theta}=\frac{\sqrt{1-x^2}}{x}$$

$$\Rightarrow \theta=\cos^{-1}\sqrt{1-x^2};\ \theta=\sec^{-1}\frac{1}{\sqrt{1-x^2}}$$

$$\theta=\tan^{-1}\frac{x}{\sqrt{1-x^2}};\ \theta=\cot^{-1}\frac{\sqrt{1-x^2}}{x}$$

$$\theta=\operatorname{cosec}^{-1}\frac{1}{x};$$

Thus, $\sin^{-1}x=\cos^{-1}\sqrt{1-x^2}=\tan^{-1}\frac{x}{\sqrt{1-x^2}}$

$$\Rightarrow \operatorname{cosec}^{-1}\frac{1}{x}=\sec^{-1}\frac{1}{\sqrt{1-x^2}}=\cot^{-1}\frac{\sqrt{1-x^2}}{x}$$

(Each $=\theta$); $x\neq 0$ and $x\neq\pm1$.

28. Prove that : $\tan^{-1}x+\tan^{-1}y=\tan^{-1}\frac{x+y}{1-xy}$; $(|x|<1, |y|<1)$ [i.e., $xy<1$]

Proof :– Let $\tan^{-1}x=A$ and

$\therefore x=\tan A$ $\quad[\tan^{-1}y=B;\ \therefore y=\tan B]$

Given $|x|<1 \Rightarrow -1<x<1$

Given $|y|<1 \Rightarrow -1<y<1=-1<\tan B<1$

$$\Rightarrow -1<\tan A<1 \Rightarrow -\frac{\pi}{4}<A<\frac{\pi}{4}\ ....(1)$$

$$\Rightarrow -\frac{\pi}{4}<B<\frac{\pi}{4}\ ....(2)$$

From (1) and (2), adding $-\frac{\pi}{2}<A+B<\frac{\pi}{2}$

We know that

$$\tan(A+B)=\frac{\tan A+\tan B}{1-\tan A\tan B}=\frac{x+y}{1-xy}$$

and $\because A+B\in\left(-\frac{\pi}{2},\frac{\pi}{2}\right)$

$$\therefore A+B=\tan^{-1}\frac{x+y}{1-xy}$$

$$\Rightarrow \tan^{-1}x+\tan^{-1}y=\tan^{-1}\left(\frac{x+y}{1-xy}\right)$$

29. Prove that $\tan^{-1}x+\tan^{-1}y+\tan^{-1}z=\tan^{-1}\left(\frac{x+y+z-xyz}{1-xy-yz-zx}\right)$

Proof :– $(\tan^{-1}x+\tan^{-1}y)+\tan^{-1}z=$

$$\tan^{-1}\left(\frac{x+y}{1+xy}\right)+\tan^{-1}z$$

$$=\tan^{-1}\left[\frac{\frac{x+y}{1-xy}+z}{1-\left(\frac{x+y}{1-xy}\right)z}\right]$$

$$=\tan^{-1}\left[\frac{x+y+z-xyz}{1-xy-yz-zx}\right]$$

(Contd....)

PROGRESS THROUGH QUALITY EDUCATION
SOUTH EAST ASIAN EDUCATION TRUST (R)
S.E.A.E.T
BENGALURU
KNOWLEDGE IS SUPREME

S.E.A COLLEGE OF ENGINEERING & TECHNOLOGY

(Approved by AICTE & Affiliated to Visvesvaraya Technological University)

Ekta Nagar, Near Ayyappanagar Circle, Devasandra Main Road, Virgo Nagar Post, K.R. Puram, Bangalore - 560 049.

ADMISSION OPEN - 2024-25

Sri A. Krishnappaji
Founder Chairman
S.E.A Group of Institutions
Ex-Minister, Govt. of Karnataka

BE
Computer Science & Engineering
Information Science & Engineering
Artificial Intelligence & Data Science
Artificial Intelligence & Machine Learning
Electronics & Comm. Engineering
CSE (IoT & Cyber Security with Block Chain Technology)
Civil Engineering
Mechanical Engineering
Agricultural Engineering

CET CODE E-153

MBA (Dual Specialization)
Marketing, HR, Finance & Business Analytics

M.Tech
CSE
VLSI Design & Embeded Systems

COMED-K E-109

RESEARCH CENTER / Ph.D
Mechanical / Computer Science / Electronics
Management / Chemistry

SOUTH EAST ASIAN GROUP OF INSTITUTIONS

DEGREE	UG :	BA/B.Com/B.Sc./BBA / BBA (Aviation) BTTM / BHM / B.Sc (Clinical & Nutrition) BA (Criminology) / BSW B.Sc Psychology / B.Sc Forensic Science
	PG :	MA (Eng/Kannada/Economics/Journalism) M.Com / MBA / MCA / M.Sc (CS) / MTTM MSW / PG DIPLOMA in Hospital Administration B.Sc. in Aircraft Maintenance
NURSING		GNM / B.Sc. (N) / PB.B.Sc. (N) M.Sc. (N) / BPT / B.Sc. (Allied HS)
LAW		LLB / BA LLB
EDUCATION		B.Ed
PUC		SCIENCE / COMMERCE / ARTS
ITI		FITTER / ELECTRICAL ELECTRONICS MECHANIC
SCHOOL		ICSE SYLLABUS : STD 1st – 10th STATE SYLLABUS : STD 1st – 10th

AICTE ISO 9001:2015 NAAC B++ INSTITUTION'S INNOVATION COUNCIL (Ministry of HRD Initiative) IEEE BANGALORE SECTION

CONTACT : 7353945999 / 9448956755 / 9008471763 / 80500 75545

www.seaedu.ac.in E-mail : principal.seacet@gmail.com / priseadegree@gmail.com seaeduinfo@seaedu.ac.in



❦ ಸುಭಾಷಿತ ❦

ಎಲ್ಲಿ ಪ್ರೀತಿ ಮೇಲುಗೈ ಪಡೆದಿರುತ್ತದೋ ಅಲ್ಲಿ ಕಾನೂನಿನ ಅಗತ್ಯ ಇರುವುದಿಲ್ಲ.

–ಪ್ಲೇಟೊ

ರಾಜ್ಯಗಳ ಜೊತೆ ಸಮಾಲೋಚಿಸಿ ಪರೀಕ್ಷಾ ವ್ಯವಸ್ಥೆ ಸರಿಪಡಿಸಿ

ನೀಟ್‌-ಯುಜಿ ಮರುಪರೀಕ್ಷೆಯ ಬೇಡಿಕೆಯನ್ನು ಸುಪ್ರೀಂ ಕೋರ್ಟ್‌ ತಿರಸ್ಕರಿಸಿದೆ. ಹೀಗಾಗಿ, ವಿವಾದಕ್ಕೆ ಒಳಗಾಗಿದ್ದ ನೀಟ್‌-ಯುಜಿ ಕುರಿತಂತೆ ಎರಡು ತಿಂಗಳಿನಿಂದ ಇದ್ದ ಅನಿಶ್ಚಿತ ಸ್ಥಿತಿ ಮರೆಯಾಗಿದೆ. ಸುದೀರ್ಘ ವಿಳಂಬದ ಬಳಿಕ ಕೌನ್ಸೆಲಿಂಗ್‌ ಮತ್ತು ಪ್ರವೇಶ ಪ್ರಕ್ರಿಯೆ ಆರಂಭಿಸಬಹುದಾಗಿದೆ. ಪರೀಕ್ಷೆಯ ಪಾವಿತ್ರ್ಯಕ್ಕೆ ಧಕ್ಕೆ ಆಗುವ ರೀತಿಯಲ್ಲಿ 'ವ್ಯವಸ್ಥಿತ ಅಕ್ರಮ' ನಡೆದಿರುವುದಕ್ಕೆ ದಾಖಲೆಗಳೇನೂ ಇಲ್ಲ ಎಂಬ ಕಾರಣ ನೀಡಿ ಮರುಪರೀಕ್ಷೆಯ ಬೇಡಿಕೆಯನ್ನು ನ್ಯಾಯಾಲಯವು ತಳ್ಳಿಹಾಕಿದೆ. ಮರುಪರೀಕ್ಷೆ ನಡೆಸಿದರೆ ಅದರ ಪರಿಣಾಮಗಳು ಏನಾಗಬಹುದು ಎಂಬುದನ್ನೂ ನ್ಯಾಯಾಲಯವು ಪರಿಶೀಲನೆಗೆ ಒಳಪಡಿಸಿದೆ. ಮರುಪರೀಕ್ಷೆ ನಡೆಸಿದರೆ ಈಗಾಗಲೇ ಪರೀಕ್ಷೆ ಬರೆದಿರುವ 24 ಲಕ್ಷ ವಿದ್ಯಾರ್ಥಿಗಳ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ; ಕೋರ್ಸ್‌ ಪ್ರವೇಶದ ವೇಳಾಪಟ್ಟಿ ಏರುಪೇರಾಗುತ್ತದೆ ಮತ್ತು ಇದು ಮುಂದಿನ ಎಲ್ಲ ಪ್ರಕ್ರಿಯೆಗಳ ಮೇಲೆಯೂ ಪರಿಣಾಮ ಬೀರುತ್ತದೆ ಎಂದು ನ್ಯಾಯಾಲಯ ಹೇಳಿದೆ. ಪರೀಕ್ಷೆ ನಡೆಸಿದ ರೀತಿಯಲ್ಲಿ ಗಂಭೀರ ಲೋಪಗಳು ಉಂಟಾಗಿವೆ. ಪಟ್ನಾ ಮತ್ತು ಹಜಾರಿಬಾಗ್‌ನಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆಗಿರುವುದು ದೃಢಪಟ್ಟಿದೆ. ಹಲವು ರೀತಿಯ ಅಕ್ರಮಗಳು ಮತ್ತು ನಿಯಮಗಳ ಉಲ್ಲಂಘನೆಯನ್ನು ತನಿಖಾ ತಂಡವು ಪತ್ತೆ ಮಾಡಿದೆ. ನೂರಕ್ಕೆ ನೂರು ಅಂಕ ಪಡೆದಿದ್ದ 44 ಅಭ್ಯರ್ಥಿಗಳೂ ಸೇರಿ ಒಟ್ಟು ನಾಲ್ಕು ಲಕ್ಷ ಅಭ್ಯರ್ಥಿಗಳಿಗೆ ನೀಡಿದ್ದ ಅಂಕಗಳನ್ನು ಸರಿಪಡಿಸುವಂತೆಯೂ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಗೆ (ಎನ್‌ಟಿಎ) ಕೋರ್ಟ್‌ ನಿರ್ದೇಶನ ನೀಡಿದೆ. ಭೌತವಿಜ್ಞಾನ ವಿಷಯದ ಪ್ರಶ್ನೆಪತ್ರಿಕೆಯಲ್ಲಿ ಇದ್ದ ಒಂದು ಪ್ರಶ್ನೆಗೆ ತಪ್ಪಾಗಿ ನೀಡಿರುವ ಅಂಕವನ್ನು ಸರಿಪಡಿಸುವಂತೆಯೂ ಸೂಚಿಸಲಾಗಿದೆ.

ಉತ್ತಮವಾದ ಪರೀಕ್ಷಾ ವ್ಯವಸ್ಥೆಯನ್ನು ರೂಪಿಸಬೇಕಿರುವುದು ವಿದ್ಯಾರ್ಥಿಗಳು ಮತ್ತು ದೇಶದ ಹಿತದೃಷ್ಟಿಯಿಂದ ಬಹಳ ಮುಖ್ಯವಾದುದು

ಪರೀಕ್ಷೆ ನಡೆಸಿದ ರೀತಿಯಲ್ಲಿ ಹಲವು ಲೋಪಗಳು ಇದ್ದವು ಎಂಬುದನ್ನು ಇವೆಲ್ಲವೂ ತೋರಿಸುತ್ತವೆ. ಹಾಗಾಗಿ, ಮರುಪರೀಕ್ಷೆಗೆ ನ್ಯಾಯಾಲಯ ಒಪ್ಪದೇ ಇರುವುದರಿಂದ ತನ್ನ ನಿಲುವನ್ನು ದೃಢಪಡಿಸಿದಂತಾಗಿದೆ ಎಂದು ಸರ್ಕಾರ ಹೇಳುವುದು ಸರಿಯಲ್ಲ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್‌ ಅವರು 'ಸತ್ಯಕ್ಕೆ ಜಯವಾಗಿದೆ' ಎಂದು ಹೇಳಿಕೊಂಡಿದ್ದಾರೆ. ಆದರೆ, ಪರೀಕ್ಷಾ ವ್ಯವಸ್ಥೆಯು ಅಕ್ರಮಗಳಿಗೆ ಅವಕಾಶ ಇರುವ ರೀತಿಯಲ್ಲಿ ದುರ್ಬಲವಾಗಿದೆ ಮತ್ತು ಯಾವುದೇ ರೀತಿಯ ದಾಳಿಗೂ ಒಳಗಾಗುವ ರೀತಿಯಲ್ಲಿ ಶಿಥಿಲವಾಗಿದೆ ಎಂಬುದೇ ಸತ್ಯ. ಪರೀಕ್ಷಾ ಮಾಫಿಯಾವೇ ಇದೆ, ಹಲವು ಜನರನ್ನು ಬಂಧಿಸಲಾಗಿದೆ ಮತ್ತು ಹಲವು ಅಭ್ಯರ್ಥಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂಬುವು ಇದಕ್ಕೆ ಸಾಕ್ಷ್ಯ ಒದಗಿಸುತ್ತವೆ. ಎನ್‌ಟಿಎ ತೆಗೆದುಕೊಂಡ ವಿವಿಧ ಕ್ರಮಗಳ ಕುರಿತು ಪ್ರಶ್ನೆಗಳು ಎದ್ದಿವೆ. ಜೂನ್‌ನಲ್ಲಿ ನಡೆದ ಯುಜಿಸಿ–ಎನ್‌ಇಟಿ ಪರೀಕ್ಷೆಯನ್ನು ಯಾವುದೇ ನಿರ್ದಿಷ್ಟ ಕಾರಣ ಕೊಡದೆಯೇ ಸರ್ಕಾರ ರದ್ದು ಮಾಡಿದೆ. ಎನ್‌ಟಿಎ ಮುಖ್ಯಸ್ಥರನ್ನು ಸೇವೆಯಿಂದ ವಜಾ ಮಾಡಲಾಗಿದೆ; ಸಂಸ್ಥೆಯ ಅವ್ಯವಸ್ಥೆಯ ಕುರಿತು ಪರಿಶೀಲನೆ ನಡೆಸಲು ಸಮಿತಿ ರಚಿಸಲಾಗಿದೆ; ಎನ್‌ಟಿಎ ಸುಧಾರಣೆಗೆ ಸಲಹೆ ನೀಡುವಂತೆ ಸೂಚಿಸಲಾಗಿದೆ. ಈ ಮೂಲಕ ಪರೀಕ್ಷಾ ವ್ಯವಸ್ಥೆಯು ವಿಫಲವಾಗಿದೆ ಎಂಬುದನ್ನು ಒಪ್ಪಿಕೊಂಡಂತಾಗಿದೆ.

ಈಗಿನ ವ್ಯವಸ್ಥೆಯನ್ನು ಸಂಪೂರ್ಣವಾಗಿ ದುರಸ್ತಿಗೊಳಪಡಿಸಿ, ಪಾರದರ್ಶಕ, ವಿಶ್ವಾಸಾರ್ಹ, ದಕ್ಷ ಮತ್ತು ಉತ್ತರದಾಯಿಯಾಗಿ ರೂಪಿಸಬೇಕಿದೆ. ವೈವಿಧ್ಯಮಯವಾದ ಶೈಕ್ಷಣಿಕ, ಸಾಮಾಜಿಕ ಸನ್ನಿವೇಶ ಮತ್ತು ಅಗತ್ಯಗಳನ್ನು ಹೊಂದಿರುವ ಭಾರತದಂತಹ ದೇಶಕ್ಕೆ 'ಒಂದು ದೇಶ, ಒಂದು ಪರೀಕ್ಷೆ' ಎಂಬ ಪರಿಕಲ್ಪನೆಯೇ ಹೊಂದುವುದಿಲ್ಲ ಎಂಬುದು ಮೌಲಿಕವಾದ ವಾದವಾಗಿದೆ. ಕೆಲವೇ ಸ್ಥಳಗಳಲ್ಲಿ ಆಗುವ ಪ್ರಶ್ನೆಪತ್ರಿಕೆ ಸೋರಿಕೆ ಅಥವಾ ಪರೀಕ್ಷಾ ಅಕ್ರಮವು ಪರೀಕ್ಷೆ ಬರೆದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಮೇಲೆಯೇ ಕರಿಛಾಯೆ ಬೀರುತ್ತದೆ. ವಿದ್ಯಾರ್ಥಿಗಳು ಮತ್ತು ಅವರ ಪೋಷಕರನ್ನು ಒತ್ತಡಕ್ಕೆ ತಳ್ಳುತ್ತದೆ. ನೀಟ್‌–ಯುಜಿ ಪರೀಕ್ಷಾ ವ್ಯವಸ್ಥೆಯು ನಗರದ ಶ್ರೀಮಂತರ ಪರವಾಗಿದೆ, ಕೋಚಿಂಗ್‌ ಪಡೆದುಕೊಳ್ಳಲು ಸಾಧ್ಯವಿರುವ ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿದೆ ಎಂಬ ಟೀಕೆಯೂ ಇದೆ. ಕರ್ನಾಟಕ ಸೇರಿ ಕೆಲವು ರಾಜ್ಯಗಳು ನೀಟ್‌ ವ್ಯವಸ್ಥೆಯಿಂದ ಹೊರ ಹೋಗಲು ಬಯಸಿವೆ. ಕೇಂದ್ರ ಸರ್ಕಾರವು ರಾಜ್ಯಗಳು ಮತ್ತು ಸಂಬಂಧಪಟ್ಟ ಇತರರ ಜೊತೆಗೆ ಸಮಾಲೋಚನೆ ನಡೆಸಿ ಉತ್ತಮವಾದ ಪರೀಕ್ಷಾ ವ್ಯವಸ್ಥೆ ರೂಪಿಸಬೇಕಿದೆ. ವಿದ್ಯಾರ್ಥಿಗಳು ಮತ್ತು ದೇಶದ ಹಿತದೃಷ್ಟಿಯಿಂದ ಇದು ಬಹಳ ಮುಖ್ಯವಾಗಿದೆ.

ದಿನದ ಟ್ವೀಟ್‌

ಹೊಸ ಹರಿವು, ಹೊಸ ಚಿಂತನೆ

ಬೈಡನ್‌ ಅವರಷ್ಟೇ ಅಲ್ಲ, ಪ್ರತಿ ದೇಶದಲ್ಲೂ ವೃದ್ಧರು ಯಾವುದೋ ಒಂದು ಸ್ಥಾನ ಬಿಟ್ಟುಕೊಡಬೇಕಾದ ಅಗತ್ಯ ಬಂದಾಗ ಆ ಕಾರ್ಯಕ್ಕೆ ನಿರಾಕರಿಸುತ್ತಾರೆ.

ರಾಮಚಂದ್ರ ಗುಹಾ, ಇತಿಹಾಸಕಾರ, ಲೇಖಕ

ಕಿಡಿನುಡಿ



ದೆಹಲಿಯಲ್ಲಿ ಕೋಚಿಂಗ್‌ ಕೇಂದ್ರಗಳು ಮತ್ತು ಬ್ರೋಕರ್‌ಗಳ ಮಾಫಿಯಾರಾಜ್‌ನಿಂದಾಗಿ ವಿದ್ಯಾರ್ಥಿಗಳು ಸಾವಿಗೀಡಾಗುತ್ತಿದ್ದಾರೆ ಮತ್ತು ಆರ್ಥಿಕ ತೊಂದರೆ ಅನುಭವಿಸುತ್ತಿದ್ದಾರೆ. ಯುಪಿಎಸ್‌ಸಿ, ಎಸ್‌ಎಸ್‌ಸಿ, ಸಿಎಟಿಯಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಬಹಳಷ್ಟು ಕೋಚಿಂಗ್‌ ಕೇಂದ್ರಗಳು ಸೂಕ್ತ ಭದ್ರತಾ ವ್ಯವಸ್ಥೆ ಹೊಂದಿರುವುದಿಲ್ಲ. ಕಟ್ಟಡದಲ್ಲಿ ಸ್ಥಳಾಭಾವವಾದರೆ ಹಣ ಗಳಿಕೆಗಾಗಿ ಅವು ನೆಲಮಾಳಿಗೆಯಲ್ಲೂ ಹೆಚ್ಚುವರಿ ಬ್ಯಾಚ್‌ಗಳನ್ನು ನಡೆಸುತ್ತವೆ...

ತುಷಾರ್‌ ಸಿಂಗ್‌, ಕಾನೂನು ವಿದ್ಯಾರ್ಥಿ

25 ವರ್ಷಗಳ ಹಿಂದೆ

ಗುರುವಾರ, 29-7-1999

• ವಿಜಾಪುರದ 35 ಶಿಕ್ಷಣ ಅಧಿಕಾರಿಗಳ ಅಮಾನತು

ವಿಜಾಪುರ, ಜುಲೈ 28– ಸರ್ಕಾರಿ ಅನುದಾನಿತ ಶಾಲೆಗಳ ಶಾಲಾ ಮಕ್ಕಳ ಸಂಖ್ಯೆಯನ್ನು ಮತ್ತು ತರಗತಿಗಳನ್ನು ಖೊಟ್ಟಿ ತೋರಿಸಿ 1988ರಿಂದ ಅನುದಾನಿತ ಶಾಲೆಗಳಿಗೆ ಹೆಚ್ಚುವರಿ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಿಸಿದ ಮತ್ತು ಇತರ ಅವ್ಯವಹಾರ ಪ್ರಕರಣದಲ್ಲಿ ವಿಜಾಪುರ ಜಿಲ್ಲೆಯ ಶಿಕ್ಷಣ ಇಲಾಖೆಯ ಒಟ್ಟು 35 ಅಧಿಕಾರಿಗಳು ಮತ್ತು 115 ಸಿಬ್ಬಂದಿಯನ್ನು ಸೇವೆಯಿಂದ ಶಿಕ್ಷಣ ಇಲಾಖೆಯು ಅಮಾನತುಗೊಳಿಸಿದೆ.

ಜಿಲ್ಲೆಯಲ್ಲಿನ ಅವ್ಯವಹಾರದ ಬಗ್ಗೆ, ಕಳೆದ ವರ್ಷ ಶಿಕ್ಷಣ ಸಚಿವ ಗೋವಿಂದೇಗೌಡ ಅವರು ಇಲ್ಲಿಗೆ ಬಂದಿದ್ದಾಗ ಬೆಳಗಾವಿ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ನೇತೃತ್ವದಲ್ಲಿ ರಚಿಸಿದ್ದ ವಿಚಾರಣಾ ಆಯೋಗ ಒಂದೂವರೆ ತಿಂಗಳ ಹಿಂದೆ ಸರ್ಕಾರಕ್ಕೆ ವರದಿ ಸಲ್ಲಿಸಿದ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆಯು ಈ ಕ್ರಮ ಕೈಗೊಂಡಿದೆ ಎನ್ನಲಾಗಿದೆ.

• ಸಿದ್ದರಾಮಯ್ಯ ಗುಂಪಿನ ಪರ 60 ಸಹಿ

ಬೆಂಗಳೂರು, ಜುಲೈ 28– 'ಜನತಾದಳದ ಚಕ್ರ ಚಿಹ್ನೆಯಡಿ ಚುನಾವಣೆಯಲ್ಲಿ ಗೆದ್ದವರು ಮಾತ್ರ ಪಕ್ಷದ ಚಿಹ್ನೆ ಪಡೆದುಕೊಳ್ಳುವ ಪ್ರಮಾಣಪತ್ರಕ್ಕೆ ಸಹಿ ಹಾಕಲು ಅರ್ಹರು' ಎಂದು ಸಿದ್ದರಾಮಯ್ಯ ನೇತೃತ್ವದ ಜನತಾದಳ ಸ್ಪಷ್ಟಪಡಿಸಿ, ತಮ್ಮೊಂದಿಗೆ ಒಟ್ಟು 60 ಮಂದಿ ಮಾಜಿ ಶಾಸಕರು ಮತ್ತು ಸಂಸತ್‌ ಸದಸ್ಯರು ಇದ್ದಾರೆ ಎಂದು ತಿಳಿಸಿದೆ.

ಮುಖ್ಯಮಂತ್ರಿ ಜೆ.ಎಚ್‌. ಪಟೇಲರ ಬಣದಲ್ಲಿದ್ದು ಪಕ್ಷದ ಚಿಹ್ನೆ ಪಡೆದುಕೊಳ್ಳುವ ಸಲುವಾಗಿ ಸಹಿ ಮಾಡಿರುವವರ ಪೈಕಿ ಎಂಟು ಮಂದಿ ಪಕ್ಷೇತರರಾಗಿ ಗೆದ್ದವರ ಹೆಸರುಗಳಿವೆ ಎಂದು ಪಕ್ಷದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 29-7-1974

• ದುರ್ಬಲರಿಗೆ ರಾಜ್ಯಾಂಗದತ್ತ ಹಕ್ಕುಗಳು ಇನ್ನೂ ದೊರಕಿಲ್ಲ

ಬೆಂಗಳೂರು, ಜುಲೈ 28– ರಾಜ್ಯಾಂಗವು ದುರ್ಬಲ ವರ್ಗಗಳಿಗೆ ನೀಡಿರುವ ಹಕ್ಕು ಬಾಧ್ಯತೆಗಳು ಇನ್ನೂ ಪೂರ್ಣವಾಗಿ ಈಡೇರಿಲ್ಲವೆಂದು ಕಾನೂನು ಸಚಿವ ಶ್ರೀ ಡಿ.ಕೆ. ನಾಯ್ಕರ್‌ ಅವರು ಇಂದು ಇಲ್ಲಿ ವಿಷಾದಿಸಿ, 'ರಾಜ್ಯಾಂಗದಲ್ಲಿ ಇರುವುದು ಒಂದಾದರೆ ನಾವು ನಡೆದುಕೊಂಡಿರುವುದು ಇನ್ನೊಂದಾಗಿದೆ' ಎಂದರು.

ಅಖಿಲ ಕರ್ನಾಟಕ ಗಾಣಿಗರ ಪ್ರಥಮ ಸಮ್ಮೇಳನವನ್ನು ಪುರಭವನದಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು.

'ಹಿಂದುಳಿದಿರುವಿಕೆಯನ್ನು ನಿರ್ಧರಿಸಲು 1,300 ರೂ.ಗಳ ವಾರ್ಷಿಕ ಆದಾಯ ಮಿತಿ ಸೂತ್ರ ಅನುಸರಿಸಿದುದರಿಂದ ಹಿಂದುಳಿದ ವರ್ಗಗಳಿಗೆ ಮೀಸಲಾದ ಸೌಲಭ್ಯಗಳು ನಿಜವಾಗಿ ಸಲ್ಲಬೇಕಾದವರಿಗೆ ಸಲ್ಲಲಿಲ್ಲ' ಎಂದು ಹೇಳಿದರು.

• ಸತ್ತವನು ಎದ್ದ; ಎದೆಯೊಡೆದು ಸತ್ತ

ಕಾರಕಾಸ್‌, ಜುಲೈ 28– ವೆನಿಜುವೆಲಾದ ಬೆಸ್ತನೊಬ್ಬ ಶನಿವಾರ ಸತ್ತಾಗ ಬಂಧು ಬಳಗದವರೆಲ್ಲಾ ಅತ್ತುಕರೆದು, ಅವನನ್ನು ಶವಪೆಟ್ಟಿಗೆಯಲ್ಲಿ ಮಲಗಿಸಿ ಅಂತಿಮ ಸಂಸ್ಕಾರಕ್ಕೆ ಸಿದ್ಧರಾದರು. ಆದರೆ ಅವನು ಎದ್ದು ಕುಳಿತ. ಮೂಗಿನ ಹೊಳ್ಳೆಗಳಿಗೆ ಸಿಕ್ಕಿಸಿದ್ದ ಅರಳೆಯುಂಡೆಗಳನ್ನು ಕಿತ್ತುಹಾಕಿದ. ತನ್ನ ಅಂತಿಮಸಂಸ್ಕಾರಕ್ಕೆ ಸಿದ್ಧತೆ ನಡೆದಿರುವುದು ಅವನ ಗಮನಕ್ಕೆ ಬಂತು. ತತ್‌ಕ್ಷಣ ಹೃದಯ ಸ್ತಂಭನವಾಗಿ ಸತ್ತ!

ಆತ ಸತ್ತಿರುವನೆಂದು ಘೋಷಿಸಿ ಇಷ್ಟೆಲ್ಲಾ ಅನಾಹುತಕ್ಕೆ ಕಾರಣನಾದ ವೈದ್ಯನ ಮೇಲೆ ಕ್ರಮ ಜರುಗಿಸಲು ಸತ್ತವನ ಬಂಧು ಬಾಂಧವರಲ್ಲಿ ಕೆಲವರು ಒತ್ತಾಯಿಸಿದರು.

ಒಕ್ಕೂಟ ಸರ್ಕಾರವು ಶಿಕ್ಷಣಕ್ಕೆ ಸಂಬಂಧಿಸಿದ ಆರ್ಥಿಕ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ

ಶಿಕ್ಷಣದ ಹಕ್ಕು: ಬಜೆಟ್‌ನಲ್ಲಿ ಸಿಕ್ಕಿದ್ದೇನು?

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಭಾರತದ ಸಾರ್ವಜನಿಕ ಶಾಲಾ ಶಿಕ್ಷಣ ವ್ಯವಸ್ಥೆಯು ವಿಶ್ವದಲ್ಲಿ ಒಂದು ದೊಡ್ಡ ಶಿಕ್ಷಣ ವ್ಯವಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 'ಯುಡೈಸ್‌' 2021- 22ರ ಅಂಕಿ-ಅಂಶಗಳ ಪ್ರಕಾರ, ದೇಶದಲ್ಲಿ ಒಟ್ಟು 11.68 ಲಕ್ಷ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿವೆ. ಇವುಗಳಲ್ಲಿ ಸುಮಾರು 15.62 ಕೋಟಿ ವಿದ್ಯಾರ್ಥಿಗಳಿದ್ದು, 57.67 ಲಕ್ಷ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಮಗ್ರ ಶಿಕ್ಷಣ ಅಭಿಯಾನವು ಪ್ರಧಾನಮಂತ್ರಿ ಪೋಷಣ್‌ ಶಕ್ತಿ ನಿರ್ಮಾಣ್‌ (ಮಧ್ಯಾಹ್ನದ ಉಪಾಹಾರ) ಯೋಜನೆಯೂ ಒಳಗೊಂಡಂತೆ ಪೂರ್ವ ಪ್ರಾಥಮಿಕದಿಂದ ಪ್ರೌಢ ಶಿಕ್ಷಣದವರೆಗೆ ಉಚಿತ ಶಿಕ್ಷಣದ ಹಕ್ಕನ್ನು ಒದಗಿಸುವ ಮಹತ್ವದ ಯೋಜನೆಯಾಗಿದೆ. ಶಿಕ್ಷಣ ಆಯೋಗ ಮತ್ತು ಶಿಕ್ಷಣ ನೀತಿಗಳು ಹೇಳುವಂತೆ, ಬಲಿಷ್ಠ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯು ದೇಶದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯನ್ನು ಸಾಧಿಸಲು ಬುನಾದಿಯಾಗಿರುತ್ತದೆ. ಕೊಠಾರಿ ಆಯೋಗ ಹೇಳುವಂತೆ, ದೇಶದ ಭವಿಷ್ಯ ಆಕೆಯ ತರಗತಿಗಳಲ್ಲಿ ರೂಪಿತವಾಗುತ್ತದೆ. ಹಾಗಾದರೆ, ನಮ್ಮ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್‌ ಅವರು ಮಂಡಿಸಿದ ಬಜೆಟ್‌ನಲ್ಲಿ ದೇಶದ ಭವಿಷ್ಯವನ್ನು ರೂಪಿಸುವ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಬಲವರ್ಧನೆಗೆ ಏನು ದೊರೆತಿದೆ ಎಂಬುದನ್ನು ವಿಶ್ಲೇಷಿಸಬೇಕಾದುದು ಅಗತ್ಯ.

ಸಚಿವರು ಬಜೆಟ್‌ ಮಂಡಿಸುತ್ತಾ 'ದೇಶವನ್ನು ಸದೃಢಗೊಳಿಸಲು ಮತ್ತು ಸರ್ವತೋಮುಖ ಅಭಿವೃದ್ಧಿಯತ್ತ ಕೊಂಡೊಯ್ಯಲು ಎನ್‌ಡಿಎ ಮೈತ್ರಿಕೂಟಕ್ಕೆ ಮತದಾರರು ಒಂದು ಅನನ್ಯ ಅವಕಾಶವನ್ನು ನೀಡಿದ್ದಾರೆ. ಮಧ್ಯಂತರ ಬಜೆಟ್‌ನಲ್ಲಿ ನಾವು ಭರವಸೆ ನೀಡಿದ್ದಂತೆ, ನಮ್ಮ 'ವಿಕಸಿತ ಭಾರತ'ದಲ್ಲಿ ವಿವರವಾದ ಮಾರ್ಗಸೂಚಿಯನ್ನು ಪ್ರಸ್ತುತಪಡಿಸುತ್ತಿದ್ದೇವೆ' ಎಂದು ಹೇಳಿ, 9 ಆದ್ಯತಾ ಕ್ಷೇತ್ರಗಳನ್ನು ಪ್ರಸ್ತಾಪಿಸಿದರು. ದುರದೃಷ್ಟವೆಂದರೆ, ಈ ಪಟ್ಟಿಯಲ್ಲಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಬಲವರ್ಧನೆಯ ಬಗ್ಗೆ ಯಾವುದೇ ನಿರ್ದಿಷ್ಟ ಪ್ರಸ್ತಾಪ ಇರಲಿಲ್ಲ. ಒಂದು ಬಲಿಷ್ಠ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಕೊಳ್ಳದೆ ಬಲಿಷ್ಠ ಭಾರತ ನಿರ್ಮಿಸಲು ಹಾಗೂ ಸರ್ವತೋಮುಖ ಅಭಿವೃದ್ಧಿ ಸಾಧಿಸಲು ಹೇಗೆ ಸಾಧ್ಯ?

2024- 25ನೇ ಸಾಲಿನ ಬಜೆಟ್‌ನಲ್ಲಿ ಶಿಕ್ಷಣದ ಪಾಲು ಶೇಕಡ 2.5ರಷ್ಟು. ದೇಶದ ಜಿಡಿಪಿಗೆ ಹೋಲಿಸಿದಾಗ ಇದರ ಪ್ರಮಾಣ ಬರೀ ಶೇ 0.37. ಕೊಠಾರಿ ಆಯೋಗದ ಶಿಫಾರಸಿನ ಅನ್ವಯ, ಶಿಕ್ಷಣಕ್ಕಾಗಿ ನಾವು ಜಿಡಿಪಿಯ ಶೇ 6ರಷ್ಟನ್ನು ಮೀಸಲಿಡುವ ಮಹತ್ವಾಕಾಂಕ್ಷೆಯನ್ನು 1966ರಿಂದ ಪ್ರಸ್ತಾಪಿಸುತ್ತಲೇ ಬಂದಿದ್ದೇವೆ. 2020ರ ರಾಷ್ಟ್ರೀಯ ಶಿಕ್ಷಣ ನೀತಿಯೂ ಒಳಗೊಂಡಂತೆ ದೇಶದ ಎಲ್ಲಾ ಶಿಕ್ಷಣ ನೀತಿಗಳು ಶೇ 6ರಷ್ಟನ್ನು ಮೀಸಲಿಡಬೇಕಾದ ಅಗತ್ಯವನ್ನು ಪುನರುಚ್ಚರಿಸುತ್ತಲೇ ಬಂದಿವೆ.

ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್‌ಇಪಿ) ಅನುಷ್ಠಾನಗೊಂಡ ಮೊದಲ ವರ್ಷ ಅಂದರೆ 2020–21ರಲ್ಲಿ ಶಿಕ್ಷಣಕ್ಕೆ ಮೀಸಲಿಟ್ಟ ಅನುದಾನ ಜಿಡಿಪಿಯ ಶೇ 0.43ರಷ್ಟಿತ್ತು. ಈಗ ಅದು ಶೇ 0.37ಕ್ಕೆ ಇಳಿದಿದೆ. ಎನ್‌ಇಪಿ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುವ ಒಕ್ಕೂಟ ಸರ್ಕಾರವು ರಾಷ್ಟ್ರೀಯ ಮಹತ್ವದ ಮತ್ತು ಸಂವಿಧಾನಬದ್ಧ ಶಿಕ್ಷಣದ ಮೂಲಭೂತ ಹಕ್ಕನ್ನು ರಾಷ್ಟ್ರ ಮಟ್ಟದಲ್ಲಿ ಜಾರಿಗೊಳಿಸಲು ಬಜೆಟ್‌ನಲ್ಲಿ ಸಮಗ್ರ ಶಿಕ್ಷಣ ಅಭಿಯಾನಕ್ಕೆ ತೆಗೆದಿರಿಸಿರುವ ಅನುದಾನ ಬರೀ ₹ 37,500 ಕೋಟಿ. 2023- 24ರ ಬಜೆಟ್‌ನಲ್ಲಿ ₹ 37,453.47 ಕೋಟಿ ಅನುದಾನ ಒದಗಿಸಲಾಗಿತ್ತು. ಅಂದರೆ, ಇದಕ್ಕೆ ಹೋಲಿಸಿದರೆ, ಈ ಮಹತ್ವದ ರಾಷ್ಟ್ರೀಯ ಯೋಜನೆಗೆ ಈ ಬಾರಿ ಹೆಚ್ಚಳವಾಗಿದ್ದು ಬರೀ ₹ 46.53 ಕೋಟಿ. ಇದೇ ಸಂದರ್ಭದಲ್ಲಿ, ಪಿಎಂ ಸ್ಕೂಲ್ಸ್‌ ಫಾರ್‌ ರೈಸಿಂಗ್‌ ಇಂಡಿಯಾ (ಪಿಎಂಶ್ರೀ) ಯೋಜನೆಗೆ ಕಳೆದ ವರ್ಷಕ್ಕೆ ಹೋಲಿಸಿದರೆ ₹ 2,050 ಕೋಟಿ ಅನುದಾನ ಹೆಚ್ಚಿಸಲಾಗಿದೆ.

ಸಮಗ್ರ ಶಿಕ್ಷಣ ಅಭಿಯಾನಕ್ಕೆ ಒಕ್ಕೂಟ ಸರ್ಕಾರ ತೆಗೆದಿರಿಸಿರುವ ಅನುದಾನವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಒಕ್ಕೂಟ ಪ್ರಾಯೋಜಿತ ಈ ಮಹತ್ವದ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ದೊಡ್ಡಮಟ್ಟದ ಆರ್ಥಿಕ ಬಿಕ್ಕಟ್ಟನ್ನು ಎದುರಿಸಬೇಕಾಗುತ್ತದೆ ಎಂಬುದು ಸ್ಪಷ್ಟ. ದೇಶದ ಎಲ್ಲಾ ಮಕ್ಕಳಿಗೆ ಸಿಗಲೇಬೇಕಾದ ಮತ್ತು ಶಿಕ್ಷಣದ ಮೂಲಭೂತ ಹಕ್ಕನ್ನು ಜಾರಿಗೊಳಿಸುವ ಉದ್ದೇಶದ ಸಮಗ್ರ ಶಿಕ್ಷಣ ಅಭಿಯಾನಕ್ಕೆ ಒದಗಿಸಿರುವ ಅನುದಾನದ ಪ್ರಮಾಣ ತೀರಾ ಕಡಿಮೆ. ಪ್ರಧಾನಮಂತ್ರಿ ಹೆಸರಿನಲ್ಲಿ ರೂಪುಗೊಂಡಿರುವ ಒಕ್ಕೂಟ ಯೋಜನೆಗಳಿಗೆ ಒದಗಿಸಿರುವ ಅನುದಾನದ ಮೊತ್ತಕ್ಕೆ ಹೋಲಿಸಿ ನೋಡಿದರೆ ಇದು ಯಾರಿಗಾದರೂ ಸ್ಪಷ್ಟವಾಗುತ್ತದೆ. ಇದು, ಸಂವಿಧಾನಬದ್ಧ ನ್ಯಾಯಸಮ್ಮತ ಹಕ್ಕನ್ನು ದುರ್ಬಲಗೊಳಿಸಿ ಅದನ್ನು ಕ್ರಮೇಣ ಕಸಿಯುವ ಸೂಚನೆಯಾಗಿದೆ. ಮತ್ತೊಂದೆಡೆ, ಪ್ರಧಾನಮಂತ್ರಿ ಅವರ ವೈಯಕ್ತಿಕ ವರ್ಚಸ್ಸನ್ನು ಹೆಚ್ಚಿಸುವ ಯೋಜನೆಗಳು ಬಜೆಟ್‌ನಲ್ಲಿ ಹೆಚ್ಚಿನ ಆದ್ಯತೆಯನ್ನು ಪಡೆದಿರುವುದು ಗಮನಾರ್ಹ.

ಭಾರತದಲ್ಲಿ ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಶಿಕ್ಷಣದ ಜವಾಬ್ದಾರಿ ಹೊಂದಿವೆ. ರಾಜ್ಯ ಸರ್ಕಾರಗಳು ಶಾಲೆಗಳನ್ನು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳನ್ನು ನಿರ್ವಹಿಸುತ್ತವೆ. ಉದಾಹರಣೆಗೆ, ಪ್ರಸಕ್ತ ಬಜೆಟ್‌ನಲ್ಲಿ ಒಕ್ಕೂಟ ಸರ್ಕಾರವು ಸಮಗ್ರ ಶಿಕ್ಷಣ ಅಭಿಯಾನಕ್ಕೆ ಒದಗಿಸಿರುವ ಅತ್ಯಲ್ಪ ಮೊತ್ತದ ಅನುದಾನವನ್ನು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ವಿತರಿಸಲಾಗುತ್ತದೆ. ಈ ಅನುದಾನದಿಂದ ಶಿಕ್ಷಣದ ಮೂಲಭೂತ ಹಕ್ಕನ್ನು ಜಾರಿಗೊಳಿಸಲು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಎದುರಿಸಬೇಕಾದ ದುಃಸ್ಥಿತಿಯನ್ನು ಯಾರು ಬೇಕಾದರೂ ಊಹಿಸಬಹುದು. ಜೊತೆಗೆ, ಅಭಿಯಾನದ ಅಡಿಯಲ್ಲಿ ಈ ಅನುದಾನವನ್ನು ಪಡೆಯಲು ರಾಜ್ಯ ಸರ್ಕಾರಗಳು ಪಿಎಂಶ್ರೀ ಯೋಜನೆಯಲ್ಲಿ ತಮ್ಮ ಭಾಗವಹಿಸುವಿಕೆಯನ್ನು ದೃಢೀಕರಿಸಬೇಕು. ಅದಕ್ಕಾಗಿ ಶಿಕ್ಷಣ ಸಚಿವಾಲಯದ ಜತೆ ಒಪ್ಪಂದಪತ್ರಕ್ಕೆ ಸಹಿ ಹಾಕಬೇಕು. ಇಲ್ಲವಾದಲ್ಲಿ, ಅಭಿಯಾನದ ಅಡಿಯಲ್ಲಿ ರಾಜ್ಯಗಳಿಗೆ ದೊರೆಯಬಹುದಾದ ಅತ್ಯಲ್ಪ ಅನುದಾನವನ್ನು ಸಹ ನಿರಾಕರಿಸಲಾಗುತ್ತದೆ. ಇತ್ತೀಚೆಗೆ ಇಂತಹ ಒಪ್ಪಂದಪತ್ರಕ್ಕೆ ಸಹಿ ಮಾಡಲು ನಿರಾಕರಿಸಿದ ಪಶ್ಚಿಮ ಬಂಗಾಳ, ದೆಹಲಿ ಮತ್ತು ಪಂಜಾಬ್‌ ರಾಜ್ಯಗಳಿಗೆ ಅಭಿಯಾನದ ಅಡಿಯಲ್ಲಿ ನೀಡಬೇಕಾದ ಮೂರು ಮತ್ತು ನಾಲ್ಕನೇ ಕಂತುಗಳನ್ನು ಸ್ಥಗಿತಗೊಳಿಸಲಾಗಿದೆ. ಇದು, ನಮ್ಮ ಒಕ್ಕೂಟ ವ್ಯವಸ್ಥೆ ಯಾವ ಕಡೆ ಸಾಗುತ್ತಿದೆ ಎಂಬುದಕ್ಕೆ ಸ್ಪಷ್ಟ ನಿದರ್ಶನ.

ಬಜೆಟ್‌ನ ವಿನ್ಯಾಸವನ್ನು ಮತ್ತಷ್ಟು ಸೂಕ್ಷ್ಮವಾಗಿ ಗಮನಿಸಿದರೆ, ಅದರಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಮೀಸಲಿಟ್ಟಿರುವ ಶೇ 75ರಷ್ಟು ಮೊತ್ತವನ್ನು ಶಿಕ್ಷಣದ ಸೆಸ್‌ ಮೂಲಕ ಒದಗಿಸಿರುವುದು ತಿಳಿಯುತ್ತದೆ. ಅದರಲ್ಲಿ ಶೇ 59ರಷ್ಟು ಮೊತ್ತವು ಪ್ರಾಥಮಿಕ ಶಿಕ್ಷಣದ ಸೆಸ್‌ ಮೂಲಕ ಹಾಗೂ ಶೇ 16ರಷ್ಟು ಸೆಕೆಂಡರಿ ಮತ್ತು ಹೈಯರ್‌ ಸೆಕೆಂಡರಿ ಸೆಸ್‌ ಮೂಲಕ ಪೂರೈಕೆಯಾಗುತ್ತದೆ. ಇದೇ ರೀತಿ, ಉನ್ನತ ಶಿಕ್ಷಣ ಇಲಾಖೆಯ ಬಜೆಟ್‌ನ ಶೇಕಡ 33ರಷ್ಟು ಅನುದಾನವನ್ನು ಶಿಕ್ಷಣದ ಸೆಸ್‌ ಮೂಲಕ ಒದಗಿಸಲಾಗಿದೆ.

ಮತ್ತಷ್ಟು ಒಳಹೊಕ್ಕು ಇದನ್ನು ನೋಡಿದರೆ, ಸಮಗ್ರ ಶಿಕ್ಷಣ ಅಭಿಯಾನ ಮತ್ತು ಪ್ರಧಾನಮಂತ್ರಿ ಪೋಷಣ್‌ ಅಭಿಯಾನಕ್ಕೆ ಶೇ 99.9ರಷ್ಟು ಮೊತ್ತವು ಶಿಕ್ಷಣದ ಸೆಸ್‌ ಮೂಲಕ ಬರುತ್ತದೆ. ಅಂದರೆ ಬಜೆಟ್‌ನಲ್ಲಿ ತೆಗೆದಿರಿಸಿರುವ ಅಷ್ಟೂ ಅನುದಾನವು ಸೆಸ್‌ ರೂಪದಲ್ಲೇ ಸಂಗ್ರಹಗೊಳ್ಳುತ್ತದೆ ಎಂಬುದು ತಿಳಿದುಬರುತ್ತದೆ.

ಈ ಎಲ್ಲ ಅಂಶಗಳನ್ನು ಗಮನಿಸಿದರೆ, ಒಕ್ಕೂಟ ಸರ್ಕಾರದ ಈ ಬಜೆಟ್‌, ರಾಜ್ಯ ಸರ್ಕಾರಗಳನ್ನು ಅಸಹಾಯಕ ಸ್ಥಿತಿಗೆ ದೂಡುತ್ತದೆ. ಅದರಲ್ಲೂ ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಗೊಳಿಸಲು ಸಾಧ್ಯವಾಗದ ಸ್ಥಿತಿಗೆ ನೂಕುತ್ತದೆ. ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿದ್ದರೂ ಒಕ್ಕೂಟ ಸರ್ಕಾರವು ಅದರ ಆರ್ಥಿಕ ಜವಾಬ್ದಾರಿಯಿಂದ ನುಣುಚಿಕೊಳ್ಳತೊಡಗಿದೆ. ಇದು, ಒಕ್ಕೂಟ ವ್ಯವಸ್ಥೆಯನ್ನು ಸಬಲಗೊಳಿಸುವ ಮಾರ್ಗ ಖಂಡಿತವಾಗಿಯೂ ಅಲ್ಲ.

ಲೇಖಕ: ಅಭಿವೃದ್ಧಿ ಶಿಕ್ಷಣ ತಜ್ಞ

ಚುರುಮುರಿ

ಪ್ರಜೆಗಳ ಪಾಡು

• ಸುಮಂಗಲಾ

'ಪಾಪ... ನಮ್‌ ಕುಮಾರಣ್ಣ ನಲ್ವತ್ತು ವರ್ಷದಿಂದ ಪ್ರಯತ್ನಪಟ್ಟರೂ ಒಂದ್‌ ನಿವೇಶನ ಸಿಕ್ಕಿಲ್ಲ' ಬೆಕ್ಕಣ್ಣ ಲೊಚಗುಟ್ಟಿತು.

'ಅಲ್ಲಲೇ... ಅವರಿಗೆ ಅಷ್ಟ್‌ ದೊಡ್ಡ ಮನಿ ಐತಿ, ಕೇತಗಾನಹಳ್ಳಿವಳಗೆ ಅಷ್ಟಕೊಂದು ಜಮೀನು ಐತಿ... ನೀ ಯಾವ ನಿವೇಶನದ ಕತಿ ಹೇಳಾಕೆಹತ್ತೀ?' ನನಗೆ ಕುತೂಹಲ.

'ಕುಮಾರಣ್ಣ ನಲ್ವತ್ತು ವರ್ಷ ಹಿಂದೆನೇ ಮುಡಾಕ್ಕೆ 34 ಸಾವಿರ ರೂಪಾಯಿ ತುಂಬಿದ್ನಂತ. ಇನ್ನಾ ತನಾ ಸೈಟು ಕೊಟ್ಟಿಲ್ಲಂತ. ಅಂವನ ಪಾಡೇ ಹಂಗಾದರೆ ಜನಸಾಮಾನ್ಯರಿಗೆ ಸೈಟು ಸಿಗಾಕೆ ಶತಮಾನದ ಮ್ಯಾಲೆ ಬೇಕೇನೋ' ಬೆಕ್ಕಣ್ಣ ಮತ್ತೆ ಲೊಚಗುಟ್ಟಿತು.

'ಮುಡಾ ಹಗರಣ, ವಾಲ್ಮೀಕಿ ಹಗರಣ... ಯಾಕೋ ಇತ್ತೀಚೆಗೆ ಕಾಂಗಿಗಳ 'ಕೈ' ತುಂಬಾ ಬರೀ ಹಗರಣಗಳೇ!' ಎಂದೆ.

'ಕೇಳೀಯಿಲ್ಲೋ... ವಾಲ್ಮೀಕಿ ಹಗರಣದ ಆರೋಪಿಗಳು ಒಂದು ಕಡೆ 10 ಕೆ.ಜಿ, ಇನ್ನೊಂದು ಕಡೆ 6 ಕೆ.ಜಿ. ಬಂಗಾರದ ಬಿಸ್ಕೀಟು ಬಚ್ಚಿಟ್ಟಿದ್ದರಂತ. ನೀ ಪಾರ್ಲೇಜಿ ಬಿಸ್ಕೀಟು ತಗೊಳ್ಳಾಕೆ ಹಿಂದೆ ಮುಂದೆ ನೋಡ್ತೀಯ...' ಬೆಕ್ಕಣ್ಣ ಮೂತಿಗೆ ತಿವಿಯಿತು.

'ಆ ಬಂಗಾರದ ಬಿಸ್ಕೀಟನ್ನು ಚಾದೊಳಗೆ ಅದ್ದಿಕೊಂಡು ತಿನ್ನಾಕೆ ಬರತೈತೇನು? ನಾವು ಸಾಮಾನ್ಯಪ್ರಜೆಗಳು, ನಮಗೆ ಪಾರ್ಲೇಜೀ ಬಿಸ್ಕೀಟೇ ಸಾಕೇಳು'.

'ಬರೇ ಹಗರಣದ ಬಗ್ಗೆ ಮಾತಾಡಿ ಮಂದಿಗೆ ಬ್ಯಾಸರಕಿ ಬಂದೈತಿ ಅಂತ ಡೀಕೇಶಿ ಅಂಕಲ್ಲು ಈಗ ಹೊಸ ಸುದ್ದಿ ಕೊಟ್ಟಾನಲ್ಲ ಮಾತಾಡಾಕೆ. ರಾಮನಗರ ಇನ್ನು ಮ್ಯಾಗೆ ಬೆಂಗಳೂರು ದಕ್ಷಿಣ ಅಂತೆ'.

'ಹಂಗೇ ಈ ಎಲ್ಲಾ ನಿಗಮ, ಮಂಡಳಿಗಳ ಹೆಸರೂ ಬದಲಿ ಮಾಡಿ, ಲೂಟಿ ನಿಗಮ, ಹಣ ಹೊಡೆಯೋ ನಿಗಮ, ಕೊಳ್ಳೆ ಹೊಡೆಯೋ ಮಂಡಳಿ ಅಂತೆಲ್ಲ ಹೆಸರಿಡಬಕು' ಅಂದೆ.

'ಮುಘಲರು ಇಟ್ಟ ಊರುಗಳ ಹೆಸರು ಬದಲಿ ಮಾಡೂದು ಒಂದು ಕಡಿಗೆ, ಈ ಥರಾ ಹೆಸರು ಬದಲು ಮಾಡೂದು ಇನ್ನೊಂದ್‌ ಕಡಿಗೆ. ಇನ್ನು ನೀವು ಪ್ರಜೆಗಳು ಇಂತಿಂಥ ಹೆಸರೇ ಇಟ್ಟುಕೊಳ್ಳಿರಿ ಅಂತ ಫರ್ಮಾನು ಹೊರಡಿಸೂದೊಂದೇ ಬಾಕಿ ಉಳದೈತಿ' ಬೆಕ್ಕಣ್ಣ ಹಲ್ಲುಕಿಸಿಯಿತು.

ಸಂಗತ

ಮಕ್ಕಳಿರಲಿ ಮನೆಯಲ್ಲಿ, ಮನದಲ್ಲಿ

ಮಕ್ಕಳನ್ನು ವಸತಿಶಾಲೆಗಳಿಗೆ ಸೇರಿಸುವ ಬದಲು ಮನೆಯಲ್ಲಿಯೇ ಇಟ್ಟುಕೊಂಡು ಸ್ಥಳೀಯ ಶಾಲೆಗಳಲ್ಲಿ ಓದಿಸುವ ಮನೋಭಾವವನ್ನು ಪಾಲಕರು ಬೆಳೆಸಿಕೊಳ್ಳಬೇಕು

• ಮಲ್ಲಿಕಾರ್ಜುನ ಹೆಗ್ಗಳಗಿ

ನೆರೆಮನೆಯ ಬಾಲಕನೊಬ್ಬ ನನ್ನ ಬಳಿ ಬಂದು 'ಅಜ್ಜಾ, ನಮ್ಮ ಮಮ್ಮಿ, ಡ್ಯಾಡಿ ನನ್ನನ್ನ ಮಂಗಳೂರು ರೆಸಿಡೆನ್ಷಿಯಲ್‌ ಸ್ಕೂಲಿಗೆ ಸೇರಿಸ್ತಾರಂತೆ. ನನ್ನನ್ನು ಕರ್ಕೊಂಡು ಹೋಗಿ ಶಾಲೆ, ಹಾಸ್ಟೆಲ್‌ ಎಲ್ಲ ನೋಡ್ಕೊಂಡು ಬಂದಿದ್ದಾರೆ. ಅದೇ ಶಾಲೆಗೆ ನನ್ನನ್ನ ಸೇರಿಸ್ತಾರಂತೆ. ನನಗೆ ಮಮ್ಮಿ- ಡ್ಯಾಡೀನ ಬಿಟ್ಟು ಹೋಗಕ್ಕೆ ಮನಸ್ಸಿಲ್ಲ. ನಮ್ಮ ಶಾಲೆ ಚೆನ್ನಾಗಿದೆ. ಇಲ್ಲೇ ಕಲಿಬೇಕು ಅಂತ ಆಸೆ ನನಗೆ. ನೀವು ನನ್ನ ಡ್ಯಾಡಿಗೆ ಹೇಳಿ, ನನ್ನನ್ನ ಹಾಸ್ಟೆಲ್‌ಗೆ ಸೇರಿಸದಂತೆ ಮಾಡಬೇಕು. ನಿಮ್ಮ ಮಾತನ್ನ ಅವರು ಕೇಳ್ತಾರೆ' ಎಂದು ದುಃಖದಿಂದ ಹೇಳಿದ ಮಾತು ಕೇಳಿ ನಾನು ನಲುಗಿಹೋದೆ.

ಬಾಲಕಿಯರೂ ಸೇರಿದಂತೆ ಅನೇಕ ಮಕ್ಕಳು ಮೌನದಲ್ಲಿ ಅನುಭವಿಸುವ ಆತಂಕದ ಕಥೆ ಇದು. ಮನೆಗಳಲ್ಲಿ ದಂಪತಿಗಳು ಮಾತ್ರ ಇರುತ್ತಾರೆ. ಮಕ್ಕಳು ವಸತಿಶಾಲೆಗಳಲ್ಲಿ ಇರುತ್ತಾರೆ. ಇದು ಈಗಿನ ಕೆಲವು ಕುಟುಂಬಗಳ ಚಿತ್ರಣ. ಪ್ರಾಥಮಿಕ ಶಾಲಾ ಹಂತದಿಂದಲೇ ಮಕ್ಕಳನ್ನು ದೂರದ ವಸತಿಶಾಲೆಗಳಲ್ಲಿ ಇರಿಸಿ ಓದಿಸುವ ಹುಮ್ಮಸ್ಸು ಪಾಲಕರಲ್ಲಿ ಬೆಳೆಯತೊಡಗಿದೆ. ಮಕ್ಕಳು ಒಪ್ಪಲಿ ಬಿಡಲಿ ಅವರನ್ನು ಆಗ್ರಹಪೂರ್ವಕವಾಗಿ ವಸತಿಶಾಲೆಗೆ ಸೇರಿಸುತ್ತಿದ್ದಾರೆ.

ಚೆನ್ನಾಗಿ ಓದಲಿ ಎಂಬ ಹಂಬಲದಿಂದ ವಸತಿಶಾಲೆಗಳಲ್ಲಿ ಇರಿಸಿ, ಬಹಳಷ್ಟು ಹಣ ಖರ್ಚು ಮಾಡಿ ಓದಿಸುತ್ತಾರೆ. ಕೆಲವರು ಪ್ರತಿಷ್ಠೆಗಾಗಿ, ಹೆಚ್ಚು ಶುಲ್ಕ ವಸೂಲು ಮಾಡುವ ಸ್ಕೂಲುಗಳಿಗೆ ಸೇರಿಸುತ್ತಾರೆ. ಸಾಲ ಸೋಲ ಮಾಡಿಕೊಂಡು ದೂರದ ವಸತಿಶಾಲೆಗಳಲ್ಲಿ ಇರಿಸಿ ಓದಿಸುವ ಪಾಲಕರ ಸಂಖ್ಯೆಯೂ ದೊಡ್ಡದಿದೆ.

'ಪ್ರತಿಷ್ಠಿತ' ಶಾಲೆಗಳಲ್ಲಿ ಓದುವುದರಿಂದ ಮಕ್ಕಳು ಜಾಣರಾಗುತ್ತಾರೆ, ಹೆಚ್ಚು ಅಂಕ ಪಡೆಯುತ್ತಾರೆ, ಉನ್ನತ ಅವಕಾಶಗಳು ಬರುತ್ತವೆ ಎಂಬುದು ಪಾಲಕರ ನಂಬಿಕೆ. ಇಂಥ ಭ್ರಮೆಗಳನ್ನು ಮಾರಾಟ ಮಾಡುವುದಕ್ಕೆಂದೇ ಹಲವು ಖಾಸಗಿ ಶಾಲೆಗಳು ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿವೆ. ಅವರು ಮನೆ ಮನೆಗೆ ಭೇಟಿ ನೀಡಿ, ಮಕ್ಕಳನ್ನು ವೈದ್ಯರು, ಎಂಜಿನಿಯರು ಮಾಡುತ್ತೇವೆ, ಐಎಎಸ್‌, ಕೆಎಎಸ್‌ ಪಾಸ್‌ ಮಾಡಿಸುತ್ತೇವೆ ಎಂದೆಲ್ಲ ಭರವಸೆ ಮೂಡಿಸುತ್ತಾರೆ. ಕಲಿಕೆಗೆ ಮಗುವಿನ ಆಸಕ್ತಿ, ಉತ್ಸಾಹ ಮತ್ತು ಆರೋಗ್ಯ ಬಹಳ ಮುಖ್ಯ. ಇವು ಕುಟುಂಬದೊಂದಿಗೆ ಇರುವ ಮಗುವಿಗೆ ಸಹಜವಾಗಿ ಲಭಿಸುತ್ತವೆ.

ಮಕ್ಕಳು ಮನೆಯಲ್ಲಿದ್ದರೆ ಸಂತೋಷದ ಗಾಳಿ ಸೂಸುತ್ತಿರುತ್ತದೆ. ಅವರು ಮನೆಯಲ್ಲಿದ್ದರೆ ಸೊಬಗು, ಸಂಭ್ರಮ. ಎಲ್ಲಕ್ಕಿಂತಲೂ ಮುಖ್ಯವಾಗಿ ಮಕ್ಕಳಲ್ಲಿ ಸುರಕ್ಷತೆ ಮತ್ತು ನೆಮ್ಮದಿಯ ಭಾವನೆಯನ್ನು ಹೆಚ್ಚಿಸುತ್ತದೆ. ಮಕ್ಕಳು ಜೊತೆಗಿದ್ದರೆ ಅವರ ಸಮಸ್ಯೆ, ತಲ್ಲಣಗಳಿಗೆ ತಕ್ಷಣ ಪರಿಹಾರ ಸೂಚಿಸಬಹುದು. ದೂರದ ವಸತಿಶಾಲೆಗಳಲ್ಲಿ ಇರುವ ಮಕ್ಕಳು ತಮ್ಮ ನೋವು, ಸಮಸ್ಯೆಗಳನ್ನು ಮೌನವಾಗಿ ಅನುಭವಿಸಬೇಕಾಗುತ್ತದೆ. ಇದು ಅವರ ಮಾನಸಿಕ ಮತ್ತು ದೈಹಿಕ ಹಿನ್ನಡೆಗೆ ಕಾರಣವಾಗುತ್ತದೆ.

ಸ್ನೇಹಿತರೊಬ್ಬರನ್ನು ಭೇಟಿಯಾಗಲು ಭಾನುವಾರ ಅವರ ಮನೆಗೆ ಹೋಗಿದ್ದೆ. ಮನೆಯಲ್ಲಿ ದಂಪತಿ ಮಾತ್ರ ಇದ್ದರು. ಮಕ್ಕಳು ಇರಲಿಲ್ಲ. ಸ್ನೇಹಿತನನ್ನು ವಿಚಾರಿಸಿದಾಗ, 8ನೇ ತರಗತಿಯಲ್ಲಿರುವ ಮಗ ಮಂಗಳೂರಲ್ಲಿ ಓದುತ್ತಿದ್ದಾನೆ, 5ನೇ ತರಗತಿಯಲ್ಲಿರುವ ಮಗಳು ಧಾರವಾಡದಲ್ಲಿ ಓದುತ್ತಿದ್ದಾಳೆ. ಇವರು ಓದುತ್ತಿರುವ ವಸತಿಶಾಲೆಗಳು ಬಹಳ ಚೆನ್ನಾಗಿವೆ. ಅಲ್ಲಿ ಶಿಸ್ತು ಅಂದರೆ ಶಿಸ್ತು. ವಾರದಲ್ಲಿ ಒಂದು ದಿನ ಮಾತ್ರ ಪಾಲಕರಿಗೆ ಫೋನ್‌ ಮಾಡಲು ಅವಕಾಶವಿದೆ. ಪಾಲಕರು ತಿಂಗಳ ಕೊನೆಯ ಶನಿವಾರ ಮತ್ತು ಭಾನುವಾರ ಮಕ್ಕಳನ್ನು ಭೇಟಿಯಾಗಬಹುದು, ಊಟ, ಉಪಾಹಾರ ಎಕ್ಸಲೆಂಟ್‌... ಇನ್ನೂ ಏನೇನೋ ಹೇಳುವ ತವಕದಲ್ಲಿದ್ದ ಅವರನ್ನು ತಡೆದು, ಮಕ್ಕಳು ಇಲ್ಲದೆ ಮನೆ ಬೋರ್‌ ಎನಿಸುವುದಿಲ್ಲವೇ ಎಂದು ಕೇಳಿದೆ. 'ಅವರು ಚೆನ್ನಾಗಿ ಓದಿ ಬೆಳೆಯಬೇಕು. ಇದು ಕಾಂಪಿಟಿಷನ್‌ ಯುಗ. ಮನೆಯಲ್ಲಿದ್ದರೆ ಓದುವುದಿಲ್ಲ. ಬರೀ ಆಟ, ತುಂಟತನ ಮಾಡುತ್ತಾರೆ' ಎಂದರು.

ಮಕ್ಕಳ ಚಟುವಟಿಕೆಗಳು ತುಂಟತನವಲ್ಲ, ಪ್ರಯೋಗಶೀಲತೆ. ಮಗು ಚೈತನ್ಯದ ಚಿಲುಮೆ. ಮಕ್ಕಳು ಹಟ, ಜಗಳ ಮಾಡುವುದು ಸಹಜ ಕ್ರಿಯೆ. ಆರೋಗ್ಯಪೂರ್ಣ ಮಗುವಿನ ಲಕ್ಷಣ ಅದು. ಪಾಲಕರು ಬೇಸರ ಮಾಡಿಕೊಳ್ಳದೆ ಪ್ರೀತಿಯಿಂದ ನೋಡಬೇಕು.

ಬಾಲ್ಯದಿಂದ ಹೊರಗೇ ಇದ್ದು ಓದಿ ಪದವಿ, ಸ್ನಾತಕೋತ್ತರ ಶಿಕ್ಷಣ ಪೂರ್ಣಗೊಳಿಸಿದವರು ಮನೆಯಲ್ಲಿ ಇರುವುದಕ್ಕೆ ಇಷ್ಟಪಡುವುದಿಲ್ಲ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಅಥವಾ ಉದ್ಯೋಗ ಹುಡುಕುವುದಾಗಿ ನೆಪ ಹೇಳಿ ನಗರಗಳಿಗೆ ಹೋಗಿ ಪಿ.ಜಿ.ಗಳಲ್ಲಿ ವಾಸಿಸತೊಡಗುತ್ತಾರೆ. ಪಾಲಕರು ಮತ್ತೆ ಖರ್ಚಿನ ಭಾರ ಹೊರಬೇಕು. ಮಕ್ಕಳು 10ನೇ ತರಗತಿಯವರೆಗಾದರೂ ಮನೆಯಲ್ಲಿಯೇ ಇದ್ದು ಓದಬೇಕು. ಇದರಿಂದ ಅವರೊಂದಿಗೆ ಊಟ ಮಾಡುವ, ಕಥೆ ಹೇಳುವ, ಅವರ ಮಾತು ಕೇಳಿಸಿಕೊಳ್ಳುವ ಸಕಾರಾತ್ಮಕ ಸಂವಹನ ನಡೆಯುತ್ತದೆ.

ಅನಿವಾರ್ಯ ಕಾರಣಗಳು ಇದ್ದಾಗ ಮಕ್ಕಳನ್ನು ಬೇರೆ ಕಡೆ ಇರಿಸಿ ಓದಿಸಬಹುದು. ಮಕ್ಕಳನ್ನು ಮನೆಯಲ್ಲಿಯೇ ಇಟ್ಟುಕೊಂಡು ಸ್ಥಳೀಯ ಶಾಲೆಗಳಲ್ಲಿ ಓದಿಸುವ ಮನೋಭಾವವನ್ನು ಪಾಲಕರು ಬೆಳೆಸಿಕೊಳ್ಳಬೇಕು. ಶೈಕ್ಷಣಿಕ ಸೌಲಭ್ಯಗಳು ಬಹಳಷ್ಟು ಬೆಳೆದಿವೆ. ಅವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು.

ಆರಂಭದಲ್ಲಿ ನೆನಪಿಸಿದ ನಮ್ಮ ನೆರೆಮನೆಯ ಬಾಲಕನ ಬಗ್ಗೆ ಇನ್ನಷ್ಟು ಹೇಳುವುದಿದೆ. ಅವನ ತಂದೆ ತಾಯಿಯನ್ನು ಭೇಟಿ ಮಾಡಿ ಅವರ ಮಗನ 'ಬಯಕೆ' ವಿವರಿಸಿದೆ. ಅವರು ಒಪ್ಪಿಕೊಂಡು ಸ್ಥಳೀಯ ಶಾಲೆಗೆ ಕಳಿಸುತ್ತಿದ್ದಾರೆ. ನನ್ನನ್ನು ಕಂಡಾಗಲೆಲ್ಲ ಆ ಬಾಲಕ ಸಂತೋಷದಿಂದ ನಗುತ್ತಾನೆ. ನನಗೆ ಇಮ್ಮಡಿ ಸಂತೋಷವಾಗುತ್ತದೆ.

ವಾಚಕರ ವಾಣಿ

ನೌಕರರಲ್ಲಿ ಇರಲಿ ಮಾನವೀಯತೆ

ಸಾರಿಗೆ ನಿಗಮದ ಬಸ್‌ನಲ್ಲಿ ಮಂಗಳೂರಿನಿಂದ ಕುಣಿಗಲ್‌ಗೆ ಪಾರ್ಸಲ್‌ ಒಂದನ್ನು ಕಳಿಸುವುದಿತ್ತು. ಅದಕ್ಕೆ ಒಂದು ಬಸ್‌ನ ಚಾಲಕ ₹ 500 ಕೊಡಬೇಕಾಗುತ್ತದೆ ಎಂದು ಹೇಳಿದರು. ನಾವು ಬೇಡವೆಂದು ಮತ್ತೊಂದು ಬಸ್‌ನಲ್ಲಿ ವಿಚಾರಿಸಿದೆವು. ಅವರು ₹ 400 ಕೇಳಿದರು. ನಾವು ಕಳಿಸಬೇಕಿದ್ದ ಪಾರ್ಸಲ್‌ನಲ್ಲಿನ ವಸ್ತುವಿನ ಬೆಲೆಯೇ ₹ 500 ಆಗಿರಲಿಲ್ಲ. ಅವರು ನಮ್ಮ ಪಾರ್ಸಲ್‌ ಅನ್ನು ಹೆಗಲ ಮೇಲೇನೂ ಇಟ್ಟುಕೊಂಡು ಹೋಗುವುದಿಲ್ಲ. ಹಾಗಿದ್ದರೂ ಇಷ್ಟೊಂದು ಹಣವನ್ನು ಕೇಳುವುದೇಕೆ ಎಂದು ನನಗೆ ಆಶ್ಚರ್ಯವಾಯಿತು.

ಈ ಬಗ್ಗೆ ಅವರನ್ನು ಕೇಳಿದಾಗ, 'ಇದರಲ್ಲಿ 150 ರೂಪಾಯಿಯನ್ನು ಸರ್ಕಾರಕ್ಕೇ ಕೊಡಬೇಕಾಗುತ್ತದೆ' ಎಂಬ ಉತ್ತರ ಬಂದಿತು! ಹಿಂದೆ ಒಂದು ಹಕ್ಕಿಯ ಕಾಲಿಗೆ ಓಲೆ ಕಟ್ಟಿದರೂ ನಿಸ್ವಾರ್ಥವಾಗಿ ಅದನ್ನು ಮನೆತನಕ ತಲುಪಿಸುತ್ತಿತ್ತು. ಆದರೆ ಈಗ ಕಾಲ ಎಷ್ಟು ಬದಲಾಗಿದೆ? ಸರ್ಕಾರ ನೌಕರಿ ನೀಡುವಾಗ ಬರೀ ವಿದ್ಯಾರ್ಹತೆಯನ್ನು ನೋಡದೆ ಮಾನವೀಯತೆಯನ್ನೂ ಪರಿಶೀಲಿಸಬೇಕೆಂಬುದು ನನ್ನ ಮನವಿ.

ಸುಮನ್‌, ಮಂಗಳೂರು

ಆರತಿ... ಜಾಗೃತಿ

ಜೀವನದಿ ಕಾವೇರಿ ಮಾತೆಗೆ
ಮಾಡುವರಂತೆ ಆರತಿ
ನಡೆಯಲಿ ಎಲ್ಲ
ನದಿಗಳಿಗೂ ಆರತಿ
ಅದಕ್ಕೂ ಮೊದಲು
ನಡೆಯಬೇಕು ನದಿಗಳನ್ನು
ಮಲಿನಗೊಳಿಸದಿರಲು
ಜನಜಾಗೃತಿ!

ಮ.ಗು.ಬಸವಣ್ಣ, ಮೈಸೂರು

ವಿರೋಧ ಪಕ್ಷಗಳ ನಾಯಕರಿಗೂ ಸಿಗಲಿ ಆದ್ಯತೆ

ಕೇಂದ್ರ ಸರ್ಕಾರದ ನೀತಿ ಆಯೋಗದ ಸಭೆಯಲ್ಲಿ ಇತ್ತೀಚೆಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಮೈಕ್‌ ಬಂದ್‌ ಮಾಡಿದ್ದು ನಿಜವೇ ಆಗಿದ್ದರೆ ಅದು ಸಮಂಜಸವಲ್ಲ. ಆಯಾ ರಾಜ್ಯಗಳ ಅಭಿವೃದ್ಧಿಗಾಗಿ ಮುಖ್ಯಮಂತ್ರಿಗಳ ಸಲಹೆ, ಸೂಚನೆ ಮತ್ತು ಪ್ರಸಕ್ತ ವರ್ಷದಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳು, ಅದಕ್ಕೆ ಬೇಕಾದ ಹಣಕಾಸು ವ್ಯವಸ್ಥೆಗೆ ಸಂಬಂಧಿಸಿದ ಸಭೆ ಅದಾಗಿತ್ತು. ಹೀಗಾಗಿ, ವಿಷಯ ಮಂಡನೆಗೆ ಮುಖ್ಯಮಂತ್ರಿಗಳಿಗೆ ಬೇಕಾದ ಸಮಯ ಕೊಡಬೇಕಾದದ್ದು ಸಭಾ ಆಯೋಜಕರ ಪ್ರಾಥಮಿಕ ಕರ್ತವ್ಯ. ಎನ್‌ಡಿಎ ಮೈತ್ರಿಕೂಟದ ಪಾಲುದಾರ ಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಇಪ್ಪತ್ತು ನಿಮಿಷಕ್ಕೂ ಹೆಚ್ಚಿನ ಸಮಯ ಕೊಟ್ಟು, ಮಮತಾ ಅವರಿಗೆ ಐದು ನಿಮಿಷ ನಿಗದಿ ಮಾಡಿದ್ದು ತಾರತಮ್ಯದಿಂದ ಕೂಡಿದ ನಡೆ ಎನ್ನುವುದು ಮೇಲ್ನೋಟಕ್ಕೇ ಗೊತ್ತಾಗುತ್ತದೆ.

ಇತ್ತೀಚೆಗೆ ನಡೆದ ಲೋಕಸಭೆ ಕಲಾಪದಲ್ಲೂ ವಿರೋಧ ಪಕ್ಷಗಳ ನಾಯಕರ ಮೈಕ್‌ ಬಂದ್‌ ಮಾಡಿದ್ದನ್ನು ಈ ಪ್ರಕರಣ ನೆನಪಿಸುತ್ತದೆ. ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷಕ್ಕೆ ಇರುವಷ್ಟೇ ಪ್ರಾಮುಖ್ಯ ವಿರೋಧ ಪಕ್ಷಗಳಿಗೂ ಇರುತ್ತದೆ ಮತ್ತು ಅವರ ಭಾವನೆಗಳಿಗೂ ಬೆಲೆ ಕೊಟ್ಟಾಗಲೇ ಅಭಿವೃದ್ಧಿ ಸಾಧ್ಯ ಎನ್ನುವುದನ್ನು ಮರೆಯಬಾರದು.

ಶಾಂತಕುಮಾರ್‌, ಸರ್ಜಾಪುರ

ನಮ್ಮೊಳಗಿನ ಶಾಂತಿಗಾಗಿ...

ಧ್ಯಾನದ ಮಹತ್ವ ಕುರಿತ ಸಾಹಿತಿ ದೊಡ್ಡರಂಗೇಗೌಡ ಅವರ ಲೇಖನವನ್ನು (ಸಂಗತ, ಜುಲೈ 26) ಓದಿದಾಗ, ನಾವು ಪ್ರೌಢಶಾಲೆಯಲ್ಲಿದ್ದಾಗ ನಮ್ಮ ಉಪಾಧ್ಯಾಯರು ಹೇಳಿದ ಮಾತು ನೆನಪಿಗೆ ಬಂದಿತು. ಶಾಲೆಯ ಹೊರಗೆ ಒಮ್ಮೆ ಧ್ವನಿವರ್ಧಕದಲ್ಲಿ ಜೋರಾಗಿ ಸಿನಿಮಾ ಹಾಡುಗಳು ಕೇಳಿಬರುತ್ತಿದ್ದವು. ಇದರಿಂದ ಅವರಿಗೆ ಪಾಠ ಮಾಡಲು ತೊಂದರೆ ಆಗುತ್ತಿತ್ತು. ಆದರೆ ಅವರು ಅಸಹಾಯಕರಾಗಿದ್ದರು. ಆಗ ಅವರು 'ಹೊರಗಿನ ಗಲಾಟೆಯ ಕಡೆ ಗಮನ ಕೊಡಬೇಡಿ, ಪಾಠದ ಕಡೆ ಗಮನ ಕೊಡಿ. ಆಗ ಆ ಸದ್ದು ಕೇಳಿಸುವುದಿಲ್ಲ. ಪ್ರಾಪಂಚಿಕತೆಯಲ್ಲಿ ನಾವಿರಬೇಕು, ಆದರೆ ನಮ್ಮಲ್ಲಿ ಪ್ರಾಪಂಚಿಕತೆ ಇರಬಾರದು' ಎಂದು ಹೇಳುತ್ತಿದ್ದರು.

ಈ ಮಾತಿನಲ್ಲಿ ಅದೆಂತಹ ಅಗಾಧವಾದ ಅರ್ಥವಿದೆ. ಧ್ಯಾನ ಮಾಡಲು ಹಿಮಾಲಯಕ್ಕೇ ಹೋಗಬೇಕಾಗಿಲ್ಲ. ನಾವು ಮಾಡುವ ಕೆಲಸ ಕಾರ್ಯಗಳನ್ನು ತನ್ಮಯದಿಂದ ಮಾಡಿದರೆ ಅದೇ ಧ್ಯಾನ. ಬೆಳಗಿನ ವಾಯುವಿಹಾರವನ್ನು ಏಕಾಂಗಿಯಾಗಿ ಮಾಡುತ್ತಿದ್ದರೆ, ಆಗೇನಾದರೂ ಏಕಾಗ್ರತೆಯಿಂದ ಯೋಚಿಸುತ್ತಿದ್ದರೆ, ಅದೇ ಧ್ಯಾನ. ಆಗ ಎಷ್ಟೋ ಆವಿಷ್ಕಾರಗಳು, ಜ್ಞಾನೋದಯ ಸಾಧ್ಯ. ಧ್ಯಾನ ಮಾಡಲು ನಾವು ನಮ್ಮ ಸುತ್ತಮುತ್ತ ಮೌನವನ್ನು ಹುಡುಕುವ ಬದಲು, ನಮ್ಮೊಳಗೆ ಮೌನಶಾಂತಿ ಇರುವಂತೆ ನೋಡಿಕೊಂಡರೆ ಸಾಕು. ಧ್ಯಾನಕ್ಕೆ ತಕ್ಕ ಪರಿಸರ ನಿರ್ಮಾಣವಾಗುತ್ತದೆ. ಎಲ್ಲಿ ಬೇಕಾದರೂ ಯಾವಾಗ ಬೇಕಾದರೂ ಎಷ್ಟು ಹೊತ್ತು ಬೇಕಾದರೂ ಧ್ಯಾನ ಮಾಡಬಹುದು. ಆದರೆ ಮನಸ್ಸಿನ ತುಂಬಾ ಗಲಾಟೆ, ಗಲಿಬಿಲಿ, ದುಗುಡ, ದುಮ್ಮಾನವನ್ನು ಇಟ್ಟುಕೊಂಡು ಯಾವ ಹಿಮಾಲಯಕ್ಕೆ ಹೋದರೂ ಪ್ರಯೋಜನವಿಲ್ಲ.

ಟಿ.ವಿ.ಬಿ.ರಾಜನ್‌, ಬೆಂಗಳೂರು

ಕೆಲಸದ ಅವಧಿ ವಿಸ್ತರಣೆ ಸಲ್ಲ

ಮಾಹಿತಿ ತಂತ್ರಜ್ಞಾನ (ಐ.ಟಿ) ಕ್ಷೇತ್ರದ ಉದ್ಯೋಗಿಗಳಿಗೆ ದುಡಿಮೆಯ ಅವಧಿಯನ್ನು ದಿನಕ್ಕೆ 14 ಗಂಟೆಗೆ ವಿಸ್ತರಿಸಬೇಕು ಎಂದು ಉದ್ಯಮಿಗಳು ರಾಜ್ಯ ಸರ್ಕಾರದ ಮುಂದೆ ಇರಿಸಿರುವ ಪ್ರಸ್ತಾವವು ಅಸಹಜವಾಗಿದೆ. 14 ಗಂಟೆಗಳ ಕಾಲ ಕಂಪ್ಯೂಟರ್‌ ಮುಂದೆ ಕುಳಿತು ಕೆಲಸ ಮಾಡುವುದರ ಸಾಧಕ– ಬಾಧಕಗಳನ್ನು ಅರಿತು ಸರ್ಕಾರ ಈ ಕುರಿತು ನಿರ್ಧಾರ ಕೈಗೊಳ್ಳುವುದು ಒಳಿತು. ಈಗಾಗಲೇ ಅನಿಯಂತ್ರಿತ ಕಾರ್ಯದೊತ್ತಡಕ್ಕೆ ಒಳಗಾಗಿ ಹಲವು ಉದ್ಯೋಗಿಗಳು ತೊಂದರೆ ಅನುಭವಿಸುತ್ತಿದ್ದಾರೆ.

ಐ.ಟಿ. ಉದ್ಯೋಗಿಗಳ ಕೆಲಸದ ಸಮಯದ ಬಗ್ಗೆ ಯೋಚಿಸುವವರು, ಅವರು ಅನುಭವಿಸುತ್ತಿರುವ ತೊಂದರೆಗಳ ಬಗ್ಗೆ ಚಿಂತನೆ ನಡೆಸದೇ ಇರುವುದು ವಿಷಾದನೀಯ. ಖಾಸಗಿ ವಲಯದಲ್ಲಿ ಸರ್ಕಾರ ಜಾರಿಗೊಳಿಸಿರುವ ಎಷ್ಟು ನಿಯಮಗಳನ್ನು ಕಂಪನಿಗಳು ಅನುಸರಿಸುತ್ತಿವೆ? ಈ ಬಗ್ಗೆ ಸರ್ಕಾರ ಪರಿಶೀಲಿಸಬೇಕಿದೆ. ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಬಗೆಯ ತೊಳಲಾಟಗಳನ್ನು ಅನುಭವಿಸುತ್ತಿರುವ ಉದ್ಯೋಗಿಗಳಿಗೆ ಸರ್ಕಾರದ ತುರ್ತು ಮಧ್ಯಸ್ಥಿಕೆಯ ಅಗತ್ಯವಿದೆ. ಅವರ ಯೋಗಕ್ಷೇಮ ಹಾಗೂ ಆರೋಗ್ಯಕ್ಕೆ ಅನುಗುಣವಾಗಿ ಸರ್ಕಾರ ನಿಯಮಾವಳಿಗಳನ್ನು ರೂಪಿಸಬೇಕು.

ಮಹೇಶ್‌ ಸಿ.ಎಚ್‌., ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಯುರೋಪ್‌ನಲ್ಲಿ ಕ್ಷಿಪಣಿ ನಿಯೋಜನೆ; ಅಮೆರಿಕ, ರಷ್ಯಾ ಮಧ್ಯೆ ಮತ್ತೆ ಕಲಹ?

ಶಸ್ತ್ರಾಸ್ತ್ರ ಪೈಪೋಟಿ ಆತಂಕ

ಅಮೆರಿಕ ಮತ್ತು ರಷ್ಯಾ ಎರಡೂ ಜಗತ್ತಿನ ಪ್ರಬಲ ರಾಷ್ಟ್ರಗಳು. ಅದಕ್ಕೆಂತಲೂ ಹೆಚ್ಚಾಗಿ ಭಾರಿ ಶಸ್ತ್ರಾಸ್ತ್ರ ಹೊಂದಿರುವಂಥವು. ನಿಶ್ಶಸ್ತ್ರೀಕರಣದ ಒಪ್ಪಂದಕ್ಕೆ ಬದ್ಧವಾಗಿ ಹಲವು ವರ್ಷ ಸಂಯಮದಿಂದ ಇದ್ದ ಎರಡೂ ರಾಷ್ಟ್ರಗಳು ಈಗ ಬಹಿರಂಗವಾಗಿ ಶಸ್ತ್ರಾಸ್ತ್ರ ತಯಾರಿಕೆ ಹಾಗೂ ನಿಯೋಜನೆಯಲ್ಲಿ ಪೈಪೋಟಿಗಿಳಿದಿವೆ. ಪರಸ್ಪರ ದೂಷಿಸುತ್ತಾ, ಅಣ್ವಸ್ತ್ರಗಳ ಸ್ಪರ್ಧೆಯಲ್ಲಿ ತೊಡಗಿರುವ ಈ ಎರಡು ರಾಷ್ಟ್ರಗಳ ವರ್ತನೆ ಜಾಗತಿಕ ಮಟ್ಟದಲ್ಲಿ ಆತಂಕಕ್ಕೆ ಕಾರಣವಾಗಿದೆ...

ಪ್ರಜಾವಾಣಿ ವಾರ್ತೆ

ಜರ್ಮನಿ ಸೇರಿದಂತೆ ಯುರೋಪ್‌ನ ರಾಷ್ಟ್ರಗಳಲ್ಲಿ ಕ್ಷಿಪಣಿಗಳನ್ನು ನಿಯೋಜಿಸಲು ಅಮೆರಿಕ ಮುಂದಾಗಿರುವುದು ರಷ್ಯಾವನ್ನು ಕೆರಳಿಸಿದೆ. ಒಂದು ವೇಳೆ ಅಮೆರಿಕ ಕ್ಷಿಪಣಿಗಳನ್ನು ನಿಯೋಜಿಸಿದರೆ, ಮಧ್ಯಮ ಶ್ರೇಣಿ ಅಣ್ವಸ್ತ್ರ ಕ್ಷಿಪಣಿ ತಯಾರಿಕೆಯನ್ನು ಮತ್ತೆ ಆರಂಭಿಸುವುದಾಗಿ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಎಚ್ಚರಿಸಿದ್ದಾರೆ.

ಮೂರು ದಶಕಗಳ ಹಿಂದೆ ಎರಡೂ ರಾಷ್ಟ್ರಗಳು ಒಪ್ಪಂದ ಮಾಡಿಕೊಂಡು ಯುರೋಪ್‌ನಲ್ಲಿ ಅಲ್ಪ ಮತ್ತು ಮಧ್ಯಮ ಶ್ರೇಣಿಯ ಕ್ಷಿಪಣಿಗಳನ್ನು ನಿಯೋಜಿಸುವುದನ್ನು ಸ್ಥಗಿತಗೊಳಿಸಿದ್ದವು. ಅವುಗಳ ತಯಾರಿಕೆಯನ್ನೂ ಕೈಬಿಟ್ಟಿದ್ದವು. ರಷ್ಯಾವು ಉಕ್ರೇನ್ ಮೇಲೆ ಯುದ್ಧ ಆರಂಭಿಸಿದ ನಂತರ ಎರಡೂ ರಾಷ್ಟ್ರಗಳ ನಡುವೆ ಶಸ್ತ್ರಾಸ್ತ್ರ ಪೈಪೋಟಿ ಹೆಚ್ಚಾಗಿದ್ದು, 35 ವರ್ಷಗಳ ಹಿಂದೆ ಬಳಕೆ ನಿಲ್ಲಿಸಿದ್ದ ಕ್ಷಿಪಣಿಗಳ ತಯಾರಿಕೆಗೆ ಮುಂದಾಗಿವೆ.

ಭೂಮಿಯಿಂದ ಉಡಾಯಿಸುವ ಅಲ್ಪ ಮತ್ತು ಮಧ್ಯಮ ಶ್ರೇಣಿಯ ಪರಮಾಣು ಅಸ್ತ್ರಗಳ ಮತ್ತು ಸಾಂಪ್ರದಾಯಿಕ ಶಸ್ತ್ರಾಸ್ತ್ರ (500 ಕಿ.ಮೀ ವ್ಯಾಪ್ತಿಯಿಂದ 5,500 ಕಿ.ಮೀ. ವ್ಯಾಪ್ತಿಯವರೆಗೆ) ನಿಯಂತ್ರಣ ಒಪ್ಪಂದಕ್ಕೆ (ಮಧ್ಯಮ ಶ್ರೇಣಿ ಪರಮಾಣು ಶಸ್ತ್ರಾಸ್ತ್ರ ಒಪ್ಪಂದ–ಐಎನ್‌ಎಫ್) ಅಮೆರಿಕ ಮತ್ತು ರಷ್ಯಾ 1987ರಲ್ಲಿ ಸಹಿ ಹಾಕಿದ್ದವು.

‘ಶಾಂತಿಯ ಗಿಡ ನೆಡುವುದಕ್ಕೆ ಹೆಮ್ಮೆಯೆನಿಸುತ್ತದೆ. ಇದು ಮುಂದೊಂದು ದಿನ ದೊಡ್ಡ ಮರವಾಗಿ ಬೆಳೆಯಲಿದೆ’ ಎಂದು ಸೋವಿಯತ್ ರಷ್ಯಾದ ನಾಯಕ ಮಿಖಾಯಿಲ್ ಗೊರ್ಬಚೆವ್ ಅಮೆರಿಕದ ಅಧ್ಯಕ್ಷ ರೊನಾಲ್ಡ್ ರೇಗನ್ ಅವರಿಗೆ ಒಪ್ಪಂದದ ಸಂದರ್ಭದಲ್ಲಿ ಹೇಳಿದ್ದರು.

ಒಪ್ಪಂದ 2019ರವರೆಗೆ ಚಾಲ್ತಿಯಲ್ಲಿತ್ತು. ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷರಾಗಿದ್ದಾಗ ಒಪ್ಪಂದವನ್ನು ಉಲ್ಲಂಘಿಸಿದರು. ರಷ್ಯಾ ಕೂಡ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಿದೆ ಎಂದು ಟ್ರಂಪ್ ಹೇಳಿದ್ದರು. ನ್ಯಾಟೊ ಕೂಟದ ಮಿತ್ರರಾಷ್ಟ್ರಗಳು ಕೂಡ ರಷ್ಯಾ ಒಪ್ಪಂದ ಉಲ್ಲಂಘಿಸಿದೆ ಎಂದೇ ಭಾವಿಸಿವೆ ಎಂದು ಅಮೆರಿಕ ಹೇಳಿತ್ತು. ಇದನ್ನು ರಷ್ಯಾ ನಿರಾಕರಿಸಿತ್ತು. ಒಪ್ಪಂದ ಮುರಿದು ಬಿದ್ದುದರ ಪರಿಣಾಮಗಳು ಈಗ ಪೂರ್ಣಪ್ರಮಾಣದಲ್ಲಿ ಕಾಣಿಸಿಕೊಳ್ಳಲಾರಂಭಿಸಿವೆ.

‘ಅಲ್ಪದೂರದ ಮತ್ತು ಮಧ್ಯಮ ಶ್ರೇಣಿಯ ನೆಲದಿಂದ ಉಡಾಯಿಸುವ ಕ್ಷಿಪಣಿಗಳ ತಯಾರಿಕೆಯನ್ನು ರಷ್ಯಾ ಮತ್ತೆ ಆರಂಭಿಸಲಿದೆ’ ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಸಾರ್ವಜನಿಕವಾಗಿ ಘೋಷಿಸಿದ್ದಾರೆ. ಆದರೆ, ರಷ್ಯಾ ಈಗಾಗಲೇ ಕ್ಷಿಪಣಿ ತಯಾರಿಕೆಯನ್ನು ಆರಂಭಿಸಿದ್ದು, ಅಗತ್ಯ ಬಿದ್ದರೆ ಎಲ್ಲಿ ನಿಯೋಜನೆ ಮಾಡಬೇಕು ಎನ್ನುವುದರ ಬಗ್ಗೆ ಪರಿಶೀಲಿಸುತ್ತಿದೆ ಎಂದು ಪಶ್ಚಿಮದ ರಾಷ್ಟ್ರಗಳು ಅನುಮಾನ ವ್ಯಕ್ತಪಡಿಸಿವೆ. ರಕ್ಷಣಾ ತಜ್ಞರು ಹೇಳುವಂತೆ, ರಷ್ಯಾದ ಈ ಕ್ಷಿಪಣಿಗಳು ಸಾಂಪ್ರದಾಯಿಕ ಹಾಗೂ ಪರಮಾಣು ಸಿಡಿತಲೆಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿವೆ.

ಇನ್ನೊಂದೆಡೆ, ಅಮೆರಿಕ ಕೂಡ ಇಂಥದ್ದೇ ಚಟುವಟಿಕೆಗಳಲ್ಲಿ ತೊಡಗಿದೆ. ಎಸ್‌ಎಮ್‌–6, ಟೊಮಾಹಾಕ್ಸ್ (ಈ ಹಿಂದೆ ಹಡಗುಗಳಲ್ಲಿ ಇಡುತ್ತಿದ್ದರು) ಮತ್ತು ಹೊಸ ಹೈಪರ್‌ಸಾನಿಕ್ ಕ್ಷಿಪಣಿಗಳನ್ನು 2026ರಿಂದ ತಾನು ಜರ್ಮನಿಯಲ್ಲಿ ನಿಯೋಜನೆ ಮಾಡುವುದಾಗಿ ಅಮೆರಿಕ ಜೂನ್ 10ರಂದು ಹೇಳಿದೆ.

ರಷ್ಯಾ –ಉಕ್ರೇನ್ ಯುದ್ಧದ ಕಾರಣದಿಂದ ಒಂದು ರೀತಿಯ ಉದ್ವಿಗ್ನ ವಾತಾವರಣ ಇದೆ. ಹೊಸ ಶಸ್ತ್ರಾಸ್ತ್ರ ತಯಾರಿಕೆ ಮತ್ತು ನಿಯೋಜನೆಯೊಂದಿಗೆ ಅದು ಈಗ ಮತ್ತಷ್ಟು ಹೆಚ್ಚಾಗಲಿದೆ. ರಷ್ಯಾ ಮತ್ತು ಅಮೆರಿಕ ತಮ್ಮ ಶಸ್ತ್ರಾಸ್ತ್ರ ಸಾಮರ್ಥ್ಯವನ್ನು ಉತ್ತಮಪಡಿಸಿಕೊಳ್ಳುವತ್ತ ಹೆಜ್ಜೆ ಇಟ್ಟಿವೆ. ರಾಜಕೀಯವಾಗಿ ಇರಬಹುದು, ಸೇನಾ ವಿಚಾರದಲ್ಲಿರಬಹುದು, ಇಬ್ಬರ ಪೈಕಿ ಯಾರಾದರೊಬ್ಬರು ಒಂದು ಹೆಜ್ಜೆ ಮುಂದೆ ಇಟ್ಟರೆ, ಅದರಿಂದ ಆಕ್ರೋಶಗೊಂಡು ಮತ್ತೊಬ್ಬರು ಕೂಡ ಮುಂದಡಿ ಇಡುವಂಥ ಒತ್ತಡದ ಸ್ಥಿತಿ ನಿರ್ಮಾಣವಾಗುತ್ತದೆ.

‘ಶಸ್ತ್ರಾಸ್ತ್ರದ ಯೋಜಿತ ನಿಯೋಜನೆಯು ರಷ್ಯಾ ಮತ್ತು ನ್ಯಾಟೊ ರಾಷ್ಟ್ರಗಳ ನಡುವೆ ನೇರ ಸೇನಾ ಮುಖಾಮುಖಿಯ ಸನ್ನಿವೇಶವನ್ನು ಸೃಷ್ಟಿಸುತ್ತದೆ. ಅದರಿಂದ ಉಕ್ರೇನ್‌ಗಾಗಿ ಪಶ್ಚಿಮದ ಆಯುಧಗಳನ್ನು ಸಂಗ್ರಹಿಸಲಾಗಿರುವ ಪೋಲೆಂಡ್‌ನ ನೆಲೆ ಮೇಲೆ ರಷ್ಯಾವು ದಾಳಿ ಮಾಡಬಹುದಾದ ಅಥವಾ ರಷ್ಯಾದ ರೇಡಾರ್/ಹತೋಟಿ ಕೇಂದ್ರದ ಮೇಲೆ ಅಮೆರಿಕ ದಾಳಿ ನಡೆಸುವಂಥ ಸಂದರ್ಭದ ಸೃಷ್ಟಿಗೆ ಕಾರಣವಾಗಬಹುದು’ ಎನ್ನುವುದು ವಿಶ್ವಸಂಸ್ಥೆಯ ನಿಶ್ಶಸ್ತ್ರೀಕರಣ ಸಂಶೋಧನಾ ಸಂಸ್ಥೆಯಲ್ಲಿ ಹಿರಿಯ ಸಂಶೋಧಕರಾಗಿರುವ ಆಂಡ್ರೆ ಬಕ್ಲಿತ್‌ಸ್ಕಿ ಅವರ ಅಭಿಪ್ರಾಯ.

ಸಮುದ್ರ ಅಥವಾ ವಾಯು ನೆಲೆಯಿಂದ ಉಡಾಯಿಸುವ ಕ್ಷಿಪಣಿಗಳ ಮೂಲಕ ದಾಳಿ ಮಾಡುವ ಸಾಮರ್ಥ್ಯವನ್ನು ಎರಡೂ ದೇಶಗಳು ಈಗಾಗಲೇ ಹೊಂದಿವೆ. ಅವುಗಳ ಜತೆಗೆ ನೆಲದ ಮೇಲಿಂದಲೇ ಉಡಾಯಿಸುವ ಕ್ಷಿಪಣಿಗಳೂ ಸೇರಿದರೆ, ದಾಳಿಯ ಸಾಧ್ಯತೆಗಳು ಹೆಚ್ಚಿಸುವುದಲ್ಲದೇ, ಶತ್ರುವಿನ ಪ್ರತಿರೋಧವನ್ನು ಎದುರಿಸುವ ಶಕ್ತಿಯನ್ನೂ ನೀಡುತ್ತದೆ. ಜತೆಗೆ, ಅಮೆರಿಕ ಜರ್ಮನಿಯಲ್ಲಿ ಕ್ಷಿಪಣಿಗಳನ್ನು ಇರಿಸುವುದು ತನ್ನ ಯುರೋಪ್ ಮಿತ್ರರಿಗೆ ಸೂಚನೆ ನೀಡಿದಂತೆ. ಇದರಿಂದ ಬಿಗುವಿನ ವಾತಾವರಣ ಹೆಚ್ಚಾಗಿ, ಮುಂದೆ ಪರಿಸ್ಥಿತಿ ಕೈ ಮೀರಬಹುದು ಎನ್ನುವ ಆತಂಕ ವ್ಯಕ್ತವಾಗಿದೆ.

ಅಮೆರಿಕ ಈ ರೀತಿ ಕ್ಷಿಪಣಿಗಳನ್ನು ಇರಿಸುವ ಮೂಲಕ ರಷ್ಯಾದ ನಿಯಂತ್ರಣ ಕೇಂದ್ರಗಳು, ರಕ್ಷಣಾ ನೆಲೆಗಳ ಮೇಲೆ ಗುರಿ ಇಟ್ಟ ಭಾವನೆ ಉಂಟಾಗಲು ಕಾರಣವಾಗುತ್ತದೆ. ಇದರಿಂದ ರಷ್ಯಾ ಕೂಡ ಅಮೆರಿಕವನ್ನು ಗುರಿ ಮಾಡಿ ಹೆಚ್ಚು ಕ್ಷಿಪಣಿಗಳನ್ನು ಇರಿಸಲು ಮುಂದಾಗಬಹುದು ಎಂದು ಹಂಬರ್ಗ್‌ನ ಶಾಂತಿ ಸಂಶೋಧನೆ ಮತ್ತು ಸುರಕ್ಷಾ ನೀತಿ ಸಂಸ್ಥೆಯ ಶಸ್ತ್ರಾಸ್ತ್ರ ಹತೋಟಿ ತಜ್ಞ ಉಲ್ರಿಚ್ ಕ್ಯೂನ್ ವಿಶ್ಲೇಷಿಸುತ್ತಾರೆ.

ಹೀಗಾದರೆ, ಅದು ವಿಶ್ವದ ಎರಡು ಬಲಿಷ್ಠ ರಾಷ್ಟ್ರಗಳ ನಡುವಿನ ಸಂಘರ್ಷವಾಗಿ ಮಾತ್ರವೇ ಉಳಿಯುವುದಿಲ್ಲ ಎನ್ನುವ ಆತಂಕವನ್ನೂ ಅವರು ವ್ಯಕ್ತಪಡಿಸುತ್ತಾರೆ.

ಆಧಾರ: ರಾಯಿಟರ್ಸ್, ಎಎಫ್‌ಪಿ, ಎಪಿ, ಪಿಟಿಐ, ಅಮೆರಿಕ ವಿದೇಶಾಂಗ ಇಲಾಖೆ ಅರ್ಕೈವ್, ‘ಸಿಪ್ರಿ’ 2024 ವಾರ್ಷಿಕ ವರದಿ

ಒಪ್ಪಂದದ ಹಿಂದೆ ಮುಂದೆ...

ಯುರೋಪ್ ರಾಷ್ಟ್ರಗಳಲ್ಲಿ ಮಧ್ಯಮ ಶ್ರೇಣಿಯ ಕ್ಷಿಪಣಿಗಳನ್ನು ನಿಯೋಜಿಸುವ ವಿಚಾರವು ಹಿಂದಿನಿಂದಲೂ ಎರಡೂ ರಾಷ್ಟ್ರಗಳ ನಡುವೆ ಕಿತ್ತಾಟಕ್ಕೆ ಕಾರಣವಾಗುತ್ತಿದೆ. ಶಸ್ತ್ರಾಸ್ತ್ರ ಬಳಕೆಗೆ ಕಡಿವಾಣ ಹಾಕಬೇಕು ಎನ್ನುವ ದಿಸೆಯಲ್ಲಿ 1950ರಿಂದಲೂ ಪ್ರಯತ್ನಗಳು ನಡೆಯುತ್ತಿದ್ದವು. ಆದರೆ, ಯಾವುದೂ ಯಶಸ್ಸು ಕಂಡಿರಲಿಲ್ಲ.

1962ರಲ್ಲಿ ಕ್ಯೂಬಾ ಕ್ಷಿಪಣಿ ಬಿಕ್ಕಟ್ಟಿನ ಸಂದರ್ಭದಲ್ಲಿ ಕೈಗೊಂಡಿದ್ದ ನಿರ್ಣಯದ ಪ್ರಕಾರ, ಅಮೆರಿಕವು ಟರ್ಕಿಯಲ್ಲಿ ನಿಯೋಜಿಸಿದ್ದ ಮಧ್ಯಮ ಶ್ರೇಣಿಯ ಜ್ಯುನಿಪರ್ ಕ್ಷಿಪಣಿಗಳನ್ನು ವಾಪಸ್ ಪಡೆದರೆ, ಸೋವಿಯತ್ ಒಕ್ಕೂಟ ಕ್ಯೂಬಾದಿಂದ ತನ್ನ ಕ್ಷಿಪಣಿಯನ್ನು ತೆರವುಗೊಳಿಸಿತು.

1970ರ ದಶಕದಲ್ಲಿ ಸೋವಿಯತ್ ಒಕ್ಕೂಟ ಯುರೋಪ್‌ನಲ್ಲಿ ಎಸ್‌ಎಸ್‌–20 ಮಧ್ಯಮ ಶ್ರೇಣಿ ಕ್ಷಿಪಣಿಗಳನ್ನು ನಿಯೋಜಿಸಿತು. ಈ ಸಂದರ್ಭದಲ್ಲಿ ಪಶ್ಚಿಮ ಯುರೋಪ್‌ನ ಮಿತ್ರ ರಾಷ್ಟ್ರಗಳ ಸಹಾಯಕ್ಕೆ ನಿಂತ ಅಮೆರಿಕ, ಟೊಮಹಾಕ್ಸ್ ಗುರಿ ನಿರ್ದೇಶಿತ ಕ್ಷಿಪಣಿ ಮತ್ತು ಪರ್ಶಿಂಗ್–2 ಮಧ್ಯಮ ಶ್ರೇಣಿ ಕ್ಷಿಪಣಿಗಳನ್ನು ನಿಯೋಜಿಸಿತು. ಇದೇ ವೇಳೆ, ಕ್ಷಿಪಣಿಗಳಿಗೆ ಮಿತಿ ಹೇರುವ ಉದ್ದೇಶದಿಂದ ಸೋವಿಯತ್ ಒಕ್ಕೂಟದೊಂದಿಗೆ ಮಾತುಕತೆ ನಡೆಸಲು ಮುಂದಾಯಿತು. 1981ರಲ್ಲಿ ರೊನಾಲ್ಡ್ ರೇಗನ್ ಅವರು ಅಧ್ಯಕ್ಷರಾಗುವುದರೊಂದಿಗೆ ಈ ಯತ್ನಕ್ಕೆ ವೇಗ ಸಿಕ್ಕಿತು.

‘ಸೋವಿಯತ್ ಒಕ್ಕೂಟವು ಎಸ್‌ಎಸ್‌–20 ಕ್ಷಿಪಣಿಗಳನ್ನು ವಾಪಸ್ ಪಡೆದರೆ, ಅಮೆರಿಕ ಟೊಮೊಹಾಕ್ಸ್ ಮತ್ತು ಪರ್ಶಿಂಗ್–2 ಕ್ಷಿಪಣಿಗಳನ್ನು ಯುರೋಪ್ ರಾಷ್ಟ್ರಗಳಿಂದ ತೆರವುಗೊಳಿಸಲಿದೆ’ ಎಂದು ರೇಗನ್ ಘೋಷಿಸಿದರು. ಈ ಪ್ರಸ್ತಾವದ ಬಗ್ಗೆ ಸೋವಿಯತ್ ಒಕ್ಕೂಟ ಸ್ಪಷ್ಟ ನಿರ್ಧಾರ ಕೈಗೊಳ್ಳಲಿಲ್ಲ. 1983ರಲ್ಲಿ ಅಮೆರಿಕವು ಈ ಹಿಂದೆ ಯೋಜಿಸಿದ್ದಂತೆ, ಕ್ಷಿಪಣಿಗಳನ್ನು ನಿಯೋಜಿಸಿತು. ಇದರಿಂದ ಅಸಮಾಧಾನಗೊಂಡ ಸೋವಿಯತ್ ಒಕ್ಕೂಟ ಎರಡೂ ರಾಷ್ಟ್ರಗಳ ನಡುವೆ ಪ್ರಗತಿಯಲ್ಲಿದ್ದ ಶಸ್ತ್ರಾಸ್ತ್ರ ನಿಯಂತ್ರಣ ಮಾತುಕತೆಯಿಂದ ಹೊರನಡೆಯಿತು. 1985ರ ಆರಂಭದಲ್ಲಿ ಈ ಮಾತುಕತೆಗೆ ಮತ್ತೆ ಚಾಲನೆ ಸಿಕ್ಕಿತು. ಅಮೆರಿಕ, ಸೋವಿಯತ್ ಒಕ್ಕೂಟ ಹಾಗೂ ನ್ಯಾಟೊದ ಪ್ರತಿ ದೇಶವೂ ಮಧ್ಯಮ ಶ್ರೇಣಿಯ ಕ್ಷಿಪಣಿಗಳ ಬಳಕೆಗೆ ಮಿತಿ ಹೇರುವ ವಿಚಾರ ಚರ್ಚೆಗೆ ಬಂತು. ಸೋವಿಯತ್ ಒಕ್ಕೂಟ ಏಷ್ಯಾದಲ್ಲಿ ನಿಯೋಜಿಸಿದ್ದ ಎಸ್‌ಎಸ್‌–20 ಕ್ಷಿಪಣಿಗಳನ್ನು ತೆರವುಗೊಳಿಸುವ ಉಲ್ಲೇಖ ಇಲ್ಲದಿದ್ದರೆ, ಒಪ್ಪಂದಕ್ಕೆ ಸಹಿ ಹಾಕುವುದಿಲ್ಲ ಎಂದು ಅಮೆರಿಕ ಹೇಳಿತು.

ಮುಂದಿನ 2 ವರ್ಷ ಇದೇ ವಿಚಾರವಾಗಿ ಎರಡೂ ರಾಷ್ಟ್ರಗಳ ನಡುವೆ ಚರ್ಚೆ ನಡೆಯಿತು. ಅಂತಿಮವಾಗಿ ಮಧ್ಯಮ ಶ್ರೇಣಿಯ ಕ್ಷಿಪಣಿಗಳ ಜೊತೆಗೆ ಕಡಿಮೆ ಶ್ರೇಣಿಯ ಕ್ಷಿಪಣಿಗಳನ್ನೂ ಯುರೋಪ್ ರಾಷ್ಟ್ರಗಳಿಂದ ತೆರವುಗೊಳಿಸುವ ಒಪ್ಪಂದಕ್ಕೆ ಸಮ್ಮತಿಸಿದವು.

1987ರ ಡಿ.8ರಂದು ರೇಗನ್ ಮತ್ತು ಗೊರ್ಬಚೆವ್ ಅವರು ವಾಷಿಂಗ್ಟನ್‌ನಲ್ಲಿ ಐಎನ್‌ಎಫ್ ಒಪ್ಪಂದಕ್ಕೆ ಸಹಿ ಹಾಕಿದರು. ಯುರೋಪ್ ಸೇರಿದಂತೆ ಜಾಗತಿಕ ಮಟ್ಟದಲ್ಲಿ ಅಲ್ಪ ಮತ್ತು ಮಧ್ಯಮ ಶ್ರೇಣಿಯ ಪರಮಾಣು ಸಾಮರ್ಥ್ಯದ ಕ್ಷಿಪಣಿಗಳನ್ನು ನಿಯೋಜಿಸುವುದಕ್ಕೆ ನಿರ್ಬಂಧ ವಿಧಿಸುವುದರ ಜೊತೆಗೆ ಆ ವೇಳೆಗಾಗಲೇ ನಿಯೋಜಿಸಿದ್ದ ಕ್ಷಿಪಣಿಗಳನ್ನು ತೆರವುಗಳಿಸಲು ಈ ಒಪ್ಪಂದ ಅವಕಾಶ ಕಲ್ಪಿಸಿತು. ಅಲ್ಲದೇ, ಕ್ಷಿಪಣಿಗಳ ಬಳಕೆ ಮತ್ತು ನಿಯೋಜನೆಗೆ ಸಂಬಂಧಿಸಿದಂತೆ, ಬೇರೆ ದೇಶಗಳಿಗೂ ಭೇಟಿ ಕೊಟ್ಟು ಆಂತರಿಕ ಪರಿಶೀಲನೆ ಮಾಡುವುದು ಸೇರಿದಂತೆ ವಿಸ್ತೃತವಾಗಿ ದೃಢೀಕರಣ ಮಾಡಲು ಈ ಒಪ್ಪಂದ ಅನುವು ಮಾಡಿತು.

ಅಣ್ವಸ್ತ್ರ ಸಿಡಿತಲೆಗಳ ಲೆಕ್ಕಾಚಾರ



ಚೀನಾದಿಂದಲೂ ಸ್ಪರ್ಧೆ

ಶಸ್ತ್ರಾಸ್ತ್ರಕ್ಕೆ ಸಂಬಂಧಿಸಿದ ಪೈಪೋಟಿ ಅಮೆರಿಕ ಮತ್ತು ರಷ್ಯಾದ ನಡುವೆ ಮಾತ್ರ ನಡೆಯುತ್ತಿಲ್ಲ. ಜಾಗತಿಕವಾಗಿ ದೊಡ್ಡ ಆರ್ಥಿಕ ಶಕ್ತಿಯಾಗುತ್ತಿರುವ ಚೀನಾ ಕೂಡ ಸ್ಪರ್ಧೆಯಲ್ಲಿದೆ ಎಂಬ ಅಭಿಪ್ರಾಯವನ್ನೂ ರಕ್ಷಣಾ ತಜ್ಞರು ವ್ಯಕ್ತಪಡಿಸುತ್ತಾರೆ.

ಅಮೆರಿಕದ ರಕ್ಷಣಾ ಇಲಾಖೆ ಪ್ರಕಾರ, 300 ಕಿ.ಮೀ ನಿಂದ 3,000 ಕಿ.ಮೀ ದೂರದವರೆಗೆ ಸಾಗುವ ಸಾಮರ್ಥ್ಯ ಹೊಂದಿರುವ 2,300 ಕ್ಷಿಪಣಿಗಳು ಮತ್ತು 3,000 ಕಿ.ಮೀನಿಂದ 5,000 ಕಿ.ಮೀ ವ್ಯಾಪ್ತಿಯ 500 ಕ್ಷಿಪಣಿಗಳು ಚೀನಾದ ಬಳಿ ಇವೆ.

2019ರಲ್ಲಿ ಡೊನಾಲ್ಡ್ ಟ್ರಂಪ್ ರಷ್ಯಾದೊಂದಿಗಿನ ಒಪ್ಪಂದದಿಂದ ಹಿಂದೆ ಸರಿಯಲು ಚೀನಾದ ಕ್ಷಿಪಣಿಗಳ ಸಾಮರ್ಥ್ಯದ ಬಗೆಗಿನ ಕಳವಳವೂ ಒಂದು ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ. ಏಷ್ಯಾದಲ್ಲಿರುವ ತನ್ನ ಮಿತ್ರ ರಾಷ್ಟ್ರಗಳಲ್ಲಿ ಮಧ್ಯಮ ಶ್ರೇಣಿಯ ಕ್ಷಿಪಣಿಗಳನ್ನು ನಿಯೋಜಿಸಲು ಅಮೆರಿಕ ಸಿದ್ಧತೆ ನಡೆಸಿದೆ. ಏಪ್ರಿಲ್‌ನಲ್ಲಿ ಫಿಲಿಪ್ಪೀನ್ಸ್‌ನಲ್ಲಿ ನಡೆದಿದ್ದ ಸೇನಾ ಸಮರಾಭ್ಯಾಸದಲ್ಲಿ ಈ ಹಿಂದೆ ನಿರ್ಬಂಧಿಸಲಾಗಿದ್ದ, ಮಧ್ಯಮ ಶ್ರೇಣಿಯ ಕ್ಷಿಪಣಿಗಳನ್ನು ಅದು ನಿಯೋಜಿಸಿತ್ತು.

ಇದೀಗ ನಡೆಯುತ್ತಿರುವ ಶಸ್ತ್ರಾಸ್ತ್ರ ಪೈಪೋಟಿ ರಷ್ಯಾ ಹಾಗೂ ಅಮೆರಿಕ ನಡುವಣ ಸ್ಪರ್ಧೆಯಾಗಿ ಉಳಿದಿಲ್ಲ. ಚೀನಾ ಮಾತ್ರವಲ್ಲದೆ, ದಕ್ಷಿಣ ಕೊರಿಯಾ, ಜಪಾನ್‌ನಂತಹ ಏಷ್ಯಾದಲ್ಲಿರುವ ಅಮೆರಿಕದ ಮಿತ್ರ ರಾಷ್ಟ್ರಗಳು ಕೂಡ ಇದರಲ್ಲಿ ಭಾಗಿಯಾಗುವ ಸಾಮರ್ಥ್ಯ ಹೊಂದಿವೆ’ ಎಂಬುದು ಉಲ್ರಿಚ್ ಕ್ಯೂನ್ ಪ್ರತಿಪಾದನೆ.

‘ಈಗ ಅಮೆರಿಕ ಮತ್ತು ರಷ್ಯಾಗಳು 1987ರ ಮಾದರಿಯ ಒಪ್ಪಂದಕ್ಕೆ ಬರುವ ಸಾಧ್ಯತೆ ಕ್ಷೀಣ. ಚೀನಾದ ಕಾರಣಕ್ಕೆ ಅಮೆರಿಕವಂತೂ ಇದಕ್ಕೆ ಒಪ್ಪಲಾರದು’ ಎಂದು ಬಕ್ಲಿತ್‌ಸ್ಕಿ ವಿಶ್ಲೇಷಿಸುತ್ತಾರೆ.

‘ಹೇಳು ಗೆಳತಿ’ಯಲ್ಲಿ ಹಳೆ ಕಾಲದ ನೆನಪು

ಮಯೂರಿ ನಟರಾಜ್; ವಿಹಾನ್

ಪರಂವಃ ಸ್ಟುಡಿಯೋಸ್ ಅಡಿಯಲ್ಲಿ ರಕ್ಷಿತ್ ಶೆಟ್ಟಿ ನಿರ್ಮಾಣದ ‘ಇಬ್ಬನಿ ತಬ್ಬಿದ ಇಳೆಯಲಿ’ ಚಿತ್ರದ ‘ಹೇಳು ಗೆಳತಿ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ‘ಪಂಚತಂತ್ರ’ ಚಿತ್ರದ ಮೂಲಕ ಗಮನ ಸೆಳೆದಿದ್ದ ವಿಹಾನ್‌ಗೆ ಅಂಕಿತ ಅಮರ್ ಜೋಡಿಯಾಗಿದ್ದಾರೆ.

ವೀಕ್ಷಕರನ್ನು 20 ವರ್ಷಗಳ ಹಿಂದಕ್ಕೆ ಕರೆದೊಯ್ಯುವ ಈ ಹಾಡಿನ ದೃಶ್ಯಗಳು ಗಮನಸೆಳೆಯುವಂತಿವೆ. ಗಗನ್ ಬಡೇರಿಯಾ ಅವರು ಸಂಗೀತ ಸಂಯೋಜಿಸಿರುವ ಈ ಗೀತೆಗೆ ಮತ್ತೋರ್ವ ಸಂಗೀತ ನಿರ್ದೇಶಕ ಚರಣ್ ರಾಜ್ ಗಾಯನವಿದೆ. ನಾಗಾರ್ಜುನ್ ಶರ್ಮಾ ಬರೆದಿರುವ ‘ಹಲವಾರಿದೆ ಬಣ್ಣ ನೆನಪೊಳಗೆ’ ಎಂಬ ಸಾಹಿತ್ಯ ನಾಯಕ ಮತ್ತು ನಾಯಕಿಯ ಸುಮಧುರ ಪ್ರೇಮವನ್ನು ಕಟ್ಟಿಕೊಡುತ್ತಿದೆ. ಶ್ರೀವತ್ಸನ್ ಸೆಲ್ವರಾಜನ್ ಛಾಯಾಚಿತ್ರಗ್ರಹಣವಿದೆ.

‘ಕಿರಿಕ್ ಪಾರ್ಟಿ’ ಹಾಗೂ ‘ಅವನೇ ಶ್ರೀಮನ್ನಾರಾಯಣ’ ಚಿತ್ರಗಳಲ್ಲಿ ಬರಹಗಾರರಾಗಿ ಗುರುತಿಸಿಕೊಂಡಿದ್ದ ಚಂದ್ರಜಿತ್ ಬೆಳ್ಳಿಯಪ್ಪ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ತೆಲುಗಿನ ಸೂಪರ್ ಹಿಟ್ ‘ಗೀತಾಂಜಲಿ’ ಸೇರಿದಂತೆ ಅನೇಕ ಚಿತ್ರಗಳಲ್ಲಿ ನಟಿಸಿರುವ ಗಿರಿಜಾ ಶೆಟ್ಟರ್ ಬಹಳ ವರ್ಷಗಳ ನಂತರ ಅಭಿನಯಕ್ಕೆ ಮರಳಿ ಬಂದಿದ್ದಾರೆ. ಮಯೂರಿ ನಟರಾಜ್ ಕೂಡ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಹಾಡಾಯ್ತು ‘ಶೆಡ್ಡಿಗೆ ಹೋಗಣ ಬಾ’!

ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಬಹಳ ಟ್ರೆಂಡ್ ಆಗಿದ್ದ ಪದ ‘ಶೆಡ್ಡಿಗೆ ಹೋಗಣ ಬಾ’. ಇದೇ ಪದವನ್ನು ಸಾಹಿತ್ಯವಾಗಿಸಿಕೊಂಡು ಚಿತ್ರಗೀತೆಯೊಂದು ಚಿತ್ರೀಕರಣಗೊಂಡಿದೆ! ನಟ ದರ್ಶನ್ ಬಂಧನ ಪ್ರಕರಣದ ನಂತರ ಜನಪ್ರಿಯವಾದ ಈ ಪದವನ್ನು ‘ಮೆಜೆಸ್ಟಿಕ್–2’ ಚಿತ್ರದಲ್ಲಿ ಗೀತೆಯಾಗಿಸಿಕೊಳ್ಳಲಾಗಿದೆ.

‘ಮೆಜೆಸ್ಟಿಕ್’ ನಟ ದರ್ಶನ್‌ಗೆ ಖ್ಯಾತಿ ತಂದುಕೊಟ್ಟ ಚಿತ್ರ. ದಶಕಗಳ ನಂತರ ಅದೇ ರೀತಿಯ ಕಥೆಯುಳ್ಳ ‘ಮೆಜೆಸ್ಟಿಕ್-2’ ಚಿತ್ರ ಸೆಟ್ಟೇರಿದ್ದು ಗೊತ್ತೇ ಇದೆ. ‘ಮೆಜೆಸ್ಟಿಕ್’ ಚಿತ್ರದಲ್ಲಿ ಕಥೆಗಾರರಾಗಿದ್ದ ನಿರ್ದೇಶಕ ರಾಮು ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ‘ಶೆಡ್ಡಿಗೆ ಹೋಗಣ ಬಾ, ಕುಂಟೆಬಿಲ್ಲೆ ಆಡೋಣ ಬಾ’ ಎಂದು ನಿರ್ದೇಶಕರೇ ಸಾಹಿತ್ಯ ಬರೆದಿದ್ದು, ಗಾಯಕಿ ಮೇಘನಾ ಹಳ್ಳಿಹಾಳ ದನಿಯಾಗಿದ್ದಾರೆ. ಸಂತೋಷ್ ನೃತ್ಯ ಸಂಯೋಜನೆ ಹೊಂದಿರುವ ಈ ಗೀತೆ ಇತ್ತೀಚೆಗಷ್ಟೇ ಚಿತ್ರೀಕರಣಗೊಂಡಿದೆ.

ನಿರ್ಮಾಪಕ, ವಿತರಕ ಶಿಲ್ಪಾ ಶ್ರೀನಿವಾಸ್ ಅವರ ಪುತ್ರ ಭರತ್ ಈ ಚಿತ್ರದ ಮೂಲಕ ನಾಯಕನಾಗಿ ಪರಿಚಯವಾಗುತ್ತಿದ್ದಾರೆ. ಅಮ್ಮಾ ಎಂಟರ್ ಪ್ರೈಸಸ್ ಮೂಲಕ ಚಿತ್ರದುರ್ಗದ ಹೆಚ್.ಆನಂದಪ್ಪ ಅವರು ನಿರ್ಮಿಸುತ್ತಿರುವ ಈ ಚಿತ್ರದಲ್ಲಿ ನಾಯಕ ದರ್ಶನ್ ಅವರ ಅಭಿಮಾನಿಯಾಗಿ ಕಾಣಿಸಿಕೊಂಡಿದ್ದಾರೆ. ನಟ ದರ್ಶನ್ ಮೇಲಿನ ಅಭಿಮಾನದ ಗೀತೆ ಎಂದಿದೆ ಚಿತ್ರತಂಡ.

ರೌಡಿಸಂ ಹಾಗೂ ಆ್ಯಕ್ಷನ್ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ನಾಯಕಿಯಾಗಿ ನಟಿ ಸಂಹಿತಾ ವಿನ್ಯಾ ಕಾಣಿಸಿಕೊಂಡಿದ್ದಾರೆ. ಹಿರಿಯನಟಿ ಶ್ರುತಿ ತಾಯಿಯ ಪಾತ್ರದಲ್ಲಿದ್ದಾರೆ. ವಿನು ಮನಸು ಸಂಗೀತ ನಿರ್ದೇಶನವಿದ್ದು, ವೀನಸ್ ಮೂರ್ತಿ ಛಾಯಾಚಿತ್ರಗ್ರಹಣವಿದೆ.

ಭರತ್, ಸಂಹಿತಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಹೇಳುವ ಮುನ್ನ ಚೆನ್ನಾಗಿ ಕೇಳಿಸಿಕೊಳ್ಳಿ

ನುಡಿ ಬೆಳಗು

ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಪರಿಣಾಮಕಾರಿ ಸಂವಹನದ ಕುರಿತು ತರಬೇತಿ ನೀಡುವಾಗ ಸಾಮಾನ್ಯವಾಗಿ ಒಂದು ಆಟ ಆಡಿಸುತ್ತಾರೆ. ಹತ್ತು ಜನರನ್ನು ವೇದಿಕೆಯ ಮೇಲೆ ಕರೆದು ಸ್ವಲ್ಪ ದೂರ ದೂರದಲ್ಲಿ ಸಾಲಾಗಿ ನಿಲ್ಲಿಸಿ, ಮೊದಲ ವ್ಯಕ್ತಿಯ ಕಿವಿಯಲ್ಲಿ ಒಂದು ವಾಕ್ಯವನ್ನು ಹೇಳಲಾಗುತ್ತದೆ. ಉದಾಹರಣೆಗೆ ‘ನಾನು ಇಂದು ಮನೆಯಿಂದ, ಸಿದ್ಧನಾಗಿ ಆಟೋದಲ್ಲಿ ಆಫೀಸಿಗೆ ಹೋದೆ’ ಎಂಬುದು ಆ ವಾಕ್ಯ ಎಂದಿಟ್ಟುಕೊಳ್ಳಿ. ಇದನ್ನು ಮೊದಲನೇ ವ್ಯಕ್ತಿ ಎರಡನೆಯ ವ್ಯಕ್ತಿಯ ಕಿವಿಯಲ್ಲಿ ಉಸುರಬೇಕು. ಹೀಗೆ ಈ ಸಂವಹನ ಪಿಸು ಮಾತಿನಲ್ಲಿ ಕೊನೆಯ ವ್ಯಕ್ತಿಯನ್ನು ತಲುಪಬೇಕು. ಕೊನೆಯ ವ್ಯಕ್ತಿ ತಾನು ಕೇಳಿಸಿಕೊಂಡಿದ್ದನ್ನು ಗಟ್ಟಿಯಾಗಿ ಎಲ್ಲರಿಗೂ ಕೇಳುವಂತೆ ಹೇಳಬೇಕು. ಹೆಚ್ಚಿನ ಸಂದರ್ಭಗಳಲ್ಲಿ ಈ ಸರಳ ವಾಕ್ಯ ಕೊನೆಯ ವ್ಯಕ್ತಿಯನ್ನು ತಲುಪುವಾಗ ಸಂಪೂರ್ಣವಾಗಿ ವ್ಯತಿರಿಕ್ತ ಅರ್ಥವನ್ನೇ ಪಡೆದುಕೊಂಡಿರುತ್ತದೆ. ಮೇಲಿನ ಉದಾಹರಣೆಯ ವಾಕ್ಯ ಕೊನೆಯ ವ್ಯಕ್ತಿಯ ಬಾಯಲ್ಲಿ ‘ನಾನು ಆಫೀಸಿನಿಂದ ಆಟೋದಲ್ಲಿ ಮನೆಗೆ ಹೊರಟೆ’ ಎಂದು ತಿರುವು ಮುರುವಾಗಿ ಬಿಡುವ ಸಾಧ್ಯತೆಯೂ ಇದೆ.

ಏಕೆ ಹೀಗೆ? ಇದು ನಮ್ಮೆಲ್ಲರಲ್ಲೂ ಕಂಡು ಬರುವ ಪರಿಣಾಮಕಾರಿ ಸಂವಹನ ಕೌಶಲದ ಕೊರತೆಯ ಫಲ. ಪರಿಣಾಮಕಾರಿ ಸಂವಹನದಲ್ಲಿ ಹೇಳುವುದರಷ್ಟೇ ಮುಖ್ಯ, ಕೇಳಿಸಿಕೊಳ್ಳುವುದು. ಕೇಳಿಸಿಕೊಳ್ಳುವುದು ಪರಿಣಾಮಕಾರಿ ಸಂವಹನದ ಅತ್ಯಂತ ಪ್ರಮುಖ ಅಂಗ. ಇದಕ್ಕೆ ಪ್ರಕೃತಿ ನಮ್ಮ ದೇಹದಲ್ಲಿಯೇ ಒಂದು ಸೂತ್ರವನ್ನು ನೀಡಿದೆ. ನಮಗೆಲ್ಲರಿಗೂ ಇರುವುದು ಒಂದು ಬಾಯಿ ಹಾಗೂ ಎರಡು ಕಿವಿಗಳು. ಅಂದರೆ ನಾವು ಎಷ್ಟು ಮಾತಾಡುತ್ತೇವೆಯೋ, ಅದರ ಎರಡು ಪಟ್ಟು ಕೇಳಿಸಿಕೊಳ್ಳಬೇಕು ಎನ್ನುವುದು ಈ ಸೂತ್ರದ ಅರ್ಥ. ಆದರೆ ನಮ್ಮೆಲ್ಲರಿಗೂ ನಾವು ಹೇಳುವುದನ್ನು ಬೇರೆಯವರು ಕೇಳಿಸಿಕೊಳ್ಳಬೇಕೆಂಬ ಕಾತರವಿರುತ್ತದೆ. ಆದರೆ ನಮಗೆ ಬೇರೆಯವರು ಹೇಳುವುದನ್ನು ಕೇಳಿಸಿಕೊಳ್ಳುವ ತಾಳ್ಮೆಯೇ ಇರುವುದಿಲ್ಲ.

ತಾಳ್ಮೆಯಿಂದ ಇನ್ನೊಬ್ಬರ ಮಾತಿಗೆ ಸರಿಯಾಗಿ ಕಿವಿಗೊಟ್ಟದ್ದೇ ಆದರೆ ಬಹುಪಾಲು ಸಮಸ್ಯೆಗಳು ಉದ್ಭವಿಸುವುದೇ ಇಲ್ಲ. ಮನೆಯಾಗಿರಬಹುದು, ನಾವು ಕೆಲಸ ಮಾಡುವ ಕಚೇರಿಯಾಗಿರಬಹುದು, ಸಂಘ ಸಂಸ್ಥೆಗಳೇ ಇರಬಹುದು, ಎಲ್ಲ ಕಡೆಯಲ್ಲೂ ನಾವು ಇನ್ನೊಬ್ಬರ ಮಾತನ್ನು ಸರಿಯಾಗಿ ಕೇಳಿಸಿಕೊಳ್ಳುವ ಸಂವಹನದ ಮುಖ್ಯ ಅಗತ್ಯವನ್ನು ರೂಢಿಸಿಕೊಳ್ಳಲೇಬೇಕು. ಇದರ ಜೊತೆಗೆ ಇನ್ನೊಬ್ಬರು ಹೇಳಿದ್ದನ್ನು ನಾವು ಹೇಗೆ ಅರ್ಥ ಮಾಡಿಕೊಳ್ಳುತ್ತೇವೆ ಎಂಬುದು ಸಹ ಅಷ್ಟೇ ಮುಖ್ಯ. ಸದಾ ಇನ್ನೊಬ್ಬರು ಆಡುವ ಮಾತುಗಳನ್ನು ಚಿತ್ತವಿಟ್ಟು ಆಲಿಸಿ, ಅರ್ಥೈಸಿಕೊಂಡು ನಂತರವೇ ಪ್ರತಿಕ್ರಿಯಿಸಬೇಕು. ಅರ್ಧಂಬರ್ಧ ಕೇಳಿಸಿಕೊಂಡರೆ, ಅಥವಾ ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದಿದ್ದರೆ, ಅದು ಅವಸರದ ಅಪಾಯಕಾರಿ ಪ್ರತಿಕ್ರಿಯೆಗೆ ಕಾರಣವಾಗಬಹುದು. ಬಹುಪಾಲು ಮಂದಿ ಪರಿಣಾಮಕಾರಿ ಸಂವಹನವೆಂದರೆ ನಾವು ಚೆನ್ನಾಗಿ ಹೇಳುವುದು ಮಾತ್ರ ಎಂದುಕೊಂಡಿದ್ದಾರೆ. ಚೆನ್ನಾಗಿ ಕೇಳಿಸಿಕೊಳ್ಳುವವರು ಇದ್ದಾಗ ಮಾತ್ರ ನಮ್ಮ ಸಂವಹನ ಅರ್ಥಪೂರ್ಣವಾಗಲು, ಪರಿಪೂರ್ಣವಾಗಲು ಸಾಧ್ಯ. ಆದ್ದರಿಂದ ಸರಿಯಾಗಿ ಕೇಳಿಸಿಕೊಳ್ಳುವ ಕಲೆಯನ್ನು ನಾವು ಸದಾ ಕರಗತ ಮಾಡಿಕೊಳ್ಳಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಜುಲೈ 29, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ನವಮಿ ಗಂ. 17-56 ನಕ್ಷತ್ರ: ಭರಣಿ ಗಂ. 10-55 ಯೋಗ: ಗಂಡ ಗಂ. 17-55 ಕರಣ: ತೈತಿಲ ಗಂ. 6-40, ಕರ್ಕಾಟಕ ಮಾಸದ 13 ನೇ ದಿನ, ಮಳೆನಕ್ಷತ್ರ: ಪುಷ್ಯ 3.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-19 ಸೂರ್ಯಾಸ್ತ : 06-55
ಮುಸ್ಲಿಂ ದಿನಾಂಕ : 19 ಮೊಹರಮ್, ಅದೃಷ್ಟ ಸಂಖ್ಯೆ : 5, 8

ಮೇಷ: ಕಾಗದ ಪತ್ರಗಳ ಬರವಣಿಗೆಗಾರರಿಗೆ ಮತ್ತು ಕಂಪ್ಯೂಟರ್ ಕೆಲಸಗಾರರಿಗೆ ತೃಪ್ತಿಕರ ದಿನ. ಬಾಲ್ಯದಲ್ಲಿ ಕಲಿತ ಕೆಲ ವಿಷಯಗಳು ಈಗ ಉಪಯೋಗಕ್ಕೆ ಬರಲಿವೆ. ಶುಭ ಕಾರ್ಯಗಳಿಗೆ ರಾಹುಕಾಲದ ನಂತರ ಪ್ರಯಾಣ ಬೆಳೆಸಿ.

ವೃಷಭ: ದಾಂಪತ್ಯದಲ್ಲಿ ತಗ್ಗಿ-ಬಗ್ಗಿ ನಡೆಯುವುದನ್ನು ಕಲಿಯಿರಿ. ಇಲ್ಲವಾದಲ್ಲಿ ವಿರಸಕ್ಕೆ ಕಾರಣವಾಗುವುದು. ಪೊಲೀಸ್ ಅಧಿಕಾರಿಗಳಿಗೆ ತುರ್ತು ಕೆಲಸ ಒದಗಿ ಬರುವುದು. ವೃತ್ತಿ ಹಾಗೂ ವೈಯಕ್ತಿಕ ಜೀವನ ತೃಪ್ತಿ ಎನಿಸಲಿದೆ.

ಮಿಥುನ: ಸಾಮರ್ಥ್ಯ, ದಕ್ಷತೆ, ಸೇವಾ ಮನೋಭಾವಗಳಿಂದ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆ ಸಿಗಲಿದೆ. ಹಣಕಾಸಿನ ತಾಪತ್ರಯಗಳು ಶೀಘ್ರ ಪರಿಹಾರವಾಗುವುದು. ಕಾರ್ಯಕ್ಷೇತ್ರದಲ್ಲಿ ಕೆಲಸದ ಹೊರೆ ಬೆಟ್ಟದಂತೆ ಇರುವುದು.

ಕರ್ಕಾಟಕ: ಯೋಜನೆ ಹಾಗೂ ಅವುಗಳ ಬೆಳವಣಿಗೆಯ ಬಗ್ಗೆ ಸಂಬಂಧಪಟ್ಟವರಲ್ಲಿ ಚರ್ಚೆ ನಡೆಸಿ ಮುಂದಿನ ಹಂತವನ್ನು ಮುಟ್ಟುವಿರಿ. ಮನೆ ಕಟ್ಟುವ ಕೆಲಸ ದೇವರ ಕೃಪೆಯಿಂದ ನಿರ್ವಿಘ್ನವಾಗಿ ಮುಂದುವರಿಯಲಿದೆ.

ಸಿಂಹ: ಮನರಂಜನೆ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಮನಸ್ಸಿಗೆ ಸಂತೋಷ ಉಂಟಾಗುವುದು. ಕೌಟುಂಬಿಕ ವಿಷಯಗಳತ್ತ ಹೆಚ್ಚು ಗಮನಹರಿಸಬೇಕಾಗುವುದು. ಹೊಸ ವಾಹನ ಖರೀದಿಸುವ ಬಯಕೆ ಈಡೇರಲಿದೆ.

ಕನ್ಯಾ: ಆಸಕ್ತಿಕರ ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡರೆ ಹೊಸ ಯೋಜನೆಗಳಿಗೆ ಸಹಕಾರಿ. ಕುಟುಂಬದ ಹಿರಿಯರು ಮಾಡಿದ ಪುಣ್ಯದ ಫಲಗಳು ಸಿಗಲಿವೆ. ಹಳೆಯ ಯೋಜನೆಗಳಿಗೆ ಜೀವ ಕೊಡಲು ನಿಶ್ಚಯಿಸುವಿರಿ.

ತುಲಾ: ಆಸ್ತಿ ವ್ಯವಹಾರಗಳನ್ನು ನೋಡಿಕೊಳ್ಳಲು ಸಹೋದರರ ಉತ್ತಮ ಸಹಕಾರ ದೊರೆಯುವುದು. ವಾದ ವಿವಾದಗಳು ನಡೆದರೂ ಕಾರ್ಯ ಸಾಧನೆಗೆ ಅಡ್ಡಿಯಾಗದು. ವಾಣಿಜ್ಯ ಬೆಳೆಗಾರರಿಗೆ ಉತ್ತಮ ಬೆಲೆ ದೊರಕಲಿದೆ.

ವೃಶ್ಚಿಕ: ಸದಾಕಾಲ ಕಾರ್ಯ ಪ್ರವೃತ್ತರಾಗಿ, ತಪ್ಪುಗಳನ್ನು ಮಾಡದೇ ಸರಿಯಾದ ದಾರಿಯಲ್ಲಿ ದುಡಿಯುವ ನಿಮಗೆ ಫಲಗಳು ಅನುಭವಕ್ಕೆ ಬರಲಿವೆ. ನೂತನ ಉದ್ಯೋಗ ದೊರೆತು ಸಮಾಧಾನವಾಗುವುದು.

ಧನು: ಅಧ್ಯಾಪಕ ವರ್ಗದವರಿಗೆ ವಿದ್ಯಾರ್ಥಿಗಳ ಮೆಲುಗೈಯಿಂದ ಗೌರವ ಸಿಗುವುದು. ಮೇಲಧಿಕಾರಿಗಳಿಗೆ ಜವಾಬ್ದಾರಿಯುತ ನಡೆಯಿಂದಾಗಿ ನಂಬಿಕೆ ಹೆಚ್ಚಾಗಲಿದೆ. ಹಿರಿಯರ ಶುಶ್ರೂಷೆಯ ಬಗ್ಗೆ ಗಮನಹರಿಸಿ.

ಮಕರ: ನ್ಯಾಯಾಲಯದ ವಿಚಾರಗಳಲ್ಲಿ ಮಧ್ಯಸ್ಥಿಕೆ ಅಥವಾ ರಾಜಿಯ ಮನೋಭಾವ ಕಾರ್ಯದ ಅನುಕೂಲಕ್ಕೆ ಸಾಧಕ. ನಿಮ್ಮ ಸರ್ವತೋಮುಖ ಅಭಿವೃದ್ಧಿಗೆ ಸೋದರವರ್ಗದವರ ಬೆಂಬಲ ಸಿಗಲಿದೆ.

ಕುಂಭ: ಸದ್ಯದ ಪರಿಸ್ಥಿತಿಯಲ್ಲಿ ಹಣಕಾಸಿನ ಸ್ಥಿತಿ ಗತಿಗಳನ್ನು ನೋಡಿಕೊಂಡು ನಿವೇಶನವನ್ನು ಖರೀದಿಸುವ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತ. ಕುಟುಂಬದಲ್ಲಿ ಉಂಟಾಗಿದ್ದ ಕಲಹ ದೂರಾಗಲಿದೆ.

ಮೀನ: ಕಾರ್ಯ ನಿಮಿತ್ತ ಕುಟುಂಬದಲ್ಲಿ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆ, ಸಮಾಧಾನ ಇರಲಿ. ಅನವಶ್ಯಕ ತಿರುಗಾಟವಿದ್ದರೂ ರಿಯಲ್ ಎಸ್ಟೇಟ್ ಏಜೆಂಟರಿಗೆ ಅಧಿಕ ಲಾಭ. ಪ್ರತಿಭೆಗೆ ತಕ್ಕಂಥ ಪ್ರತಿಫಲ ಸಿಗುವುದು.

ಪದಬಂಧ 5756

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಮುನಿಸು ಮಾಡಿಕೊಂಡಾಗ ತಪಸ್ವಿ ಕಾಣುವನೇ? (2)
3.ನೆಲ ಅಗೆಯುವ ಸಾಧನ (3)
5.ಮದದೊಳಗಿನ ಜೇನು (4)
7.ಕೊಡು ಕೊಡು ಎನ್ನುತ್ತಿರುವ ಅಜ್ಜ! (2)
9.ತಾಯಿಯ ತಾಯಿ (4)
10.ಅಲೆಯುತ್ತಿರುವಾಗ ಕಾಣಿಸಿದ ತರಂಗ (2)
11.ತಡಸಲು ನೋಡುವಾಗ ಅಗಿರುವ ನಿಧಾನ (2)
12.ಮನಸ್ಸಿನ ಬಯಕೆ (4)
13.ಮೇಲಕ್ಕೆ ಹೋಗುವಾಗ ಕಾಣಿಸಿದ ಆಡು (2)
14.ರಾಮನ ಚರಿತ್ರೆಯನ್ನು ಕುರಿತ ಮಹಾಕಾವ್ಯ (4)
16.ವಿಷ್ಣುವಿನ ಮೂರನೆಯ ಅವತಾರ (3)
17.ಗಂಡು ಕೋಳಿಯಿದು (2)

ಮೇಲಿಂದ ಕೆಳಕ್ಕೆ
1.ಪಂಚಪಾಂಡವರಲ್ಲಿ ಎರಡನೆಯವನು (2)
2.ಮುನಿದವನಲ್ಲಿ ಸಂತೋಷ ಕಾಣುತ್ತಿದೆಯೇ? (2)
3.ತಂದೆಯ ತಾಯಿ (4)
4.ಸಂಪದ್ಯುಕ್ತವಾದ ಕನ್ನಡ ಭಾಷೆ (5)
6.ಕಲೆಯಿಂದ ಕೂಡಿರುವ ಆಹ್ವಾನ (4)
8.ಗಾಳಿಯಿಂದಕೂಡಿದ ಪ್ರದೇಶ (5)
10.ಒಂದನ್ನೊಂದು ಅಗಲದೇ ಇರುವಿಕೆ (5)
11.ಬುನಾದಿಯನ್ನು ಹೀಗೂ ಹೇಳುವರು (4)
12.ಸಿಹಿಮೂತ್ರ ರೋಗ (4)
14.ವೀರಾಜಮಾನವಾಗಿರುವ ಅರಸ (3)
15.ಶರವಿಲ್ಲಿ ಉಲ್ಟಾ ಆಗಿದೆ (2)



5755ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವನಮಹೋತ್ಸವ
5.ಸನಿಹ 7.ಮಂಗಳೂರು
8.ಕತ್ತು 9.ಜಪ
10.ಪರದಾಟ 13.ಗೃಹಿಣಿ
14.ಮರಣಸಂಕಟ

ಮೇಲಿಂದ ಕೆಳಕ್ಕೆ:
2.ನವರಂಗ 3.ವಸನ
4.ಮೆಹನತ್ತು 6.ಕುರುಕುಪದ
7.ಮಂಟಪ 8.ಕವಾಟ
9.ಜತುಗೃಹ 11.ದಾರ್ಶನಿಕ
12.ಸುಣಿಮ

ಸುಡೊಕು 6141

				4		8		7
4		8						
	9	1		7		6		4
	5		7				6	
				9				
2		3			4		7	
7								6
	1		2		9		4	
6		2				9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6140 ಸುಡೊಕು

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

ಸೋಮವಾರ • ಜುಲೈ 29, 2024 ಪ್ರಜಾವಾಣಿ

‘ಅತ್ಯುತ್ತಮ ಮುದ್ರಣಕಾರರಿಗೂ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಈ ವರ್ಷದಿಂದ ಅತ್ಯುತ್ತಮ ಮುದ್ರಣಕಾರರಿಗೂ ಪ್ರಶಸ್ತಿ ನೀಡಲಾಗುವುದು’ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ತಿಳಿಸಿದರು.

ನಗರದ ಎಂಜಿನಿಯರಿಂಗ್ ಸಂಸ್ಥೆ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ಸ್ಪಂದನ ಸಾಂಸ್ಕೃತಿಕ ಪರಿಷತ್ತು, ಕದಂಬ ಕಲಾಪೀಠ, ಉದಯಗಿರಿ ಕನ್ನಡ ಸಂಘ ಸಹಯೋಗದಲ್ಲಿ ಭಾನುವಾರ ನಡೆದ ಲೇಖಕಿ ಸುಜಯಾ ಸುರೇಶ್ ವಿರಚಿತ ‘ಶುಭ ಮುಹೂರ್ತ’ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಅತ್ಯುತ್ತಮ ಲೇಖಕ, ಪ್ರಕಾಶಕ, ಮುಖಪುಟ ವಿನ್ಯಾಸಕಾರರಿಗೆ ಪ್ರಾಧಿಕಾರ ಪ್ರಶಸ್ತಿ ನೀಡುತ್ತಿದೆ. ಆದರೆ ಎಲ್ಲವನ್ನೂ ಸಂಯೋಜಿಸಿ, ಸುಂದರವಾಗಿ ಮುದ್ರಿಸುವ ಮುದ್ರಣಕಾರನಿಗೆ ಯಾವುದೇ ಪ್ರಶಸ್ತಿ ಇಲ್ಲದಿರುವುದನ್ನು ಗಮನಿಸಿ ಈ ತೀರ್ಮಾನಕ್ಕೆ ಬರಲಾಗಿದೆ’ ಎಂದರು.

‘ಶುಭಮುಹೂರ್ತಗಳು’ ಕೃತಿ ಅತ್ಯುತ್ತಮವಾಗಿ ಮುದ್ರಣವಾಗಿರುವುದನ್ನು ಗಮನಿಸಿದ ನಂತರ ಈ ಆಲೋಚನೆ ಬಂತು. ಕೃತಿಯ ಮುಖಪುಟ ಆಕರ್ಷಕವಾಗಿದೆ’ ಎಂದು ಹೇಳಿದರು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಚಿರಸ್ಮರಣೆ

ಪೂಜ್ಯ ತಂದೆ–ತಾಯಿಯವರುಗಳ ಸವಿನೆನಪು

10.09.2020 17.10.1997

ಸಾರ್ವಜನಿಕ ಸೇವಾ ಪ್ರಸಕ್ತ ಭಕ್ತ ಶಿರೋಮಣಿ

ಹಾಡೋನಹಳ್ಳಿ ಶ್ರೀ ಹೆಚ್.ಎಮ್. ವೆಂಕಟರಮಣಪ್ಪನವರು ಹಾಗೂ ಶ್ರೀಮತಿ ನಾಗರತ್ನಮ್ಮನವರುಗಳ ಆಶೀರ್ವಾದಗಳ ಸವಿನೆನಪುಗಳನ್ನು ನೆನೆಯುವ,

ಡಾ. ರಾಂಪ್ರಕಾಶ್, ಶ್ರೀ ವೆಂಕಟೇಶ್, ಶ್ರೀ ಗೋಪಿನಾಥ್, ಶ್ರೀ ಮೂಡ್ಲಪ್ಪ ಹಾಗೂ ಕುಟುಂಬಗಳ ಸದಸ್ಯರು

ಸವಿ ನೆನಪು



ಶ್ರೀ ಬಿ.ಕೆ. ಪುಟ್ಟಸ್ವಾಮಿ

ಮರಣ: 29.07.2021

ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯವೈಖರಿ ವಿರುದ್ಧ ತೀವ್ರ ವಾಗ್ದಾಳಿ

ಬೀದಿಯಲ್ಲಿ ತಮಟೆ ಹೊಡೆಯುವುದು ಬಿಡಿ: ಸಚಿವ ಕುಮಾರಸ್ವಾಮಿ ವ್ಯಂಗ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಜ್ಯ ಕಾಂಗ್ರೆಸ್ ಸರ್ಕಾರ ಬೀದಿಯಲ್ಲಿ ತಮಟೆ ಹೊಡೆಯುವುದನ್ನು ನಿಲ್ಲಿಸಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆದರೆ ಕರ್ನಾಟಕಕ್ಕೆ ನ್ಯಾಯಯುತವಾಗಿ ಸಲ್ಲಬೇಕಾದ ಅನುದಾನ ಕೊಡಿಸಲು ನಾನೇ ಮುಂದೆ ನಿಲ್ಲುತ್ತೇನೆ’ ಎಂದು ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

‘ರಾಜ್ಯಕ್ಕೆ ಕೇಂದ್ರ ಸರ್ಕಾರ ಅನ್ಯಾಯ ಮಾಡಿಲ್ಲ. ರಾಜ್ಯ ಸರ್ಕಾರವೇ ಅನ್ಯಾಯ ಮಾಡಿಕೊಳ್ಳುತ್ತಿದೆ’ ಎಂದು ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

‘ಕರ್ನಾಟಕದ ಪರ ಕೇಂದ್ರದ ಇಲಾಖೆಗಳಲ್ಲಿ ಧ್ವನಿ ಎತ್ತಿ ಕೆಲಸ ಮಾಡಲು ಸಿದ್ಧ. ಸಂಸತ್ ಕಲಾಪಕ್ಕೂ ಮುನ್ನ ಕಾಟಾಚಾರಕ್ಕೆ ರಾಜ್ಯದ ಸಂಸದರ ಸಭೆ ಕರೆದು ಮನವಿ ಸಲ್ಲಿಸುತ್ತಾರೆ. ಅವರಿಂದ ಅನುದಾನ ಕೊಡಿಸಲು ಸಾಧ್ಯವೇ? ಇಲಾಖಾವಾರು ಮಂತ್ರಿಗಳನ್ನು ಖುದ್ದು ಭೇಟಿಯಾಗಬೇಕು. ಆಗ ಕೆಲಸ ಆಗುತ್ತದೆ. ಆದರೆ, ನಾನು ಕರ್ನಾಟಕಕ್ಕೆ ಬರುವುದನ್ನೇ ಸಹಿಸದವರಿಂದ ಇದನ್ನು ನಿರೀಕ್ಷಿಸಲು ಸಾಧ್ಯವೇ?’ ಎಂದು ಕೇಳಿದರು.

‘ಈ ವರ್ಷ ಕರ್ನಾಟಕಕ್ಕೆ ತೆರಿಗೆ ಪಾಲಿನ ₹45,485 ಕೋಟಿ ಹಾಗೂ ಅನುದಾನದ ರೂಪದಲ್ಲಿ ₹15 ಸಾವಿರ ಕೋಟಿ ಸೇರಿ ಒಟ್ಟು ₹60 ಸಾವಿರ ಕೋಟಿ ಬರಲಿದೆ’ ಎಂದು ಮಾಹಿತಿ ನೀಡಿದರು.

‘ಬೆಂಗಳೂರು ಪೆರಿಫೆರಲ್ ರಸ್ತೆ ನಿರ್ಮಾಣಕ್ಕೆ ₹3 ಸಾವಿರ ಕೋಟಿ ಅನುದಾನ ನೀಡಲು ಕೇಂದ್ರ ಸಿದ್ಧವಿದೆ. ಆದರೆ, ಉಳಿದ ₹26 ಸಾವಿರ ಕೋಟಿ ಭರಿಸಲು ರಾಜ್ಯ ಸರ್ಕಾರದ ಬಳಿ ಹಣವಿದೆಯೇ’ ಎಂದು ಪ್ರಶ್ನಿಸಿದರು.

‘ಜೂನ್‌ನಲ್ಲಿ ಸರ್ಕಾರವೇ ಅಮಾನತು ಮಾಡಿದ್ದ ಕಲ್ಲೇಶ ಎಂಬ ಅಧಿಕಾರಿ ಮುಂದಿಟ್ಟುಕೊಂಡು ಇ.ಡಿ. ವಿರುದ್ಧ ದೂರು ನೀಡಿದ್ದೀರಿ. ₹40 ಕೋಟಿ ಅನುದಾನ ಬಳಕೆಯ ಲೆಕ್ಕ ನೀಡದ್ದಕ್ಕೆ ಆ ಅಧಿಕಾರಿ ಬಗ್ಗೆ ಕೇಂದ್ರ ಸರ್ಕಾರ ಎಂಟು ಪತ್ರ ಬರೆದಿತ್ತು. ಇಂಥವರನ್ನು ಸಮರ್ಥಿಸಿಕೊಂಡಿದ್ದೀರಿ. ಕಾನೂನು ಸಲಹೆಗಾರ ಪೊನ್ನಣ್ಣ ಸರಿಯಾಗಿ ಸಲಹೆ ನೀಡಲಿಲ್ಲವೇ’ ಎಂದು ಪ್ರಶ್ನಿಸಿದರು.

ಕೈಗಾರಿಕೆಗಳಿಗೆ ಮರು ಹೂಡಿಕೆ: ‘ಎಚ್‌ಎಂಟಿ, ಭದ್ರಾವತಿ ಕಾರ್ಖಾನೆ ಸೇರಿದಂತೆ ದೇಶದ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳಲ್ಲಿ ಮರುಹೂಡಿಕೆ ಮೂಲಕ ಅವುಗಳಿಗೆ ಮರುಜೀವ ನೀಡುವ ಕೆಲಸ ಮಾಡುತ್ತೇನೆ. ಎಚ್‌ಎಂಟಿ ಕಾರ್ಖಾನೆಗೆ ನಾನು ಒಮ್ಮೆ ಭೇಟಿ ನೀಡಿದ ಬಳಿಕ ಅದರ ಷೇರು ಮೌಲ್ಯ ₹45ರಿಂದ ₹95ಕ್ಕೆ ಏರಿದೆ. ಅಂತೆಯೇ, ರಾಜ್ಯದಲ್ಲಿ ಸಾಕಷ್ಟು ಹೆಸರು ಮಾಡಿದ್ದ ಸಾರ್ವಜನಿಕ ಉದ್ದಿಮೆಗಳಿಗೆ ಅಗತ್ಯ ಅನುದಾನ ನೀಡಿ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳುವೆ’ ಎಂದು ಭರವಸೆ ನೀಡಿದರು.

ಆರೂವರೆ ಕೋಟಿ ಜನರ ಮುಖ್ಯಮಂತ್ರಿ: ‘ಸಿದ್ದರಾಮಯ್ಯ ಹಿಂದುಳಿದ ವರ್ಗದವರಿಗಷ್ಟೆ ಸಿಎಂ ಅಲ್ಲ; ಆರೂವರೆ ಕೋಟಿ ಕನ್ನಡಿಗರ ಮುಖ್ಯಮಂತ್ರಿ. ಅವರ ವಿರುದ್ಧ ಯಾರು ಅಸೂಯೆ ಪಡುತ್ತಾರೆ? ನಿಮ್ಮಲ್ಲೇ ಟವಲ್ ಹಾಸಿಕೊಂಡು ಕೂತವರೇ ಚಿತಾವಣೆ ಮಾಡುತ್ತಿದ್ದಾರೆ. 15-20 ವರ್ಷಗಳ ಹಿಂದಿದ್ದ ಸಿದ್ದರಾಮಯ್ಯ ಈಗ ಇಲ್ಲ’ ಎಂದು ಲೇವಡಿ ಮಾಡಿದರು.

ನೀವೇನು ಹರಿಶ್ಚಂದ್ರರಾ?: ಟೀಕೆ

‘ನನ್ನ ಮೇಲೆ ಒಂದು ಕಪ್ಪುಚುಕ್ಕೆಯೂ ಇಲ್ಲ ಎಂದು ಸಿದ್ದರಾಮಯ್ಯ ಬೀಗುತ್ತಾರೆ. ರೀಡು ಕಥೆ, ಕೆಂಪಣ್ಣ ಆಯೋಗದ ವರದಿ ಏನಾಯಿತು? ನೀವೇನು ಹರಿಶ್ಚಂದ್ರರಾ? ಜಾಹೀರಾತು ಕೊಟ್ಟು ಸಾಚಾತನ ಸಾಬೀತುಪಡಿಸಿಕೊಳ್ಳುವ ಪರಿಸ್ಥಿತಿ ಅವರಿಗೆ ಬರಬಾರದಿತ್ತು’ ಎಂದು ಕುಮಾರಸ್ವಾಮಿ ಲೇವಡಿ ಮಾಡಿದರು.

‘ಕುರ್ಚಿ ಉಳಿಸಿಕೊಳ್ಳಲು ಆಯೋಗ’

‘ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ಕುರ್ಚಿ ಉಳಿಸಿಕೊಳ್ಳಲು ವಿಚಾರಣಾ ಆಯೋಗ ರಚಿಸಿದ್ದಾರಷ್ಟೆ. ದೇಸಾಯಿ ಆಯೋಗಕ್ಕೆ ಅಕ್ರಮದ ದಾಖಲೆ ಕೊಟ್ಟು ಅದನ್ನು ನೆಕ್ಕುತ್ತಾ ಕೂರಬೇಕಷ್ಟೆ’ ಎಂದು ಕುಮಾರಸ್ವಾಮಿ ಟೀಕಿಸಿದರು.

‘ನಾವು ರಾಜೀನಾಮೆ ಕೇಳಿದ ಮಾತ್ರಕ್ಕೆ ಸಿದ್ದರಾಮಯ್ಯ ಕೊಡುವುದಿಲ್ಲ. ಕಾನೂನಾತ್ಮಕ ಹೋರಾಟ ಮುಂದುವರಿಸುತ್ತೇವೆ’ ಎಂದರು.

‘ಮೇಕೆದಾಟು: ಕೇಂದ್ರಕ್ಕೆ ಮನವರಿಕೆ’

‘ಮೇಕೆದಾಟು ಅಣೆಕಟ್ಟೆ ನಿರ್ಮಾಣ ಸಂಬಂಧ ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡರು ಸೋಮವಾರ ರಾಜ್ಯಸಭೆಯಲ್ಲಿ ಧ್ವನಿ ಎತ್ತಲಿದ್ದಾರೆ’ ಎಂದು ಕುಮಾರಸ್ವಾಮಿ ಹೇಳಿದರು.

‘ಕೆಲವು ದಿನದ ಹಿಂದೆ ನಾನು ಹಾಗೂ ದೇವೇಗೌಡರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿದ್ದೆವು. ಆಗ, ಗೌಡರು ಪ್ರಧಾನಿಗೆ ಮನವಿ ಸಲ್ಲಿಸಿದ್ದಾರೆ. ಜಲಶಕ್ತಿ ಸಚಿವರೊಂದಿಗೂ ಮಾತನಾಡಿದ್ದು, ಅವರು ಶೀಘ್ರವೇ ಸಭೆ ಕರೆಯುವ ನಿರೀಕ್ಷೆ ಇದೆ. ಆದರೆ, ರಾಜ್ಯದವರೇ ಆದ ಮಲ್ಲಿಕಾರ್ಜುನ ಖರ್ಗೆ ಎಂದಾದರೂ ಕಾವೇರಿ ಬಗ್ಗೆ ಮಾತನಾಡಿದ್ದಾರೆಯೇ’ ಎಂದು ಪ್ರಶ್ನಿಸಿದರು.

ಸುದ್ದಿ 2 ನಿಮಿಷ

‘ನೇಮಕಾತಿಗೂ ತಂದೆಯ ರಾಜಕೀಯಕ್ಕೂ ಸಂಬಂಧ ಇಲ್ಲ’

ವಿಜಯಪುರ: ‘ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿಯ ಸದಸ್ಯನಾಗಿ ನನ್ನನ್ನು ನೇಮಿಸಿರುವುದಕ್ಕೂ ನಮ್ಮ ತಂದೆಯವರ (ಸಚಿವ ಎಂ. ಬಿ. ಪಾಟೀಲ) ರಾಜಕಾರಣಕ್ಕೂ ಸಂಬಂಧವಿಲ್ಲ. ವನ್ಯಜೀವಿ ಛಾಯಾಗ್ರಹಣ ಮತ್ತು ಸಂರಕ್ಷಣೆ ಕ್ಷೇತ್ರಗಳಲ್ಲಿ ನಾನು 11 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಇದನ್ನು ಗುರುತಿಸಿ ನನ್ನನ್ನು ಈಗ ಸದಸ್ಯನಾಗಿ ನೇಮಿಸಲಾಗಿದೆ’ ಎಂದು ಧ್ರುವ ಪಾಟೀಲ ಹೇಳಿದರು.

ಬಬಲೇಶ್ವರ ತಾಲ್ಲೂಕಿನ ಮಮದಾಪುರದಲ್ಲಿ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ನಾನು ಅಮೆರಿಕದಲ್ಲಿ ಓದುತ್ತಿದ್ದರೂ ನಾಲ್ಕು ತಿಂಗಳ ರಜೆಯಲ್ಲಿ ಇಲ್ಲಿಗೆ ಬರುತ್ತೇನೆ. ಆ ದಿನಗಳಲ್ಲಿ ಮೂರು ತಿಂಗಳನ್ನು ನಾನು ಕಬಿನಿ, ಬಂಡಿಪುರ, ದಾಂಡೇಲಿ ಅರಣ್ಯ ಪ್ರದೇಶಗಳಲ್ಲೇ ಕಳೆಯುತ್ತೇನೆ’ ಎಂದರು.

‘ಮನುಷ್ಯ ಮತ್ತು ವನ್ಯಜೀವಿ ಸಂರಕ್ಷಣೆ ಕುರಿತು ಸಾಕಷ್ಟು ಅಧ್ಯಯನ ಮಾಡಿದ್ದೇನೆ. ಜತೆಗೆ ಕಪ್ಪು ಚಿರತೆ ಹಾಗೂ ಹುಲಿಗಳ ಛಾಯಾಗ್ರಹಣ ಮಾಡಿದ್ದೇನೆ. ಅಲ್ಲದೆ, ವಿಜಯಪುರದ ವನ್ಯಜೀವಿ ಸಂಪತ್ತನ್ನು ಕುರಿತು ‘ವೈಲ್ಡ್ ವಿಜಯಪುರ’ ಎನ್ನುವ ಸಾಕ್ಷ್ಯಚಿತ್ರ ಮಾಡಿದ್ದೇನೆ. ಅದನ್ನು ಸಿದ್ಧೇಶ್ವರ ಸ್ವಾಮೀಜಿ ಕೂಡ ವೀಕ್ಷಿಸಿ, ಮೆಚ್ಚಿಕೊಂಡಿದ್ದರು’ ಎಂದರು.

‘ಮಂಡಳಿಗೆ ಈಗ ಸಾಕಷ್ಟು ವಿಜ್ಞಾನಿಗಳು, ಪರಿಸರ ತಜ್ಞರನ್ನು ನೇಮಿಸಲಾಗಿದೆ. ಯುವಜನರ ಪ್ರತಿನಿಧಿಯಾಗಿ ನಾನು ಅಲ್ಲಿ ಕೆಲಸ ಮಾಡಲಿದ್ದೇನೆ’ ಎಂದರು.

ಹೊಸ ಪಕ್ಷ ಕಟ್ಟಲಿ: ಯತ್ನಾಳ

ವಿಜಯಪುರ: ‘ರಾಜ್ಯದಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಸೇರಿದಂತೆ ಮೂರು ಪಕ್ಷಗಳಲ್ಲಿ ಒಳ ಒಪ್ಪಂದ ರಾಜಕೀಯ ಮಿತಿಮೀರಿದೆ. ಈ ಮೂರು ಪಕ್ಷಗಳಲ್ಲಿ ಒಳ ಒಪ್ಪಂದ ಮಾಡುವ ಗಿರಾಕಿಗಳು ಹೊರಬಂದು ಒಂದು ಹೊಸ ಪಕ್ಷ ಕಟ್ಟುವುದು ಉತ್ತಮ. ಅದಕ್ಕೆ ಒಳ ಒಪ್ಪಂದ ಪಕ್ಷ ಎಂದು ನಾಮಕರಣ ಮಾಡಲಿ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಭಾನುವಾರ ಇಲ್ಲಿ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಒಳ ಒಪ್ಪಂದದ ರಾಜಕೀಯ ಲೋಕಸಭೆ ಚುನಾವಣೆಯಲ್ಲಿ ಬಯಲಾಗಿದೆ. ಇವರ ನಾಟಕ ಇನ್ನು ಮುಂದೆ ನಡೆಯುವುದಿಲ್ಲ. ನೈತಿಕತೆ ಇದ್ದರೆ ರಾಜಕೀಯದಿಂದ ಹಿಂದೆ ಸರಿಯುವುದು ಒಳ್ಳೆಯದು’ ಎಂದರು.

‘ಯಡಿಯೂರಪ್ಪ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ವಿಜಯೇಂದ್ರ, ಅಶೋಕ, ಜಮೀರ್ ಅಹಮ್ಮದ್ ಖಾನ್ ಅವರು ಒಳ ಒಪ್ಪಂದದ ರಾಜಕೀಯದಲ್ಲಿ ತೊಡಗಿದ್ದಾರೆ. ಚುನಾವಣೆಯಲ್ಲಿ ತಮಗೆ ಎಲ್ಲೆಲ್ಲಿ ಯಾರಾರು ಬೇಕೋ ಅಲ್ಲಲ್ಲಿ ಮಿಲಾಪಿ ಕುಸ್ತಿ ಆಡಿದ್ದಾರೆ. ಹಲವೆಡೆ ಬಿಜೆಪಿ ಅಭ್ಯರ್ಥಿಗಳು ಸೋಲಲು ನಮ್ಮ ಮುಖಂಡರ ಒಳ ಒಪ್ಪಂದ ಕಾರಣ’ ಎಂದರು. ‘ಮುಡಾ ಹಗರಣ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಬೆಳಕಿಗೆ ಬರುತ್ತಿದ್ದಂತೆ ಬಿಜೆಪಿ ಅವಧಿಯಲ್ಲಿ ನಡೆದ ಹಗರಣಗಳ ಬಗ್ಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮಾತನಾಡುತ್ತಿರುವುದು ಹಾಸ್ಯಾಸ್ಪದ. ಇಷ್ಟು ದಿನ ಏಕೆ ಸುಮ್ಮನೆ ಕೂತಿದ್ದೀರೀ ಸಿದ್ದರಾಮಯ್ಯನವರೇ? 14 ತಿಂಗಳು ಕತ್ತೆ ಕಾದರಾ? ಕನಕಪುರ ಬಂಡೆಗಲ್ಲು ಏಕೆ ಬಾಯಿ ಮುಚ್ಚಿಕೊಂಡು ಕೂತಿತ್ತು’ ಎಂದು ಪ್ರಶ್ನಿಸಿದರು.

ಅತಿಥಿ ಗೃಹದ ಬಾಗಿಲಿಗೆ ಬೀಗ: ಎಚ್‌ಡಿಕೆಗೆ ಮುಜುಗರ

ಪ್ರಜಾವಾಣಿ ವಾರ್ತೆ

ಮೈಸೂರು: ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ಲಘು ವಿಶ್ರಾಂತಿ ಪಡೆಯಲೆಂದು ಹೋದಾಗ, ಸರ್ಕಾರಿ ಅತಿಥಿ ಗೃಹದ ಬಾಗಿಲಿನ ಬೀಗ ತೆಗೆದಿಲ್ಲದ ಕಾರಣದಿಂದ ಭಾನುವಾರ ಮುಜುಗರ ಅನುಭವಿಸಿದರು.

ನಂಜನಗೂಡು ಪಟ್ಟಣದ ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲು ಭಾನುವಾರ ಬೆಳಿಗ್ಗೆ ಅವರು ಬಂದಿದ್ದರು. ಅತಿಥಿ ಗೃಹದಲ್ಲಿ ವಿಶ್ರಾಂತಿ ಪಡೆಯಲು ಬಯಸಿದ್ದರು. ಅಲ್ಲಿಗೆ ಹೋದಾಗ ಬೀಗ ಹಾಕಿರುವುದು ಕಂಡುಬಂತು. ಸ್ವಲ್ಪ ಹೊತ್ತು ಕಾದರೂ ಸಿಬ್ಬಂದಿ ಯಾರೂ ಬರಲಿಲ್ಲ. ಇದರಿಂದ ಅವರು ಅಲ್ಲಿಂದ ಮರಳಿದರು.

‘ಈ ಮೂಲಕ ಸರ್ಕಾರವು ಕೇಂದ್ರ ಸಚಿವರಿಗೆ ಅವಮಾನ ಮಾಡಿದೆ. ಪ್ರವಾಸ ಕಾರ್ಯಕ್ರಮದ ಪಟ್ಟಿಯನ್ನು ಮುಂಚಿತವಾಗಿಯೇ ಅಧಿಕಾರಿಗಳಿಗೆ ತಿಳಿಸಿದ್ದರೂ ಪೂರ್ವ ಸಿದ್ಧತೆಯನ್ನು ಮಾಡಿಕೊಂಡಿಲ್ಲ. ಶಿಷ್ಟಾಚಾರ ಪಾಲಿಸಿಲ್ಲ. ಅವರು ಅತಿಥಿ ಗೃಹದ ಬಳಿಗೆ ಬಂದಾಗಲೂ ಸರ್ಕಾರಿ ಅಧಿಕಾರಿಗಳು ಯಾರೂ ಇರಲಿಲ್ಲ’ ಎಂದು ಜೆಡಿಎಸ್ ಮುಖಂಡರು ದೂರಿದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ‘ವಿಷಯ ಗಮನಕ್ಕೆ ಬಂದಿದ್ದು ಗಂಭೀರವಾಗಿ ಪರಿಗಣಿಸಿ ವಿಚಾರಣೆ ಮಾಡಲಾಗುತ್ತಿದೆ. ಕರ್ತವ್ಯ ಲೋಪದಡಿ ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದ್ದಾರೆ.

ರಾಜ್ಯಸಭೆ: ಬಿಜೆಪಿ ಬಲ 87ಕ್ಕೆ ಏರಿಕೆ

ನವದೆಹಲಿ: ನಾಮನಿರ್ದೇಶಿತ ರಾಜ್ಯ ಸಭಾ ಸದಸ್ಯ ಸತ್ನಾಮ್ ಸಿಂಗ್ ಸಂಧು ಅವರು ಬಿಜೆಪಿಗೆ ಸೇರ್ಪಡೆ ಆಗಿದ್ದಾರೆ. ಇದರಿಂದ ರಾಜ್ಯಸಭೆಯಲ್ಲಿ ಬಿಜೆಪಿ ಸಂಸದರ ಬಲ 87ಕ್ಕೆ ಏರಿಕೆಯಾಗಿದೆ.

ಪ್ರಮಾಣವಚನ ಸ್ವೀಕರಿಸಿದ 6 ತಿಂಗಳ ಒಳಗಾಗಿ ಯಾವುದಾದರೂ ಪಕ್ಷಕ್ಕೆ ಸೇರ್ಪಡೆಗೊಳ್ಳಲಿದ್ದಾರೆಯೇ ಎಂದು ಸಂಸತ್ತಿಗೆ ತಿಳಿಸಬೇಕಿತ್ತು. ಅದರಂತೆ ತಮ್ಮ ನಿರ್ಧಾರ ಪ್ರಕಟಿಸಿದ್ದಾರೆ.

ನಿಧನ ವಾರ್ತೆ

ಪುಟ್ಟಮಾದೇಗೌಡ

ಚನ್ನಪಟ್ಟಣ: ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಅವರ ತಂದೆ, ಚಕ್ಕೆರೆ ಗ್ರಾಮದ ನಿವೃತ್ತ ಶಿಕ್ಷಕ ಪುಟ್ಟಮಾದೇಗೌಡ (90) ಭಾನುವಾರ ಸಂಜೆ ಅನಾರೋಗ್ಯದಿಂದ ನಿಧನರಾದರು.

ಅವರಿಗೆ ಪತ್ನಿ ನಾಗರತ್ನಮ್ಮ, ಸಿ.ಪಿ. ಯೋಗೇಶ್ವರ್ ಸೇರಿದಂತೆ ಮೂವರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಒಂದು ವರ್ಷದಿಂದ ಅನಾರೋಗ್ಯದಿಂದ ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಪುಟ್ಟಮಾದೇಗೌಡ ಅವರು ಚನ್ನಪಟ್ಟಣ, ರಾಮನಗರ ತಾಲ್ಲೂಕಿನ ಹಲವು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡಿ ನಿವೃತ್ತಿ ನಂತರ ಚಕ್ಕೆರೆ ಗ್ರಾಮದಲ್ಲಿ ನೆಲೆಸಿದ್ದರು. ಜೊತೆಗೆ ಸ್ಕೌಟ್ಸ್ ಅಂಡ್ ಗೈಡ್ ಸಂಸ್ಥೆ ಸೇರಿದಂತೆ ಹಲವು ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿದ್ದರು. ಪುತ್ರ ಯೋಗೇಶ್ವರ್ ರಾಜಕೀಯ ಜೀವನದ ಏಳುಬೀಳಿನಲ್ಲಿ ಜೊತೆಗಿದ್ದರು.

ಸೋಮವಾರ ಬೆಳಗ್ಗೆ ಸ್ವಗ್ರಾಮ ಚಕ್ಕೆರೆಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

‘ಪಕ್ಷಕ್ಕಾಗಿ ದುಡಿಯದಿದ್ದರೆ ಮುಲಾಜಿಲ್ಲದೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷಕ್ಕಾಗಿ ಎಲ್ಲರೂ ಕೆಲಸ ಮಾಡಬೇಕು. ಪಕ್ಷದ ಕೆಲಸ ಸಮರ್ಪಕವಾಗಿ ಮಾಡದಿದ್ದರೆ ಅಂತಹ ವರನ್ನು ಮುಲಾಜಿಲ್ಲದೆ ಬದಲಾವಣೆ ಮಾಡುತ್ತೇವೆ’ ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಎಚ್ಚರಿಕೆ ನೀಡಿದರು.

ಪಕ್ಷದ ಕೇಂದ್ರ ಕಚೇರಿಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಅವರು ಮಾತನಾಡಿ, ಪಕ್ಷವನ್ನು ಬಲಪಡಿಸಲು ಎಲ್ಲರೂ ಕಠಿಣ ಪರಿಶ್ರಮ ಹಾಕಬೇಕು ಎಂದು ಸೂಚಿಸಿದರು.

‘ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಿಗೆ ಶೀಘ್ರದಲ್ಲೇ ಉಪಚುನಾವಣೆ ನಡೆಯಲಿದೆ. ಇದಕ್ಕಾಗಿ ಸದಸ್ಯತ್ವ ನೋಂದಣಿ ಅಭಿಯಾನ ನಡೆಸಬೇಕು. ಎಲ್ಲರೂ ದುಡಿಯಬೇಕು. ಪಕ್ಷಕ್ಕಾಗಿ ದುಡಿಯದೇ ಇರುವವರನ್ನು ಸಹಿಸುವುದಿಲ್ಲ ಮತ್ತು ಅಂತಹವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಹಿಂದೇಟು ಹಾಕುವ ಅವಶ್ಯಕತೆ ಇಲ್ಲ.ಪಕ್ಷ ಸಂಘಟನೆಗೆ ಸಮಿತಿ ರಚಿಸಬೇಕು. ಅದರ ಸದಸ್ಯರೆಲ್ಲರೂ 31 ಜಿಲ್ಲೆಗಳಲ್ಲಿ ಪ್ರವಾಸ ನಡೆಸಬೇಕು. ಕಾರ್ಯಕರ್ತರ ಪಡೆ ಕಟ್ಟಬೇಕು ಎಂದರು.

ನೃತ್ಯ ವೈಭವ

ಮಂಗಳೂರಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪದವಿ ಪೂರ್ವ ಕಾಲೇಜು ಪ್ರಾಚಾರ್ಯರ ಸಂಘ ಹಾಗೂ ಸೇಂಟ್ ಅಲೋಶಿಯಸ್ ಪದವಿ ಪೂರ್ವ ಕಾಲೇಜಿನ ಆಶ್ರಯದಲ್ಲಿ ಜಿಲ್ಲೆಯ ಪದವಿ ಪೂರ್ವ ಕಾಲೇಜುಗಳ ನಿವೃತ್ತ ಪ್ರಾಚಾರ್ಯರಿಗೆ ಭಾನುವಾರ ನಡೆದ ಅಭಿನಂದನೆ ಕಾರ್ಯಕ್ರಮದಲ್ಲಿ ಎಸ್‌ಡಿಎಂ ಕಲಾ ವೈಭವ ತಂಡದವರು ನೃತ್ಯ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

‘ಸುಪ್ರೀಂ’ ಆದೇಶ ಪಾಲಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಹುದ್ದೆಗಳಿಗೆ ಬಡ್ತಿ ನೀಡುವಾಗ ವೈಜ್ಞಾನಿಕ ಮತ್ತು ನ್ಯಾಯೋಚಿತ ಮೀಸಲಾತಿ ವ್ಯವಸ್ಥೆ ಪಾಲಿಸಲು ಸುಪ್ರೀಂ ಕೋರ್ಟ್ 2022ರ ಜ. 28ರಂದು ನೀಡಿದ್ದ ತೀರ್ಪನ್ನು ಕೇಂದ್ರ ಸರ್ಕಾರ ಈಗಾಗಲೇ ಅಳವಡಿಸಿಕೊಂಡಿದೆ. ಈ ತೀರ್ಪನ್ನು ಕರ್ನಾಟಕಲ್ಲಿಯೂಜಾರಿಗೆ ತರಬೇಕು ಎಂದು ಆಗ್ರಹಿಸಿ ಮುಖ್ಯ ಕಾರ್ಯದರ್ಶಿಗೆ ‘ಅಹಿಂಸಾ’ (ಅಲ್ಪಸಂಖ್ಯಾತ, ಹಿಂದುಳಿದ, ಸಾಮಾನ್ಯ) ವರ್ಗದ ನೌಕರರ ಹಿತರಕ್ಷಣಾ ಒಕ್ಕೂಟ ಮನವಿ ಸಲ್ಲಿಸಿದೆ. 30 ದಿನಗಳ ಒಳಗೆ ನ್ಯಾಯ ಸಿಗಬೇಕು. ತಪ್ಪಿದರೆ ಹೋರಾಟ ಅನಿವಾರ್ಯ ಎಂದೂ ಒಕ್ಕೂಟ ಎಚ್ಚರಿಕೆ ನೀಡಿದೆ.

ಕೋರ್ಟ್ ತೀರ್ಪನ್ನು ರಾಜ್ಯದಲ್ಲಿಯೂ ಪಾಲಿಸಬೇಕು. ಅಹಿಂಸಾ ವರ್ಗದ ನೌಕರರಿಗೆ ಅನ್ಯಾಯ ಆಗದಂತೆ ನೋಡಿಕೊಳ್ಳಬೇಕು. ಸಂವಿಧಾನದ ಪರಿಚ್ಛೇದ 141ರ ಪ್ರಕಾರ ಸುಪ್ರೀಂ ಕೋರ್ಟ್ ನೀಡುವ ಆದೇಶ ಎಲ್ಲ ಸರ್ಕಾರಿ ನೌಕರರಿಗೆ ಅನ್ವಯವಾಗುತ್ತದೆ. ರಾಜ್ಯದಲ್ಲಿ ಸರ್ಕಾರ ಶೇ 82ರಷ್ಟು ವರ್ಗದ ವರಿಗೆ ವೈಜ್ಞಾನಿಕವಾಗಿ ಬಡ್ತಿ ನೀಡುತ್ತಿಲ್ಲ. ಸಾವಿರಾರು ನೌಕರರು ಬಡ್ತಿ ಇಲ್ಲದೆ ನಿವೃತ್ತರಾಗುತ್ತಿದ್ದಾರೆ ಎಂದೂ ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ರಾಜ್ಯ ಸರ್ಕಾರದ ಆರೋಪಕ್ಕೆ ಸಚಿವೆ ನಿರ್ಮಲಾ ಸೀತಾರಾಮನ್ ತಿರುಗೇಟು

‘ಬಜೆಟ್: ಕರ್ನಾಟಕಕ್ಕೆ ಅನ್ಯಾಯ ಆಗಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂಬುದು ತಪ್ಪು ಮಾಹಿತಿ. ಈ ಸಂಬಂಧ ರಾಜ್ಯ ಸರ್ಕಾರ ಮಾಡುತ್ತಿರುವ ಆರೋಪದಲ್ಲಿ ಹುರುಳಿಲ್ಲ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಬಿಜೆಪಿ ಕಚೇರಿಯಲ್ಲಿ ಭಾನುವಾರ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಜೆಟ್ ಭಾಷಣದಲ್ಲಿ ಎಲ್ಲ ರಾಜ್ಯಗಳ ಹೆಸರನ್ನು ಹೇಳಲಾಗುವುದಿಲ್ಲ. ಹಾಗೆಂದು, ಹೆಸರು ಹೇಳದೇ ಇರುವ ರಾಜ್ಯಗಳಿಗೆ ಏನೂ ನೀಡಿಲ್ಲ ಎಂದಲ್ಲ. ಈ ಬಜೆಟ್‌ನಲ್ಲಿ ಘೋಷಿಸಿರುವ ಅನುದಾನ ಮತ್ತು ಯೋಜನೆಗಳಿಂದ ಬೆಂಗಳೂರು ಮತ್ತು ಕರ್ನಾಟಕಕ್ಕೆ ಗರಿಷ್ಠ ಮಟ್ಟದ ಪ್ರಯೋಜನ ಸಿಗುತ್ತದೆ’ ಎಂದರು.

‘ಬಾಹ್ಯಾಕಾಶ ಸಂಶೋಧನೆ ಮತ್ತು ಆ ಕ್ಷೇತ್ರದ ನವೋದ್ಯಮಗಳಿಗೆ ಸಾವಿರ ಕೋಟಿ ಘೋಷಿಸಲಾಗಿದೆ. ಇಸ್ರೊ ಮತ್ತು ಅದರ ಅಂಗಸಂಸ್ಥೆಗಳು, ಈ ಕ್ಷೇತ್ರದ ನವೋದ್ಯಮಗಳು ಬೆಂಗಳೂರಿನಲ್ಲೇ ಕೇಂದ್ರಿತವಾಗಿವೆ. ಇದರಿಂದ ಬೆಂಗಳೂರಿಗೆ ಲಾಭವಾಗಲಿದೆ. ಮೆಟ್ರೊ ನಗರಗಳಲ್ಲಿ ವಸತಿ ಯೋಜನೆ, ಹೆದ್ದಾರಿ ಯೋಜನೆ,

> **ನಮ್ಮ ಸರ್ಕಾರ ಇದ್ದಾಗ ರಾಜ್ಯದಲ್ಲಿ ಉಳಿತಾಯ ಬಜೆಟ್ ಇತ್ತು. ಈಗ ಗ್ಯಾರಂಟಿಗಳ ಅನುಷ್ಠಾನಕ್ಕೆ ಹಣ ವೆಚ್ಚ ಮಾಡಿ ಕೊರತೆ ಬಜೆಟ್ ಆಗುತ್ತಿದೆ. ರಾಜ್ಯದ ಸಾಲ ಮಿತಿಮೀರಿದೆ**
> **ನಿರ್ಮಲಾ ಸೀತಾರಾಮನ್**
> ಕೇಂದ್ರ ಹಣಕಾಸು ಸಚಿವೆ

ಬೆಂಗಳೂರು ಫೆರಿಫೆರಲ್ ವರ್ತುಲ ರಸ್ತೆ, ಮೆಟ್ರೊ ನಗರಗಳಲ್ಲಿ ದುಡಿಯುವ ಮಹಿಳೆಯರಿಗಾಗಿ ವಸತಿನಿಲಯ ನಿರ್ಮಾಣಕ್ಕೆ ವಿಶೇಷ ಪ್ಯಾಕೇಜ್‌ಗಳನ್ನು ಪ್ರಕಟಿಸಲಾಗಿದೆ. ಇವೆಲ್ಲದರ ಪ್ರಯೋಜನ ಬೆಂಗಳೂರಿಗೆ ಸಿಗಲಿದೆ’ ಎಂದರು.

‘ಕೇಂದ್ರ ಬಜೆಟ್‌ನಲ್ಲಿ ಎಂಎಸ್‌ಎಂಇಗಳಿಗೆ ಹಲವು ಆರ್ಥಿಕ ನೀತಿಗಳನ್ನು ಘೋಷಿಸಲಾಗಿದೆ. ಯಂತ್ರೋಪಕರಣಗಳ ಖರೀದಿಗಾಗಿ ಸರ್ಕಾರದ ಭದ್ರತೆಯಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳು ಎಂಎಸ್‌ಎಂಇಗಳಿಗೆ ಸಾಲ ನೀಡಲಿವೆ. ಎಂಎಸ್‌ಎಂಇಗಳು ಸಾಲ ತೀರಿಸುವಲ್ಲಿ ವಿಫಲವಾದಾಗ, ಅವುಗಳ ಬ್ಯಾಂಕ್ ವಹಿವಾಟು ಸ್ಥಗಿತವಾಗುವುದನ್ನು ತಡೆಯಲು ವಿಶೇಷ ನಿಧಿಯನ್ನು ಸ್ಥಾಪಿಸಲಾಗುತ್ತದೆ. ಅವುಗಳ ನಿರ್ವಹಣೆಗೆ ಕೈಗಾರಿಕಾ ಪ್ರದೇಶದಲ್ಲಿ, ಉದಾಹರಣೆಗೆ ಬೆಂಗಳೂರಿನ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ವಾಣಿಜ್ಯ ಬ್ಯಾಂಕ್‌ಗಳ ಪ್ರತ್ಯೇಕ ಶಾಖೆಗಳನ್ನು ತೆರೆಯಲಾಗುವುದು. ಕರ್ನಾಟಕಕ್ಕೂ ದೊಡ್ಡಮಟ್ಟದಲ್ಲಿ ಈ ಎಲ್ಲ ಯೋಜನೆಗಳ ಪ್ರಯೋಜನ ಸಿಗಲಿದೆ’ ಎಂದರು.

‘ಯುಪಿಎಗಿಂತ ತೆರಿಗೆ ಪಾಲು ಹೆಚ್ಚು ನೀಡುತ್ತಿದ್ದೇವೆ’

‘2004–14ರ ನಡುವೆ ಯುಪಿಎ ಸರ್ಕಾರವು ತನ್ನ ತೆರಿಗೆ ವರಮಾನದಲ್ಲಿ ಕರ್ನಾಟಕಕ್ಕೆ ₹81,791 ಕೋಟಿ ಪಾಲನ್ನಷ್ಟೇ ನೀಡಿತ್ತು. ಪ್ರಧಾನಿ ನರೇಂದ್ರ ಮೋದಿ ಅವರ ಅಧಿಕಾರದ 10 ವರ್ಷಗಳ ಅವಧಿಯಲ್ಲಿ ಒಟ್ಟು ₹2.95 ಲಕ್ಷ ಕೋಟಿ ತೆರಿಗೆ ಪಾಲು ನೀಡಿದ್ದೇವೆ. ಕರ್ನಾಟಕಕ್ಕೆ ಯುಪಿಎ ನೀಡಿದ್ದಕ್ಕಿಂತ ನಾವೇ ಹೆಚ್ಚು ನೀಡಿದ್ದೇವೆ’ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು.

‘ಯುಪಿಎ ಅವಧಿಯಲ್ಲಿ ತೆರಿಗೆ ಪಾಲು ದೊರೆತದ್ದು ವಾರ್ಷಿಕ ಸರಾಸರಿ ₹8,179 ಕೋಟಿ ಮಾತ್ರ. ಆದರೆ ನಾವು 2024–25ನೇ ಆರ್ಥಿಕ ವರ್ಷ ಒಂದರಲ್ಲೇ ₹45,485 ಕೋಟಿ ನೀಡಿದ್ದೇವೆ. ಇನ್ನು ಯುಪಿಎ ಸರ್ಕಾರವು ಅನುದಾನದ ರೂಪದಲ್ಲಿ ರಾಜ್ಯಕ್ಕೆ ನೀಡಿದ್ದು ₹60,779 ಕೋಟಿ ಮಾತ್ರ. ನಮ್ಮ ಸರ್ಕಾರದ ಅವಧಿಯ 10 ವರ್ಷಗಳಲ್ಲಿ ಒಟ್ಟು ₹2.36 ಲಕ್ಷ ಕೋಟಿ ನೀಡಿದ್ದೇವೆ’ ಎಂದರು.

‘ಅಪ್ರೆಂಟಿಸ್‌ಶಿಪ್ ಯೋಜನೆ ವಿಪಕ್ಷಗಳ ನಕಲು’

ಈ ಬಜೆಟ್ ವಿರೋಧ ಪಕ್ಷಗಳ ಪ್ರಣಾಳಿಕೆಯ ನಕಲು ಎಂಬ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಎಂಬ ಪತ್ರಕರ್ತರ ಪ್ರಶ್ನೆಗೆ ನಿರ್ಮಲಾ ಸೀತಾರಾಮನ್, ‘ಯುವಜನರಿಗೆ ಅಪ್ರೆಂಟಿಸ್‌ಶಿಪ್ ನೀಡುವ ಯೋಜನೆ ವಿಚಾರದಲ್ಲಿ ಅದನ್ನು ಒಪ್ಪುತ್ತೇನೆ. ಅವರ ಪ್ರಣಾಳಿಕೆ ಅಪ್ರೆಂಟಿಸ್‌ಶಿಪ್ ನೀಡಲಷ್ಟೇ ಸೀಮಿತವಾಗಿತ್ತು. ಉದ್ಯೋಗ ನೀಡುತ್ತೇವೆ ಎಂದು ಕಾಂಗ್ರೆಸ್ ಎಲ್ಲಿಯೂ ಹೇಳಿಲ್ಲ. ಆದರೆ ನಾವು ಉದ್ಯೋಗವನ್ನೂ ನೀಡುತ್ತೇವೆ’ ಎಂದರು.

‘ಅಲ್ಲಲ್ಲಿ ಹಣ ಚೆಲ್ಲಿದರೆ ಸಾಕು ಅಭಿವೃದ್ಧಿಯಾಗುತ್ತದೆ ಎಂಬುದು ವಿರೋಧ ಪಕ್ಷಗಳ ನಿಲುವು. ನಾವು ಕೌಶಲ ಅಭಿವೃದ್ಧಿಗೆ, ಉದ್ಯಮಶೀಲತೆ ಅಭಿವೃದ್ಧಿಗೆ, ಉದ್ಯೋಗ ಸೃಷ್ಟಿಗೂ ಒತ್ತು ನೀಡುತ್ತಿದ್ದೇವೆ’ ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

ಮಂಗಳೂರಿನ ವರ್ಕ್ ಶಾಪಿಗೆ ಫ್ಯಾಬ್ರಿಕೇಟರ್/ ವೆಲ್ಡರ್ ಬೇಕಾಗಿದ್ದಾರೆ (ಗೇಟ್, ಗ್ರಿಲ್, ಟ್ರಸ್, ಸ್ಟೀಲ್). ವಸತಿ ಮತ್ತು ಆಕರ್ಷಕ ವೇತನವಿದೆ. ಸಂಪರ್ಕಿಸಿ: 9741456175

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ13,000- 17,000. 8951315839, 9141634619

Marketing & Sales

REQ, EXPERIENCED Telecaller & Field executive For BankLoan collection Salary+ Incentive, 9916276701, 7899040499, 9108267410

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9663563555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

29.08.2024: 6`ದಿನಗಳು ವಿಮಾನದಲ್ಲಿ ಕಾಶಿ,ಅಯೋಧ್ಯ ಗಯಾ,ಅಲಹಾಬದ್ 32000/ (ಕೆಲವೇ`ಸೀಟುಗಳಿವೆ) 16.09.2024: 12/16`ದಿನಗಳು ದೆಹಲಿ,ಹರಿದ್ವಾರ್ ಬದ್ರಿನಾಥ್,ಕೇದಾರನಾಥ ಗಂಗೋತ್ರಿ,ಯಮುನೋತ್ರಿ 30000/`42000/ ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್ 9739847429/ 9845560219/ 9886968166

ಕಾಶಿ ಗಯಾ ಬೈದ್ಯನಾಥಧಾಮ್ ಅಯೋಧ್ಯ ನೈಮಿಷಾರಣ್ಯ 20.09.2024 22.09.2024 27.09.2024 14.10.2024 ರಿಂದ 8 ದಿನಗಳು. ದೆಹಲಿ ಯುಮುನೋತ್ರಿ,ಗಂಗೋತ್ರಿ ಕೇದಾರನಾಥ್ ಬದರಿನಾಥ್ 13.09.2024 20.09.2024 27.09.2024 14.10.2024 ರಿಂದ 14 ದಿನಗಳು. ಸೋಮನಾಥ್ ದ್ವಾರಕಾ,ಮಾತ್ರಗಯಾ ಉಜ್ಜಯಿನಿ ಓಂಕಾರೇಶ್ವರ್ ಅಷ್ಟ ಜ್ಯೋತಿರ್ಲಿಂಗ ಪ್ರವಾಸ 14.10.2024 ರಿಂದ 15 ದಿನಗಳು. ಕಾಶ್ಮೀರ್,ಗುಲ್ಮಾರ್ಗ್ ಸೋನಾಮಾರ್ಗ ವೈಷ್ಣೋದೇವಿ 04.10.2024 14.10.2024 27.10.2024 ರಿಂದ 10 ದಿನಗಳು. ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ

ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ

ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರ್ಷದ

ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)

Nursery Teachers Training Course

Post Graduation Diploma in Information Technology

6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು.

(Qual : SSLC/ PUC) ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ

DIPLOMA IN COMPUTER DATA ENTRY OPERATOR

ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ

Sharing Computer Literacy with Govt. of India

Recognized by Govt. of Karnataka

Email: info@thercss.com

Website: www.thercss.com

The RCSS

MOB.: 9008419955, 9901520055, 9449198555

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ

ಶಿಕ್ಷಣ

www.dhclassifieds.com

ಬುಕ್ ಮಾಡಿ

*Conditions apply

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9731810277 | +91 9845114560 | +91 9900428036

ಕೊಳೆರೋಗ ಆರಂಭ: ಬೆಳೆಗಾರರು ಕಂಗಾಲು

ಮಳೆ: ನೆಲಕಚ್ಚಿದ ಕಾಫಿ ಬೆಳೆ

• ವಿಜಯಕುಮಾರ್ ಎಸ್.ಕೆ.

ಕೊಳೆರೋಗದಿಂದ ಕಾಫಿ ಗಿಡದಲ್ಲೇ ಕರಗುತ್ತಿದೆ

ಚಿಕ್ಕಮಗಳೂರು: ಜಿಲ್ಲೆಯಲ್ಲಿ ಬಿರುಗಾಳಿ, ಮಳೆಗೆ ಕಾಫಿ ಫಸಲು ಉದುರಿ ನೆಲಕಚ್ಚುತ್ತಿದ್ದು, ಕೊಳೆರೋಗ ಕೂಡ ಕಾಣಿಸಿಕೊಂಡಿದೆ. ಕಾಫಿಗೆ ಬೆಳೆ ವಿಮೆ ಸೌಲಭ್ಯ ಇಲ್ಲದಿರುವುದು ಬೆಳೆಗಾರರನ್ನು ಆತಂಕಕ್ಕೆ ದೂಡಿದೆ.

ಕಳೆದ ವರ್ಷ ಮಳೆ ಕೊರತೆಯಿಂದ ಬೇಸಿಗೆಯಲ್ಲಿ ಕಾಫಿ ಗಿಡಗಳನ್ನು ಉಳಿಸಿಕೊಳ್ಳಲು ರೈತರು ಪರದಾಡಿದ್ದರು. ಈ ವರ್ಷ ನಿರಂತರ ಮಳೆ ಮತ್ತು ಗಾಳಿಗೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಾಫಿ ಗಿಡದಲ್ಲಿ ಹೂವುಗಳು ಕಾಯಿಗಳ ರೂಪ ಪಡೆದಿದ್ದು, ಹಣ್ಣಾಗುವ ಹಂತದಲ್ಲಿವೆ.

ಆದರೆ, ಈಗ ತೋಟಗಳಿಗೆ ಕಾಲಿಟ್ಟರೆ ಎಲ್ಲೆಡೆ ಫಸಲು ಉದುರಿರುವುದೇ ಕಾಣಸುತ್ತಿದೆ. ನೆಲದಲ್ಲಿ ಹಸಿರು ಬಣ್ಣದ ಕಾಫಿ ಕಾಯಿಗಳನ್ನು ಕಂಡು ಬೆಳೆಗಾರರು ಕಣ್ಣೀರಿಡುತ್ತಿದ್ದಾರೆ. 'ಬೇಸಿಗೆಯಲ್ಲಿ ಕಷ್ಟಪಟ್ಟು ತೋಟಗಳನ್ನು ಉಳಿಸಿಕೊಂಡಿದ್ದೆವು. ಈಗ ಫಸಲು ನೆಲಕಚ್ಚಿರುವುದನ್ನು ನೋಡಿದರೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ' ಎಂದು ಬೇಸರ ವ್ಯಕ್ತಪಡಿಸುತ್ತಾರೆ.

'ಮತ್ತೊಂದೆಡೆ ಗಿಡದಲ್ಲಿ ಕಾಫಿ ಕಾಯಿಗಳ ಗೊಂಚಲುಗಳೇ ಕೊಳೆಯುತ್ತಿರುವುದು ಕಾಣಿಸುತ್ತಿದೆ. ಮಳೆ ಹೆಚ್ಚಾಗಿರುವುದರಿಂದ ಕೊಳೆರೋಗ ಆರಂಭವಾಗಿದೆ. ಕೊಳೆತಿರುವ ಕಾಯಿಗಳೂ ನೆಲಕ್ಕೆ ಬೀಳುತ್ತಿವೆ. ಈ ವರ್ಷವೂ ಬೆಳೆಗಾರರ ಬದುಕು ದುಸ್ತರವಾಗಲಿದೆ' ಎಂದು ಹೇಳುತ್ತಾರೆ.

'ಬಿರುಗಾಳಿಯಿಂದ ತೋಟಗಳಲ್ಲಿರುವ ಮರಗಳು ಉರುಳಿ ಬೀಳುತ್ತಿವೆ. ಅವುಗಳ ಜತೆಗೆ ಕಾಫಿ ಫಸಲು ಕೂಡ ನೆಲಕ್ಕೆ ಬೀಳುತ್ತಿದೆ. ಒಟ್ಟಾರೆ, ಶೇ 50ರಿಂದ ಶೇ60ರಷ್ಟು ಫಸಲು ಮಣ್ಣು ಪಾಲಾಗಿದೆ' ಎಂದು ಕರ್ನಾಟಕ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಎಚ್.ಟಿ.ಮೋಹನ್‌ಕುಮಾರ್ ಹೇಳುತ್ತಾರೆ.

'ಕಾಫಿಗೆ ಈಗ ಉತ್ತಮ ಬೆಲೆ ಇದೆ. ಈ ಸಂದರ್ಭದಲ್ಲಿ ತೋಟಗಳಲ್ಲಿ ಫಸಲು ಉಳಿದಿಲ್ಲ. ಕೊಡಗು, ಹಾಸನ, ಚಿಕ್ಕಮಗಳೂರು ಮೂರೂ ಜಿಲ್ಲೆಗಳ ಬೆಳೆಗಾರರ ಸ್ಥಿತಿ ಇದೇ ಆಗಿದೆ. ಮಳೆ ಒಂದು ವಾರ ಬಿಡುವು ನೀಡಿದ್ದರೂ ಔಷಧ ಸಿಂಪಡಿಸಿ ಕೊಳೆರೋಗ ತಡೆಯಬಹುದಿತ್ತು. ನಿರಂತರವಾಗಿ ಸುರಿಯುತ್ತಿರುವುದರಿಂದ ಔಷಧ ಸಿಂಪಡಣೆಯೂ ಸಾಧ್ಯವಾಗಿಲ್ಲ' ಎಂದು ಹೇಳಿದರು.

'ಕಾಫಿಗೆ ಬೆಳೆವಿಮೆ ಸೌಲಭ್ಯ ಇಲ್ಲ. ಮಳೆಯಿಂದ ಶೇ 33ಕ್ಕಿಂತ ಹೆಚ್ಚು ಹಾನಿಯಾದರೆ ಎನ್‌ಡಿಆರ್‌ಎಫ್‌ನಿಂದ ಹೆಕ್ಟೇರ್‌ಗೆ ₹18 ಸಾವಿರ ನೀಡಲಾಗುತ್ತದೆ. ಅದು ಕೂಡ ಎರಡು ಹೆಕ್ಟೇರ್‌ಗೆ (5 ಎಕರೆ) ಸೀಮಿತ. ಎಸ್‌ಡಿಆರ್‌ಎಫ್ ಮೂಲಕ ಹೆಕ್ಟೇರ್‌ಗೆ ₹10 ಸಾವಿರ ನೀಡಲಾಗುತ್ತದೆ. ಅದು ಕೂಡ ಎರಡು ಹೆಕ್ಟೇರ್‌ಗೆ ಸೀಮಿತ. ಬೆಳೆಗಾರರು ಎಕರೆಗೆ ₹1 ಲಕ್ಷಕ್ಕೂ ಹೆಚ್ಚು ಖರ್ಚು ಮಾಡಿದ್ದಾರೆ. ಈಗ 5 ಎಕರೆಗೆ ₹56 ಸಾವಿರ ಪರಿಹಾರ ಸಿಕ್ಕರೆ ಪ್ರಯೋಜನವಿಲ್ಲ' ಎಂದು ತಿಳಿಸಿದರು.

ಜಂಟಿ ಸರ್ವೆಗೆ ಮನವಿ

'ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್‌ನಿಂದ ಪರಿಹಾರ ದೊರಕಬೇಕೆಂದರೆ ಕಂದಾಯ, ತೋಟಗಾರಿಕೆ ಇಲಾಖೆ ಮತ್ತು ಕಾಫಿ ಮಂಡಳಿಯ ಜಂಟಿ ಸರ್ವೆ ನಡೆಸಬೇಕು. ಈ ಸರ್ವೆ ನಡೆಸುವಂತೆ ಕಾಫಿ ಮಂಡಳಿಗೆ ಮನವಿ ಮಾಡಲಾಗಿದೆ' ಎಂದು ಕರ್ನಾಟಕ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಎಚ್.ಟಿ. ಮೋಹನ್‌ಕುಮಾರ್ ತಿಳಿಸಿದರು.

'ಜಂಟಿ ಸರ್ವೆ ನಡೆಸಲು ಕಾಫಿ ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ಮನವಿ ಮಾಡಿದ್ದೇವೆ. ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲಾಧಿಕಾರಿ-ಯವರ ಗಮನಕ್ಕೆ ತರುವುದಾಗಿ ಅವರು ಭರವಸೆ ನೀಡಿದ್ದಾರೆ' ಎಂದು ಹೇಳಿದರು.

ಬೆಳೆ ವಿಮೆ ಸೌಲಭ್ಯಕ್ಕೆ ಚಿಂತನೆ

'ಕಾಫಿ ಮಂಡಳಿಯಿಂದ ಮೂರು ಜಿಲ್ಲೆಗಳಲ್ಲಿ ಸರ್ವೆ ನಡೆಸಲಾಗುತ್ತಿದೆ. ಕಾಫಿ ಸಂಶೋಧನಾ ಕೇಂದ್ರದ ವಿಜ್ಞಾನಿಗಳು ತಂಡದಲ್ಲಿ ಇದ್ದಾರೆ' ಎಂದು ಕಾಫಿ ಮಂಡಳಿ ಅಧ್ಯಕ್ಷ ದಿನೇಶ್ ದೇವವೃಂದ 'ಪ್ರಜಾವಾಣಿ'ಗೆ ತಿಳಿಸಿದರು.

'ಸರ್ವೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು. ಎಷ್ಟು ಹಾನಿಯಾಗಿದೆ ಎಂಬುದನ್ನು ನೋಡಿಕೊಂಡು ಸರ್ಕಾರ ತೀರ್ಮಾನ ಕೈಗೊಳ್ಳಲಿದೆ' ಎಂದು ಹೇಳಿದರು.

'ಕಾಫಿಗೆ ಬೆಳೆ ವಿಮೆ ಸೌಲಭ್ಯ ಕಲ್ಪಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸುತ್ತಿದೆ. ಅದಕ್ಕೆ ಬೇಕಿರುವ ಮಾಹಿತಿಯನ್ನು ಮಂಡಳಿಯಿಂದ ನೀಡಲಾಗುತ್ತಿದೆ. ಈ ಸೌಲಭ್ಯ ದೊರೆತರೆ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ' ಎಂದರು.

ನಾಮಿನಿ–ಉಯಿಲು ವ್ಯತ್ಯಾಸವೇನು?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಅಂಚೆ ಕಚೇರಿ ಹೂಡಿಕೆ, ಬ್ಯಾಂಕ್ ಖಾತೆ, ಷೇರು ಹೂಡಿಕೆ, ಮ್ಯೂಚುವಲ್ ಫಂಡ್ ಹೂಡಿಕೆ, ಪಿಪಿಎಫ್, ಇಪಿಎಫ್ ಹೀಗೆ ಬಹುತೇಕ ಎಲ್ಲ ಹೂಡಿಕೆಗಳಿಗೆ ಈಗ ನಾಮಿನಿಯನ್ನು (ನಾಮ ನಿರ್ದೇಶನ) ಕಡ್ಡಾಯಗೊಳಿಸಲಾಗಿದೆ.

ಆದರೆ, ನಾಮಿನಿಯಲ್ಲಿ ಒಬ್ಬರ ಹೆಸರಿದ್ದು ವಿಲ್‌ನಲ್ಲಿ (ಉಯಿಲು) ಮತ್ತೊಬ್ಬರ ಹೆಸರು ಸೂಚಿಸಿದ್ದರೆ ಹಣ, ಆಸ್ತಿ ಯಾರ ಪಾಲಾಗುತ್ತದೆ? ಹೀಗೊಂದು ಪ್ರಶ್ನೆ ನಿಮಗೆ ಎದುರಾಗಿರಬಹುದು. ಬನ್ನಿ, ನಾಮಿನಿ ಮತ್ತು ವಿಲ್ ನಡುವಿನ ವ್ಯತ್ಯಾಸ ತಿಳಿದುಕೊಂಡು ಯಾವುದಕ್ಕೆ ಯಾವ ಸಂದರ್ಭದಲ್ಲಿ ಹೆಚ್ಚು ಮಾನ್ಯತೆ ಸಿಗುತ್ತದೆ ಎನ್ನುವುದನ್ನು ಅರಿಯೋಣ.

ನಾಮಿನಿ ಮತ್ತು ವಿಲ್ ನಡುವಿನ ವ್ಯತ್ಯಾಸ: ನಾಮಿನಿ ಮತ್ತು ವಿಲ್ ಎರಡು ಕೂಡ ಬಹಳ ಮುಖ್ಯವಾದ ಕಾನೂನುಬದ್ಧ ದಾಖಲೆಗಳಾಗಿವೆ. 1925ರ ಉತ್ತರಾಧಿಕಾರ ಕಾಯ್ದೆ ಪ್ರಕಾರ ವಿಲ್ ಕಾನೂನು ದಾಖಲೆಯಾಗಿದೆ. ವ್ಯಕ್ತಿಯ ಮರಣದ ನಂತರ ಸ್ಥಿರಾಸ್ತಿ, ಚರಾಸ್ತಿಗಳು ಯಾರಿಗೆ ಸಲ್ಲಬೇಕು ಮತ್ತು ಹೇಗೆ ಹಂಚಿಕೆಯಾಗಬೇಕು ಎನ್ನುವುದನ್ನು ಇದು ತಿಳಿಸಿಕೊಡುತ್ತದೆ.

ಉದಾಹರಣೆಗೆ ವ್ಯಕ್ತಿಯೊಬ್ಬರು ಮ್ಯೂಚುವಲ್ ಫಂಡ್, ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್), ಸಾರ್ವಜನಿಕ ಭವಿಷ್ಯ ನಿಧಿಯಲ್ಲಿ (ಪಿಪಿಎಫ್) ಹೂಡಿಕೆ ಮಾಡಿದ್ದಾರೆ ಎಂದುಕೊಳ್ಳಿ. ಜೊತೆಗೆ, ಎರಡು ಎಕರೆ ಸ್ವಯಾರ್ಜಿತ ಕೃಷಿ ಜಮೀನು ಹೊಂದಿದ್ದು, ಸ್ವಂತ ಮನೆಯಲ್ಲೇ ವಾಸವಿದ್ದಾರೆ ಎಂದು ಭಾವಿಸಿ. ಇಂತಹ ಸಂದರ್ಭದಲ್ಲಿ ಯಾವ್ಯಾವ ಆಸ್ತಿ ಯಾರಿಗೆ ಸಲ್ಲಬೇಕು ಎಂದು ವಿಲ್‌ನಲ್ಲಿ ನಮೂದಿಸಬಹುದು. ಪತಿಗೆ, ಪತ್ನಿಗೆ, ಮಕ್ಕಳಿಗೆ, ಮೊಮ್ಮಕ್ಕಳಿಗೆ, ಸಂಬಂಧಿಕರಿಗೆ, ದತ್ತಿ ಸಂಸ್ಥೆಗಳಿಗೆ ದಾನ ಹೀಗೆ ಅವರಿಷ್ಟದಂತೆ ಆಸ್ತಿ ಹಂಚಿಕೆ ಮಾಡಬಹುದು.

ನಾಮಿನಿಯು ವ್ಯಕ್ತಿಯ ಮರಣದ ನಂತರ ನಿರ್ದಿಷ್ಟ ಆಸ್ತಿಯ ಹಕ್ಕುದಾರ ಯಾರು ಎನ್ನುವುದನ್ನಷ್ಟೇ ಸೂಚಿಸುತ್ತದೆ. ಆಸ್ತಿಯ ಹಕ್ಕುದಾರನಾಗುವುದಕ್ಕೂ ಆಸ್ತಿಯ ಮಾಲೀಕನಾಗುವುದಕ್ಕೂ ವ್ಯತ್ಯಾಸವಿದೆ. ನಾಮಿನಿ ಕೇವಲ ಆಸ್ತಿಯ ಹಕ್ಕನ್ನು ಮಾತ್ರ ಒದಗಿಸುತ್ತದೆ. ನಾಮಿನಿ ಮಾಡಲಾಗಿರುವ ವ್ಯಕ್ತಿ ಆಸ್ತಿಯ ಪಾಲಕನಾಗಿರುತ್ತಾನೆ ಅಷ್ಟೇ. ಆಸ್ತಿಯ ಹಕ್ಕುದಾರನಾಗುವ ವ್ಯಕ್ತಿ ಅದನ್ನು ನಿರ್ವಹಿಸಿ ಸರಿಯಾದ ಸಂದರ್ಭದಲ್ಲಿ ಕಾನೂನುಬದ್ಧ ಉತ್ತರಾಧಿಕಾರಿಗೆ ವರ್ಗಾಯಿಸಬೇಕಾಗುತ್ತದೆ.

ಹೀಗಿರುವಾಗ ನಾಮಿನಿ ಅಗತ್ಯವೇನು ಎಂಬ ಪ್ರಶ್ನೆ ಬರಬಹುದು. ಎಷ್ಟೋ ಸಂದರ್ಭಗಳಲ್ಲಿ ವ್ಯಕ್ತಿಗಳು ವಿಲ್ ಬರೆದಿರುವುದಿಲ್ಲ. ಇಂತಹ ಸಂದರ್ಭದಲ್ಲಿ ನಾಮಿನಿ ಆಗಿರುವ ವ್ಯಕ್ತಿಗೆ ಆಸ್ತಿ ವರ್ಗಾವಣೆಯಾಗಿ ಬಳಿಕ ಕಾನೂನುಬದ್ಧ ಉತ್ತರಾಧಿಕಾರಿಗೆ ಆಸ್ತಿ ಸಲ್ಲುತ್ತದೆ. ವಿಲ್ ಕೂಡ ಬರೆದಿಲ್ಲ, ನಾಮಿನಿ ಕೂಡ ಮಾಡಿಲ್ಲದಿದ್ದರೆ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ವರ್ಗಾಯಿಸಲು ಕಷ್ಟವಾಗುತ್ತದೆ.

ಸಂದರ್ಭ 1: ಉದಾಹರಣೆಗೆ ವ್ಯಕ್ತಿಯೊಬ್ಬರು ಷೇರುಗಳಲ್ಲಿ ಹೂಡಿಕೆ ಮಾಡಿದ್ದು ತಮ್ಮ ಸೋದರನನ್ನು ಅದಕ್ಕೆ ನಾಮಿನಿಯಾಗಿ ಮಾಡಿದ್ದಾರೆ ಎಂದುಕೊಳ್ಳಿ. ಆದರೆ, ಅದೇ ವ್ಯಕ್ತಿ ವಿಲ್ ಬರೆಯುವಾಗ ಪುತ್ರ ಅಥವಾ ಪುತ್ರಿಗೆ ಷೇರುಗಳು ಸಲ್ಲಬೇಕು ಎಂದು ನಮೂದಿಸಿದ್ದಾರೆ ಎಂದು ಭಾವಿಸಿ. ಇಂತಹ ಸಂದರ್ಭದಲ್ಲಿ ವ್ಯಕ್ತಿಯ ಮರಣದ ನಂತರ ಷೇರುಗಳು ಮೊದಲು ನಾಮಿನಿಯಾಗಿರುವ ಸೋದರನಿಗೆ ವರ್ಗಾವಣೆಗೊಂಡು ಬಳಿಕ ಕಾನೂನುಬದ್ಧ ಉತ್ತರಾಧಿಕಾರಿಯಾಗಿರುವ ವ್ಯಕ್ತಿಯ ಪುತ್ರ ಅಥವಾ ಪುತ್ರಿ ಖಾತೆಗೆ ಬರುತ್ತವೆ.

ಸಂದರ್ಭ 2: ಉದಾಹರಣೆಗೆ ವ್ಯಕ್ತಿಯೊಬ್ಬ ಷೇರುಗಳಲ್ಲಿ ಹೂಡಿಕೆ ಮಾಡಿದ್ದು, ತಮ್ಮ ಸೋದರನನ್ನು ಅದಕ್ಕೆ ನಾಮಿನಿಯಾಗಿ ಮಾಡಿದ್ದಾರೆ ಎಂದುಕೊಳ್ಳಿ. ಮತ್ತೆ ವಿಲ್ ಬರೆಯುವಾಗಲೂ ಸೋದರನಿಗೇ ಅದು ಸಲ್ಲಬೇಕು ಎಂದು ಬರೆದಿದ್ದಾರೆ ಎಂದು ಭಾವಿಸಿ.

ಇಂತಹ ಸಂದರ್ಭದಲ್ಲಿ ವ್ಯಕ್ತಿಯ ಮರಣದ ನಂತರ ಷೇರುಗಳು ಸೋದರನಿಗೆ ಮಾತ್ರ ಸಿಗುತ್ತವೆ.

ಕಿವಿಮಾತು: ನಾಮಿನಿ ಮತ್ತು ವಿಲ್‌ನ ಮಹತ್ವ ನಿಮಗೆ ಅರ್ಥವಾಗಿದೆ ಎಂದು ಭಾವಿಸಿದ್ದೇನೆ. ನಿಮ್ಮ ಆಸ್ತಿ ಸುಲಭವಾಗಿ ನಿಮ್ಮವರಿಗೆ ವರ್ಗಾವಣೆಯಾಗಬೇಕಾದರೆ ತಪ್ಪದೇ ನಾಮಿನಿ ಮತ್ತು ವಿಲ್ ಮಾಡಿ. ಪೂರಕ ಸಲಹೆಗೆ ಕಾನೂನು ತಜ್ಞರ ನೆರವು ಪಡೆಯಿರಿ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಮತ್ತೆ ಪುಟಿದೆದ್ದ ಷೇರು ಸೂಚ್ಯಂಕಗಳು

ಜುಲೈ 26ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. 81,332 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.90ರಷ್ಟು ಗಳಿಸಿಕೊಂಡಿದೆ. 24,834 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.24ರಷ್ಟು ಜಿಗಿದಿದೆ. ವಾರದ ಆರಂಭದ ನಾಲ್ಕು ದಿನಗಳ ವಹಿವಾಟಿನಲ್ಲಿ ಕುಸಿತ ಕಂಡಿದ್ದ ಸೂಚ್ಯಂಕಗಳು, ವಾರಾಂತ್ಯದಲ್ಲಿ ಗಣನೀಯ ಏರಿಕೆ ಕಂಡಿವೆ.

ಜೂನ್ ತ್ರೈಮಾಸಿಕದಲ್ಲಿ ಅಮೆರಿಕದ ಜಿಡಿಪಿಯು ಶೇ 2.8ರಷ್ಟು ಬೆಳವಣಿಗೆ ಕಂಡಿರುವುದು, ಅಮೆರಿಕದಲ್ಲಿ ಹಣದುಬ್ಬರ ಇಳಿಕೆಯಾಗಿರುವುದು, ಮುಂಬರುವ ದಿನಗಳಲ್ಲಿ ಅಮೆರಿಕದ ಫೆಡರಲ್ ರಿಸರ್ವ್ ಬ್ಯಾಂಕ್ ಬಡ್ಡಿದರ ಕಡಿತ ಮಾಡಬಹುದು ಎಂಬ ವಿಶ್ವಾಸ ಸೇರಿ ಹಲವು ಅಂಶಗಳು ಮಾರುಕಟ್ಟೆ ಪುಟಿದೇಳಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಬ್ಯಾಂಕ್ ಶೇ 1.86, ನಿಫ್ಟಿ ರಿಯಲ್ ಎಸ್ಟೇಟ್ ಶೇ 1.69, ಫೈನಾನ್ಸ್ ಶೇ 1.19ರಷ್ಟು ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 0.44ರಷ್ಟು ಕುಸಿದಿವೆ. ನಿಫ್ಟಿ ಫಾರ್ಮಾ ಶೇ 5.77, ಮಾಧ್ಯಮ ಶೇ 5.74, ಆಟೊ ಶೇ 5.16, ಎನರ್ಜಿ ಶೇ 2.79, ಎಫ್‌ಎಂಸಿಜಿ ಶೇ 2.69, ಮಾಹಿತಿ ತಂತ್ರಜ್ಞಾನ ಶೇ 2.64, ಅನಿಲ ಮತ್ತು ತೈಲ ಶೇ 2.51 ಮತ್ತು ನಿಫ್ಟಿ ಲೋಹ ವಲಯ ಶೇ 1.81ರಷ್ಟು ಹೆಚ್ಚಳ ಕಂಡಿವೆ.

ವಾರದ ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಟಾಟಾ ಮೋಟರ್ಸ್ ಶೇ 12.98, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಶೇ 10.53, ಸನ್ ಫಾರ್ಮಾ ಶೇ 9.38, ಎನ್‌ಟಿಪಿಸಿ ಶೇ 8.78, ಬಿಪಿಸಿಎಲ್ ಶೇ 8.2, ಟೈಟನ್ ಶೇ 6.82, ಸಿಪ್ಲಾ ಶೇ 6.39, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 6.27, ಡಿವೀಸ್ ಲ್ಯಾಬ್ ಶೇ 6.05, ಐಟಿಸಿ ಶೇ 5.95 ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 4.96ರಷ್ಟು ಗಳಿಸಿಕೊಂಡಿವೆ.

ಎಕ್ಸಿಸ್ ಬ್ಯಾಂಕ್ ಶೇ 8.86, ವಿಪ್ರೊ ಶೇ 5.79, ನೆಸ್ಲೆ ಇಂಡಿಯಾ ಶೇ 4.63, ಬಜಾಜ್ ಫಿನ್‌ಸರ್ವ್ ಶೇ 3.5, ಐಸಿಐಸಿಐ ಬ್ಯಾಂಕ್ ಶೇ 3.25, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶೇ 2.95, ರಿಲಯನ್ಸ್ ಇಂಡಸ್ಟ್ರೀಸ್ ಶೇ 2.95, ಬಜಾಜ್ ಫೈನಾನ್ಸ್ ಶೇ 2.09, ಇಂಡಸ್‌ಇಂಡ್ ಬ್ಯಾಂಕ್ ಶೇ 1.79, ಹಿಂದುಸ್ತಾನ್ ಯೂನಿಲಿವರ್ ಶೇ 0.55 ಮತ್ತು ಕೋಟಕ್ ಮಹೀಂದ್ರ ಬ್ಯಾಂಕ್ ಶೇ 0.41ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ಭಾರತ್ ಎಲೆಕ್ಟ್ರಾನಿಕ್ಸ್, ಎಕ್ಸೈಡ್ ಇಂಡಸ್ಟ್ರೀಸ್, ಎಲ್‌ಐಸಿಎಚ್‌ಎಲ್, ಬಿಪಿಸಿಎಲ್, ಎಸಿಸಿ, ಇಂಡಿಯನ್ ಬ್ಯಾಂಕ್, ಅದಾನಿ ಪವರ್, ಮಾರುತಿ ಸುಜುಕಿ, ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಸ್ಟೀಲ್, ಅಂಬುಜಾ ಸಿಮೆಂಟ್, ಬ್ಯಾಂಕ್ ಆಫ್ ಬರೋಡಾ, ಐಟಿಸಿ, ಟಾಟಾ ಮೋಟರ್ಸ್, ಸನ್ ಫಾರ್ಮಾ, ಡಾಬರ್ ಇಂಡಿಯಾ, ಕಲ್ಯಾಣ್ ಜ್ಯುವೆಲರ್ಸ್, ಟೈಟನ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಯು ಷೇರುಪೇಟೆಗಳ ಮೇಲೆ ಪರಿಣಾಮ ಬೀರಲಿವೆ.

‘ತೆರಿಗೆ ಪಾವತಿ ಒಪ್ಪಿಗೆ ಪತ್ರ ಕಡ್ಡಾಯವಲ್ಲ’

ನವದೆಹಲಿ (ಪಿಟಿಐ): ವಿದೇಶಕ್ಕೆ ತೆರಳುವ ಎಲ್ಲರೂ ತೆರಿಗೆ ಪಾವತಿಸಿರುವ ಬಗ್ಗೆ ಆದಾಯ ತೆರಿಗೆ ಇಲಾಖೆಯಿಂದ ಒಪ್ಪಿಗೆ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯವಲ್ಲ. ಅಧಿಕ ಮೊತ್ತದ ತೆರಿಗೆ ಬಾಕಿ ಉಳಿಸಿಕೊಂಡವರಿಗೆ ಮಾತ್ರವೇ ಹೊಸ ನಿಯಮವು ಅನ್ವಯವಾಗಲಿದೆ ಎಂದು ಕೇಂದ್ರ ಸರ್ಕಾರವು, ಭಾನುವಾರ ಸ್ಪಷ್ಟಪಡಿಸಿದೆ.

ಸರ್ಕಾರವು ಲೋಕಸಭೆಯಲ್ಲಿ ಹಣಕಾಸು ಮಸೂದೆ 2024 ಅನ್ನು ಮಂಡಿಸಿದೆ. ಈ ಮಸೂದೆಯಲ್ಲಿ ಕಪ್ಪು ಹಣ ಕಾಯ್ದೆ 2015ರಲ್ಲಿ ಕಪ್ಪು ಹಣ ತಡೆಗೆ ಇರುವ ಉಲ್ಲೇಖವನ್ನು ಮಸೂದೆಯಲ್ಲಿ ಸೇರ್ಪಡೆಗೊಳಿಸಲು ಹಣಕಾಸು ಸಚಿವಾಲಯವು ಪ್ರಸ್ತಾಪಿಸಿದೆ. ಇದರನ್ವಯ ಯಾವುದೇ ವ್ಯಕ್ತಿಯು ವಿದೇಶ ಪ್ರವಾಸಕ್ಕೆ ತೆರಳುವ ಮೊದಲು ತೆರಿಗೆ ಬಾಕಿ ಉಳಿಸಿಕೊಂಡಿಲ್ಲ ಎಂಬ ಬಗ್ಗೆ ಪ್ರಮಾಣ ಪತ್ರ ಸಲ್ಲಿಸುವುದು ಕಡ್ಡಾಯವಾಗಿದೆ.

ಎಲ್ಲರಿಗೂ ಈ ಮಾನದಂಡವನ್ನು ಕಡ್ಡಾಯಗೊಳಿಸುವುದು ಸರಿಯಲ್ಲ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹಲವು ಮಂದಿ ಆಕ್ರೋಶ ವ್ಯಕ್ತಪಡಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿರುವ ಕೇಂದ್ರವು, ‘ಉದ್ದೇಶಿತ ತಿದ್ದುಪಡಿಯು ಎಲ್ಲರಿಗೂ ಅನ್ವಯವಾಗುವುದಿಲ್ಲ’ ಎಂದು ಸ್ಪಷ್ಟಪಡಿಸಿದೆ.

ಗಂಭೀರವಾದ ಹಣಕಾಸಿನ ಅಕ್ರಮ ಪ್ರಕರಣದಲ್ಲಿ ಭಾಗಿಯಾಗಿದ್ದು, ಆದಾಯ ತೆರಿಗೆ ಕಾಯ್ದೆಯಡಿ ಈ ಪ್ರಕರಣದಲ್ಲಿ ತನಿಖೆಗೆ ಒಳಪಡುವವರಿಗೆ ಹೊಸ ನಿಯಮವು ಅನ್ವಯವಾಗಲಿದೆ. ₹10 ಲಕ್ಷಕ್ಕಿಂತ ಹೆಚ್ಚು ಮೊತ್ತದ ನೇರ ತೆರಿಗೆ ಬಾಕಿ ಉಳಿಸಿಕೊಂಡವರಿಗೆ ನಿಯಮವು ಅನ್ವಯಿಸುತ್ತದೆ ಎಂದು ಹೇಳಿದೆ.

ತಪ್ಪು ಮಾಹಿತಿಗೆ ಶಿಕ್ಷೆ ಗ್ಯಾರಂಟಿ

ನವದೆಹಲಿ (ಪಿಟಿಐ): ತೆರಿಗೆದಾರರು ರಿಟರ್ನ್ಸ್ ಸಲ್ಲಿಕೆ ವೇಳೆ ವೆಚ್ಚಗಳಿಗೆ ಸಂಬಂಧಿಸಿದಂತೆ ನಕಲಿ ದಾಖಲೆ ಪತ್ರಗಳನ್ನು ಸಲ್ಲಿಸಬಾರದು. ಆದಾಯ ಗಳಿಕೆ ಬಗ್ಗೆಯೂ ತಪ್ಪು ಮಾಹಿತಿ ನೀಡುವುದು ಶಿಕ್ಷಾರ್ಹ ಅಪರಾಧವಾಗಲಿದೆ. ಜೊತೆಗೆ, ಇದು ಮರುಪಾವತಿಯ (ರೀಫಂಡ್) ವಿಳಂಬಕ್ಕೂ ಕಾರಣವಾಗಲಿದೆ ಎಂದು ಆದಾಯ ತೆರಿಗೆ ಇಲಾಖೆಯು ತಿಳಿಸಿದೆ.

2024–25ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ ಎಲ್ಲಾ ವರ್ಗದ ತೆರಿಗೆದಾರರು ರಿಟರ್ನ್ಸ್ ಸಲ್ಲಿಕೆಗೆ ಜುಲೈ 31 ಕೊನೆಯ ದಿನವಾಗಿದೆ. ಕೇಂದ್ರೀಯ ನೇರ ತೆರಿಗೆಗಳ ಮಂಡಳಿಯ ಮಾಹಿತಿ ಪ್ರಕಾರ, ಜುಲೈ 26ರ ವರೆಗೆ 5 ಕೋಟಿಗೂ ಹೆಚ್ಚು ತೆರಿಗೆದಾರರು ರಿಟರ್ನ್ಸ್ ಸಲ್ಲಿಸಿದ್ದಾರೆ.

ತೆರಿಗೆದಾರರು ಸರಿಯಾಗಿ ರಿಟರ್ನ್ಸ್ ಸಲ್ಲಿಸಿದರೆ ಸಕಾಲದಲ್ಲಿ ಮರುಪಾವತಿ ಮೊತ್ತವೂ ಬ್ಯಾಂಕ್‌ನ ಖಾತೆಗೆ ಜಮೆಯಾಗಲಿದೆ ಎಂದು ಇಲಾಖೆಯು ತಿಳಿಸಿದೆ.

ಈಕ್ವಿಟಿ ಮ್ಯೂಚುವಲ್ ಫಂಡ್ ₹94,151 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ₹94,151 ಕೋಟಿ ಬಂಡವಾಳ ಹೂಡಿಕೆಯಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹18,358 ಕೋಟಿ ಹೂಡಿಕೆಯಾಗಿತ್ತು. ಇದಕ್ಕೆ ಹೋಲಿಸಿದರೆ ಹೂಡಿಕೆ ಪ್ರಮಾಣದಲ್ಲಿ ಐದು ಪಟ್ಟು ಏರಿಕೆಯಾಗಿದೆ.

ಸರ್ಕಾರದ ಉತ್ತಮ ನೀತಿಗಳಿಂದಾಗಿ ದೇಶದ ಆರ್ಥಿಕ ಸ್ಥಿತಿ ಸದೃಢವಾಗಿದೆ. ಇದರಿಂದ ಹೂಡಿಕೆದಾರರಲ್ಲಿ ವಿಶ್ವಾಸ ವೃದ್ಧಿಸಿದೆ. ಷೇರುಗಳ ಹೂಡಿಕೆಯಲ್ಲಿ ಗಳಿಕೆ ಹೆಚ್ಚಿದೆ. ಹಾಗಾಗಿ, ಬಂಡವಾಳದ ಒಳಹರಿವಿನಲ್ಲಿ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಅಲ್ಲದೆ, ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆಯಾಗಿರುವ ಸಂಪತ್ತಿನ ನಿರ್ವಹಣಾ ಮೌಲ್ಯವು (ಎಯುಎಂ) ₹27.68 ಲಕ್ಷ ಕೋಟಿಗೆ ತಲುಪಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ನಿರ್ವಹಣಾ ಮೌಲ್ಯವು ₹17.43 ಲಕ್ಷ ಕೋಟಿ ಇತ್ತು. ಇದಕ್ಕೆ ಹೋಲಿಸಿದರೆ ಶೇ 59ರಷ್ಟು ಹೆಚ್ಚಳವಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್ಐ) ತಿಳಿಸಿದೆ.

ತಿಂಗಳವಾರು ಹೂಡಿಕೆ (ಕೋಟಿಗಳಲ್ಲಿ)	
ಏ.	₹18,917
ಮೇ	₹34,697
ಜೂ.	₹40,537

ಈ ಅವಧಿಯಲ್ಲಿ ಹೊಸದಾಗಿ 3 ಕೋಟಿ ಹೂಡಿಕೆದಾರರು ಸೇರ್ಪಡೆಯಾಗಿದ್ದಾರೆ. ಒಟ್ಟು ಹೂಡಿಕೆದಾರರ ಸಂಖ್ಯೆ 13.3 ಕೋಟಿ ದಾಟಿದೆ.

‘ಜನರ ಹಣಕಾಸಿನ ಸಾಕ್ಷರತೆ ಸುಧಾರಿಸಿದೆ. ಹೂಡಿಕೆಯ ವೇದಿಕೆಗಳು ಹೂಡಿಕೆದಾರರಿಗೆ ಕೈಗೆಟುಕುತ್ತಿವೆ. ಹಾಗಾಗಿ, ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವವರ ಸಂಖ್ಯೆ ಹೆಚ್ಚುತ್ತಿದೆ’ ಎಂದು ಸ್ಟಾಕ್ ಟ್ರೇಡಿಂಗ್ ವೇದಿಕೆಯಾದ ಟ್ರೇಡ್‌ಜಿನಿ ಸಿಒಒ ತ್ರಿವೇಶ್ ಡಿ. ಹೇಳಿದ್ದಾರೆ.

ಎಫ್‌ಪಿಐ ಹೂಡಿಕೆ ಅಬಾಧಿತ

ನವದೆಹಲಿ (ಪಿಟಿಐ): ದೇಶದ ಷೇರು ಮಾರುಕಟ್ಟೆಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು ಇದೇ 26ರ ವರೆಗೆ ₹33,600 ಕೋಟಿ ಹೂಡಿಕೆ ಮಾಡಿದ್ದಾರೆ.

ಸುಸ್ಥಿರ ಆರ್ಥಿಕತೆ ಬೆಳವಣಿಗೆ ಮತ್ತು ಷೇರುಪೇಟೆಯಲ್ಲಿನ ಉತ್ತಮ ಗಳಿಕೆಯಿಂದ ಒಳಹರಿವು ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಇದೇ ಅವಧಿಯಲ್ಲಿ ಸರ್ಕಾರದ ಸಾಲ ಪತ್ರಗಳಲ್ಲಿ ₹19,223 ಕೋಟಿ ಬಂಡವಾಳ ಹೂಡಿಕೆಯಾಗಿದೆ. ಪ್ರಸಕ್ತ ವರ್ಷದ ಆರಂಭದಿಂದ ಇಲ್ಲಿಯವರೆಗೆ ಸಾಲ ಪತ್ರಗಳಲ್ಲಿ ಒಟ್ಟು ₹87,847 ಕೋಟಿ ಹೂಡಿಕೆಯಾಗಿದೆ.

ಅಲ್ಟ್ರಾಟೆಕ್‌ನಿಂದ ಇಂಡಿಯಾ ಸಿಮೆಂಟ್ಸ್‌ನ ಷೇರು ಖರೀದಿ

ನವದೆಹಲಿ (ಪಿಟಿಐ): ಇಂಡಿಯಾ ಸಿಮೆಂಟ್ಸ್ ಲಿಮಿಟೆಡ್‌ನಲ್ಲಿ (ಐಸಿಎಲ್) ಹೆಚ್ಚುವರಿಯಾಗಿ ಶೇ 32.72ರಷ್ಟು ಷೇರುಗಳನ್ನು ಸ್ವಾಧೀನಪಡಿಸಿಕೊಳ್ಳಲು ಆದಿತ್ಯ ಬಿರ್ಲಾ ಸಮೂಹಕ್ಕೆ ಸೇರಿದ ಅಲ್ಟ್ರಾ ಟೆಕ್ ಸಿಮೆಂಟ್ ಕಂಪನಿ ಮುಂದಾಗಿದೆ.

ಈ ಸಂಬಂಧ ಇಂಡಿಯಾ ಸಿಮೆಂಟ್ಸ್‌ನ ಶ್ರೀನಿವಾಸನ್ ಎನ್. ಮತ್ತು ಗುರುನಾಥ್ ನೇತೃತ್ವದ ಪ್ರವರ್ತಕ ಕುಟುಂಬದ ಜೊತೆಗೆ ಒಪ್ಪಂದ ಮಾಡಿಕೊಂಡಿದೆ.

ಷೇರುಗಳ ಖರೀದಿಗೆ ಬಿರ್ಲಾ ಸಮೂಹದ ಆಡಳಿತ ಮಂಡಳಿಯು ಅನುಮೋದನೆ ನೀಡಿದ್ದು, ಇದಕ್ಕಾಗಿ ₹3,954 ಕೋಟಿ ವಿನಿಯೋಗಿಸ ಲಾಗುವುದು. ಪ್ರತಿ ಷೇರಿಗೆ ₹390 ನಿಗದಿಪಡಿಸಲಾಗಿದೆ ಎಂದು ಕಂಪನಿಯು, ಷೇರುಪೇಟೆಗೆ ತಿಳಿಸಿದೆ.

ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡರೆ ಇಂಡಿಯಾ ಸಿಮೆಂಟ್ಸ್‌ನಲ್ಲಿ ಅಲ್ಟ್ರಾ ಟೆಕ್ ಪಾಲು ಶೇ 55ರಷ್ಟಕ್ಕಿಂತ ಹೆಚ್ಚಾಗಲಿದೆ.

ಜೂನ್‌ನಲ್ಲಿ ಐಸಿಎಲ್‌ನ ಶೇ 23ರಷ್ಟು ಷೇರುಗಳನ್ನು ಅಲ್ಟ್ರಾ ಟೆಕ್ ಕಂಪನಿಯು ಖರೀದಿಸಿತ್ತು. ಶುಕ್ರವಾರದ ವಹಿವಾಟಿನ ಅಂತ್ಯಕ್ಕೆ ಇಂಡಿಯಾ ಸಿಮೆಂಟ್ಸ್‌ನ ಪ್ರತಿ ಷೇರಿನ ಬೆಲೆ ₹374 ಆಗಿದೆ. ಇದಕ್ಕಿಂತ ಶೇ 4.1ರಷ್ಟು ಹೆಚ್ಚು ಬೆಲೆ ನಿಗದಿಪಡಿಸಿದೆ.

‘ಶೃಂಗಸಭೆಯಲ್ಲಿ ಭಾಗವಹಿಸದಂತೆ ಚೀನಾ ಒತ್ತಡ’

ಪ್ರಜಾವಾಣಿ ವಾರ್ತೆ/ಎಪಿ

ಬೀಜಿಂಗ್: ತೈವಾನ್‌ನಲ್ಲಿ ಸೋಮವಾರದಿಂದ ನಡೆಯಲಿರುವ ಚೀನಾ ವಿರುದ್ಧದ ಅಂತರ ಸಂಸದೀಯ ಮೈತ್ರಿಕೂಟದ ಶೃಂಗಸಭೆಯಲ್ಲಿ ಭಾಗವಹಿಸದಂತೆ ಚೀನಾ ಸರ್ಕಾರವು ಆರು ದೇಶಗಳ ನಾಯಕರ ಮೇಲೆ ಒತ್ತಡ ಹೇರುತ್ತಿದೆ ಎಂದು ಆ ದೇಶಗಳ ನಾಯಕರು ಆರೋಪಿಸಿದ್ದಾರೆ.

ಬೊಲಿವಿಯಾ, ಕೊಲಂಬಿಯಾ, ಸ್ಲೊವಾಕಿಯಾ, ಉತ್ತರ ಮಸಡೋನಿಯಾ, ಬೊಸ್ನಿಯಾ ಮತ್ತು ಹತ್ಸಗೊವೀನಾ ಹಾಗೂ ಏಷ್ಯಾ ಖಂಡದ ಕೆಲವು ದೇಶಗಳ ನಾಯಕರು ಚೀನಾ ವಿರುದ್ಧ ಆರೋಪ ಮಾಡಿದ್ದಾರೆ. ಶೃಂಗಸಭೆಯಲ್ಲಿ ಭಾಗವಹಿಸದಂತೆ ಸಂದೇಶಗಳು, ಇ–ಮೇಲ್ ಹಾಗೂ ಕರೆಗಳು ಬರುತ್ತಿವೆ ಎಂದು ದೂರಿದ್ದಾರೆ. ಮೈತ್ರಿಕೂಟದಲ್ಲಿ ಸುಮಾರು 35 ದೇಶಗಳಿವೆ. ಭಾರತವೂ ಈ ಮೈತ್ರಿಕೂಟದ ಭಾಗವಾಗಿದೆ.

ಆಗಸ್ಟ್ 2ಕ್ಕೆ ಓಲಾ ಐಪಿಒ

ನವದೆಹಲಿ (ಪಿಟಿಐ): ವಿದ್ಯುತ್‌ಚಾಲಿತ ದ್ವಿಚಕ್ರ ವಾಹನ ತಯಾರಿಕಾ ಕಂಪನಿಯಾದ ಓಲಾ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್ (ಒಇಎಂಎಲ್), ತನ್ನ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸುವ (ಐಪಿಒ) ಮೂಲಕ ₹5,500 ಕೋಟಿ ಬಂಡವಾಳ ಸಂಗ್ರಹಿಸಲು ನಿರ್ಧರಿಸಿದೆ.

ಆಗಸ್ಟ್ 2ರಿಂದ ಐಪಿಒ ಪ್ರಕ್ರಿಯೆ ಆರಂಭವಾಗಲಿದೆ. ತನ್ನ ಸೆಲ್ಯುಲರ್ ತಯಾರಿಕಾ ಘಟಕದ ಸಾಮರ್ಥ್ಯ ವಿಸ್ತರಣೆ, ಸಂಶೋಧನೆ ಮತ್ತು ಅಭಿವೃದ್ಧಿಗೆ ಒತ್ತು ನೀಡುವ ನಿಟ್ಟಿನಲ್ಲಿ ಕಂಪನಿಯು ಈ ಬಂಡವಾಳ ಸಂಗ್ರಹಿಸುತ್ತಿದೆ.

ಆರಂಭಿಕ ಹೂಡಿಕೆದಾರರು (ಆ್ಯಂಕರ್ ಇನ್‌ವೆಸ್ಟರ್) ಆಗಸ್ಟ್ 1ರಂದು ಬಿಡ್ ಸಲ್ಲಿಸಬಹುದಾಗಿದೆ. ಆಗಸ್ಟ್ 6ರಂದು ಈ ಪ್ರಕ್ರಿಯೆ ಮುಕ್ತಾಯವಾಗಲಿದೆ ಎಂದು ಕಂಪನಿಯು ಷೇರುಪೇಟೆಗೆ ಸಲ್ಲಿಸಿರುವ ಪ್ರಾಥಮಿಕ ವಿವರಣಾ ಪತ್ರದಲ್ಲಿ ತಿಳಿಸಿದೆ.

ಆಫರ್ ಫಾರ್ ಸೇಲ್ ಮೂಲಕ (ಒಎಫ್‌ಎಸ್) 8.49 ಕೋಟಿ ಈಕ್ವಿಟಿ ಷೇರುಗಳನ್ನು ಮಾರಾಟ ಮಾಡಲಿದೆ. ಈ ಪೈಕಿ ಓಲಾ ಎಲೆಕ್ಟ್ರಿಕ್‌ನ ಸಂಸ್ಥಾಪಕ ಭವಿಶ್ ಅಗರ್ವಾಲ್ ಅವರ ಒಡೆತನಕ್ಕೆ ಸೇರಿದ 3.8 ಕೋಟಿ ಷೇರುಗಳಿವೆ. ಪ್ರತಿ ಷೇರಿನ ಬೆಲೆಯ ಬಗ್ಗೆ ಸೋಮವಾರ ಅಧಿಕೃತವಾಗಿ ಮಾಹಿತಿ ನೀಡುವ ನಿರೀಕ್ಷೆಯಿದೆ. ಹಾಲಿ ಇರುವ 5 ಗಿಗಾವ್ಯಾಟ್ ಸಾಮರ್ಥ್ಯದ ಸೆಲ್ಯುಲರ್ ತಯಾರಿಕಾ ಘಟಕವನ್ನು 6.4 ಗಿಗಾವ್ಯಾಟ್‌ಗೆ ಮೇಲ್ದರ್ಜೆಗೇರಿಸುವ ಗುರಿ ಹೊಂದಲಾಗಿದೆ. ಸಂಗ್ರಹವಾಗುವ ಬಂಡವಾಳದಲ್ಲಿ ಇದಕ್ಕಾಗಿ ₹1,227 ಕೋಟಿ ವಿನಿಯೋಗಿಸಲಾಗುವುದು ಎಂದು ಕಂಪನಿಯು ತಿಳಿಸಿದೆ.

ಸಂಶೋಧನೆ ಮತ್ತು ಉತ್ಪಾದನೆ ಹೆಚ್ಚಳಕ್ಕೆ ₹1,600 ಕೋಟಿ, ಸಾಲ ಮರುಪಾವತಿಗೆ ₹800 ಕೋಟಿ, ಆಂತರಿಕ ವ್ಯಾಪಾರದ ಅಭಿವೃದ್ಧಿಗೆ ₹350 ಕೋಟಿ ವೆಚ್ಚ ಮಾಡಲಾಗುವುದು ಎಂದು ವಿವರಿಸಿದೆ.

ಅಭಿನಂದನೆ

ಪ್ಯಾರಿಸ್ ಒಲಿಂಪಿಕ್ಸ್‌ನ ಮಹಿಳೆಯರ 10 ಮೀಟರ್ಸ್ ಏರ್ ಪಿಸ್ತೂಲ್ ಶೂಟಿಂಗ್‌ನಲ್ಲಿ ಕಂಚಿನ ಪದಕ ಗೆದ್ದ ಮನು ಭಾಕರ್ ಅವರ ಮರಳು ಶಿಲ್ಪವನ್ನು ಒಡಿಶಾದ ಪುರಿ ಬೀಚ್‌ನಲ್ಲಿ ರಚಿಸಿ ಮರಳು ಶಿಲ್ಪಿ ಸುದರ್ಶನ್ ಪಟ್ನಾಯಕ್ ಅಭಿನಂದನೆ ಸಲ್ಲಿಸಿದರು –ಪಿಟಿಐ ಚಿತ್ರ

ಕಮಲಾ ಪರ 20 ಕೋಟಿ ಡಾಲರ್ ದೇಣಿಗೆ ಸಂಗ್ರಹ



ಕಮಲಾ ಹ್ಯಾರಿಸ್

ವಾಷಿಂಗ್ಟನ್ (ಪಿಟಿಐ): ಮುಂಬರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಸಂಭವನೀಯ ಅಭ್ಯರ್ಥಿ ಕಮಲಾ ಹ್ಯಾರಿಸ್ ಪರ ಒಂದೇ ವಾರದಲ್ಲಿ 20 ಕೋಟಿ ಡಾಲರ್ (₹1,674 ಕೋಟಿ) ದೇಣಿಗೆ ಸಂಗ್ರಹಿಸಲಾಗಿದೆ ಎಂದು ಅವರ ಪ್ರಚಾರ ತಂಡವು ಭಾನುವಾರ ತಿಳಿಸಿದೆ. ಇದು ಅವರ ಪರವಾಗಿ ಹೆಚ್ಚುತ್ತಿರುವ ಬೆಂಬಲವನ್ನು ಪ್ರತಿಬಿಂಬಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

‘ನವೆಂಬರ್ 5ರ ಚುನಾವಣೆಗೆ ಹತ್ತಿರವಾಗುತ್ತಿದ್ದು, ಗೆಲುವಿನ ಸನಿಹದಲ್ಲಿದ್ದೇವೆ’ ಎಂದು ಪ್ರಚಾರ ತಂಡವು ತಿಳಿಸಿದೆ.

ಹಾಲಿ ಅಧ್ಯಕ್ಷ ಜೋ ಬೈಡನ್ ಅವರು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ, ತನ್ನ ಸ್ಥಾನಕ್ಕೆ ಕಮಲಾ ಹ್ಯಾರಿಸ್ ಅವರನ್ನು ಸೂಚಿಸುತ್ತೇನೆ ಎಂದು ಇದೇ ಜುಲೈ 20ರಂದು ಘೋಷಿಸಿದ್ದರು.

ಅಮೆರಿಕದ ಉಪಾಧ್ಯಕ್ಷೆಯಾಗಿರುವ 59 ವರ್ಷದ ಕಮಲಾ ಹ್ಯಾರಿಸ್ ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಯಾಗುವ ಸಾಧ್ಯತೆಗಳು ಹೆಚ್ಚಿದೆ.

‘ಬೈಡನ್ ಅನುಮೋದನೆ ನಂತರ ಕಮಲಾ ಹ್ಯಾರಿಸ್ ಪರ 200 ಮಿಲಿಯನ್ ಡಾಲರ್ ಸಂಗ್ರಹಿಸಲಾಗಿದೆ. ಇದೊಂದು ದಾಖಲೆ ಮಟ್ಟದ ದೇಣಿಗೆ ಸಂಗ್ರಹವಾಗಿದ್ದು, ಈ ಪೈಕಿ ಶೇ 66ರಷ್ಟು ಮಂದಿ ಮೊದಲ ಬಾರಿಗೆ ದೇಣಿಗೆ ನೀಡಿದ್ದಾರೆ. ಆ ಮೂಲಕ ತಳಮಟ್ಟದಲ್ಲಿ ಉಪಾಧ್ಯಕ್ಷೆ ಹ್ಯಾರಿಸ್ ಅವರಿಗೆ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ’ ಎಂದು ಹ್ಯಾರಿಸ್ ಅವರ ಸಂವಹನ ನಿರ್ದೇಶಕ ಮೈಕೆಲ್ ಟೇಲರ್ ತಿಳಿಸಿದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹490
12 ಕ್ಕೆ	₹70
ಮೈಸೂರು	
100ಕ್ಕೆ	₹495

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹300-463
ದ್ವಿತಳಿ (ಬಿ.ವಿ)	₹222-607

ಅಮೆರಿಕ ‘ಬಿಟ್ ಕಾಯಿನ್ ಸೂಪರ್‌ಪವರ್’ ಆಗಲಿದೆ: ಟ್ರಂಪ್

‘ಕ್ರಿಪ್ಟೊ ಕರೆನ್ಸಿ ಸ್ನೇಹಿ ನೀತಿ ಜಾರಿ’

ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಪಿಟಿಐ): 'ಮತ್ತೊಂದು ಅವಧಿಗೆ ಅಧ್ಯಕ್ಷನಾಗಿ ಆಯ್ಕೆಯಾದರೆ ಅಮೆರಿಕವನ್ನು ‘ಬಿಟ್ ಕಾಯಿನ್ ಸೂಪರ್‌ಪವರ್’ ಮಾಡುತ್ತೇನೆ' ಎಂದು ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಘೋಷಿಸಿದ್ದಾರೆ.

ಬಿಟ್ ಕಾಯಿನ್‌ಗೆ ಸಂಬಂಧಿಸಿದಂತೆ ಶನಿವಾರ ನಡೆದ ಸಮಾವೇಶದಲ್ಲಿ ಪಾಲ್ಗೊಂಡ ಅವರು ಕ್ರಿಪ್ಟೊ ಕರೆನ್ಸಿ ಸ್ನೇಹಿ ನೀತಿಗಳನ್ನು ಜಾರಿಗೊಳಿಸುವುದಾಗಿ ಭರವಸೆ ನೀಡಿದರು.

‘ಅಮೆರಿಕವನ್ನು ಕ್ರಿಪ್ಟೊ ಕರೆನ್ಸಿಯ ರಾಜಧಾನಿ ಮತ್ತು ಬಿಟ್‌ಕಾಯಿನ್ ಸೂಪರ್ ಪವರ್ ಆಗಿ ಮಾಡಲು ಯೋಜನೆ ರೂಪಿಸುತ್ತೇನೆ’ ಎಂದು ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಸ್ಥಾನದ ಅಭ್ಯರ್ಥಿ ಟ್ರಂಪ್ ಹೇಳಿದರು.

ಬಿಟ್ ಕಾಯಿನ್ ಎಂಬುದು ವಿಶ್ವದಲ್ಲಿ ಹೆಚ್ಚು ಜನಪ್ರಿಯತೆ ಪಡೆದಿರುವ ಕ್ರಿಪ್ಟೊ ಕರೆನ್ಸಿಯಾಗಿದ್ದು, ಇದು ಆನ್‌ಲೈನ್ ಮೂಲಕ ಸುರಕ್ಷಿತ ಮತ್ತು ತಡೆರಹಿತ ವಹಿವಾಟಿಗೆ ಅವಕಾಶ ಕಲ್ಪಿಸುತ್ತದೆ.

‘ಕಮಲಾ ಹ್ಯಾರಿಸ್ ಅವರು ಅಧ್ಯಕ್ಷರಾಗಿ ಆಯ್ಕೆಯಾದರೆ ಬಿಟ್ ಕಾಯಿನ್ ಹೂಡಿಕೆದಾರರು ನಷ್ಟ ಅನುಭವಿಸಲಿದ್ದಾರೆ’ ಎಂದು ಟ್ರಂಪ್ ಇದೇ ವೇಳೆ ಎಚ್ಚರಿಸಿದರು.

‘ಅವರು (ಡೆಮಾಕ್ರಟಿಕ್ ಪಕ್ಷದವರು) ಬಿಗಿಯಾದ ನೀತಿಗಳನ್ನು ತಂದು ನಿಮ್ಮ ಉಸಿರುಗಟ್ಟುವಂತೆ ಮಾಡಲಿದ್ದಾರೆ. ಕ್ರಿಪ್ಟೊ ಕರೆನ್ಸಿ ವ್ಯವಹಾರದಿಂದ ನಿಮ್ಮನ್ನು ಹೊರಹಾಕಲು ಬಯಸುತ್ತಾರೆ. ಬಿಟ್‌ಕಾಯಿನ್‌ಗೆ ಸಂಬಂಧಿಸಿದಂತೆ ಅಮೆರಿಕದಲ್ಲಿ ಈಗ ಇರುವ ನಿಯಮಗಳು ಅಸ್ಪಷ್ಟ ಮತ್ತು ಕಠಿಣವಾಗಿವೆ. ಅವುಗಳನ್ನು ಸರಳಗೊಳಿಸುತ್ತೇವೆ. ಬಿಟ್ ಕಾಯಿನ್‌ಗೆ ಸಂಬಂಧಿಸಿದ ಉದ್ಯೋಗ ಮತ್ತು ವ್ಯವಹಾರ ಇತರೆ ದೇಶಗಳ ಪಾಲಾಗದಂತೆ ನೋಡಿಕೊಳ್ಳುತ್ತೇವೆ’ ಎಂದು ತಿಳಿಸಿದರು.

‘ಬಿಟ್‌ಕಾಯಿನ್ ಮತ್ತು ಕ್ರಿಪ್ಟೊಗೆ ಸಂಬಂಧಿಸಿದಂತೆ ಅಧ್ಯಕ್ಷೀಯ ಸಲಹಾ ಮಂಡಳಿ’ಯನ್ನು ಸ್ಥಾಪಿಸುವುದಾಗಿ ಭರವಸೆ ನೀಡಿದ ಅವರು, ಈ ಮಂಡಳಿ ಕ್ರಿಪ್ಟೊ ಕರೆನ್ಸಿ ವಹಿವಾಟನ್ನು ಪಾರದರ್ಶಕವಾಗಿಸಲಿದೆ ಎಂದರು.

‘ಬೈಡನ್ ವಿರುದ್ಧ ಸ್ವಪಕ್ಷದಿಂದ ಷಡ್ಯಂತ್ರ’

ವಾಷಿಂಗ್ಟನ್ (ಪಿಟಿಐ): ‘ಅಧ್ಯಕ್ಷ ಜೋ ಬೈಡನ್ ಅವರು ಅಧ್ಯಕ್ಷೀಯ ಚುನಾವಣೆಯಿಂದ ಹಿಂದೆ ಸರಿಯುವಂತೆ ಮಾಡಲು ಡೆಮಾಕ್ರಟಿಕ್ ಪಕ್ಷ ಅವರ ವಿರುದ್ಧ ‘ಷಡ್ಯಂತ್ರ’ ನಡೆಸಿತು. ಸ್ಪರ್ಧೆಯಿಂದ ಹೊರಗುಳಿಯುವಂತೆ ಒತ್ತಡ ಹೇರಿತು’ ಎಂದು ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಪ್ರಚಾರ ಸಭೆಯೊಂದರಲ್ಲಿ ಆರೋಪಿಸಿದರು.

‘ಸಂವಿಧಾನದ 25ನೇ ತಿದ್ದುಪಡಿಯನ್ನು ಬಳಸಿಕೊಂಡು ಬೈಡನ್ ಅವರನ್ನು ಅಧಿಕಾರದಿಂದ ಇಳಿಸುವುದಾಗಿ ಆ ಪಕ್ಷವು ಬೆದರಿಕೆ ಹಾಕಿತು. ದೈಹಿಕವಾಗಿಯೂ, ಬೌದ್ಧಿಕವಾಗಿಯೂ ನೀನು ಅಸಮರ್ಥ. ನೀನಾಗಿಯೇ ಸ್ಪರ್ಧೆಯಿಂದ ಹಿಂದೆ ಸರಿಯದಿದ್ದರೆ 25ನೇ ತಿದ್ದುಪಡಿ ಬಳಸಿಕೊಂಡು ನಾವೇ ಹೊರಹಾಕುತ್ತೇವೆ’ ಎಂದು ಆ ಪಕ್ಷವು ಬೈಡವ್ ಅವರನ್ನು ಬೆದರಿಸಿತು. ಬೈಡನ್ ಅವರನ್ನು ಬಹಳ ಕ್ರೂರವಾಗಿ ನಡೆಸಿಕೊಳ್ಳಲಾಗಿದೆ’ ಎಂದು ಟ್ರಂಪ್ ದೂರಿದರು.

‘ಈ ಎಲ್ಲ ಬೆಳವಣಿಗೆಗಳು ಆದ ಬಳಿಕ, ಬೈಡನ್ ಅವರು ತಾವು ಸ್ಪರ್ಧೆಯಿಂದ ಹಿಂದೆಸರಿಯುತ್ತಿರುವುದಾಗಿ ಘೋಷಿಸಿದರು. ಆ ಬಳಿಕ, ಓಹ್! ನೋಡಿ ನೋಡಿ, ಬೈಡನ್ ಅವರದ್ದು ಎಂಥ ಮಹಾನ್ ವ್ಯಕ್ತಿತ್ವ ಎಂದು ಡೆಮಾಕ್ರಟಿಕ್ ಪಕ್ಷವು ಹೊಗಳಲು ಆರಂಭಿಸಿತು’ ಎಂದು ಟ್ರಂಪ್ ಹೇಳಿದರು.

ಏನಿದು 25ನೇ ತಿದ್ದುಪಡಿ?: ಅಮೆರಿಕದ ಅಧ್ಯಕ್ಷರಾಗಿದ್ದ ಜಾನ್ ಎಫ್. ಕೆನಡಿ ಅವರ ಹತ್ಯೆ ನಡೆದ ಸಂದರ್ಭದಲ್ಲಿ ಅಮೆರಿಕ ಕಾಂಗ್ರೆಸ್, ಅಮೆರಿಕ ಸಂವಿಧಾನಕ್ಕೆ 25ನೇ ತಿದ್ದುಪಡಿಯನ್ನು ಮಾಡಿತ್ತು. ಅಧ್ಯಕ್ಷರೊಬ್ಬರು ತನ್ನ ಉತ್ತರಾಧಿಕಾರಿಯನ್ನು ನೇಮಕ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ ತಿದ್ದುಪಡಿ ಇದಾಗಿದೆ. ಜೊತೆಗೆ, ಒಂದೊಮ್ಮೆ ಅಧ್ಯಕ್ಷನು ದೈಹಿಕವಾಗಿ ಅಶಕ್ತನಾಗಿದ್ದರೆ, ಆತನನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸುವ ಅಧಿಕಾರವು ಉಪಾಧ್ಯಕ್ಷನಿಗೆ ಮತ್ತು ಸಚಿವ ಸಂಪುಟಕ್ಕೆ ಇರುತ್ತದೆ ಎಂಬುದನ್ನೂ ಈ ತಿದ್ದುಪಡಿ ಹೇಳುತ್ತದೆ.

ಕರ್ನಾಟಕ ರಾಜ್ಯ ಉಗ್ರಾಣ ನಿಗಮ
ಉಗ್ರಾಣ ಭವನ, ನಂ.43, ಪ್ರಿಂರೋಸ್ ರಸ್ತೆ, ಬೆಂಗಳೂರು – 560 025.
ದೂರವಾಣಿ: 080–29533679 ಫ್ಯಾಕ್ಸ್: 080–29533673
ಇ–ಮೇಲ್ : mdkswc2018@gmail.com ವೆಬ್‌ಸೈಟ್: www.kswc.in
ಸಂಖ್ಯೆ: ಕರಾಉನಿ/ಆಡಳಿತ/ಟೆಂಡರ್/784/2024–25 ದಿನಾಂಕ:25.07.2024

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ಕೆಪಿಪಿ ಪೋರ್ಟಲ್ ಮೂಲಕ ನಿಗಮದ ಕೇಂದ್ರ ಕಛೇರಿ ಹಾಗೂ 7 ಪ್ರಾದೇಶಿಕ ವ್ಯವಸ್ಥಾಪಕರ ಕಛೇರಿಗೆ ಒಳಪಡುವ 159 ಉಗ್ರಾಣ ಕೇಂದ್ರಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲಗಳನ್ನು ನೇಮಿಸಿಕೊಳ್ಳಲು ಅರ್ಹ ಏಜೆನ್ಸಿಗಳಿಂದ 6–ಪ್ಯಾಕೇಜ್ ಒಳಗೊಂಡಂತೆ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿದೆ.
1) ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ: 26.07.2024. 2) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: 08.08.2024 ರ ಬೆಳಿಗ್ಗೆ 11.30ಕ್ಕೆ. 3) ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಅಂತಿಮ ದಿನಾಂಕ: 26.08.2024 ರ ಮಧ್ಯಾಹ್ನ 4:00ಕ್ಕೆ. 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 27.08.2024 ರ ಮಧ್ಯಾಹ್ನ 3:30ಕ್ಕೆ. 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 12.09.2024ರ ಮಧ್ಯಾಹ್ನ 3:30ಕ್ಕೆ.
ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ ವಿಳಾಸ: www.kppp.karnataka.gov.in ಅಥವಾ ಸಹಾಯವಾಣಿ: +91–8046010000 / +91–8068948777 .
ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ವಾಪ್ರ/ಜಿಎ/1094/2024–25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ ಮತ್ತು ಗುಣ ಆಶ್ವಾಸನೆ),
9ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009
ನಂ. ಬೆಂಜಮಂ/ಮುಅ(ವಿ&ಗುಆ)/ಅಮುಅ(ವಿ)/ತಾಂ.ಸ/542/2024–25 ದಿನಾಂಕ: 26.07.2024

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ – ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರ್‌ದಾರರಿಂದ ಸಂಪೂರ್ಣ ನಿಯಮಗಳ ಪ್ರಕಾರ ಇತ್ತೀಚಿನ ನವೀಕರಿಸಲಾದ ಚಾಸಿಸ್ ಅಥವಾ ಬಿಎಸ್–6 ಟ್ರಕ್ ಚಾಸಿಸ್ ಜೋಡಣೆಯ ಇತ್ತೀಚಿನ ಮಾದರಿಯ 6000 ಲೀ. ಸಾಮರ್ಥ್ಯದ ಎಸ್‌ಎಸ್–304 ನೀರಿನ ಟ್ಯಾಂಕರ್ ಖರೀದಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಟೆಂಡರ್‌ಗಿಟ್ಟ ಮೊತ್ತ: ರೂ. 4,43,50,166/–. ಇಎಂಡಿ: ರೂ. 4,44,000/–.
ಭರ್ತಿ ಮಾಡಲಾದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 12.08.2024ರ ಸಂಜೆ 4.00 ಗಂಟೆಯೊಳಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 13.08.2024 ರಂದು ಸಂಜೆ 4:00 ಗಂಟೆಗೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/–
ಮುಖ್ಯ ಅಭಿಯಂತರರು (ವಿನ್ಯಾಸ ಮತ್ತು ಗುಣ ಆಶ್ವಾಸನೆ)
DIPR/CP/MIA/1121/2024-25

ಕೇಂದ್ರ ಪ್ರವಾಹ ನಿರ್ವಹಣಾ ನಿಧಿ ಪಡೆಯಲು ರಾಜ್ಯಗಳಿಗೆ ಷರತ್ತು; ಕೇಂದ್ರದ ಚಿಂತನೆ

‘ಪ್ರವಾಹ ಪ್ರದೇಶ ವಲಯ’ ಕಾಯ್ದೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಪ್ರವಾಹ ನಿರ್ವಹಣಾ ನಿಧಿ ಪಡೆಯಲು ‘ಪ್ರವಾಹ ಪ್ರದೇಶ ವಲಯ’ ಕಾಯ್ದೆಯನ್ನು ಎಲ್ಲ ರಾಜ್ಯಗಳು ಕಡ್ಡಾಯವಾಗಿ ಜಾರಿಗೊಳಿಸಬೇಕು ಎನ್ನುವ ಷರತ್ತು ವಿಧಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸುತ್ತಿದೆ.

ಜಲಶಕ್ತಿ ಸಚಿವಾಲಯವು ಪ್ರವಾಹ ನಿರ್ವಹಣೆ ಮತ್ತು ಗಡಿ ಪ್ರದೇಶಗಳ ಯೋಜನೆಗಳಡಿ (ಎಫ್‌ಎಂಬಿಎಪಿ) ಅನುದಾನವನ್ನು ಪಡೆದುಕೊಳ್ಳಲು ರಾಜ್ಯಗಳು ‘ಪ್ರವಾಹ ವಲಯ ಕಾಯ್ದೆ’ಯನ್ನು ಅತ್ಯಗತ್ಯವಾಗಿ ಜಾರಿಗೆ ತರುವುದನ್ನು ಕಡ್ಡಾಯಗೊಳಿಸುವ ಪ್ರಸ್ತಾವವನ್ನು ಇರಿಸಿದೆ.

ಇತ್ತೀಚೆಗೆ, ಕೇಂದ್ರ ಜಲ ಆಯೋಗವು ಮಾದರಿ ಮಸೂದೆ ರೂಪಿಸಿದೆ. ಸಚಿವಾಲಯವು ರಾಜ್ಯಗಳೊಂದಿಗೆ ಮತ್ತೊಂದು ಸುತ್ತಿನ ಸಮಾಲೋಚನೆಯನ್ನು ಪ್ರಾರಂಭಿಸಲು ಯೋಜಿಸಿದೆ ಎಂದು ಜಲ ಶಕ್ತಿ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಈ ಮಸೂದೆಯು ಪ್ರವಾಹ ವಲಯದ ಅಧಿಕಾರಿಗಳಿಗೆ, ಸಮೀಕ್ಷೆಗಳು, ಪ್ರವಾಹ ಪ್ರದೇಶಗಳ ವಿವರಣೆ, ಪ್ರವಾಹ ಪ್ರದೇಶಗಳ ವ್ಯಾಪ್ತಿಗಳ ಅಧಿಸೂಚನೆ, ಪರಿಹಾರ ಕಲ್ಪಿಸುವುದು, ಪ್ರವಾಹ ಪ್ರದೇಶ ಬಳಕೆಯ ಮೇಲಿನ ನಿರ್ಬಂಧಗಳು, ಅಡೆತಡೆಗಳನ್ನು ನಿವಾರಿಸುವ ಸಂಬಂಧ ಮಾರ್ಗಸೂಚಿಗಳನ್ನು ಒದಗಿಸಲಿದೆ.

ಈ ಸಮಗ್ರ ಮಾರ್ಗಸೂಚಿಗಳ ಹೊರತಾಗಿಯೂ ಅನೇಕ ರಾಜ್ಯಗಳು ಈ ಕಾಯ್ದೆ ಜಾರಿಯತ್ತ ಇನ್ನು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಮಣಿಪುರ, ರಾಜಸ್ಥಾನ, ಉತ್ತರಾಖಂಡ ಮತ್ತು ಹಿಂದೆ ರಾಜ್ಯದ ಸ್ಥಾನಮಾನ ಹೊಂದಿದ್ದ ಜಮ್ಮುವಿನಂತಹ ನಾಲ್ಕು ರಾಜ್ಯಗಳು ಮಾತ್ರ ಈ ಕಾಯ್ದೆ ಜಾರಿಗೆ ತಂದಿವೆ ಎಂದು ಅಧಿಕಾರಿಗಳು ಹೇಳಿದರು.

ಜಲಶಕ್ತಿ ಸಚಿವಾಲಯವು ರಾಜ್ಯ ಸರ್ಕಾರಗಳೊಂದಿಗೆ ನಿರಂತರ ಸಂವಹನ ನಡೆಸುತ್ತಿದೆ. ಪ್ರವಾಹ ಬಯಲು ವಲಯ ಕಾಯ್ದೆ ಬಗ್ಗೆ ಅಧಿಸೂಚನೆ ಹೊರಡಿಸಲು ಮತ್ತು ಪ್ರವಾಹ ವಲಯ ಗುರುತಿಸುವಂತೆ ಒತ್ತಾಯಿಸಲಾಗುತ್ತಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಪ್ರವಾಹ ನಿರ್ವಹಣೆ ಸೇರಿ ನೀರಿನ ನಿರ್ವಹಣೆಯು ರಾಜ್ಯದ ವಿಷಯ. ಹೀಗಾಗಿ, 2022ರ ಮೇ ತಿಂಗಳಲ್ಲಿ ಕೇಂದ್ರ ಜಲ ಶಕ್ತಿ ಸಚಿವಾಲಯವು ರಾಜ್ಯ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು, ಸೂಕ್ತ ಕಾಯ್ದೆ ಜಾರಿಗೊಳಿಸುವಂತೆ ಒತ್ತಾಯಿಸಿತ್ತು. 2023ರ ಜನವರಿಯಲ್ಲಿ ನಡೆದ ಸಭೆಯಲ್ಲಿ, ಸಮಗ್ರ ಪ್ರವಾಹ ನಿರ್ವಹಣೆ ಮತ್ತು ಪ್ರವಾಹ ಹಾನಿ ತಗ್ಗಿಸಲು ಪ್ರವಾಹ ವಲಯದ ಪ್ರಾಮುಖ್ಯತೆಯನ್ನು ಸಚಿವಾಲಯದ ಕಾರ್ಯದರ್ಶಿಯವರು ಒತ್ತಿ ಹೇಳಿದ್ದರು’ ಎಂದೂ ಅಧಿಕಾರಿ ತಿಳಿಸಿದ್ದಾರೆ.

‘ಹಣ ಬೇಕೆಂದರೆ ಕಾಯ್ದೆ ಜಾರಿಗೊಳಿಸಿ’

‘ನಾವು ಮುಂದಿನ ಹಂತದಲ್ಲಿ ಎಫ್‌ಎಂಬಿಎಪಿಗೆ ಕ್ಯಾಬಿನೆಟ್ ಒಪ್ಪಿಗೆ ಪಡೆಯಲಿದ್ದೇವೆ. ಇನ್ನು ಮುಂದೆ ಯಾವುದೇ ರಾಜ್ಯವು ಎಫ್‌ಎಂಬಿಎಪಿ ಅಡಿಯಲ್ಲಿ ಸಂಪನ್ಮೂಲಗಳನ್ನು ಪಡೆದುಕೊಳ್ಳಲು ಈ ಷರತ್ತು ಅನ್ವಯಿಸಲಿದೆ. ರಾಜ್ಯವು ಪ್ರವಾಹ ವಲಯ ಕಾಯ್ದೆ ಜಾರಿಗೊಳಿಸಿರಬೇಕು. ಈ ಕಾಯ್ದೆಯನ್ನು ಜಾರಿಗೊಳಿಸದಿದ್ದರೆ ಕೇಂದ್ರದಿಂದ ಹಣ ಸಿಗುವುದಿಲ್ಲ’ ಎಂದು ಸಚಿವಾಲಯದ ಅಧಿಕಾರಿ ಹೇಳಿದ್ದಾರೆ.

ಆದರೆ, ಬಹುತೇಕ ಎಲ್ಲ ರಾಜ್ಯಗಳು ಕಾಯ್ದೆ ಜಾರಿಯಲ್ಲಿ ಎದುರಾಗುವ ಸಮಸ್ಯೆಗಳನ್ನು ಕೇಂದ್ರ ಸರ್ಕಾರದ ಮುಂದಿಟ್ಟಿದ್ದು, ಅವೆಲ್ಲವೂ ಒಂದೇ ರೀತಿಯದ್ದಾಗಿವೆ.

ರಾಜ್ಯಗಳು ವ್ಯಕ್ತಪಡಿಸಿರುವ ಸಮಸ್ಯೆಗಳು ಇಂತಿವೆ: ಈಗಾಗಲೇ ಪ್ರವಾಹ ಪ್ರದೇಶಗಳನ್ನು ಅತಿಕ್ರಮಿಸಿರುವ ಜನರನ್ನು ಸ್ಥಳಾಂತರಿಸಲು ಸಮಸ್ಯೆ ಇದೆ. ಪರ್ಯಾಯ ವಸತಿ ಪ್ರದೇಶದ ಕೊರತೆಯೂ ಇದೆ.

ಪ್ರವಾಹ ಪೀಡಿತ ಮೌಲ್ಯಮಾಪನ ಅಧ್ಯಯನಗಳಿಗೆ ಹೆಚ್ಚಿನ ರೆಸಲ್ಯೂಶನ್ ಡಿಜಿಟಲ್ ಎಲಿವೇಶನ್ ಮಾಡೆಲ್ (ಡಿಇಎಂ) ಲಭ್ಯತೆ ಮತ್ತು ಪ್ರವಾಹ ಬಯಲಿನ ಸರಿಯಾದ ವ್ಯಾಖ್ಯಾನದ ಬಗ್ಗೆ ಸ್ಪಷ್ಟತೆಯ ಕೊರತೆಯೂ ಇದೆ.

ಸುದ್ದಿ 2 ನಿಮಿಷ

ಮೆಟ್ಟೂರು ಜಲಾಶಯದಿಂದ ನೀರು ಹರಿಸಲು ಸ್ಟಾಲಿನ್ ಸೂಚನೆ

ಚೆನ್ನೈ (ಪಿಟಿಐ): ಕರ್ನಾಟಕದಿಂದ ಒಳಹರಿವು ಭಾರಿ ಪ್ರಮಾಣದಲ್ಲಿ ಹೆಚ್ಚಾಗಿರುವುದರಿಂದ ಸೇಲಂನ ಮೆಟ್ಟೂರು ಅಣೆಕಟ್ಟೆ ಭರ್ತಿಯಾಗುತ್ತಿದೆ. ಹೀಗಾಗಿ, ತಮಿಳುನಾಡು ಸರ್ಕಾರ ಕಾವೇರಿ ಕಣಿವೆ ಜಿಲ್ಲೆಗಳಿಗೆ ಈ ಜಲಾಶಯದಿಂದ ನೀರು ಹರಿಸಲು ಭಾನುವಾರ ಸೂಚಿಸಿದೆ.

ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅಧ್ಯಕ್ಷತೆಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಜಲಸಂಪನ್ಮೂಲ ಸಚಿವ ದೊರೆಮುರುಗನ್ ಹಾಗೂ ಉನ್ನತ ಅಧಿಕಾರಿಗಳು ಪಾಲ್ಗೊಂಡು ಪರಿಸ್ಥಿತಿಯನ್ನು ಅವಲೋಕಿಸಿದರು.

ಮುಖ್ಯಮಂತ್ರಿ ಸ್ಟಾಲಿನ್ ಅವರು ಸಭೆಯ ನಂತರ, ಅಲ್ಪಾವಧಿಯ ಕುರುವೈ ಬೆಳೆಗಳಿಗೆ ನೀರುಣಿಸಲು ಮೆಟ್ಟೂರು ಅಣೆಕಟ್ಟಿನಿಂದ ತಕ್ಷಣವೇ ನೀರು ಹರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಭಾರಿ ಮಳೆಯಿಂದಾಗಿ ಕರ್ನಾಟಕದಿಂದ 1.48 ಲಕ್ಷ ಕ್ಯುಸೆಕ್ ನೀರು ಹರಿದುಬರುತ್ತಿದೆ. ಮೆಟ್ಟೂರು ಅಣೆಕಟ್ಟೆಯ ಪೂರ್ಣ ಮಟ್ಟ 120 ಅಡಿ ಆಗಿದ್ದು, ಸದ್ಯ ಜಲಾಶಯದಲ್ಲಿ ನೀರಿನ ಮಟ್ಟ 109.20 ಅಡಿಗಳಿಗೆ ಏರಿಕೆಯಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಜಲಾಶಯದಿಂದ 12,000 ಕ್ಯುಸೆಕ್ ನೀರನ್ನು ತಂಜಾವೂರು ಮತ್ತು ತಿರುಚಿರಾಪಳ್ಳಿ ಸೇರಿ ಕಾವೇರಿ ಕಣಿವೆ ಜಿಲ್ಲೆಗಳಿಗೆ ಹರಿಸಲಾಗುವುದು. ಒಳಹರಿವು ಆಧರಿಸಿ, ಕ್ರಮೇಣ ಹೊರ ಹರಿವು ಹೆಚ್ಚಿಸಲಾಗುವುದು ಎಂದು ಪ್ರಕಟಣೆಯಲ್ಲಿ ಹೇಳಿದೆ.

ಸಿಯುಇಟಿ– ಯುಜಿ ಫಲಿತಾಂಶ

ನವದೆಹಲಿ (ಪಿಟಿಐ): ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿನ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಯುಇಟಿ–ಯುಜಿ) ರಾಷ್ಟ್ರೀಯ ಅರ್ಹತಾ ಪರೀಕ್ಷೆಗಳ (ಎನ್‌ಇಟಿ) ಫಲಿತಾಂಶವನ್ನು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಭಾನುವಾರ ಘೋಷಿಸಿದೆ.

ಸಿಯುಇಟಿ–ಯುಜಿ ಪ್ರವೇಶ ಪರೀಕ್ಷೆಗೆ ಸಂಬಂಧಿಸಿದಂತೆ ತಾತ್ಕಾಲಿಕ ‘ಕೀ ಉತ್ತರ’ಗಳನ್ನು ಜುಲೈ 7ರಂದು ಎನ್‌ಟಿಎ ಪ್ರಕಟಿಸಿತ್ತು. ಕೀ ಉತ್ತರಗಳಿಗೆ ಸಲ್ಲಿಸಿದ್ದ ಆಕ್ಷೇಪವು ನೈಜ ಎಂದು ಕಂಡುಬಂದ ಬಳಿಕ 1 ಸಾವಿರಕ್ಕೂ ಅಭ್ಯರ್ಥಿಗಳಿಗೆ ಜುಲೈ 19ರಂದು ಮರುಪರೀಕ್ಷೆ ನಡೆಸಿತ್ತು.

ಈ ಹಿಂದೆ ಜೂನ್ 30ರಂದು ಸಿಯುಇಟಿ– ಯುಜಿ ಫಲಿತಾಂಶ ಪ್ರಕಟಿಸಲು ಎನ್‌ಟಿಎ ನಿರ್ಧರಿಸಿತ್ತು. ನೀಟ್–ಯುಜಿ, ಯುಜಿಸಿ– ನೆಟ್ ಪರೀಕ್ಷೆಯಲ್ಲಿ ಅಕ್ರಮಗಳು ಕಂಡುಬಂದ ಬಳಿಕ ಸಿಯುಇಟಿ– ಯುಜಿ ಪರೀಕ್ಷಾ ಫಲಿತಾಂಶವನ್ನು ವಿಳಂಬಗೊಳಿಸಿತು.

63 ವಿಷಯಗಳಿಗೆ ಸಂಬಂಧಿಸಿದಂತೆ ನಡೆದ ಪರೀಕ್ಷೆಗೆ ದೇಶದಾದ್ಯಂತ 13.4 ಲಕ್ಷ ಅಭ್ಯರ್ಥಿಗಳು ನೋಂದಾಯಿಸಿದ್ದರು.

ಡಾ.ಮಸೂದ್ ಇರಾನ್ ಅಧ್ಯಕ್ಷ: ಖಮೇನಿ ಘೋಷಣೆ

ಟೆಹರಾನ್ (ಎಪಿ): ಇರಾನ್‌ನ ಸಾರ್ವತ್ರಿಕ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಸುಧಾರಣಾವಾದಿ ಡಾ.ಮಸೂದ್ ಪೆಜೆಶ್ಕಿಯಾನ್ ಅವರನ್ನು ದೇಶದ ನೂತನ ಅಧ್ಯಕ್ಷ ಎಂದು ಇರಾನ್‌ನ ಸರ್ವೋಚ್ಚ ನಾಯಕ ಆಯತುಲ್ಲಾ ಅಲಿ ಖಮೇನಿ ಅವರು ಭಾನುವಾರ ಅಧಿಕೃತವಾಗಿ ಘೋಷಿಸಿದರು.

ಮಂಗಳವಾರ ಪೆಜೆಶ್ಕಿಯಾನ್ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಘೋಷಣೆ ಬಳಿಕ ಮಾತನಾಡಿದ ಸರ್ವೋಚ್ಚ ನಾಯಕ ಖಮೇನಿ, ‘ನಮ್ಮ ನೆರೆಯ ಆಫ್ರಿಕಾ ಖಂಡದ ದೇಶಗಳು ಹಾಗೂ ಏಷ್ಯಾದ ದೇಶಗಳಿಗೆ ಆದ್ಯತೆ ನೀಡಿ. ನಮಗೆ ಬೆಂಬಲ ಹಾಗೂ ಸಹಕಾರ ನೀಡಿದವರನ್ನೂ ಮರೆಯಬೇಡಿ’ ಎಂದು ಸಲಹೆ ನೀಡಿದರು.

‘ಜಿಯೊನಿಸ್ಟ್‌ಗಳ ಆಡಳಿತವು ಅತೀ ಕ್ರೂರವಾದ ಯುದ್ಧಾಪರಾಧದಲ್ಲಿ ತೊಡಗಿದೆ. ಕ್ರೌರ್ಯ ಹಾಗೂ ಹತ್ಯೆ ನಡೆಸುವುದರಲ್ಲಿ ಇಸ್ರೇಲ್ ಹೊಸ ದಾಖಲೆ ಬರೆಯುತ್ತಿದೆ’ ಎಂದರು.

ಆಯತುಲ್ಲಾ ಅಲಿ ಖಮೇನಿ, ಡಾ.ಮಸೂದ್ ಪೆಜೆಶ್ಕಿಯಾನ್

‘ರಚನಾತ್ಮಕವಾದ ಹಾಗೂ ಶಕ್ತಿಯುತವಾದ ವಿದೇಶಾಂಗ ನೀತಿ ಅಳವಡಿಸಿಕೊಳ್ಳಲಾಗುವುದು. ಎಲ್ಲರಿಗೂ ಸಮಾನವಾಗಿ ಕಾನೂನು ಅನ್ವಯಿಸುವಂತೆ ಮಾಡಲಾಗುವುದು, ಪರಿಸರ ರಕ್ಷಿಸುವ ನೀತಿಗಳನ್ನು ರೂಪಿಸಲಾಗುವುದು’ ಎಂದು ಅಧ್ಯಕ್ಷ ಪೆಜೆಶ್ಕಿಯಾನ್ ಭರವಸೆ ನೀಡಿದರು.

ಉಪಾಧ್ಯಕ್ಷನನ್ನಾಗಿ 72 ವರ್ಷದ ಮೊಹಮ್ಮದ್ ರೆಜಾ ಆರಿಫ್ ಅವರನ್ನು ಪೆಜೆಶ್ಕಿಯಾನ್ ನೇಮಿಸಿದರು. ಆರಿಫ್ ಅವರು ಸ್ಟ್ಯಾಂಡ್‌ಫರ್ಡ್ ವಿಶ್ವವಿದ್ಯಾಲಯದಿಂದ ಎಂಜಿನಿಯರಿಂಗ್‌ನಲ್ಲಿ ಪಿಎಚ್‌.ಡಿ ಪಡೆದಿದ್ದಾರೆ.

‘ಖಾದಿ ಉತ್ಪನ್ನ ಜನಪ್ರಿಯತೆ ಹೆಚ್ಚಳ’

₹1.5 ಲಕ್ಷ ಕೋಟಿ ದಾಟಿದ ವಹಿವಾಟು: ಪ್ರಧಾನಿ ನರೇಂದ್ರ ಮೋದಿ ಹೇಳಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಖಾದಿ ಗ್ರಾಮೋದ್ಯೋಗದ ವಾರ್ಷಿಕ ವಹಿವಾಟು ಮೊದಲ ಬಾರಿಗೆ ₹1.5 ಲಕ್ಷ ಕೋಟಿ ದಾಟಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ಖಾದಿ ಮತ್ತು ಕೈಮಗ್ಗ ಉತ್ಪನ್ನಗಳ ಮಾರಾಟವು ಹೆಚ್ಚುತ್ತಿರುವುದು ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿದೆ ಎಂದು ಪ್ರತಿಪಾದಿಸಿದರು.

‘ಮನ್ ಕಿ ಬಾತ್’ (ಮನದ ಮಾತು) ತಿಂಗಳ ರೇಡಿಯೊ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಹಿಂದೆ ಖಾದಿ ಉಡುಪುಗಳನ್ನು ಇಷ್ಟಪಡದವರು ಈಗ ಹೆಮ್ಮೆಯಿಂದ ಧರಿಸುತ್ತಿದ್ದಾರೆ ಎಂದರು.

‘ಖಾದಿ ಮತ್ತು ಕೈಮಗ್ಗ ಉತ್ಪನ್ನಗಳ ಮಾರಾಟವು ಶೇ 400ರಷ್ಟು ಏರಿಕೆ ಕಂಡಿದೆ. ಮಾರಾಟದ ಹೆಚ್ಚಳದಿಂದಾಗಿ ಹೊಸ ಉದ್ಯೋಗಾವಕಾಶಗಳು ಸೃಷ್ಟಿ ಆಗುತ್ತಿವೆ. ಈ ಉದ್ಯಮದಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಂಡಿದ್ದು, ಅವರು ಹೆಚ್ಚಿನ ಪ್ರಯೋಜನ ಪಡೆಯುತ್ತಿದ್ದಾರೆ’ ಎಂದು ಹೇಳಿದರು.

ಮೋದಿ

ಕ್ರೀಡಾಪಟುಗಳನ್ನು ಉತ್ತೇಜಿಸಿ: ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಒಲಿಂಪಿಕ್ ಕೂಟದ ಬಗ್ಗೆ ಪ್ರಸ್ತಾಪಿಸಿದ ಅವರು, ‘ಇಂತಹ ಕ್ರೀಡಾಕೂಟಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಕೀರ್ತಿಪತಾಕೆ ಹಾರಿಸುವ ಅವಕಾಶವನ್ನು ನಮ್ಮ ಕ್ರೀಡಾಪಟುಗಳಿಗೆ ನೀಡುತ್ತದೆ. ಆದ್ದರಿಂದ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿರುವ ಕ್ರೀಡಾಪಟುಗಳನ್ನು ಉತ್ತೇಜಿಸಿ’ ಎಂದು ಜನರಿಗೆ ಕರೆ ನೀಡಿದರು.

ಪ್ರಧಾನಿ ಮಾತು...

- ನಿಮ್ಮಲ್ಲಿ ವಿವಿಧ ರೀತಿಯ ಬಟ್ಟೆಗಳು ಇವೆ. ನೀವು ಇದುವರೆಗೂ ಖಾದಿ ಬಟ್ಟೆಗಳನ್ನು ಖರೀದಿಸದಿದ್ದರೆ ಅವುಗಳನ್ನು ಖರೀದಿಸಲು ಪ್ರಾರಂಭಿಸಿ.
- ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಅಸ್ಸಾಂನ ‘ಮೊಯ್ದಂ’ಗಳನ್ನು ಸೇರ್ಪಡೆ ಮಾಡಿರುವುದು ಪ್ರತಿಯೊಬ್ಬ ಭಾರತೀಯನಿಗೂ ಸಂತಸ ಉಂಟುಮಾಡಿದೆ.
- ವಿಶ್ವದಲ್ಲಿರುವ ಒಟ್ಟು ಹುಲಿಗಳಲ್ಲಿ ಶೇ 70ರಷ್ಟು ಹುಲಿಗಳು ಭಾರತದಲ್ಲಿದ್ದು, ಇದು ಜನರಲ್ಲಿ ಹೆಮ್ಮೆ ಮೂಡಿಸುತ್ತದೆ. ‘ಮಾನವ–ಹುಲಿ’ ಸಂಘರ್ಷ ತಡೆಯುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ‘ಟೈಗರ್ ಮಿತ್ರ’ರ ಕೆಲಸ ಶ್ಲಾಘನೀಯ.

ಈಚೆಗೆ ನಡೆದ ಗಣಿತ ಒಲಿಂಪಿಯಾಡ್‌ನಲ್ಲಿ ಪಾಲ್ಗೊಂಡ ಭಾರತದ ಸ್ಪರ್ಧಿಗಳ ಜತೆ ಪ್ರಧಾನಿ ಅವರು ಇದೇ ವೇಳೆ ಸಂವಾದ ನಡೆಸಿದರು. ‘ಕೆಲ ದಿನಗಳ ಹಿಂದೆ ಗಣಿತ ಒಲಿಂಪಿಯಾಡ್ ನಡೆದಿದ್ದು, ಭಾರತದ ಸ್ಪರ್ಧಿಗಳು ಗಮನಾರ್ಹ ಪ್ರದರ್ಶನ ನೀಡಿದ್ದಾರೆ. ನಮ್ಮ ತಂಡ ನಾಲ್ಕು ಚಿನ್ನ ಹಾಗೂ ಒಂದು ಬೆಳ್ಳಿ ಪದಕ ಜಯಿಸಿದೆ’ ಎಂದರು.

ಸ್ವಾತಂತ್ರ್ಯ ದಿನ ಸಮೀಪಿಸುತ್ತಿದ್ದು, ಎಲ್ಲರೂ ರಾಷ್ಟ್ರಧ್ವಜದ ಜತೆ ಸೆಲ್ಫಿ ತೆಗೆದು harghartiranga.com ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವಂತೆ ಮನವಿ ಮಾಡಿದರು.

ಹುಲಿ ದಿನ... ಅಂತರರಾಷ್ಟ್ರೀಯ ಹುಲಿ ದಿನದ ಅಂಗವಾಗಿ ತಮಿಳುನಾಡಿನ ನಾಮಕ್ಕಲ್‌ನಲ್ಲಿ ವಿದ್ಯಾರ್ಥಿಗಳು ಭಾನುವಾರ ಹುಲಿ ವೇಷ ಧರಿಸಿ ಮೆರವಣಿಗೆ ನಡೆಸಿದರು ಪಿಟಿಐ ಚಿತ್ರ

ವಿವಿಧ ರಾಜ್ಯಗಳಿಗೆ ನೂತನ ರಾಜ್ಯಪಾಲರ ನೇಮಕ

ವಿಜಯಶಂಕರ್ ಮೇಘಾಲಯ ರಾಜ್ಯಪಾಲ

ನವದೆಹಲಿ (ಪಿಟಿಐ): ಕರ್ನಾಟಕದ ಮಾಜಿ ಸಚಿವ ಸಿ.ಎಚ್.ವಿಜಯಶಂಕರ್ ಅವರನ್ನು ಮೇಘಾಲಯದ ನೂತನ ರಾಜ್ಯಪಾಲರನ್ನಾಗಿ ನೇಮಕ ಮಾಡಲಾಗಿದೆ.

ವಿವಿಧ ರಾಜ್ಯಗಳಿಗೆ ನೂತನ ರಾಜ್ಯಪಾಲರ ನೇಮಕ ಸಂಬಂಧ ರಾಷ್ಟ್ರಪತಿ ಭವನ ಶನಿವಾರ ರಾತ್ರಿ ಪ್ರಕಟಣೆ ಹೊರಡಿಸಿದ್ದು, ಎರಡು ಬಾರಿ ಸಂಸದರೂ ಆಗಿದ್ದ ವಿಜಯಶಂಕರ್ ಅವರಿಗೆ ಅದೃಷ್ಟ ಒಲಿದಿದೆ.

ಲಕ್ಷ್ಮಣ ಪ್ರಸಾದ್ ಆಚಾರ್ಯ ಅವರನ್ನು ಅಸ್ಸಾಂನ ರಾಜ್ಯಪಾಲರಾಗಿ ನೇಮಕ ಮಾಡಲಾಗಿದ್ದು, ಮಣಿಪುರ ರಾಜ್ಯದ ಹೆಚ್ಚುವರಿ ಹೊಣೆಯನ್ನೂ ನೀಡಲಾಗಿದೆ.

ಗುಲಾಬ್ ಚಂದ್ ಕಠಾರಿಯಾ ಅವರು ಪಂಜಾಬ್ ರಾಜ್ಯಪಾಲರಾಗಿ ನೇಮಕಗೊಂಡಿದ್ದಾರೆ.

ಪಂಜಾಬ್‌ನ ರಾಜ್ಯಪಾಲ ಮತ್ತು ಚಂಡೀಗಢದ ಆಡಳಿತಾಧಿಕಾರಿಯಾಗಿದ್ದ ಬನ್ವಾರಿಲಾಲ್ ಪುರೋಹಿತ್ ಅವರ ರಾಜೀನಾಮೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಗೀಕರಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬಿಜೆಪಿಯ ಹಿರಿಯ ನಾಯಕ ಓಂ ಪ್ರಕಾಶ್ ಮಾಥೂರ್ ಅವರನ್ನು ಸಿಕ್ಕಿಂಗೆ ಹಾಗೂ ಜಾರ್ಖಂಡ್‌ನ ರಾಜ್ಯಪಾಲರಾಗಿದ್ದ ಸಿ.ಪಿ. ರಾಧಾಕೃಷ್ಣನ್ ಅವರನ್ನು ಮಹಾರಾಷ್ಟ್ರದ ರಾಜ್ಯಪಾಲರನ್ನಾಗಿ ನೇಮಕ ಮಾಡಲಾಗಿದೆ. ಕೇಂದ್ರದ ಮಾಜಿ ಸಚಿವ ಸಂತೋಷ್ ಕುಮಾರ್ ಗಂಗ್ವಾರ್ ಅವರು ಜಾರ್ಖಂಡ್‌ನ ರಾಜ್ಯಪಾಲರಾಗಿ ಕಾರ್ಯ ನಿರ್ವಹಿಸಲಿದ್ದಾರೆ.

ಸಿ.ಎಚ್. ವಿಜಯಶಂಕರ್

ತ್ರಿಪುರದ ಮಾಜಿ ಉಪ ಮುಖ್ಯಮಂತ್ರಿ ಜಿಷ್ಣು ದೇವ್ ವರ್ಮಾ ಅವರನ್ನು ತೆಲಂಗಾಣ ರಾಜ್ಯಪಾಲರಾಗಿ ನೇಮಕ ಮಾಡಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಆಪ್ತರಲ್ಲಿ ಒಬ್ಬರಾಗಿರುವ, ಮಾಜಿ ಐಎಎಸ್ ಅಧಿಕಾರಿ ಕೆ. ಕೈಲಾಶನಾಥನ್ ಅವರನ್ನು ಪುದುಚೆರಿಯ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕ ಮಾಡಲಾಗಿದೆ.

ಕೈಲಾಶನಾಥನ್ ಅವರು ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರಿಗೆ ಮುಖ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು.

ರಾಜಸ್ಥಾನದ ರಾಜ್ಯಪಾಲರಾಗಿ ಮಹಾರಾಷ್ಟ್ರದ ಬಿಜೆಪಿ ಮುಖಂಡ ಹರಿಭಾವು ಕಿಶನ್‌ರಾವ್ ಬಾಗ್ಡೆ ಅವರನ್ನು ಹಾಗೂ ಛತ್ತೀಸ್‌ಗಢಕ್ಕೆ ಅಸ್ಸಾಂನ ಮಾಜಿ ಸಂಸದ ರಾಮೆನ್ ಡೇಕಾ ಅವರ ನೇಮಕ ನಡೆದಿದೆ. ರಾಜಸ್ಥಾನದ ರಾಜ್ಯಪಾಲರಾಗಿ ಕಲ್ರಾಜ್ ಮಿಶ್ರಾ ಅವರು ಕಾರ್ಯನಿರ್ವಹಿಸುತ್ತಿದ್ದರು.

ನೂತನ ರಾಜ್ಯಪಾಲರು

ರಾಜ್ಯ	ರಾಜ್ಯಪಾಲರು
ಮೇಘಾಲಯ	ಸಿ.ಎಚ್.ವಿಜಯಶಂಕರ್
ಅಸ್ಸಾಂ/ಮಣಿಪುರ	ಲಕ್ಷ್ಮಣ ಪ್ರಸಾದ್ ಆಚಾರ್ಯ
ಪಂಜಾಬ್	ಗುಲಾಬ್ ಚಂದ್ ಕಠಾರಿಯಾ
ಸಿಕ್ಕಿಂ	ಓಂ ಪ್ರಕಾಶ್ ಮಾಥೂರ್
ಮಹಾರಾಷ್ಟ್ರ	ಸಿ.ಪಿ.ರಾಧಾಕೃಷ್ಣನ್
ಜಾರ್ಖಂಡ್	ಸಂತೋಷ್ ಕುಮಾರ್ ಗಂಗ್ವಾರ್
ತೆಲಂಗಾಣ	ಜಿಷ್ಣು ದೇವ್ ವರ್ಮಾ
ರಾಜಸ್ಥಾನ	ಹರಿಭಾವು ಕಿಶನ್‌ರಾವ್ ಬಾಗ್ಡೆ
ಛತ್ತೀಸಗಢ	ರಾಮೆನ್ ಡೇಕಾ

ಬ್ರಾಹ್ಮಣ ಶಾಸಕನಿಗೆ ಮಣೆಹಾಕಿದ ಅಖಿಲೇಶ್

ಪ್ರಜಾವಾಣಿ ವಾರ್ತೆ

ಲಖನೌ: ತಮ್ಮ ರಾಜೀನಾಮೆಯಿಂದ ತೆರವಾದ ಉತ್ತರಪ್ರದೇಶ ವಿಧಾನಸಭೆಯ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಪಕ್ಷದ ಹಿರಿಯ ಮುಖಂಡ, ಬ್ರಾಹ್ಮಣ ಸಮುದಾಯದ ಮಾತಾ ಪ್ರಸಾದ್ ಪಾಂಡೆ ಅವರನ್ನು ನಾಮನಿರ್ದೇಶನ ಮಾಡಿ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ನಿರ್ಧಾರ ಪ್ರಕಟಿಸಿದ್ದಾರೆ.

ಇತ್ತೀಚಿಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಅಖಿಲೇಶ್ ಯಾದವ್ ಅವರು ಕನೌಜ್ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾಗಿದ್ದರು.

ಇದಾದ ಬಳಿಕ ಕರ್ಹಾಲ್‌ನ ಶಾಸಕ ಸ್ಥಾನ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೂ ರಾಜೀನಾಮೆ ಸಲ್ಲಿಸಿದ್ದರು.

ಕಾವಡ್ ಯಾತ್ರಾರ್ಥಿಗೆ ಗುದ್ದಿದ ಕಾರು; ಭದ್ರತೆ ಹೆಚ್ಚಳ

ಗಾಜಿಯಾಬಾದ್ (ಪಿಟಿಐ): ಜಿಲ್ಲೆಯ ಮುರಾದ್ ನಗರದಲ್ಲಿ ‘ಕಾವಡ್ ಯಾತ್ರೆ’ಗೆ ತೆರಳುತ್ತಿದ್ದ ಯಾತ್ರಾರ್ಥಿಗಳಿಗೆ ಕಾರು ಡಿಕ್ಕಿ ಹೊಡೆದ ಬಳಿಕ ಗಾಜಿಯಾಬಾದ್‌ನ ವಿವಿಧೆಡೆ ಭದ್ರತೆ ಹೆಚ್ಚಿಸಲಾಗಿದ್ದು, ಹಲವೆಡೆ ಸಂಚಾರ ನಿರ್ಬಂಧ ವಿಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದರು.

ಅಪಘಾತದ ಬಳಿಕ ಯಾತ್ರಾರ್ಥಿಗಳು ದೆಹಲಿ– ಮೀರತ್ ಎಕ್ಸ್‌ಪ್ರೆಸ್‌ವೇ ತಡೆದು, ಗಲಾಟೆ ನಡೆಸಿದರು. ಇದರಿಂದ ಈ ಮಾರ್ಗದಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ರಾವಲಿ ರಸ್ತೆಯ ಪಕ್ಕದಲ್ಲಿರುವ ಮುರಾದ್ ನಗರ ಪಟ್ಟಣದ ಗಂಗಾ ಕಾಲುವೆ ಸೇತುವೆಯಲ್ಲಿ ಪ್ರಾಂತೀಯ ಸಶಸ್ತ್ರ ಪಡೆಯ (ಪಿಎಸಿ)ಯ ಎರಡು ತುಕಡಿ ನಿಯೋಜಿಸಲಾಗಿದ್ದು, ಅತ್ಯಂತ ಸೂಕ್ಷ್ಮ ಪ್ರದೇಶಗಳಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ’ ಎಂದು ಗಾಜಿಯಾಬಾದ್ ನಗರ ಪೊಲೀಸ್ ಆಯುಕ್ತ ಅಜಯ್ ಕುಮಾರ್ ಮಿಶ್ರಾ ತಿಳಿಸಿದರು.

ಜೈಪುರದಲ್ಲಿ ಕಾವಡ್ ಯಾತ್ರಾರ್ಥಿಗಳು ಗಂಗೆಯ ಪವಿತ್ರ ನೀರು ಸಂಗ್ರಹಿಸಿ ಶಿವನಿಗೆ ಅರ್ಪಿಸಲು ಭಾನುವಾರ ಸಾಗಿದರು ಪಿಟಿಐ ಚಿತ್ರ

ಮುರಾದ್ ನಗರದ ರಾವಲಿ ರಸ್ತೆಯ ಬಳಿ ಶನಿವಾರ ಕಾವಡ್ ಯಾತ್ರಾರ್ಥಿಗಳ ಮೇಲೆ ಕಾರು ಡಿಕ್ಕಿ ಹೊಡೆದು, ಒಬ್ಬರು ಗಾಯಗೊಂಡಿದ್ದರು. ಇದರಿಂದ ಸಿಟ್ಟಿಗೆದ್ದಿದ್ದ ಯಾತ್ರಾರ್ಥಿಗಳು ಕಾರನ್ನು ಜಖಂಗೊಳಿಸಿ, ಚಾಲಕನ ಮೇಲೆ ಹಲ್ಲೆ ನಡೆಸಿದ್ದರು.

‘ಯಾತ್ರಾರ್ಥಿಗಳ ಸಂಖ್ಯೆ ಹೆಚ್ಚಿರುವ ಕಾರಣ ಗಾಜಿಯಾಬಾದ್ ಜಿಲ್ಲಾ ವ್ಯಾಪ್ತಿಯಲ್ಲಿ ಜುಲೈ 29ರಿಂದ ಆಗಸ್ಟ್ 2ರವರೆಗೆ ಎಲ್ಲ ಶಿಕ್ಷಣ ಸಂಸ್ಥೆಗಳನ್ನು ಮುಚ್ಚಲು ಸೂಚಿಸಲಾಗಿದ್ದು, ಶಾಲಾ ಬಸ್‌ಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ’ ಎಂದು ಮಿಶ್ರಾ ತಿಳಿಸಿದರು.

ಬ್ರಿಟನ್: ಪ್ರೀತಿ ಪಟೇಲ್ ಸ್ಪರ್ಧೆ

ಲಂಡನ್ (ಪಿಟಿಐ): ಕನ್ಸರ್ವೇಟಿವ್ ಪಕ್ಷದ ಪ್ರೀತಿ ಪಟೇಲ್ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದಾರೆ

ಬ್ರಿಟನ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಮಹಿಳೆಯೊಬ್ಬರು ಈ ಸ್ಥಾನಕ್ಕೆ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಜೊತೆಗೆ, ಭಾರತ ಮೂಲದವರೊಬ್ಬರು ಈ ಹುದ್ದೆಗೆ ಸ್ಪರ್ಧಿಸುತ್ತಿರುವುದು ಸಹ ಇದೇ ಮೊದಲ ಬಾರಿಯಾಗಿದೆ.

ಮಾಜಿ ಪ್ರಧಾನಿ ರಿಷಿ ಸುನಕ್ ಸದ್ಯ ವಿರೋಧ ಪಕ್ಷದ ಹಂಗಾಮಿ ನಾಯಕರಾಗಿದ್ದಾರೆ.

‘ನನ್ನ ನಾಯಕತ್ವದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುತ್ತೇನೆ’ ಎಂದು ನಾಮಪತ್ರ ಸಲ್ಲಿಸುವ ವೇಳೆ ಪ್ರೀತಿ ಹೇಳಿದ್ದಾರೆ.

ದೆಹಲಿಯ ಕೋಚಿಂಗ್ ಸೆಂಟರ್‌ನ ದುರಂತ ಪ್ರಕರಣ

ಕುಟುಂಬದ ಕನಸನ್ನೇ ಕೊಂದ ಶ್ರೇಯಾ ಸಾವು

ಪ್ರಜಾವಾಣಿ ವಾರ್ತೆ

ಲಖನೌ: ‘ಅವಳು ನಮ್ಮ ಮೂವರು ಮಕ್ಕಳಲ್ಲಿ ಅತ್ಯಂತ ಬುದ್ಧಿವಂತಳಾಗಿದ್ದಳು... ಆಕೆ ಐಎಎಸ್ ಅಧಿಕಾರಿ ಆಗಬೇಕೆಂದು ನಾವೆಲ್ಲರೂ ಬಯಸಿದ್ದೆವು.. ಈಗ ಎಲ್ಲವೂ ನಂದಿ ಹೋಯಿತು’ ಎಂದು ಅಳಲು ತೋಡಿಕೊಂಡರು ಶ್ರೇಯಾ ಯಾದವ್ ಅವರ ತಂದೆ ರಾಜೇಂದ್ರ ಯಾದವ್.

ಶನಿವಾರ ಸಂಜೆ, ಮಳೆ ನೀರಿನಿಂದ ಜಲಾವೃತವಾದ ದೆಹಲಿಯ ಕೋಚಿಂಗ್ ಸೆಂಟರ್‌ನ ನೆಲಮಾಳಿಗೆಯಲ್ಲಿ ಸಿಲುಕಿ ಮೃತಪಟ್ಟ ಮೂವರು ವಿದ್ಯಾರ್ಥಿಗಳಲ್ಲಿ ತಮ್ಮ ಮಗಳು ಶ್ರೇಯಾ ಯಾದವ್ ಇರುವುದು ಖಚಿತವಾದಾಗಿನಿಂದ ರಾಜೇಂದ್ರ ದುಃಖದಲ್ಲಿ ಮುಳುಗಿದ್ದಾರೆ.

ಉತ್ತರ ಪ್ರದೇಶದ ಅಂಬೇಡ್ಕರ್ ನಗರ ಜಿಲ್ಲೆಯ ನಿವಾಸಿಯಾದ ಶ್ರೇಯಾ ಅವರು ರಾಜೇಂದ್ರ ಅವರ ಎರಡನೇ ಪುತ್ರಿ. ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸಲು ಶ್ರೇಯಾ ಏಪ್ರಿಲ್‌ನಲ್ಲಿ ದೆಹಲಿಗೆ ತೆರಳಿದ್ದರು. ನೆರೆಯ ಸುಲ್ತಾನ್‌ಪುರ ಜಿಲ್ಲೆಯ ಕಮಲಾ ನೆಹರೂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಶ್ರೇಯಾ ಪದವಿ ಪಡೆದಿದ್ದರು.

ಶ್ರೇಯಾ ಯಾದವ್ ಅವರ ಶವವನ್ನು ಕೊಂಡೊಯ್ಯಲು ಅವರ ಕುಟುಂಬ ಸದಸ್ಯರು ಮತ್ತು ಬಂಧುಗಳು ನವದೆಹಲಿಯ ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆ ಬಳಿ ಭಾನುವಾರ ಸೇರಿದ್ದರು ಪಿಟಿಐ ಚಿತ್ರ

ಜಿಲ್ಲೆಯ ಬಸಖಾರಿಯಲ್ಲಿ ಡೇರಿ ಅಂಗಡಿ ನಡೆಸುತ್ತಿರುವ ರಾಜೇಂದ್ರ ಯಾದವ್ ಅವರು, ಸಾಲ ಮಾಡಿ ಕೋಚಿಂಗ್ ಸೆಂಟರ್ ಶುಲ್ಕ ತುಂಬಿದ್ದರು. ದುರಂತದ ಮಾಹಿತಿ ದೊರೆತ ನಂತರ ರಾಜೇಂದ್ರ ದೆಹಲಿಗೆ ತೆರಳಿದರು.

‘ಶ್ರೇಯಾ ಐಎಎಸ್ ಅಧಿಕಾರಿ ಆಗಬೇಕೆಂದು ಬಯಸಿದ್ದಳು. ಹಾಗಾಗಿಯೇ ನಾವು ಅವಳನ್ನು ದೆಹಲಿಗೆ ಕಳುಹಿಸಿದ್ದೆವು’ ಎಂದು ಕುಟುಂಬದ ಇನ್ನೊಬ್ಬ ಸದಸ್ಯರು ದುಃಖ ವ್ಯಕ್ತಪಡಿಸಿದರು.

ಹಾಶಿಂಪುರ್ ಬರ್ಸಾವಾನ್ ಗ್ರಾಮದಲ್ಲಿರುವ ಶ್ರೇಯಾ ಪೂರ್ವಜರ ಮನೆಯಲ್ಲಿ ಜಮಾಯಿಸಿದ ಕುಟುಂಬ ಸದಸ್ಯರು ಮತ್ತು ಸಂಬಂಧಿಕರು, ದುರಂತಕ್ಕೆ ಕೋಚಿಂಗ್ ಇನ್‌ಸ್ಟಿಟ್ಯೂಟ್ ಆಡಳಿತವನ್ನು ದೂಷಿಸಿದರು. ‘ನೆಲಮಾಳಿಗೆಯಲ್ಲಿ ಗ್ರಂಥಾಲಯವನ್ನು ಏಕೆ ತೆರೆಯಬೇಕಿತ್ತು. ಈ ಘಟನೆಯ ಬಗ್ಗೆ ಸಮಗ್ರ ತನಿಖೆ ನಡೆಸಬೇಕು’ ಎಂದು ಕುಟುಂಬದ ಮತ್ತೊಬ್ಬ ಸದಸ್ಯರು ಆಗ್ರಹಿಸಿದರು.

ಸಮೂಹ ಸಂವಹನ ಅಧ್ಯಯನ ನಡೆಸಿರುವ ಶ್ರೇಯಾ ಅವರ ಸಹೋದರ ಕೂಡ ದೆಹಲಿಯಲ್ಲಿ ನೆಲೆಸಿದ್ದು, ‘ಮಾಧ್ಯಮಗಳ ಮೂಲಕ ದುರಂತದ ಬಗ್ಗೆ ಮಾಹಿತಿ ಗೊತ್ತಾಗಿದೆ. ನೆಲಮಾಳಿಗೆಯಲ್ಲಿ ಗ್ರಂಥಾಲಯ ಸ್ಥಾಪಿಸಲು ಸ್ಥಳೀಯಾಡಳಿತದ ಅಧಿಕಾರಿಗಳು ಏಕೆ ಅನುಮತಿ ನೀಡಿದ್ದಾರೆ’ ಎಂದು ಪ್ರಶ್ನಿಸಿದರು.

ನೋಂದಣಿ ಪ್ರಮಾದ ಸಿಎಜಿ ವರದಿಯಲ್ಲಿ ಬಹಿರಂಗ

ವಾಹನದ ತೂಕ 3 ಕೆ.ಜಿ., ಕಾರಿನಲ್ಲಿ 50 ಸೀಟು!

ಜೈಪುರ (ಪಿಟಿಐ): ನಾಲ್ಕು ಚಕ್ರಗಳ ವಾಹನಗಳ ತೂಕ ಕೇವಲ 3 ಕೆ.ಜಿ., ಕಾರಿನ ಸೀಟುಗಳ ಸಾಮರ್ಥ್ಯ 50, ಅಲ್ಲದೆ, ಖರೀದಿ ದಿನಾಂಕಕ್ಕೂ ಮೊದಲೇ ವಾಹನಗಳ ನೋಂದಣಿ!

–ಇವು ರಾಜಸ್ಥಾನದ ಸಾರಿಗೆ ಇಲಾಖೆಯಲ್ಲಿ ಆಗಿರುವ ‘ಮಹಾ ಪ್ರಮಾದಗಳು’. ಈ ಪ್ರಮಾದಗಳನ್ನು ಈಗ ಮಹಾಲೇಖಪಾಲರ (ಸಿಎಜಿ) ವರದಿ ಬಹಿರಂಗಪಡಿಸಿದೆ.

ರಾಜಸ್ಥಾನದ ಸಾರಿಗೆ ಇಲಾಖೆಯ ವಾಹನ ಮತ್ತು ಸಾರಥಿ ಪೋರ್ಟಲ್‌ಗಳಲ್ಲಿ ಸೊನ್ನೆಯಿಂದ 3 ಕೆ.ಜಿ ತೂಕದ 15,570 ವಾಹನಗಳನ್ನು ನೋಂದಣಿ ಮಾಡಿರುವುದನ್ನು ತೋರಿಸಲಾಗಿದೆ ಎಂದು ರಾಜಸ್ಥಾನ ವಿಧಾನಸಭೆಯಲ್ಲಿ ಇತ್ತೀಚೆಗೆ ಮಂಡಿಸಲಾದ ಸಿಎಜಿ ವರದಿ ತಿಳಿಸಿದೆ.

ವಾಹನ ಪೋರ್ಟಲ್‌ನಲ್ಲಿ 119 ವಾಹನಗಳನ್ನು ಖರೀದಿಸುವ ದಿನಾಂಕದ ಮೊದಲು ನೋಂದಾಯಿಸಿರುವುದು ಮತ್ತು 14 ವಾಹನಗಳಿಗೆ 1 ಲಕ್ಷ ಕೆ.ಜಿ.ಗಿಂತ ಹೆಚ್ಚು ತೂಕ ದಾಖಲಿಸಿರುವುದು, ನಕಲಿ ಚಾಸಿಸ್ ಅಥವಾ ಎಂಜಿನ್ ಸಂಖ್ಯೆಗಳೊಂದಿಗೆ 712 ವಾಹನಗಳನ್ನು ಸಾರಿಗೆ ಇಲಾಖೆಯು ನೋಂದಾಯಿಸಿರುವುದನ್ನು ಸಿಎಜಿ ಪತ್ತೆ ಮಾಡಿದೆ.

ನಿಯಮಗಳನ್ನು ತಪ್ಪಾಗಿ ಅನುಸರಿಸಿದ ಪರಿಣಾಮ ವಾಹನಗಳ ನೋಂದಣಿ ಮತ್ತು ಹೈಪೋಥಿಕೇಶನ್ ಶುಲ್ಕಗಳ ಸಂಗ್ರಹದಲ್ಲಿ ಕೊರತೆ ಆಗಿ, ರಾಜ್ಯದ ಬೊಕ್ಕಸಕ್ಕೆ ಆದಾಯ ನಷ್ಟವಾಗಿದೆ

ಮಹಾಲೇಖಪಾಲರ ವರದಿ



ನೋಂದಣಿಯಾದ 1,219 ವಾಹನ ಗಳಲ್ಲಿ ನಮೂದಿಸಿರುವ ಆಸನ ಸಾಮರ್ಥ್ಯದಲ್ಲೂ ದೋಷ ಕಂಡು ಬಂದಿದೆ. ಇವುಗಳಲ್ಲಿ 120 ಸರಕು ವಾಹನಗಳು, ಇವು 10ರಿಂದ 100 ಪ್ರಯಾಣಿಕರವರೆಗಿನ ಆಸನ ಸಾಮರ್ಥ್ಯ ಹೊಂದಿವೆ ಎಂದು ದಾಖಲೆಯಲ್ಲಿ ತೋರಿಸಲಾಗಿದೆ. ಏಳು ಕಾರುಗಳ ದಾಖಲೆಯಲ್ಲಿ ಇವು 10ರಿಂದ 50 ಪ್ರಯಾಣಿಕರು ಕುಳಿತುಕೊಳ್ಳುವ ಸಾಮರ್ಥ್ಯ ಹೊಂದಿರುವುದಾಗಿ ತೋರಿಸಲಾಗಿದೆ. 10ಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಸಾಗಿಸಲು ವಿನ್ಯಾಸಗೊಳಿಸಲಾದ ಬಸ್‌ಗಳಂತಹ 1,018 ಪ್ರಯಾಣಿಕ ವಾಹನಗಳು ಕೇವಲ ಒಂದರಿಂದ ಮೂರು ಪ್ರಯಾಣಿಕ ಆಸನಗಳನ್ನು ಮಾತ್ರ ಹೊಂದಿವೆ ಎಂದು ತಪ್ಪಾಗಿ ತೋರಿಸಲಾಗಿದೆ.

ಅಲ್ಲದೆ, ಸಾರಥಿ ಪೋರ್ಟಲ್‌ನಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ 166 ಮಂದಿಗೆ ಕಲಿಕಾ ಪರವಾನಗಿ ನೀಡಲಾಗಿದೆ. ಇದು ನಿಯಮಗಳಿಗೆ ವಿರುದ್ಧ ಎಂದು ವರದಿ ತಿಳಿಸಿದೆ.

ರಾಜಸ್ಥಾನದಲ್ಲಿ 2016ರ ಏಪ್ರಿಲ್‌ನಿಂದ 2021ರ ಮಾರ್ಚ್‌ವರೆಗೆ ವಾಹನ ಮತ್ತು ಸಾರಥಿ ಬಳಕೆಯ 10.14 ಲಕ್ಷ ಪ್ರಕರಣಗಳನ್ನು ಸಿಎಜಿ ಲೆಕ್ಕಪರಿಶೋಧನೆ ನಡೆಸಿದೆ. ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳನ್ನು ಹೊರತುಪಡಿಸಿ ಉಳಿದೆಲ್ಲ ವಾಹನಗಳನ್ನು ಒಳಗೊಂಡ ಲೆಕ್ಕಪರಿಶೋಧನಾ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸಲಾಗಿದೆ.

‘ತಪ್ಪುಗಳನ್ನು ಸರಿಪಡಿಸಲು ಸೂಚನೆ ನೀಡಿರುವುದಾಗಿ ಸರ್ಕಾರವು 2023ರ ಡಿಸೆಂಬರ್‌ನಲ್ಲಿ ಉತ್ತರ ನೀಡಿದೆ. ಇಲಾಖೆಯು ತೆಗೆದುಕೊಂಡ ಕ್ರಮವನ್ನು ನಿರ್ಣಯಿಸಲು, ಈ ಪ್ರಕರಣಗಳನ್ನು ಪರಿಶೀಲಿಸಲಾಯಿತು. ಆದರೆ, ಈ ಅಕ್ರಮಗಳನ್ನು ಇನ್ನೂ ಸರಿಪಡಿಸಿಲ್ಲ’ ಎಂದು ಸಿಎಜಿ ವರದಿಯಲ್ಲಿ ಉಲ್ಲೇಖಿಸಿದೆ. ಅಲ್ಲದೆ, ಇಂತಹ ವ್ಯವಸ್ಥಿತ ದೌರ್ಬಲ್ಯಗಳನ್ನು ಗುರುತಿಸಿ, ಸರಿಪಡಿಸಲು ಇಲಾಖೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ ಎಂದು ಸಿಎಜಿ ಶಿಫಾರಸು ಮಾಡಿದೆ.

‘ವಾಹನ ಮತ್ತು ಸಾರಥಿ ಪೋರ್ಟಲ್‌ಗಳನ್ನು ಮೋಟಾರು ವಾಹನ ಕಾಯ್ದೆ 1988 ಮತ್ತು ಮೋಟಾರು ವಾಹನ ನಿಯಮಗಳ ಸರಿಯಾದ ರೀತಿಯಲ್ಲಿ ಕಾರ್ಯಗತಗೊಳಿಸಲು ವಿನ್ಯಾಸಗೊಳಿಸಲಾಗಿದೆ. ನಿಯಮಗಳನ್ನು ಸರಿಯಾಗಿ ಪಾಲಿಸದೆ, ಪ್ರಮಾದ ಎಸಗಿರುವ ಅನೇಕ ನಿದರ್ಶನಗಳು ಪರಿಶೀಲನೆಯಲ್ಲಿ ಬಹಿರಂಗಗೊಂಡಿವೆ’ ಎಂದು ಸಿಎಜಿ ಹೇಳಿದೆ.

ತನಿಖೆಗೆ ಹಲವು ತಂಡ ರಚನೆ

ನವದೆಹಲಿ (ಪಿಟಿಐ): ‘ಕೋಚಿಂಗ್ ಸೆಂಟರ್‌ನಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ತನಿಖೆಗೆ ಹಲವು ತಂಡಗಳನ್ನು ರಚಿಸಲಾಗಿದೆ’ ಎಂದು ಡಿಸಿಪಿ (ಕೇಂದ್ರ ದೆಹಲಿ) ಎಂ.ಹರ್ಷವರ್ಧನ ತಿಳಿಸಿದರು.

‘ಕಟ್ಟಡ ಮತ್ತು ನೆಲಮಹಡಿಗೆ ಸಂಬಂಧಿಸಿ ವರದಿ ನೀಡುವಂತೆ ಅಗ್ನಿಶಾಮಕ ದಳಕ್ಕೆ ಸೂಚಿಸಲಾಗಿದೆ. ತಳಮಹಡಿಯು ನೆಲಮಟ್ಟದಿಂದ ಎಂಟು ಅಡಿಗಳಷ್ಟು ಕೆಳಕ್ಕೆ ಇದ್ದು, ನೀರು ನುಗ್ಗುವ ವೇಳೆ ಅಲ್ಲಿ 18 ವಿದ್ಯಾರ್ಥಿಗಳಿದ್ದರು’ ಎಂದು ಹೇಳಿದರು.

‘ಘಟನೆಗೆ ಸಂಬಂಧಿಸಿದಂತೆ ಕೋಚಿಂಗ್ ಸೆಂಟರ್‌ನ ಮಾಲೀಕ ಅಭಿಷೇಕ್ ಗುಪ್ತಾ ಮತ್ತು ನಿರ್ವಾಹಕ ದೇಶಪಾಲ್ ಸಿಂಗ್ ಅವರನ್ನು ಬಂಧಿಸಲಾಗಿದೆ’ ಎಂದು ಮಾಹಿತಿ ನೀಡಿದರು.

ಸ್ಟೋರ್ ರೂಂ ಬದಲು ಗ್ರಂಥಾಲಯ: ಕೋಚಿಂಗ್ ಸೆಂಟರ್‌ನ ನೆಲಮಹಡಿಯನ್ನು ಸ್ಟೋರ್ ರೂಂ (ಉಗ್ರಾಣ) ಆಗಿ ಬಳಸಲು ಮಾತ್ರ ಅನುಮತಿ ನೀಡಲಾಗಿತ್ತು. ಆದರೆ ಅದನ್ನು ಗ್ರಂಥಾಲಯವಾಗಿ ಬಳಸಿ, ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ನೆಲಮಹಡಿಯನ್ನು ವಾಣಿಜ್ಯ ಉದ್ದೇಶಗಳಿಗೆ ಬಳಸುವ ಎಲ್ಲ ಕೋಚಿಂಗ್ ಸೆಂಟರ್‌ಗಳು ಮತ್ತು ಶಿಕ್ಷಣ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ದೆಹಲಿ ಮೇಯರ್ ಶೆಲ್ಲಿ ಒಬೆರಾಯ್ ಅವರು ಮಹಾನಗರ ಪಾಲಿಕೆ ಆಯುಕ್ತರಿಗೆ ಸೂಚಿಸಿದ್ದಾರೆ.

ತನಿಖೆಗೆ ಸಹಕಾರ: ‘ಸಮರ್ಪಣೆ ಮತ್ತು ಬದ್ಧತೆಯಿಂದ ದೇಶ ಸೇವೆಗೆ ತಯಾರಿ ನಡೆಸುತ್ತಿದ್ದ ಮೂವರ ಸಾವಿನಿಂದ ತೀವ್ರ ದುಃಖವಾಗಿದೆ. ಘಟನೆಯ ಕುರಿತ ತನಿಖೆಗೆ ಎಲ್ಲ ಸಹಕಾರ ನೀಡುತ್ತೇವೆ’ ಎಂದು ತರಬೇತಿ ಕೇಂದ್ರವು ಪ್ರಕಟಣೆಯಲ್ಲಿ ತಿಳಿಸಿದೆ.

ಎಎಪಿ ಶಾಸಕರಿಗೆ ನೋಟಿಸ್: ಘಟನೆ ಬಗ್ಗೆ ಸ್ವಯಂ ದೂರು ದಾಖಲಿಸಿರುವ ರಾಷ್ಟ್ರೀಯ ಮಹಿಳಾ ಆಯೋಗ, ಎಎಪಿ ಶಾಸಕ ದುರ್ಗೇಶ್ ಪಾಠಕ್ ಅವರಿಗೆ ನೋಟಿಸ್ ಜಾರಿಗೊಳಿಸಿದೆ.

ಮುಖ್ಯಾಂಶಗಳು

- ದೆಹಲಿಯ ಓಲ್ಡ್ ರಾಜೇಂದ್ರ ನಗರದಲ್ಲಿ ಶನಿವಾರ ಸಂಜೆ ಘಟನೆ
- ನೆಲಮಹಡಿಯ ಗ್ರಂಥಾಲಯದಲ್ಲಿ ಸಿಲುಕಿದ್ದ ವಿದ್ಯಾರ್ಥಿಗಳು

ಯುಪಿಎಸ್‌ಸಿ ಆಕಾಂಕ್ಷಿಗಳಾಗಿದ್ದರು...

ಶನಿವಾರ ನಡೆದ ದುರ್ಘಟನೆಯಲ್ಲಿ ಮೃತಪಟ್ಟವರನ್ನು ಕೇರಳದ ಎರ್ನಾಕುಳಂ ಜಿಲ್ಲೆಯ ನವೀನ್ ಡೆಲ್ವಿನ್ (29), ತೆಲಂಗಾಣದಲ್ಲಿ ನೆಲೆಸಿರುವ ಬಿಹಾರದ ಔರಂಗಾಬಾದ್‌ನ ತಾನ್ಯಾ ಸೋನಿ (21) ಮತ್ತು ಉತ್ತರ ಪ್ರದೇಶದ ಶ್ರೇಯಾ ಯಾದವ್ ಎಂದು ಗುರುತಿಸಲಾಗಿದೆ. ಈ ಮೂವರೂ ನಾಗರಿಕ ಸೇವಾ ಪರೀಕ್ಷೆಗಾಗಿ ಸಿದ್ಧತೆ ನಡೆಸುತ್ತಿದ್ದರು.

ತಾನ್ಯಾ ಅವರು ದೆಹಲಿ ವಿಶ್ವವಿದ್ಯಾಲಯದ ಮಹಾರಾಜಾ ಅಗ್ರಸೇನ್ ಕಾಲೇಜಿನ ವಿದ್ಯಾರ್ಥಿನಿ ಆಗಿದ್ದು, ಒಂದೂವರೆ ತಿಂಗಳ ಹಿಂದೆಯಷ್ಟೇ ರಾವ್ಸ್ ಕೋಚಿಂಗ್ ಸೆಂಟರ್‌ಗೆ ಸೇರಿಕೊಂಡಿದ್ದರು.

ನವೀನ್ ಅವರು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಪಿಎಚ್‌.ಡಿ ಮಾಡುತ್ತಿದ್ದು, ಕೋಚಿಂಗ್ ಸೆಂಟರ್‌ನಲ್ಲಿ ಎಂಟು ತಿಂಗಳಿನಿಂದ ತರಬೇತಿ ಪಡೆಯುತ್ತಿದ್ದಾರೆ. ಬಿಎಸ್‌ಸಿ (ಕೃಷಿ) ವ್ಯಾಸಂಗ ಮಾಡಿರುವ ಶ್ರೇಯಾ, ಎರಡು ತಿಂಗಳ ಹಿಂದೆ ತರಬೇತಿ ಕೇಂದ್ರಕ್ಕೆ ಸೇರಿಕೊಂಡಿದ್ದರು.

ಹರಿಯಾಣ ಹುಡುಗಿಯ ಪ್ರಶಸ್ತಿ ಸಂಗ್ರಹಕ್ಕೆ ಒಲಿಂಪಿಕ್ಸ್ ಪದಕ ಮೆರಗು • 12 ವರ್ಷಗಳ ನಂತರ ಭಾರತಕ್ಕೆ ಶೂಟಿಂಗ್ ಪದಕ

ಪ್ಯಾರಿಸ್‌ನಲ್ಲಿ ಮನು ಕನಸು ನನಸು

• ಸಿದ್ಧಿ ಕಿರಣ್

ಭಾರತದ ಮನು ಭಾಕರ್ ಅವರು ದಕ್ಷಿಣ ಕೊರಿಯಾದ ಜೆನ್ ಯಿ ಒಹ್ (ಮಧ್ಯದಲ್ಲಿ) ಮತ್ತು ಕಿಮ್ ಯಜಿ ಅವರೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡರು –ಎಪಿ/ಪಿಟಿಐ ಚಿತ್ರ

ಪ್ಯಾರಿಸ್: ಮನು ಭಾಕರ್ ಬಾಲ್ಯದಿಂದಲೂ ಅಸಾಧಾರಣ ಪ್ರತಿಭೆಯ ಹುಡುಗಿ. ಬಾಕ್ಸಿಂಗ್, ಟೆನಿಸ್, ಸ್ಕೇಟಿಂಗ್ ಮತ್ತು ಮಣಿಪುರದ ಸಮರ ಕಲೆಯಾದ ಹಯೆನ್ ಲ್ಯಾಂಗ್ಲಾನ್ ಕ್ರೀಡೆಗಳಲ್ಲಿ ತಕ್ಕಮಟ್ಟಿಗೆ ಸಾಧನೆ ತೋರಿದ್ದರು. ಆದರೆ ದಶಕದ ಹಿಂದೆ ಶೂಟಿಂಗ್ ಕ್ರೀಡೆಗೆ ಕಾಲಿಟ್ಟ ಮೇಲೆ ಹಲವು ಅಂತರರರಾಷ್ಟ್ರೀಯ ದಾಖಲೆಗಳ'ಗುರಿ'ಸಾಧನೆಮಾಡಿದರು.

2018ರಲ್ಲಿ ಮೆಕ್ಸಿಕೊನಲ್ಲಿ ನಡೆದಿದ್ದ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ, ಹರಿಯಾಣದ ಝಜ್ಜರ್ ಜಿಲ್ಲೆಯ ಈ ಹುಡುಗಿ ಕ್ರೀಡಾಪ್ರಿಯರ ಚಿತ್ತವನ್ನು ತಮ್ಮತ್ತ ಸೆಳೆದಿದ್ದರು. ಭವಿಷ್ಯದ ತಾರೆಯಾಗುವ ಭರವಸೆ ಮೂಡಿಸಿದ್ದರು. ಅವರು ನಿರೀಕ್ಷೆಗಳನ್ನು ಹುಸಿ ಮಾಡಲಿಲ್ಲ. ವಿಶ್ವಕಪ್, ವಿಶ್ವ ಚಾಂಪಿಯನ್‌ಷಿಪ್, ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು ಏಷ್ಯನ್ ಕ್ರೀಡಾಕೂಟಗಳಲ್ಲಿ ಚಿನ್ನದ ಪದಕಗಳನ್ನು ಗೆದ್ದರು.

ಅವರ ಪ್ರಶಸ್ತಿಗಳ ಸಂಗ್ರಹದಲ್ಲಿ ಎಲ್ಲವೂ ಇದ್ದವು. ಆದರೆ, ಒಲಿಂಪಿಕ್ ಕೂಟದ ಪದಕವೊಂದರ ಕೊರತೆ ಇತ್ತು. ಅದು ಮೂರು ವರ್ಷಗಳ ಹಿಂದೆ ಟೋಕಿಯೊದಲ್ಲಿಯೇ ಕೈಗೂಡಬೇಕಿತ್ತು. ಆದರೆ ಆ ಕೂಟದಲ್ಲಿ 10 ಮೀ ಏರ್ ಪಿಸ್ತೂಲ್ ಮತ್ತು 25 ಮೀ ಪಿಸ್ತೂಲ್ ವಿಭಾಗಗಳ ಅರ್ಹತಾ ಸುತ್ತಿನಲ್ಲಿಯೇ ವೈಫಲ್ಯ ಅನುಭವಿಸಿದ್ದರು. ಆಗ ಅವರ ಮನೋದಾರ್ಢ್ಯವನ್ನು ಹಲವರು ಪ್ರಶ್ನಿಸಿದ್ದರು. ಅಂದು ನಿರಾಶೆಯ ಕಣ್ಣೀರಿನೊಂದಿಗೆ ಕ್ರೀಡಾಗ್ರಾಮದಿಂದ ಹೊರಬಿದ್ದಿದ್ದರು. ಅಂದು ಟೀಕೆಗಳನ್ನು ಎದುರಿಸಿದ ರೀತಿಯು ವಯಸ್ಸಿಗೂ ಮೀರಿದ ಪ್ರಬುದ್ಧತೆಯನ್ನು ತೋರಿತ್ತು. ಒತ್ತಡ ಮತ್ತು ಅಪಾರ ನಿರೀಕ್ಷೆಗಳನ್ನು ನಿಭಾಯಿಸುತ್ತಲೇ ಬೆಳೆದರು. ಅದರ ಫಲವಾಗಿ ಪ್ಯಾರಿಸ್‌ನಲ್ಲಿ ಅವರ ಕಂಗಳಲ್ಲಿ ಆನಂದಭಾಷ್ಪ ಮಿನುಗಿದವು. ಈ ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸುವ 22 ವರ್ಷದ ಮನು ಅವರ ಪರಮ ಗುರಿಯು ಈಡೇರಿತು.

ಪ್ಯಾರಿಸ್‌ನಿಂದ 280 ಕಿ.ಮೀ ದೂರದಲ್ಲಿರುವ ಶಾತೊಹು ಶೂಟಿಂಗ್ ರೇಂಜ್‌ನಲ್ಲಿ ಭಾನುವಾರ ಮಧ್ಯಾಹ್ನ (ಫ್ರಾನ್ಸ್ ಕಾಲಮಾನ) ಮನು ಕನಸು ಕೈಗೂಡಿತು. ಅವರ ಪ್ರಶಸ್ತಿಗಳ ಸಂಗ್ರಹದಲ್ಲಿ ಒಲಿಂಪಿಕ್ಸ್‌ನ ಕಂಚಿನ ಪದಕ ಸೇರಿತು. ಮಹಿಳೆಯರ 10 ಮೀಟರ್ಸ್ ಏರ್ ಪಿಸ್ತೂಲ್ ವಿಭಾಗದಲ್ಲಿ ಪದಕ ಗೆಲ್ಲುವ ಮೂಲಕ ಇತಿಹಾಸ ರಚಿಸಿದರು. ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ಪದಕ ಗೆದ್ದ ಭಾರತದ ಮೊದಲ ಮಹಿಳೆಯಾದರು. ಫೈನಲ್ ಸುತ್ತಿನಲ್ಲಿ ಶ್ರೇಷ್ಠ ದರ್ಜೆಯ ಸ್ಪರ್ಧೆ ಏರ್ಪಟ್ಟಿತ್ತು.

ದಕ್ಷಿಣ ಕೊರಿಯಾದ ಜೆನ್ ಯಿ ಒಹ್ (243.2 ಸ್ಕೋರ್) ಚಿನ್ನದ ಪದಕ ಜಯಿಸಿದರು. ಅವರದ್ದೇ ದೇಶದ ಯೇಜಿ ಕಿಮ್ (241.3) ಅಲ್ಪ ಅಂತರದಲ್ಲಿ ಮೊದಲ ಸ್ಥಾನ ತಪ್ಪಿಸಿಕೊಂಡು, ಬೆಳ್ಳಿ ಗಳಿಸಿದರು. ಮನು ಅವರು 221.7 ಸ್ಕೋರ್ ಮಾಡಿದರು. ಪದಕ ಸುತ್ತಿನ ಪೈಪೋಟಿಯಲ್ಲಿ ಮನು ಅವರು ತಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಪಣಕ್ಕಿಟ್ಟರು. ಕೆಲವು ಹಂತಗಳಲ್ಲಿ ಕೊರಿಯಾದ ಇಬ್ಬರೂ ಶೂಟರ್‌ಗಳಿಗೆ ಪೈಪೋಟಿಯೊಡ್ಡಿದರು.

‘ನಾನು ಒಲಿಂಪಿಕ್ ವಿಜಯ ವೇದಿಕೆಯ ಮೇಲೆ ನಿಲ್ಲುವ ಕನಸು ಕಂಡಿದ್ದೆ. ಅದು ನಿಜವಾಗಿರುವುದನ್ನು ನಂಬಲಾಗುತ್ತಿಲ್ಲ. ಸಂತಸದ ಉತ್ತುಂಗದಲ್ಲಿ ವಿಹರಿಸುತ್ತಿರುವಂತೆ ಭಾಸವಾಗುತ್ತಿದೆ. ಸ್ಪರ್ಧೆಯು ಅತ್ಯಂತ ತುರುಸಿನ ಪೈಪೋಟಿಯಿಂದ ಕೂಡಿತ್ತು. 0.1 ಅಂತರದಿಂದ ಇನ್ನಷ್ಟು ಉನ್ನತ ಸಾಧನೆ ಮಾಡುವ ಅವಕಾಶವನ್ನು ಕೈತಪ್ಪಿಸಿಕೊಂಡೆ. ಈ ಪದಕ ಜಯದ ಸಾಧನೆಗೆ ಕಾರಣರಾದ ಎಲ್ಲರಿಗೂ ಮತ್ತು ಭಾರತಕ್ಕೆ ನಾನು ಆಭಾರಿಯಾಗಿರುವೆ’ ಎಂದು ಮನು ಪ್ರತಿಕ್ರಿಯಿಸಿದರು.

25 ಮೀಟರ್ಸ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಅವರು ಸ್ಪರ್ಧಿಸಲಿದ್ದಾರೆ.

ಫೈನಲ್‌ಗೆ ರಮಿತಾ, ಅರ್ಜುನ್

ಪ್ಯಾರಿಸ್ (ಪಿಟಿಐ): ಭಾರತದ ರಮಿತಾ ಜಿಂದಾಲ್ ಮತ್ತು ಅರ್ಜುನ್ ಬಬುತಾ ಅವರು ಕ್ರಮವಾಗಿ 10 ಮೀ ಏರ್ ರೈಫಲ್ ಸ್ಪರ್ಧೆಯ ಮಹಿಳೆ ಹಾಗೂಪುರುಷರ ವಿಭಾಗದ ಫೈನಲ್‌ಗೆ ಪ್ರವೇಶಿಸಿದರು.

ಮಹಿಳೆಯರ ವಿಭಾಗದಲ್ಲಿ ರಮಿತಾ ಅವರ ಅರ್ಹತಾ ಸುತ್ತಿನ್ನಲ್ಲಿ ಐದನೇ ಸ್ಥಾನ ಪಡೆದರು. 631.5 ಅಂಕ ಗಳಿಸಿದ ಅವರು ತಮ್ಮದೇ ದೇಶದ ಇಳವೆನಿಲಾ ವಾಳರಿವನ್ (630.7) ಅವರನ್ನು ಹಿಂದಿಕ್ಕಿದರು. ವಾಳರಿವನ್ ಅವರು 10ನೇ ಸ್ಥಾನ ಪಡೆದರು. ಇದರಿಂದಾಗಿ ಫೈನಲ್ ಪ್ರವೇಶಿಸಲು ಅವರಿಗೆ ಸಾಧ್ಯವಾಗಲಿಲ್ಲ.

ಪುರುಷರ ವಿಭಾಗದಲ್ಲಿ 25 ವರ್ಷದ ಅರ್ಜುನ್ ಬಬುತಾ ಅರ್ಹತಾ ಸುತ್ತಿನಲ್ಲಿ ಏಳನೇ ಸ್ಥಾನ ಪಡೆದು ಫೈನಲ್‌ಗೆ ಲಗ್ಗೆ ಇಟ್ಟರು.

ಅವರು 630.1 ಪಾಯಿಂಟ್ಸ್ (105.7, 104.9, 105.5, 105.4, 104.0 ಮತ್ತು 104.6) ಕಲೆಹಾಕಿದರು. ಚಂಡೀಗಡದ ಅರ್ಜುನ್ ಅವರು ಸೋಮವಾರ ನಡೆಯಲಿರುವ ಫೈನಲ್‌ನಲ್ಲಿ ಸ್ಪರ್ಧಿಸುವರು.

ಭಗವದ್ಗೀತೆಯ ಸಾಲುಗಳೇ ಪ್ರೇರಣೆ

‘ನಾನು ಭಗವದ್ಗೀತೆಯನ್ನು ಬಹಳ ಇಷ್ಟಪಟ್ಟು ಓದುತ್ತೇನೆ. ಅದರಲ್ಲಿ ಶ್ರೀಕೃಷ್ಣ ಪರಮಾತ್ಮನು ಅರ್ಜುನ ಕರ್ಮದ ಮೇಲೆ ಗಮನವಿಡು. ಫಲದ ಚಿಂತೆ ಮಾಡಬೇಡ ಎಂದು ಹೇಳುವ ಮಾತು ಫೈನಲ್ ಸುತ್ತಿನಲ್ಲಿ ನನ್ನ ಮನದಲ್ಲಿ ಪ್ರತಿಧ್ವನಿಸುತ್ತಿತ್ತು. ಶನಿವಾರದ ಅರ್ಹತಾ ಸುತ್ತಿನ ಸಂದರ್ಭದಲ್ಲಿಯೂ ಇದೇ ಮಾತನ್ನು ನೆನಪಿಸಿಕೊಂಡೇ ಸ್ಪರ್ಧಿಸಿದ್ದೆ. ಅದರಿಂದಾಗಿ ನನ್ನ ಗುರಿಯ ಮೇಲೆ ಏಕಾಗ್ರತೆ ಸಾಧಿಸಲು ಸಾಧ್ಯವಾಯಿತು. ಫಲಿತಾಂಶದ ಬಗ್ಗೆ ಚಿಂತಿಸುವುದನ್ನು ಬಿಟ್ಟು ಕಾರ್ಯದ ಮೇಲೆ ಏಕಾಗ್ರತೆ ಸಾಧಿಸಿದೆ’ ಎಂದು ಮನು ಹೇಳಿದರು.

ಮೂರು ವರ್ಷಗಳ ಹಿಂದೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಆದ ನಿರಾಶೆಯ ನಂತರ ಅವರು ಆಧ್ಯಾತ್ಮದತ್ತ ಹೆಚ್ಚು ಒಲವು ಬೆಳೆಸಿಕೊಂಡರಂತೆ.

‘ಟೋಕಿಯೊ ಒಲಿಂಪಿಕ್ಸ್ ನಂತರ ನಾನು ಹೆಚ್ಚು ಧಾರ್ಮಿಕಳಾದೆ. ಆದರೆ ಕಟ್ಟಾ ಧಾರ್ಮಿಕವಾದಿಯಲ್ಲ. ಅಧ್ಯಾತ್ಮಕ್ಕೆ ನಮ್ಮನ್ನು ಉತ್ತಮ ಹಾದಿಯಲ್ಲಿ ನಡೆಸುವ ಅಪಾರವಾದ ಶಕ್ತಿ ಇದೆ. ನಮ್ಮನ್ನು ರಕ್ಷಿಸುವ ಚೈತನ್ಯವೂ ಇದೆ ಎಂಬುದರಲ್ಲಿ ಅಪಾರ ನಂಬಿಕೆ ಇದೆ. ನಮ್ಮೆಲ್ಲರನ್ನೂ ಸೃಷ್ಟಿಸಿದ ಮತ್ತು ಮುನ್ನಡೆಸುವ ಶಕ್ತಿಯೊಂದು ಇದೆ ಎಂಬುದರಲ್ಲಿ ನನಗೆ ಸಂಪೂರ್ಣ ನಂಬಿಕೆ ಇದೆ’ ಎಂದು ಹೇಳಿದರು.

ಭಾಕರ್ ಮನೆಯಲ್ಲಿ ಹೋಮ, ಹವನ

ಸೂರಜ್‌ಕುಂಡ, ಹರಿಯಾಣ (ಪಿಟಿಐ): ಮನು ಭಾಕರ್ ಅವರ ಮನೆಯಲ್ಲಿ ಭಾನುವಾರ ಬೆಳಿಗ್ಗೆಯಿಂದಲೇ ಹೋಮ, ಹವನ ನಡೆದವು. ಟಿ.ವಿ. ಬಂದ್ ಆಗಿತ್ತು!

ಅತ್ತ ಪ್ಯಾರಿಸ್‌ನಲ್ಲಿ ಮನು ಭಾಕರ್ ಅವರು 10 ಮೀ ಏರ್ ಪಿಸ್ತೂಲ್ ಶೂಟಿಂಗ್‌ನಲ್ಲಿ ಕಂಚಿನ ಪದಕ ಜಯಿಸುವವರೆಗೂ ಹವನ ನಡೆಯುತ್ತಲೇ ಇತ್ತು. ಮನು ಕಂಚಿನ ಪದಕ ಜಯಿಸಿದ ನಂತರ ಮನೆಯಿಂದ ಹೊರಗೆ ಬಂದ ಅವರ ತಂದೆ ರಾಮಕಿಶನ್ ಭಾಕರ್ ಅವರು ತಮ್ಮ ಹಿತೈಷಿಗಳಿಂದ ಅಭಿನಂದನೆ ಸ್ವೀಕರಿಸಿದರು.

‘ಮನು ಯಾವುದೇ ಅಂತರರಾಷ್ಟ್ರೀಯ ಸ್ಪರ್ಧೆಗೆ ಹೋದರೂ ನಾವು ಟಿ.ವಿ. ಬಂದ್ ಇಟ್ಟಿರುತ್ತೇವೆ. ಇದು ನಮ್ಮ ನಂಬಿಕೆ. ಬೆಳಿಗ್ಗೆಯಿಂದಲೇ ನನ್ನ ಪತ್ನಿ ಪೂಜೆ, ಹವನ ಮಾಡುತ್ತಿದ್ದಾರೆ’ ಎಂದು ಅವರು ಹೇಳಿದರು.

‘ಮನು ಅವರ ಪರಿಶ್ರಮ, ಕೋಚ್ ಜಸ್ಪಾಲ್ ರಾಣಾ ಅವರ ಹಾರೈಕೆ ಮತ್ತು ಕ್ರೀಡಾ ಸಚಿವಾಲಯದ ನೆರವಿನಿಂದಾಗಿ ಈ ಸಾಧನೆ ಮೂಡಿಬಂದಿದೆ’ ಎಂದು ರಾಮಕಿಶನ್ ಅವರು ಪಿಟಿಐಗೆ ತಿಳಿಸಿದರು.

‘ಇದು ಆರಂಭವಷ್ಟೇ. ಈ ಕೂಟದಲ್ಲಿ ಇನ್ನೂ ಎರಡು ವಿಭಾಗಗಳಲ್ಲಿ ಮನು ಸ್ಪರ್ಧಿಸಲಿದ್ದಾರೆ. ಅವರು ಇನ್ನೂ ಹೆಚ್ಚಿನ ಸಾಧನೆ ಮಾಡುವ ಭರವಸೆ ಇದೆ. ಪ್ಯಾರಿಸ್‌ನಿಂದ ಅವರು ದಿನವೂ ಕರೆ ಮಾಡಿ ಕೆಲ ನಿಮಿಷಗಳವರೆಗೆ ಮಾತನಾಡುತ್ತಾರೆ’ ಎಂದು ಹೇಳಿದರು.

‘ಟೋಕಿಯೊ ಒಲಿಂಪಿಕ್ಸ್‌ನಲ್ಲಿಯೇ ಅವರು ಜಯಿಸುವ ವಿಶ್ವಾಸವಿತ್ತು. ಆದರೆ ಆ ಸ್ಪರ್ಧೆಯಲ್ಲಿ ಪಿಸ್ತೂಲ್ ಕೆಟ್ಟಿದ್ದು ಸಮಸ್ಯೆಯಾಯಿತು. ಅದು ತಾಂತ್ರಿಕ ಸಮಸ್ಯೆ. ಅದು ಮನು ಸಾಮರ್ಥ್ಯದ ಕೊರತೆಯಾಗಿರಲಿಲ್ಲ. ಆದ್ದರಿಂದಲೇ ಆಕೆ ವಿಶ್ವಾಸ ಕಳೆದುಕೊಳ್ಳದೇ ಸ್ಪರ್ಧಿಸಿದರು’ ಎಂದರು.

ಪ್ರಧಾನಿ ಅಭಿನಂದನೆ: ‘ಮನು ಭಾಕರ್ ಅವರು ಐತಿಹಾಸಿಕ ಸಾಧನೆ ಮಾಡಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪ್ರಥಮ ಪದಕ ಜಯಿಸಿದ ಅವರಿಗೆ ಅಭಿನಂದನೆಗಳು’ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಆಸ್ಟ್ರೇಲಿಯಾ	4	2	0	6
ಫ್ರಾನ್ಸ್	3	2	2	7
ಜಪಾನ್	3	2	1	6
ದ.ಕೊರಿಯಾ	3	2	1	6
ಚೀನಾ	3	2	1	6
ಅಮೆರಿಕ	2	4	3	9
ಕಜಕಸ್ತಾನ	1	0	2	3
ಬೆಲ್ಜಿಯಂ	1	0	1	2
ಜರ್ಮನಿ	1	0	0	1
ಭಾರತ	0	0	1	1

ಪಟ್ಟಿಯಲ್ಲಿ ಭಾರತ 22ನೇ ಸ್ಥಾನದಲ್ಲಿದೆ

ವಿಜೃಂಭಿಸಿದ ನಾರಿಶಕ್ತಿ

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾನುವಾರ ನಡೆದ ಸ್ಪರ್ಧೆಗಳಲ್ಲಿ ಭಾರತದ ಮಹಿಳಾ ಕ್ರೀಡಾಪಟುಗಳು ವಿಜೃಂಭಿಸಿದರು.

ಪ್ರಸಕ್ತ ಕೂಟದಲ್ಲಿ ಮನು ಭಾಕರ್ ಅವರು ಪದಕದ ಖಾತೆ ತೆರೆದರು. ಮಹಿಳೆಯರ 10 ಮೀ ಏರ್ ರೈಫಲ್ ಶೂಟಿಂಗ್‌ನಲ್ಲಿ ಅವರು ಕಂಚು ಗೆದ್ದರು. ಇದರೊಂದಿಗೆ ಸತತ ಮೂರನೇ ಒಲಿಂಪಿಕ್ಸ್‌ನಲ್ಲಿಯೂ ಮಹಿಳೆಯರೇ ಮೊದಲ ಪದಕ ಜಯಿಸುವ ಪರಂಪರೆಯನ್ನು ಮುಂದುವರಿಸಿದರು.

2016ರಲ್ಲಿ ಕುಸ್ತಿಯಲ್ಲಿ ಸಾಕ್ಷಿ ಮಲಿಕ್ ಮತ್ತು 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ವೇಟ್‌ಲಿಫ್ಟಿಂಗ್‌ನಲ್ಲಿ ಮೀರಾಬಾಯಿ ಚಾನು ಅವರು ಭಾರತಕ್ಕೆ ಪದಕ ಖಾತೆ ತೆರೆದುಕೊಟ್ಟಿದ್ದರು.

ಭಾನುವಾರ ಶೂಟಿಂಗ್‌ನಲ್ಲಿ ರಮಿತಾ ಜಿಂದಾಲ್ ಅವರೂ ಫೈನಲ್ ಪ್ರವೇಶಿಸುವ ಮೂಲಕ ಪದಕ ಜಯದ ಭರವಸೆ ಮೂಡಿಸಿದರು. ಬಾಕ್ಸಿಂಗ್‌ನಲ್ಲಿ ನಿಖತ್ ಜರೀನ್, ಬ್ಯಾಡ್ಮಿಂಟನ್‌ನಲ್ಲಿ ಪಿ.ವಿ. ಸಿಂಧು ಹಾಗೂ ಟೇಬಲ್ ಟೆನಿಸ್‌ನಲ್ಲಿ ಮಣಿಕಾ ಬಾತ್ರಾ ಅವರು ತಮ್ಮ ಪಂದ್ಯಗಳಲ್ಲಿ ಗೆಲುವಿನ ಆರಂಭ ಮಾಡಿದರು.

ಪ್ಯಾರಿಸ್ ಒಲಿಂಪಿಕ್ಸ್‌ನ ಶೂಟಿಂಗ್‌ನಲ್ಲಿ ಕಂಚಿನ ಪದಕ ಗೆದ್ದ ಮನು ಭಾಕರ್ ಅವರ ಹರಿಯಾಣದ ಝಜ್ಜರ್ ಜಿಲ್ಲೆಯಲ್ಲಿರುವ ನಿವಾಸದಲ್ಲಿ ಕುಟುಂಬದ ಸದಸ್ಯರಿಂದ ಸಂಭ್ರಮಾಚರಣೆ –ಪಿಟಿಐ ಚಿತ್ರ

ಪ್ರಿ ಕ್ವಾರ್ಟರ್ ಫೈನಲ್‌ಗೆ ಜರೀನ್

ಭಾರತದ ಬಾಕ್ಸರ್ ನಿಖತ್ ಜರೀನ್ (ನೀಲಿ) ಅವರು ಜರ್ಮನಿಯ ಮ್ಯಾಕ್ಸಿ ಕ್ಯಾರಿನಾ ಕ್ಲೋಟ್ಜರ್ ಪಂಚ್ ನೀಡುತ್ತಿರುವುದು –ಪಿಟಿಐ ಚಿತ್ರ

ಪ್ಯಾರಿಸ್ (ಪಿಟಿಐ): ಎರಡು ಬಾರಿಯ ವಿಶ್ವ ಚಾಂಪಿಯನ್ ನಿಖತ್ ಜರೀನ್ ಅವರು ಒಲಿಂಪಿಕ್ಸ್‌ನಲ್ಲಿ ಮಹಿಳೆಯರ 50 ಕೆ.ಜಿ ವಿಭಾಗದಲ್ಲಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಇಲ್ಲಿಯ ನಾರ್ತ್ ಪ್ಯಾರಿಸ್ ಅರೇನಾದಲ್ಲಿ ಭಾನುವಾರ ನಡೆದ 32ರ ಘಟ್ಟದ ಪಂದ್ಯದಲ್ಲಿ ಭಾರತದ 28 ವರ್ಷ ವಯಸ್ಸಿನ ಜರೀನ್ 5–0 ಅಂತರದಲ್ಲಿ ಜರ್ಮನಿಯ ಮ್ಯಾಕ್ಸಿ ಕ್ಯಾರಿನಾ ಕ್ಲೋಟ್ಜರ್ ಅವರನ್ನು ಮಣಿಸಿದರು.

ಪಂದ್ಯದ ಆರಂಭ ದಲ್ಲೇ ಜರ್ಮನಿಯ ಸ್ಪರ್ಧಿ ಆಕ್ರಮಣಕಾರಿ ಆಟಕ್ಕೆ ಇಳಿದರು. ನಂತರದಲ್ಲಿ ಲಯ ಕಂಡುಕೊಂಡ ಭಾರತದ ಬಾಕ್ಸರ್ ಮೊದಲ ಸುತ್ತಿನಲ್ಲಿ ಮೇಲುಗೈ ಸಾಧಿಸಿದರು. ಎರಡನೇ ಸುತ್ತಿನಲ್ಲೂ ತುರುಸಿನ ಸ್ಪರ್ಧೆ ನಡೆಯಿತು. ಆದರೆ, ಜರೀನ್ ತಂತ್ರಗಾರಿಕೆಯ ಮುಂದೆ ಜರ್ಮನಿಯ ಆಟಗಾರ್ತಿ ತಬ್ಬಿಬ್ಬಾದರು. ಜರೀನ್ ನಿಖರವಾದ ಪಂಚ್ ನೀಡುವುದನ್ನು ಮುಂದುವರೆಸಿ, ಅಧಿಕಾರಯುತ ಗೆಲುವು ದಕ್ಕಿಸಿಕೊಂಡರು.

ಜರೀನ್ ಅವರಿಗೆ ಮುಂದಿನ ಸುತ್ತಿನಲ್ಲಿ ಪ್ರಬಲ ಸ್ಪರ್ಧಿಯ ಸವಾಲು ಎದುರಾಗಿದೆ. ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದ ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತೆ, ಹಾಲಿ ವಿಶ್ವ ಚಾಂಪಿಯನ್ ವಿ ಯು (ಚೀನಾ) ಅವರೊಂದಿಗೆ ಗುರುವಾರ ಮುಖಾಮುಖಿಯಾಗಲಿದ್ದಾರೆ.

ಜರೀನ್, ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಭಾರತದ 2ನೇ ಬಾಕ್ಸರ್ ಆಗಿದ್ದಾರೆ. ಶನಿವಾರ ಪ್ರೀತಿ ಪವಾರ್ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು.

ಭಾರತಕ್ಕೆ ಅರ್ಜೆಂಟೀನಾ ಸವಾಲು

ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್

ಪ್ಯಾರಿಸ್ (ಪಿಟಿಐ): ಗೆಲುವಿನೊಡನೆ ಅಭಿಯಾನ ಆರಂಭಿಸಿರುವ ಭಾರತ ಹಾಕಿ ತಂಡ, ಸೋಮವಾರ ನಡೆಯಲಿರುವ ಒಲಿಂಪಿಕ್ಸ್ ಹಾಕಿ ಸ್ಪರ್ಧೆಯ ತನ್ನ ಎರಡನೇ ಪಂದ್ಯದಲ್ಲಿ ಅರ್ಜೆಂಟೀನಾ ತಂಡವನ್ನು ಎದುರಿಸಲಿದ್ದು, ಸ್ಥಿರ ಪ್ರದರ್ಶನವನ್ನು ಮುಂದುವರಿಸುವ ಗುರಿಯನ್ನು ಹೊಂದಿದೆ.

ಶನಿವಾರ ನಡೆದ ‘ಬಿ’ ಗುಂಪಿನ ಮೊದಲ ಪಂದ್ಯದಲ್ಲಿ ಹರ್ಮನ್‌ಪ್ರೀತ್ ನೇತೃತ್ವದ ಭಾರತ ತಂಡ 3–2 ಗೋಲುಗಳಿಂದ ನ್ಯೂಜಿಲೆಂಡ್ ತಂಡವನ್ನು ಸೋಲಿಸಿತ್ತು. ಆದರೆ ಈ ಜಯಕ್ಕಾಗಿ ಭಾರತ ಸಾಕಷ್ಟು ಬೆವರುಹರಿಸಬೇಕಾಯಿತು. ಪಂದ್ಯದ ಕೊನೆಯ ಕ್ಷಣದಲ್ಲಿ ಹರ್ಮನ್‌ಪ್ರೀತ್ ‘ಪೆನಾಲ್ಟಿ’ ಸ್ಟ್ರೋಕ್ ಪರಿವರ್ತಿಸಿದ್ದರಿಂದ ಭಾರತ ಗೆಲುವು ಪಡೆಯುವಲ್ಲಿ ಯಶಸ್ವಿಯಾಯಿತು.

ಅರ್ಜೆಂಟೀನಾ ವಿರುದ್ಧದ ಪಂದ್ಯವೂ ಕಠಿಣವಾಗುವ ನಿರೀಕ್ಷೆಯಿದೆ. ದಕ್ಷಿಣ ಅಮೆರಿಕದ ಈ ತಂಡದ ‘ಮ್ಯಾನ್–ಟು–ಮ್ಯಾನ್’ ಕಾರ್ಯತಂತ್ರವು ಭಾರತದ ಮಿಡ್‌ಫೀಲ್ಡ್‌ಗೆ ಸವಾಲು ಒಡ್ಡಲಿದೆ. ಭಾರತ ತಂಡಕ್ಕೆ ಈ ಪಂದ್ಯದ ನಂತರ ಹಾಲಿ ಚಾಂಪಿಯನ್ ಬೆಲ್ಜಿಯಂ, ಪ್ರಬಲ ಆಸ್ಟ್ರೇಲಿಯಾ, ಐರ್ಲೆಂಡ್ ವಿರುದ್ಧ ಪಂದ್ಯಗಳನ್ನು ಆಡಲು ಇದೆ. ಹೀಗಾಗಿ ಸೋಮವಾರದ ಪಂದ್ಯದಲ್ಲಿ ಜಯ ಮಹತ್ವದ ಪಾತ್ರ ವಹಿಸಲಿದೆ. ಈ ಪಂದ್ಯ ಗೆದ್ದಲ್ಲಿ ಭಾರತದ ಕ್ವಾರ್ಟರ್‌ಫೈನಲ್ ಪ್ರವೇಶವೂ ಹೆಚ್ಚುಕಮ್ಮಿ ಖಚಿತವಾಗಲಿದೆ.

‘ಎ’ ಮತ್ತು ‘ಬಿ’ ಗುಂಪಿನಲ್ಲಿ ತಲಾ ಆರು ತಂಡಗಳಿದ್ದು ಮೊದಲ ನಾಲ್ಕು ಸ್ಥಾನ ಗಳಿಸುವ ತಂಡಗಳು, ಕ್ವಾರ್ಟರ್‌ಫೈನಲ್ ಪ್ರವೇಶಿಸಲಿವೆ.

ಭಾರತದ ಅನುಭವಿ ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್, ಕೊನೆಯ ಅಂತರರಾಷ್ಟ್ರೀಯ ಟೂರ್ನಿ ಆಡುತ್ತಿದ್ದು, ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಗೋಡೆಯಂತೆ ನಿಂತು ಗೆಲುವಿಗೆ ನೆರವಾಗಿದ್ದರು.

ಮಹಿಳೆಯರ ಡಬಲ್ಸ್ ಲೀಗ್ ಪಂದ್ಯದಲ್ಲಿ ಸೋತ ತನಿಶಾ– ಅಶ್ವಿನಿ ಪೊನ್ನಪ್ಪ

ಸಿಂಧು, ಪ್ರಣಯ್ ಶುಭಾರಂಭ

ಭಾರತದ ಎಚ್‌.ಎಸ್‌. ಪ್ರಣಯ್ ಆಟದ ವೈಖರಿ –ಪ್ರಜಾವಾಣಿ ಚಿತ್ರ/ ಕೆ.ಎನ್‌. ಶಾಂತಕುಮಾರ್

ಭಾರತದ ಪಿ.ವಿ.ಸಿಂಧು ಶಟಲ್ ಹಿಂತಿರುಗಿಸಲು ಮುಂದಾದರು –ಪಿಟಿಐ ಚಿತ್ರ

ಪ್ಯಾರಿಸ್ (ರಾಯಿಟರ್ಸ್): ಒಲಿಂಪಿಕ್ಸ್ ಬ್ಯಾಡ್ಮಿಂಟನ್‌ನಲ್ಲಿ ಮೂರನೇ ಪದಕದ ಪ್ರಯತ್ನದಲ್ಲಿರುವ ಭಾರತದ ಪಿ.ವಿ.ಸಿಂಧು ಭಾನುವಾರ ಮಹಿಳೆಯರ ಸಿಂಗಲ್ಸ್ ‘ಎಂ’ ಗುಂಪಿನ ಪಂದ್ಯದಲ್ಲಿ ಮಾಲ್ಡೀವ್ಸ್‌ನ ಫಾತಿಮತ್ ಅಬ್ದುಲ್ ರಝಾಕ್ ವಿರುದ್ಧ ನೇರ ಗೇಮ್‌ಗಳಲ್ಲಿ ನಿರಾಯಾಸ ಗೆಲುವು ಪಡೆದರು.

ಅರ್ಧ ಗಂಟೆಯೊಳಗೇ ಮುಗಿದ ಪಂದ್ಯದಲ್ಲಿ ಸಿಂಧು 21-9, 21-6 ರಿಂದ ಫಾತಿಮತ್ ಅವರನ್ನು ಸೋಲಿಸಿದರು.

ಟೋಕಿಯೊ ಕ್ರೀಡೆಗಳಲ್ಲಿ ಕಂಚಿನ ಪದಕ ವಿಜೇತೆಯಾಗಿದ್ದ ತೈ ತ್ಸು-ಯಿಂಗ್ 21–15, 21–14 ರಿಂದ ಬೆಲ್ಜಿಯಮ್‌ನ ಲಿಯಾನ್ ತಾನ್ ಅವರನ್ನು ಸೋಲಿಸಲು ಸ್ವಲ್ಪ ಶ್ರಮಪಡಬೇಕಾಯಿತು.

ಆದರೆ ತನಿಶಾ ಕ್ರಾಸ್ಟೊ ಮತ್ತು ಅಶ್ವಿನಿ ಪೊನ್ನಪ್ಪ ಮಹಿಳೆಯರ ಡಬಲ್ಸ್‌ನಲ್ಲಿ ಮೊದಲ ಪಂದ್ಯದಲ್ಲೇ ಹಿನ್ನಡೆ ಅನುಭವಿಸಿದರು. ‘ಸಿ’ ಗುಂಪಿನ ಪಂದ್ಯದಲ್ಲಿ ದಕ್ಷಿಣ ಕೊರಿಯಾದ ಕಿಮ್ ಸೊ ಯಿಯಾಂಗ್–ಕಾಂಗ್ ಹೀ ಯಿನ್ 21–18, 21–10 ರಿಂದ ತನಿಶಾ- ಅಶ್ವಿನಿ ಅವರಿಗೆ ಸೋಲುಣಿಸಿದರು.

ಕೆಳಕ್ರಮಾಂಕದ ಅನಿರೀಕ್ಷಿತ ಫಲಿತಾಂಶದಲ್ಲಿ ಮಲೇಷ್ಯಾದ ತಿನ್ನಾ ಮುರಳೀಧರನ್ ಮತ್ತು ಪಿಯರ್ಲಿ ತಾನ್ 18–21, 21–15, 21–16 ರಿಂದ ಜಪಾನ್‌ನ ಮಾತ್ಸುಮೊಟೊ ಮಯು– ನಾಗಹಾರಾ ವಾಕನಾ ಅವರನ್ನು ಸುಮಾರು ಒಂದು ಗಂಟೆಯ ಪಂದ್ಯದಲ್ಲಿ ಮಣಿಸಿದರು. ಜಪಾನಿನ ಆಟಗಾರ್ತಿಯರು ವಿಶ್ವ ರ‍್ಯಾಂಕಿಂಗ್‌ನಲ್ಲಿ ಎದುರಾಳಿಗಳಿಗಿಂತ ಏಳು ಕ್ರಮಾಂಕದಷ್ಟು ಮೇಲಿದ್ದಾರೆ.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಎಚ್.ಎಸ್ ಪ್ರಣಯ್ ಅವರು 21-18, 21-12ರಿಂದ ಜರ್ಮನಿಯ ಫ್ಯಾಬಿಯಾನ್ ರೋಥ್ ಅವರನ್ನು ಸೋಲಿಸಿದರು.

ಪ್ರಣಯ್ ಅವರು ಎರಡನೇ ಸುತ್ತಿನ ಮತ್ತು ಗುಂಪು ಹಂತದ ಅಂತಿಮ ಪಂದ್ಯದಲ್ಲಿ ಬುಧವಾರ ವಿಯೆಟ್ನಾಂನ ಲೆ ಡಕ್ ಫಾಟ್ ಅವರನ್ನು ಎದುರಿಸಲಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ ಆರನೇ ಸ್ಥಾನದಲ್ಲಿರುವ ಲಿ ಶಿಫೆಂಗ್ (ಚೀನಾ) 21–13, 21–13 ರಿಂದ ಸ್ವಿಟ್ಜರ್ಲೆಂಡ್‌ನ ಟೊಬಿಯಾಸ್ ಕುಯೆಂಝಿ ಅವರನ್ನು ಸೋಲಿಸಿದರು. ಆದರೆ, 113ನೇ ಸ್ಥಾನದಲ್ಲಿರುವ ಕುಯೆಂಝಿ ಸುಲಭವಾಗಿ ಸೋಲುವ ಮೊದಲು ಹೋರಾಟ ನೀಡಿದರು.

ವಿಶ್ವ ಕ್ರಮಾಂಕದಲ್ಲಿ 30ನೇ ಸ್ಥಾನದಲ್ಲಿರುವ ಅಮೆರಿಕದ ವಿನ್ಸನ್ ಚಿಯು– ಜೆನ್ನಿ ಗೈ ಅವರು ಪುರುಷರ ಡಬಲ್ಸ್‌ನಲ್ಲಿ ಒಂಬತ್ತನೇ ಕ್ರಮಾಂಕದ ಚೆನ್ ತಾಂಗ್ ಜೀ ತೊ ಇ ವೀ ಅವರಿಗೆ ಸೋಲುವ ಮೊದಲು ತೀವ್ರ ಪ್ರತಿರೋಧ ತೋರಿದರು. ಅಂತಿಮವಾಗಿ ಮಲೇಷ್ಯಾದ ಜೋಡಿ 21–15, 24–22ರಲ್ಲಿ ಜಯಗಳಿಸಿದರು.

ಸಿಂಗಲ್ಸ್ ಸ್ಕಲ್: ಕ್ವಾರ್ಟರ್‌ಫೈನಲ್‌ಗೆ ಬಲರಾಜ್ ಪನ್ವರ್



ಬಲರಾಜ ಪನ್ವರ್

ಪ್ಯಾರಿಸ್ (ಪಿಟಿಐ): ಭಾರತದ ಬಲರಾಜ್ ಪನ್ವರ್ ಅವರು ಪ್ಯಾರಿಸ್ ಒಲಿಂಪಿಕ್ಸ್ ರೋಯಿಂಗ್ ಸ್ಪರ್ಧೆಯ ಪುರುಷರ ಸಿಂಗಲ್ಸ್ ಸ್ಕಲ್ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಭಾನುವಾರ ನಡೆದ ರೆಪೆಷಾಜ್-2ರಲ್ಲಿ ಪನ್ವರ್ ಅವರು 7 ನಿ.12.41 ಸೆಕೆಂಡುಗಳಲ್ಲಿ ಗುರಿ ತಲುಪಿ ಎರಡನೇ ಸ್ಥಾನ ಪಡೆದರು. ಮೊದಲ ಸ್ಥಾನದಲ್ಲಿ ಗುರಿ ತಲುಪಲು ಕ್ವೆಂಟಿನ್ ಅಂಟೋಗ್ನಿಲ್ (ಮೊನಾಕೊ) ಅವರು 7ನಿ 10.00 ಸೆಕೆಂಡು ತೆಗೆದುಕೊಂಡರು. 7ನಿ 19.60 ಸೆಕೆಂಡುಗಳಲ್ಲಿ ಗುರಿ ತಲುಪಿದ ಇಂಡೋನೇಷ್ಯಾದ ಮೆಮೊ ಮೂರನೇ ಸ್ಥಾನ ಪಡೆದರು.

ಪ್ರತಿ ರೆಪೆಷಾಜ್‌ನಲ್ಲಿ ಮೊದಲ ಎರಡು ಸ್ಥಾನ ಪಡೆದವರು ಮಂಗಳವಾರ ನಡೆಯಲಿರುವ ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆಯುತ್ತಾರೆ.

ಪನ್ವರ್ ಅವರು 500 ಮೀ ದೂರವನ್ನು 1ನಿ 44:13ಸೆಕೆಂಡುಗಳಲ್ಲಿ, 1000 ದೂರವನ್ನು 3ನಿ 33.94 ಸೆಕೆಂಡುಗಳಲ್ಲಿ, 1500 ಮೀಟರ್ ದೂರವನ್ನು 5ನಿ 23.22ಸೆಕೆಂಡುಗಳಲ್ಲಿ ದಾಟಿ ಎರಡನೇ ಸ್ಥಾನದಲ್ಲಿ ಇದ್ದರು. ನಂತರ 2000 ಮೀ ದೂರವನ್ನು 7ನಿ 12.41 ಸೆಕೆಂಡುಗಳಲ್ಲಿ ತಲುಪುವ ಮೂಲಕ 2ನೇ ಸ್ಥಾನ ಪಡೆದುಕೊಂಡರು.

ಶನಿವಾರ ನಡೆದಿದ್ದ ಪುರುಷರ ಸಿಂಗಲ್ಸ್ ಸ್ಕಲ್ ವಿಭಾಗದಲ್ಲಿ 7ನಿ 07:11ಸೆಕೆಂಡುಗಳಲ್ಲಿ ಗುರಿ ತಲುಪಿದ್ದ ಪನ್ವರ್ ನಾಲ್ಕನೇ ಸ್ಥಾನ ಗಳಿಸಿ ರೆಪೆಷಾಜ್ ಸುತ್ತಿಗೆ ಅರ್ಹತೆ ಪಡೆದಿದ್ದರು.

ರೆಪೆಷಾಜ್ ಒಂದರಲ್ಲಿ ಸ್ಲೋವೇನಿಯಾದ ಇವಾನ್ ಇಸಾಕ್ ಝ್ವುಗೆಲ್ಜ್(7ನಿ 06:90ಸೆ) ಮತ್ತು ಪರುಗ್ವೆಯ ಜೆವಿಯರ್ ಇನ್ಸ್‌ಫ್ರಾನ್ (7ನಿ 08:29ಸೆ) ಕ್ರಮವಾಗಿ ಮೊದಲ ಹಾಗೂ ಎರಡನೇ ಸ್ಥಾನ ಪಡೆದರು.

ರೆಪಷಾಜ್ ಮೂರರಲ್ಲಿ ಅಲ್ಜೀರಿಯಾದ ಅಲಿ ಸಿದ್ ಬೌಡಿನಾ (7ನಿ 10:23ಸೆ) ಮೊದಲ ಮತ್ತು ಚುನ್ ವಿನ್ ಚಿವು (7ನಿ 12:94ಸೆ) ಎರಡನೇ ಸ್ಥಾನ ಪಡೆದರು.

ಒಲಿಂಪಿಕ್ಸ್‌ನಲ್ಲಿ ಇಂದು (ಭಾರತದ ಸ್ಪರ್ಧೆ)

ಆರ್ಚರಿ (ಕ್ವಾರ್ಟರ್ ಫೈನಲ್ಸ್)

ತರುಣ್‌ದೀಪ್ ರಾಯ್, ಧೀರಜ್ ಬೊಮ್ಮದೇವರ, ಪ್ರವೀಣ್ ಜಾಧವ್, ಸಂಜೆ **6.30**

ಬ್ಯಾಡ್ಮಿಂಟನ್ (ಗುಂಪು ಹಂತ)

ಪುರುಷರ ಡಬಲ್ಸ್ ಪಂದ್ಯ: ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಮತ್ತು ಮಾರ್ಕ್ ಲ್ಯಾಮ್ಸ್‌ಫಸ್– ಮರ್ವಿನ್ ಸೀಡೆಲ್ (ಜರ್ಮನಿ), ಮಧ್ಯಾಹ್ನ **12**

ಮಹಿಳೆಯರ ಡಬಲ್ಸ್: ಅಶ್ವಿನಿ ಪೊನ್ನಪ್ಪ–ತನಿಶಾ ಕ್ರಾಸ್ಟೊ ಮತ್ತು ನಮಿ ಮತ್ಸುಯಾಮಾ–ಚಿಹಾರು ಶಿಡಾ (ಜಪಾನ್), ಮಧ್ಯಾಹ್ನ **12.50**

ಪುರುಷರ ಸಿಂಗಲ್ಸ್: ಲಕ್ಷ್ಯ ಸೇನ್ ಮತ್ತು ಜೂಲಿಯನ್ ಕರಾಗಿ (ಬೆಲ್ಜಿಯಂ), ಸಂಜೆ **5.30**

ಶೂಟಿಂಗ್

ಮಿಶ್ರ ತಂಡ 10 ಮೀ ಏರ್ ಪಿಸ್ತೂಲ್, ಅರ್ಹತಾ ಸುತ್ತು: ಮನು ಭಾಕರ್ ಮತ್ತು ಸರಬ್ಜೋತ್ ಸಿಂಗ್, ರಿದಮ್ ಸಾಂಗ್ವಾನ್ ಮತ್ತು ಅರ್ಜುನ್ ಸಿಂಗ್ ಚೀಮಾ, ಮಧ್ಯಾಹ್ನ **12.45**

ಪುರುಷರ ಟ್ರ್ಯಾಪ್, ಅರ್ಹತಾ ಸುತ್ತು: ಪೃಥ್ವಿರಾಜ್ ತೊಂಡೈಮಾನ್, ಮಧ್ಯಾಹ್ನ **1**

ಮಹಿಳೆಯರ 10 ಮೀ ಏರ್ ರೈಫಲ್ ಫೈನಲ್: ರಮಿತಾ ಜಿಂದಾಲ್, ಮಧ್ಯಾಹ್ನ **1**

ಪುರುಷರ 10 ಮೀ ಏರ್ ರೈಫಲ್: ಫೈನಲ್‌ಅರ್ಜುನ್ ಬಬುತಾ, ಮಧ್ಯಾಹ್ನ **3.30**

ಪುರುಷರ (ಹಾಕಿ)

ಭಾರತ ವಿರುದ್ಧ ಅರ್ಜೆಟೀನಾ ಸಂಜೆ **4.15**

ಟೇಬಲ್ ಟೆನಿಸ್

ಮಹಿಳೆಯರ ಸಿಂಗಲ್ಸ್, 32ರ ಸುತ್ತು: ಶ್ರೀಜಾ ಅಕುಲಾ–ಜಿಯಾನ್ ಝೆಂಗ್ (ಸಿಂಗಪುರ), ರಾತ್ರಿ **11.30**

ನೇರ ಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಈಜಿಗೆ ಯೋಗ್ಯ: ಅಧಿಕಾರಿಗಳ ವಿಶ್ವಾಸ

ಪ್ಯಾರಿಸ್ (ಎಪಿ): ಸೆನ್ ನದಿಯ ಒಂದು ಭಾಗದಲ್ಲಿ ಟ್ರಯಥ್ಲಾನ್‌ಗೆ ಭಾನುವಾರ ನಡೆಸಲು ಉದ್ದೇಶಿಸಿದ ತಾಲೀಮನ್ನು ನೀರಿನ ಗುಣಮಟ್ಟದ ಬಗ್ಗೆ ಕಳವಳಗಳು ಎದ್ದ ಕಾರಣ ರದ್ದುಗೊಳಿಸಲಾಯಿತು. ಆದರೆ ಸ್ಪರ್ಧೆಗಳು ನಿಗದಿತ ದಿನ ನಡೆಯುವಷ್ಟರಲ್ಲಿ ಟ್ರಯಥ್ಲೀಟ್‌ಗಳಿಗೆ ಈ ಪ್ರಸಿದ್ಧ ನೀರ್ಗಾಲುವೆಯನ್ನು ಈಜಲು ಸಾಧ್ಯವಾಗಬಹುದೆಂಬ ವಿಶ್ವಾಸವನ್ನು ಅಧಿಕಾರಿಗಳು ಹೊಂದಿದ್ದಾರೆ. ಪುರುಷರ ವಿಭಾಗದ ಟ್ರಯಥ್ಲಾನ್ ಮಂಗಳವಾರ ನಡೆಯಬೇಕಿದೆ. ಮಹಿಳೆಯರ ವಿಭಾಗದ ಸ್ಪರ್ಧೆಗಳು ಬುಧವಾರ ನಡೆಯಲಿವೆ. ಈ ಸ್ಪರ್ಧೆಯು ಈಜು (1.5 ಕಿ.ಮಿ), ಸೈಕ್ಲಿಂಗ್ (40 ಕಿ.ಮೀ) ಮತ್ತು ಓಟವನ್ನು (10 ಕಿ.ಮೀ.) ಒಳಗೊಂಡಿದೆ.

ಗೆಲುವಿನ ಸಂಭ್ರಮ ಪ್ಯಾರಿಸ್ ಒಲಿಂಪಿಕ್ಸ್‌ನ ಟೇಬಲ್ ಟೆನಿಸ್ ಮಹಿಳೆಯರ ಸಿಂಗಲ್ಸ್‌ನ ಮೊದಲ ಪಂದ್ಯ ಗೆದ್ದ ಭಾರತದ ಮಣಿಕಾ ಬಾತ್ರಾ ಅವರನ್ನು ತಂಡದ ಮುಖ್ಯ ಕೋಚ್ ಮಾಸ್ಸಿಮೊ ಕಾನ್ಸ್‌ಟೆಂಟಿನಿ ಅಭಿನಂದಿಸಿದರು –ಪ್ರಜಾವಾಣಿ ಚಿತ್ರ/ ಕೆ.ಎನ್. ಶಾಂತಕುಮಾರ್

ಆರ್ಚರಿ: ನಿರಾಶೆ ಮೂಡಿಸಿದ ದೀಪಿಕಾ

ಮಹಿಳಾ ತಂಡ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ನೆದರ್ಲೆಂಡ್ಸ್ ಎದುರು ಸೋಲು

ಪ್ಯಾರಿಸ್ (ಪಿಟಿಐ): ಭಾರತದ ಅನುಭವಿ ಆರ್ಚರಿ ಸ್ಪರ್ಧಿ ದೀಪಿಕಾ ಕುಮಾರಿ ನಿರಾಶೆ ಮೂಡಿಸಿದರು. ಅವರ ವೈಫಲ್ಯದಿಂದ ಮಹಿಳಾ ತಂಡ, ಭಾನುವಾರ ನಡೆದ ಒಲಿಂಪಿಕ್ಸ್ ಆರ್ಚರಿ ಕ್ವಾರ್ಟರ್‌ಫೈನಲ್‌ನಲ್ಲಿ ನೆದರ್ಲೆಂಡ್ಸ್ ತಂಡದೆದುರು 0–6 ಅಂತರದಲ್ಲಿ ಹೀನಾಯ ಸೋಲನುಭವಿಸಿತು.

ತಂಡದ ಅತಿ ಕಿರಿಯ ಸ್ಪರ್ಧಿ ಎನಿಸಿದ, 18 ವರ್ಷ ವಯಸ್ಸಿನ ಭಜನ್ ಕೌರ್ ಮಾತ್ರ ಬಾಣ ಪ್ರಯೋಗದಲ್ಲಿ ಅಮೋಘ ಪ್ರದರ್ಶನ ನೀಡಿ 60 ಪಾಯಿಂಟ್ಸ್‌ಗಳ ಪೈಕಿ 56 ಗಳಿಸಿದರು. ಆದರೆ ಅನುಭವಿಗಳಾದ ದೀಪಿಕಾ ಮತ್ತು ಅಂಕಿತಾ ಭಕತ್ ಅವರ ದುರ್ಬಲ ನಿರ್ವಹಣೆ ಸೋಲಿಗೆ ಕಾರಣವಾಯಿತು. ಭಾರತ 51–52, 49–54, 48–53ರಲ್ಲಿ ಸೋತಿತು.

ಮೂರು ಸೆಟ್‌ಗಳಲ್ಲಿ ಎರಡು ಬಾರಿಯ ಅವಕಾಶಗಳಲ್ಲಿ ಭಾರತ ಒಮ್ಮೆಯೂ 50ರ ಸ್ಕೋರ್ ತಲುಪಲಾಗದ್ದು ತಂಡದ ಕಳಪೆ ಪ್ರದರ್ಶನಕ್ಕೆ ಕನ್ನಡಿಯಾಯಿತು.

ನಾಲ್ಕು ಬಾರಿಯ ಒಲಿಂಪಿಯನ್ ದೀಪಿಕಾ ಒಟ್ಟು ಗಳಿಸಿದ್ದು 48 ಪಾಯಿಂಟ್ಸ್ ಮಾತ್ರ. ಅಂಕಿತಾ ಗರಿಷ್ಠ 60ರಲ್ಲಿ 46 ಗಳಿಸಿದರು. ಸ್ಪರ್ಧೆಯುದ್ದಕ್ಕೂ ಸಂಯಮ ವಹಿಸಿದ ಭಜನ್ ಇನ್ನೊಂದೆಡೆ 60ರಲ್ಲಿ ಕೇವಲ ನಾಲ್ಕು ಪಾಯಿಂಟ್ಸ್ ಮಾತ್ರ ಕಳೆದುಕೊಂಡರು.

ಭಾರತ ತಂಡ ಮತ್ತೊಮ್ಮೆ ಒಲಿಂಪಿಕ್ಸ್ ಕ್ವಾರ್ಟರ್‌ಫೈನಲ್ ತಡೆ ದಾಟಲು ವಿಫಲವಾದಂತೆ ಆಯಿತು. ತಂಡ ಅರ್ಹತಾ ಸುತ್ತಿನಲ್ಲಿ ನಾಲ್ಕನೇ ಸ್ಥಾನ ಗಳಿಸಿ ಕ್ವಾರ್ಟರ್‌ಫೈನಲ್‌ನಲ್ಲಿ ಸ್ಪರ್ಧಿಸುವ ಅವಕಾಶ ಪಡೆದಿತ್ತು.

ದೀಪಿಕಾ ಕೊನೆಯ ಬಾಣ ಪ್ರಯೋಗದಲ್ಲಿ ಮಾತ್ರ '10' ಗಳಿಸಿದರು. ಆದರೆ ಅಷ್ಟರಲ್ಲಿ ಭಾರತದ ಸೋಲು ಖಚಿತವಾಗಿತ್ತು. ಇನ್ನೊಂದೆಡೆ ಡಚ್ ಬಿಲ್ಗಾರ್ತಿಯರ ತಂಡ (ಕ್ವಿಂಟಿ ರೊಫೆನ್, ಲಾರಾ ವಾನ್‌ಡೆರ್ ವಿಂಕೆಲ್ ಮತ್ತು ಗ್ಯಾಬಿ ಶ್ಲೋಶೆರ್) ಸ್ಥಿರ ಪ್ರದರ್ಶನ ನೀಡಿತು.

'ಇದನ್ನು (ಹಿನ್ನಡೆ) ನಾವು ನಿರೀಕ್ಷಿಸಿಯೇ ಇರಲಿಲ್ಲ. ಭಾರತದಲ್ಲಿ ನಡೆಸಿದ್ದ ಟ್ರಯಲ್ಸ್‌ನಲ್ಲಿ ದೀಪಿಕಾ ಅತ್ಯುತ್ತಮ ಪ್ರದರ್ಶನ ನೀಡಿದ್ದರು. ಆದರೆ ಅವರ ನಿರಾಶಾದಾಯಕ ಪ್ರದರ್ಶನವು ತಂಡ ಸೋಲಲು ಕಾರಣವಾಯಿತು' ಎಂದು ಆರ್ಚರಿ ತಂಡದ ಹಿರಿಯ ಅಧಿಕಾರಿ 'ಪಿಟಿಐ'ಗೆ ತಿಳಿಸಿದರು.

ಜೂನ್‌ನಲ್ಲಿ ಟರ್ಕಿಯ ಅಂಟ್ಯಾಲದಲ್ಲಿ ನಡೆದ ವಿಶ್ವಕಪ್‌ನಲ್ಲಿ ಇದೇ ಸ್ಪರ್ಧಿಗಳಿದ್ದ ಭಾರತ ತಂಡ 6–2 ರಿಂದ ನೆದರ್ಲೆಂಡ್ಸ್ ತಂಡವನ್ನು ಸೋಲಿಸಿತ್ತು.

'ನಿಜ, ಇದು ತಂಡದ ಸೋಲು. ದೀಪಿಕಾ ತಂಡದ ಮುಂಚೂಣಿಯಲ್ಲಿದ್ದು, ಜವಾಬ್ದಾರಿ ತೆಗೆದುಕೊಳ್ಳಬೇಕಾಗಿತ್ತು. ಆದರೆ ಪ್ರತಿ ಬಾರಿ ಒಲಿಂಪಿಕ್ಸ್‌ನಲ್ಲಿ ಅವರೇ ತಂಡವನ್ನು ಹಿನ್ನಡೆಗೆ ತಳ್ಳುತ್ತಾರೆ' ಎಂದರು.

'ಗಟ್ಟಿ ಮನೋಬಲದಿಂದ ಶೂಟ್ ಮಾಡುವಲ್ಲಿ ದೀಪಿಕಾ ವಿಫಲರಾದರು' ಎಂದು ಮಹಿಳಾ ತಂಡದ ಕೋಚ್ ಪೂರ್ಣಿಮಾ ಮಹತೊ ಒಪ್ಪಿಕೊಂಡರು.

ಮಿಶ್ರ ತಂಡ: ಕ್ವಾಲಿಫಿಕೇಷನ್‌ನಲ್ಲಿ ಭಾರತ ತಂಡದ ಪರ ಅತಿ ಹೆಚ್ಚು ಪಾಯಿಂಟ್ಸ್ ಗಳಿಸಿದ ಅಂಕಿತಾ ಭಕತ್, ಧೀರಜ್ ಬೊಮ್ಮದೇವರ ಜೊತೆ ಮಿಶ್ರ ತಂಡ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ.

ಈಗ ಎಲ್ಲರ ಕಣ್ಣು ಭಾರತ ಪುರುಷರ ತಂಡದ ಮೇಲಿದೆ. ಈ ತಂಡ ಸೋಮವಾರ ಕ್ವಾರ್ಟರ್‌ಫೈನಲ್ ನಲ್ಲಿ ಸ್ಪರ್ಧಿಸಲಿದೆ.

ಉತ್ತಮ ಪ್ರದರ್ಶನ ನೀಡಿದ ಭಜನ್ ಕೌರ್ ಎಪಿ/ಪಿಟಿಐ ಚಿತ್ರ

ದಕ್ಷಿಣ ಕೊರಿಯಾಕ್ಕೆ ಸ್ವರ್ಣ ಪದಕ

ಪ್ಯಾರಿಸ್ (ರಾಯಿಟರ್ಸ್): ದಕ್ಷಿಣ ಕೊರಿಯಾ ಆರ್ಚರಿ ಸ್ಪರ್ಧೆಯ ಮಹಿಳಾ ತಂಡ ವಿಭಾಗದ ಫೈನಲ್‌ನಲ್ಲಿ 5–4 ರಿಂದ ಚೀನಾ ತಂಡವನ್ನು ಹಿಮ್ಮೆಟ್ಟಿಸಿ ಭಾನುವಾರ ಚಿನ್ನದ ಪದಕ ಗೆದ್ದುಕೊಂಡಿತು. ಆ ಮೂಲಕ ಸತತ 10ನೇ ಬಾರಿ ಈ ವಿಭಾಗದಲ್ಲಿ ಪಾರಮ್ಯ ಮೆರೆಯಿತು.

1988ರ ಸೋಲ್ ಒಲಿಂಪಿಕ್ಸ್‌ನಿಂದ ದಕ್ಷಿಣ ಕೊರಿಯಾ ಸೋತೇ ಇಲ್ಲ.ಮೊದಲ ಎರಡು ಸೆಟ್ ಗೆದ್ದ ನಂತರ ದಕ್ಷಿಣ ಕೊರಿಯಾ ಬಿಲ್ಗಾರ್ತಿಯರು ಪರದಾಡಿದರು. ಇದರಿಂದ ಚೀನಾ ಚೇತರಿಸಿ 2–2ರಲ್ಲಿ ಸಮಮಾಡಿಕೊಂಡಿತು. ಆದರೆ ಕೊರಿಯನ್ನರು ಸಕಾಲದಲ್ಲಿ ಮರಳಿ ಹಿಡಿತ ಪಡೆದರು.

ಅನುಭವಿ ಶರತ್‌ಗೆ ಮೊದಲ ಸುತ್ತಿನಲ್ಲೇ ಆಘಾತ, ಹರ್ಮೀತ್‌ಗೆ ಸೋಲು

ಮಣಿಕಾ, ಶ್ರೀಜಾ ಶುಭಾರಂಭ

ಪ್ಯಾರಿಸ್ (ಪಿಟಿಐ): ಭಾರತದ ಟೇಬಲ್ ಟೆನಿಸ್ ಆಟಗಾರ್ತಿಯರಾದ ಮಣಿಕಾ ಬಾತ್ರಾ ಮತ್ತು ಶ್ರೀಜಾ ಅಕುಲಾ ಅವರು ಒಲಿಂಪಿಕ್ಸ್‌ನ ಮಹಿಳೆಯರ ಸಿಂಗಲ್ಸ್‌ನಲ್ಲಿ ಶುಭಾರಂಭ ಮಾಡಿದರು. ಆದರೆ, ಅನುಭವಿ ಆಟಗಾರ ಶರತ್ ಕಮಲ್ ಮೊದಲ ಸುತ್ತಿನಲ್ಲೇ ಆಘಾತ ಅನುಭವಿಸಿದರು.

ಐದನೇ ಬಾರಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುತ್ತಿರುವ 41 ವರ್ಷದ ಶರತ್ ಅವರು ಪುರುಷರ ಸಿಂಗಲ್ಸ್‌ನಲ್ಲಿ 64ರ ಘಟ್ಟದ ಪಂದ್ಯದಲ್ಲಿ 12-10, 9-11, 6-11, 7-11, 11-8, 10-12ರಿಂದ ಸ್ಲೊವೇನಿಯಾದ ಡೆನಿ ಕೊಜುಲ್ ಅವರಿಗೆ ಮಣಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 40ನೇ ಸ್ಥಾನದಲ್ಲಿರುವ, ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಶರತ್ ಅವರು 126ನೇ ಕ್ರಮಾಂಕದಲ್ಲಿರುವ ಎದುರಾಳಿಯ ವಿರುದ್ಧ ಉತ್ತಮ ಆರಂಭ ಪಡೆದಿದ್ದರು. ಮೊದಲ ಗೇಮ್‌ನಲ್ಲಿ ಮೇಲುಗೈ ಸಾಧಿಸಿದ್ದ ಅವರು, ನಂತರ ಹಿಡಿತ ಕಳೆದುಕೊಂಡರು. ಐದನೇ ಗೇಮ್‌ನಲ್ಲಿ ಭಾರತದ ಆಟಗಾರ ಮತ್ತೆ ಪ್ರತಿರೋಧ ತೋರಿದರು. ಆದರೆ, ಆರನೇ ಗೇಮನ್ನು ಕೈವಶ ಮಾಡಿಕೊಂಡ ಕೊಜುಲ್ ಮುಂದಿನ ಸುತ್ತಿಗೆ ಲಗ್ಗೆಯಿಟ್ಟರು.

ಮಣಿಕಾ ಮುನ್ನಡೆ: 29 ವರ್ಷದ ಮಣಿಕಾ ಅವರು ಆರಂಭದ ಸುತ್ತಿನ ಪಂದ್ಯದಲ್ಲಿ 11-8, 12-10, 11-9, 9-11, 11-5 ರಿಂದ ಬ್ರಿಟನ್‌ನ ಅನ್ನಾ ಹರ್ಸೆ ಅವರನ್ನು ಹಿಮ್ಮೆಟ್ಟಿಸಿದರು.

ವಿಶ್ವ ಕ್ರಮಾಂಕದಲ್ಲಿ 28ನೇ ಸ್ಥಾನದಲ್ಲಿರುವ ಮಣಿಕಾ ಅವರು, ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮಾಡಿದ್ದ ತಮ್ಮ ಸಾಧನೆಯನ್ನು ಸರಿಗಟ್ಟಿದರು. ಅಲ್ಲಿ ಅವರು ಸಿಂಗಲ್ಸ್‌ನಲ್ಲಿ 32ರ ಘಟ್ಟಕ್ಕೆ ಪ್ರವೇಶಿಸಿದ ಭಾರತದ ಮೊದಲ ಮಹಿಳಾ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದರು.

103ನೇ ಕ್ರಮಾಂಕದ ಹರ್ಸೆ ವಿರುದ್ಧ ಮಣಿಕಾ ಆರಂಭದಿಂದಲೇಪ್ರಾಬಲ್ಯಮೆರೆದರು.ಮೊದಲಮೂರು ಗೇಮ್‌ಗಳಲ್ಲಿ ಮೇಲುಗೈ ಸಾಧಿಸಿದ ಭಾರತ ಆಟಗಾರ್ತಿ ಗೆಲುವಿಗೆ ಹತ್ತಿರವಾದರು. ಆದರೆ, ನಾಲ್ಕನೇ ಗೇಮ್‌ನಲ್ಲಿ ಹರ್ಸೆ ತಿರುಗೇಟು ನೀಡಿದರು. ಐದನೇ ಗೇಮನ್ನು ನಿರಾಯಾಸವಾಗಿ ಗೆದ್ದ ಮಣಿಕಾ ಮುನ್ನಡೆದರು.

ಮಣಿಕಾ ಅವರು ಮಂಗಳವಾರ ನಡೆಯುವ ಮುಂದಿನ ಸುತ್ತಿನ ಪಂದ್ಯದಲ್ಲಿ 12ನೇ ಶ್ರೇಯಾಂಕದ ಪ್ರೀತಿಕಾ ಪವಾಡೆ (ಫ್ರಾನ್ಸ್) ಅವರನ್ನು ಎದುರಿಸಲಿದ್ದಾರೆ. ಪ್ರಿತಿಕಾ ತಾಯಿ ಪುದುಚೇರಿಯವರು.

ಶ್ರೀಜಾಗೆ ಗೆಲುವು: ಇದಕ್ಕೂ ಮೊದಲು ಶ್ರೀಜಾ 11-4, 11-9, 11-7, 11-8 ರಿಂದ ಸ್ವೀಡನ್‌ನ ಕ್ರಿಸ್ಟಿನಾ ಕಾಲ್‌ಬರ್ಗ್ ಅವರನ್ನು ಸುಲಭವಾಗಿ ಮಣಿಸಿ 32ರ ಘಟ್ಟವನ್ನು ಪ್ರವೇಶಿಸಿದರು.

ಕೆಲ ವಾರಗಳ ಹಿಂದೆ ಡಬ್ಲ್ಯುಟಿಟಿ ಕಂಟೆಂಡರ್ ಸಿಂಗಲ್ಸ್ ಪ್ರಶಸ್ತಿ ಗೆದ್ದ ಭಾರತದ ಮೊದಲ ಆಟಗಾರ್ತಿ ಎಂಬ ದಾಖಲೆ ಬರೆದಿರುವ 25 ವರ್ಷದ ಶ್ರೀಜಾ ಎದುರಾಳಿಗೆ ಒಂದೂ ಸೆಟ್ ಬಿಟ್ಟುಕೊಡದೆ ಮುನ್ನಡೆದರು.

ಹರ್ಮೀತ್‌ಗೆ ಸೋಲು: ಭಾರತದ ಹರ್ಮೀತ್ ದೇಸಾಯಿ ಅವರು ಪುರುಷರ ಸಿಂಗಲ್ಸ್ ಟೇಬಲ್ ಟೆನಿಸ್ ಸ್ಪರ್ಧೆಯ ಎರಡನೇ ಸುತ್ತಿನಲ್ಲಿ ಪರಾಭವಗೊಂಡರು. ಸೂರತ್‌ನ 31 ವರ್ಷದ ಹರ್ಮೀತ್ ಅವರು 8-11 8-11 6-11 8-11ರಿಂದ ವಿಶ್ವದ 5ನೇ ಶ್ರೇಯಾಂಕದ ಫ್ರಾನ್ಸ್‌ನ ಫೆಲಿಕ್ಸ್ ಲೆಬ್ರುನ್ ವಿರುದ್ಧ ಸೋತು ತಮ್ಮ ಚೊಚ್ಚಲ ಒಲಿಂಪಿಕ್ ಅಭಿಯಾನ ಕೊನೆಗೊಳಿಸಿದರು. ಈ ಮೂಲಕ ಪುರುಷರ ಸಿಂಗಲ್ಸ್ ಸ್ಪರ್ಧೆಯಲ್ಲಿ ಭಾರತದ ಅಭಿಯಾನಕ್ಕೆ ತೆರೆ ಬಿತ್ತು.

ಶ್ರೀಜಾ ಅಕುಲಾ –ಪಿಟಿಐ ಚಿತ್ರ



ಶರತ್ ಕಮಲ್ –ಪಿಟಿಐ ಚಿತ್ರ

ಶ್ರೀಹರಿ ನಟರಾಜ್

ಧಿನಿಧಿ ದೇಸಿಂಗು

ಈಜು: ಸೆಮಿಫೈನಲ್ ತಲುಪಲು ಕರ್ನಾಟಕದ ಶ್ರೀಹರಿ, ಧಿನಿಧಿ ವಿಫಲ

ಪ್ಯಾರಿಸ್ (ಪಿಟಿಐ): ಭಾರತದ ಶ್ರೀಹರಿ ನಟರಾಜ್ ಮತ್ತು ಧಿನಿಧಿ ದೇಸಿಂಗು ಅವರು ಭಾನುವಾರ ನಡೆದ ಒಲಿಂಪಿಕ್ಸ್ ಈಜು ಸ್ಪರ್ಧೆಗಳ ಹೀಟ್ಸ್‌ನಲ್ಲೇ ಹೊರಬಿದ್ದರು.

ಬೆಂಗಳೂರಿನ ಈಜುಪಟು ಶ್ರೀಹರಿ, ಪುರುಷರ 100 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯನ್ನು 55.01 ಸೆ.ಗಳಲ್ಲಿ ಪೂರೈಸಿದರು. ಅವರು ಈ ವಿಭಾಗದ ಹೀಟ್ಸ್ ಮುಗಿದ ನಂತರ ಒಟ್ಟಾರೆ 33ನೇ ಸ್ಥಾನ ಪಡೆದರು. ವೇಗವಾಗಿ ಈಜಿದ ಮೊದಲ 16 ಈಜುಪಟುಗಳು ಸೆಮಿಫೈನಲ್‌ಗೆ ಅರ್ಹತೆ ಪಡೆಯುತ್ತಾರೆ.

ಇದು ನಟರಾಜ್ ಅವರ ವೈಯಕ್ತಿಕ ಶ್ರೇಷ್ಠ ಅವಧಿಗಿಂತ (53.77 ಸೆ.) ಕಡಿಮೆ ಮಟ್ಟದ ಪ್ರದರ್ಶನ ಎನಿಸಿತು. ಈ ವರ್ಷದ ಅವರ ಉತ್ತಮ ಅವಧಿಯನ್ನು (54.68 ಸೆ.) ಮೀರಿ ನಿಲ್ಲಲೂ ಅವರು ವಿಫಲರಾದರು.

ಮೊದಲ ಬಾರಿ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ 14 ವರ್ಷ ವಯಸ್ಸಿನ ಧಿನಿಧಿ ಮಹಿಳೆಯರ 200 ಮೀ. ಫ್ರೀಸ್ಟೈಲ್‌ನ ತಮ್ಮ ಹೀಟ್ಸ್‌ನಲ್ಲಿ ಮೊದಲ ಸ್ಥಾನ ಪಡೆದರು. ಹೀಟ್1ನಲ್ಲಿ (ಇದು ನಿಧಾನಗತಿಯ ಹೀಟ್) ಧಿನಿಧಿ 2ನಿ.06.96 ಸೆ.ಗಳಲ್ಲಿ ಈಜು ಪೂರೈಸಿದರು. ಅದರೆ ಅವರು 30 ಸ್ಪರ್ಧಿಗಳಲ್ಲಿ 23ನೇ ಸ್ಥಾನ ಗಳಿಸಿದರು. ಬೆಂಗಳೂರಿನ ಈಜುಗಾರ್ತಿ ಭಾರತ ತಂಡದ ಅತಿ ಕಿರಿಯ ಕ್ರೀಡಾಪಟು ಎನಿಸಿದ್ದರು. ಮೂರು ಬಾರಿಯ ಒಲಿಂಪಿಕ್ ಚಾಂಪಿಯನ್, ಆಸ್ಟ್ರೇಲಿಯಾದ ಅರಿಯಾರ್ನ್ ಟಿಟ್ಮಸ್ ಒಳಗೊಂಡಿದ್ದರು.

ಸುಮಿತ್ ನಗಾಲ್‌ಗೆ ನಿರಾಸೆ

ಪ್ಯಾರಿಸ್ (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಒಲಿಂಪಿಕ್ಸ್‌ನಲ್ಲಿ ಪುರುಷರ ಸಿಂಗಲ್ಸ್ ಆರಂಭಿಕ ಸುತ್ತಿನಲ್ಲಿ ಮೂರು ಸೆಟ್‌ಗಳ ಹೋರಾಟದ ನಂತರ ನಿರಾಸೆ ಅನುಭವಿಸಿದರು.

ಎರಡನೇ ಬಾರಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುತ್ತಿರುವ 26 ವರ್ಷ ವಯಸ್ಸಿನ ನಗಾಲ್ ಭಾನುವಾರ ನಡೆದ ಪಂದ್ಯದಲ್ಲಿ 2-6, 6-2, 5-7ರಿಂದ ಆತಿಥೇಯ ಫ್ರಾನ್ಸ್‌ನ ಕೊರೆಂಟಿನ್ ಮೌಟೆಟ್ ಅವರಿಗೆ ಶರಣಾದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಗಾಲ್ ಎರಡನೇ ಸುತ್ತು ತಲುಪಿದ್ದರು. ಅಲ್ಲಿ ರಷ್ಯಾದ ಡೇನಿಯಲ್ ಮೆಡ್ವೆಡೆವ್ ಅವರಿಗೆ ಮಣಿದಿದ್ದರು. ಆದರೆ, ಇಲ್ಲಿ ಉತ್ತಮ ಆರಂಭ ಪಡೆಯಲು ಅವರಿಗೆ ಸಾಧ್ಯವಾಗಲಿಲ್ಲ.

ರೊಲ್ಯಾಂಡ್ ಗ್ಯಾರೋಸ್‌ನ ಏಳನೇ ಅಂಕಣದಲ್ಲಿ ಎರಡು ಗಂಟೆ 28 ನಿಮಿಷ ನಡೆದ ಹೋರಾಟದ ಮೊದಲ ಸೆಟ್‌ನಲ್ಲಿ ಕೊರೆಂಟಿನ್ ಮೇಲುಗೈ ಸಾಧಿಸಿದರು. ನಂತರದಲ್ಲಿ ತಿರುಗೇಟು ನೀಡಿದ ನಗಾಲ್, ಸೆಟ್ ಅನ್ನು ಸಮಬಲಗೊಳಿಸುವಲ್ಲಿ ಯಶಸ್ವಿಯಾದರು. ನಿರ್ಣಾಯಕ ಸೆಟ್‌ನಲ್ಲಿ ಇಬ್ಬರ ನಡುವೆ ತೀವ್ರ ಪೈಪೋಟಿ ನಡೆಯಿತಾದರೂ ಅಂತಿಮವಾಗಿ ಕೊರೆಂಟಿನ್ ತವರಿನ ಪ್ರೇಕ್ಷಕರ ಎದುರು ಮುಂದಿನ ಸುತ್ತಿನತ್ತ ಹೆಜ್ಜೆ ಹಾಕಿದರು. ನಗಾಲ್ ಎಸಗಿದ ಹಲವು ತಪ್ಪುಗಳು ಅವರಿಗೆ ದುಬಾರಿಯಾದವು.

ಡಬಲ್ಸ್‌ನಲ್ಲಿ ರೋಹನ್ ಬೋಪಣ್ಣ–ಎನ್. ಶ್ರೀರಾಮ್ ಬಾಲಾಜಿ ಜೋಡಿಯು ಫ್ರಾನ್ಸ್‌ನ ಗೇಲ್ ಮೊನ್‌ಫಿಲ್ಸ್ ಮತ್ತು ಎಡ್ವರ್ಡ್ ರೋಜರ್ ವಾಸೆಲಿನ್ ವಿರುದ್ಧ ಅಭಿಯಾನ ಆರಂಭಿಸಲಿದೆ.

ನಡಾಲ್ ಶುಭಾರಂಭ: ಟೆನಿಸ್ ತಾರೆ ಸ್ಪೇನ್‌ನ ರಫೆಲ್ ನಡಾಲ್ ಒಲಿಂಪಿಕ್ಸ್‌ನ ಟೆನಿಸ್ ಸಿಂಗಲ್ಸ್‌ನಲ್ಲಿ ಶುಭಾರಂಭ ಮಾಡಿದರು. ಭಾನುವಾರ ನಡೆದ ಪಂದ್ಯದಲ್ಲಿ ಅವರು 6-1, 4-6, 6-4ರಿಂದ ಮಾರ್ಟನ್ ಫುಕ್ಸೊವಿಕ್ಸ್ ಅವರನ್ನು ಮಣಿಸಿದರು.

ಎರಡನೇ ಸುತ್ತಿನಲ್ಲಿ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರನ್ನು ಎದುರಿಸಲಿದ್ದಾರೆ.

ಸುಮಿತ್ ನಗಾಲ್ –ಪಿಟಿಐ ಚಿತ್ರ

ಮಹಿಳೆಯರ ಏಷ್ಯಾ ಕಪ್ ಟಿ20 ಟ್ರೋಫಿಯೊಂದಿಗೆ ಶ್ರೀಲಂಕಾ ಆಟಗಾರ್ತಿಯರ ಸಂಭ್ರಮ –ಎಕ್ಸ್ ಚಿತ್ರ

ಚಮಾರಿ ಅತಪತ್ತು, ಹರ್ಷಿತಾ ಸಮರವಿಕ್ರಮ ಅರ್ಧಶತಕ

ಶ್ರೀಲಂಕಾಕ್ಕೆ ಚೊಚ್ಚಲ ಪ್ರಶಸ್ತಿ

ಮಹಿಳೆಯರ ಏಷ್ಯಾ ಕಪ್ 2024

ದಂಬುಲಾ (ಪಿಟಿಐ): ಉತ್ತಮ ಲಯದಲ್ಲಿರುವ ಚಮಾರಿ ಅತಪತ್ತು ಮತ್ತು ಹರ್ಷಿತಾ ಸಮರವಿಕ್ರಮ ಅವರ ಅರ್ಧ ಶತಕಗಳ ನೆರವಿನಿಂದ ಶ್ರೀಲಂಕಾ ತಂಡ, ಭಾನುವಾರ ನಡೆದ ಮಹಿಳೆಯರ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಪ್ರಬಲ ಭಾರತ ತಂಡವನ್ನು ಎಂಟು ವಿಕೆಟ್‌ಗಳಿಂದ ಸೋಲಿಸಿ ಮೊದಲ ಬಾರಿ ಪ್ರಶಸ್ತಿ ಗೆದ್ದುಕೊಂಡಿತು.

ಭಾರತ ಮಹಿಳೆಯರಿಗೆ 9 ಆವೃತ್ತಿಗಳಲ್ಲಿ ಇದು ಫೈನಲ್‌ನಲ್ಲಿ ಎದುರಾದ ಎರಡನೇ ಸೋಲು. ಕ್ವಾಲಾಲಂಪುರದಲ್ಲಿ ನಡೆದ 2018ರ ಆವೃತ್ತಿಯಲ್ಲಿ ಮೊದಲ ಸಲ ಬಾಂಗ್ಲಾದೇಶ ಎದುರು ಫೈನಲ್‌ನಲ್ಲಿ ಸೋತಿತ್ತು. ಭಾರತ ಈ ಟೂರ್ನಿಯಲ್ಲಿ ಏಳು ಬಾರಿ ಚಾಂಪಿಯನ್ ಆಗಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ, ಆರಂಭ ಆಟಗಾರ್ತಿ ಸ್ಮೃತಿ ಮಂದಾನ ಅವರ ಅರ್ಧ ಶತಕದ ನೆರವಿನಿಂದ 6 ವಿಕೆಟ್‌ಗೆ 165 ರನ್ ಗಳಿಸಿತು. ಶ್ರೀಲಂಕಾ ಎಂಟು ಎಸೆತಗಳು ಬಾಕಿಯಿರುವಂತೆ 2 ವಿಕೆಟ್‌ಗೆ 167 ರನ್ ಹೊಡೆಯಿತು. ಈ ಪಂದ್ಯದಲ್ಲಿ ಒಟ್ಟು 332 ರನ್‌ಗಳು ಹರಿದುಬಂದಿದ್ದು, ಇದು ಭಾರತ ಮತ್ತು ಲಂಕಾ ಮಹಿಳಾ ತಂಡಗಳ ನಡುವೆ ಟಿ20 ಪಂದ್ಯದಲ್ಲಿ ಗರಿಷ್ಠ ಎನಿಸಿತು.

ಈ ಟೂರ್ನಿಯುದ್ದಕ್ಕೂ ಸ್ಥಿರ ಪ್ರದರ್ಶನ ನೀಡಿರುವ ಆರಂಭ ಆಟಗಾರ್ತಿ ಚಮಾರಿ (61, 43ಎಸೆತ, 4x9, 6x2) ಮತ್ತು ಹರ್ಷಿತಾ ಆವರು ಎರಡನೇ ವಿಕೆಟ್‌ಗೆ 87 ರನ್ ಜೊತೆಯಾಟದಲ್ಲಿ ಭಾಗಿಯಾದರು. ವಿಶ್ಮಿ ಗುಣರತ್ನೆ (1) ಮತ್ತೊಮ್ಮೆ ಬೇಗ ನಿರ್ಗಮಿಸಿದರು. ಚಮಾರಿ ನಿರ್ಗಮನದ ನಂತರ ಹರ್ಷಿತಾ ಮುರಿಯದ ಮೂರನೇ ವಿಕೆಟ್‌ಗೆ ಕವಿಶಾ ದಿಲ್ಹಾರಿ (30, 16ಎ, 4x1, 6x2) ಜೊತೆ 40 ಎಸೆತಗಳಲ್ಲಿ 73 ರನ್ ಸೇರಿಸಿ ತಂಡ ಸುರಕ್ಷಿತವಾಗಿ ಗುರಿತಲುಪುವಂತೆ ನೋಡಿಕೊಂಡರು. ಚಮಾರಿ ಅತಪತ್ತು 33 ಎಸೆತಗಳಲ್ಲಿ ಅರ್ಧಶತಕ ದಾಟಿದರೆ, ಹರ್ಷಿತಾ 43 ಎಸೆತಗಳಲ್ಲಿ ಅರ್ಧ ಶತಕ ಗಳಿಸಿದರು. ಇವರಿಬ್ಬರು ಹೊಡೆತಗಳ ಆಯ್ಕೆಯಲ್ಲೂ ವಿಭಿನ್ನತೆ ತೋರಿದರು. ಚಮಾರಿ ಅವರು ಹೊಡೆತಗಳಲ್ಲಿ ಶಕ್ತಿ ಪ್ರದರ್ಶಿಸಿದರೆ, ಹರ್ಷಿತಾ ಆಟದಲ್ಲಿ ಜಾಣ್ಮೆಯ 'ಪ್ಲೇಸಿಂಗ್'ಗಳಿದ್ದವು. ಎಡಗೈ ಸ್ಪಿನ್ನರ್‌ಗಳಾದ ದೀಪ್ತಿ ಶರ್ಮಾ, ರಾಧಾ ಯಾದವ್ ಅವರ ಬೌಲಿಂಗ್‌ನಲ್ಲಿ ಅವರು ರಿವರ್ಸ್ ಸ್ವೀಪ್‌ಗಳಿಗೆ ಹಿಂಜರಿಯಲಿಲ್ಲ.

ಇದು ಶ್ರೀಲಂಕಾ ತಂಡ ಬೆಂಬತ್ತಿದ ದೊಡ್ಡ ಗುರಿಯೆನಿಸಿತು. ಈ ವರ್ಷ ದಕ್ಷಿಣ ಆಫ್ರಿಕಾ ವಿರುದ್ಧ 156 ರನ್ ಬೆಂಬತ್ತಿದ್ದೇ ಇದುವರೆಗಿನ ದೊಡ್ಡ ಗುರಿಸಾಧನೆ ಆಗಿತ್ತು.

ಸ್ಮೃತಿ ಮಂದಾನ ಅರ್ಧಶತಕ: ಇದಕ್ಕೆ ಮೊದಲು, ಉಪನಾಯಕಿ ಸ್ಮೃತಿ ಮಂದಾನ (60, 47ಎಸೆತ) ಮತ್ತೊಂದು ಅರ್ಧ ಶತಕ ಗಳಿಸಿ ಹೋರಾಟ ತೋರಿದ್ದರು. ಶಫಾಲಿ ವರ್ಮಾ (16), ಉಮಾ ಚೆಟ್ರಿ (9) ಮತ್ತು ಹರ್ಮನ್‌ಪ್ರೀತ್ ಕೌರ್ (11) ಹೆಚ್ಚಿನ ಕೊಡುಗೆ ನೀಡಲಿಲ್ಲ. ಕೆಳ ಕ್ರಮಾಂಕದಲ್ಲಿ ಜೆಮಿಮಾ ರಾಡ್ರಿಗಸ್ (29, 16ಎ) ಮತ್ತು ರಿಚಾ ಘೋಷ್ (30, 14ಎ, 4x4, 6x1) ಅವರು ಉಪಯುಕ್ತ ಕೊಡುಗೆ ನೀಡಿದ ಕಾರಣ ಭಾರತ ತಂಡ ಗೌರವದ ಮೊತ್ತ ಗಳಿಸಿತು. ಲಂಕಾ ತಂಡದಲ್ಲಿ ವೇಗಿ ಉದೇಶಿಕಾ ಪ್ರಬೋಧನಿ ಬಿಟ್ಟರೆ, ಉಳಿದವರೆಲ್ಲ ನಿಧಾನಗತಿಯ ಬೌಲರ್‌ಗಳಿದ್ದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರುಗಳಲ್ಲಿ 6 ವಿಕೆಟ್‌ಗೆ 165 (ಸ್ಮೃತಿ ಮಂದಾನ 60, ಜೆಮಿಮಾ ರಾಡ್ರಿಗಸ್ 29, ರಿಚಾ ಘೋಷ್ 30; ಉದೇಶಿಕಾ ಪ್ರಬೋಧನಿ 27ಕ್ಕೆ1, ಕವಿಶಾ ದಿಲ್ಹಾರಿ 37ಕ್ಕೆ2, ಸಚಿನಿ ನಿಸಾನ್ಸಲಾ 20ಕ್ಕೆ1, ಚಾಮರಿ ಅಟ್ಟಪಟ್ಟು 28ಕ್ಕೆ1); ಶ್ರೀಲಂಕಾ: 18.4 ಓವರುಗಳಲ್ಲಿ 2 ವಿಕೆಟ್‌ಗೆ 167 (ಚಮಾರಿ ಅತಪತ್ತು 61, ಹರ್ಷಿತಾ ಸಮರವಿಕ್ರಮ ಔಟಾಗದೇ 69, ಕವಿಶಾ ದಿಲ್ಹಾರಿ ಔಟಾಗದೇ 30; ದೀಪ್ತಿ ಶರ್ಮಾ 30ಕ್ಕೆ1). ಪಂದ್ಯದ ಆಟಗಾರ್ತಿ: ಹರ್ಷಿತಾ ಸಮರವಿಕ್ರಮ.

ಟಿ20 ಕ್ರಿಕೆಟ್: ಭಾರತಕ್ಕೆ ಸರಣಿ

ಪಲೆಕೆಲೆ (ಪಿಟಿಐ): ಯಶಸ್ವಿ ಜೈಸ್ವಾಲ್ ಮತ್ತು ಸೂರ್ಯಕುಮಾರ್ ಯಾದವ್ ಅವರ ಬ್ಯಾಟಿಂಗ್ ಬಲದಿಂದ ಭಾರತ ತಂಡವು ಭಾನುವಾರ ಮಳೆಯಿಂದ ಅಡಚಣೆ ಉಂಟಾದ ಎರಡನೇ ಟಿ20 ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಡಕ್ವರ್ಥ್ ಲೂಯಿಸ್ ನಿಯಮದಡಿ ಏಳು ವಿಕೆಟ್‌ಗಳಿಂದ ಮಣಿಸಿತು.

ಈ ಮೂಲಕ ಮೂರು ಪಂದ್ಯಗಳ ಸರಣಿಯನ್ನು ಒಂದು ಪಂದ್ಯ ಬಾಕಿ ಇರುವಂತೆ ಭಾರತ ತಂಡವು ಕೈವಶ ಮಾಡಿಕೊಂಡಿತು. ಕೊನೆಯ ಪಂದ್ಯವು ಮಂಗಳವಾರ ನಡೆಯಲಿದೆ.

ಮೊದಲು ಬ್ಯಾಟಿಂಗ್ ಮಾಡಿದ ಆತಿಥೇಯ ತಂಡವು ಕುಶಾಲ ಪೆರೆರಾ (53; 34ಎ, 4X6, 6X2) ಅವರ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 161 ರನ್ ಗಳಿಸಿತು.

ಪಂದ್ಯಕ್ಕೆ ಮಳೆ ಅಡಚಣೆ ಉಂಟು ಮಾಡಿದ್ದರಿಂದ ಭಾರತದ ಗುರಿಯನ್ನು ಪರಿಷ್ಕರಿಸಲಾಯಿತು. ಗೆಲುವಿಗೆ 8 ಓವರ್‌ಗಳಲ್ಲಿ 78 ರನ್‌ಗಳ ಗಳಿಸಬೇಕಿತ್ತು. ಆದರೆ, ಭಾರತವು 6.3 ಓವರ್‌ಗಳಲ್ಲಿ ಮೂರು ವಿಕೆಟ್‌ಗೆ 81 ರನ್ ಗಳಿಸಿ ಗೆಲುವಿನ ಗಡಿ ದಾಟಿತು. ಜೈಸ್ವಾಲ್ (30; 15ಎ), ಸೂರ್ಯಕುಮಾರ್ (26, 12ಎ) ಮತ್ತು ಹಾರ್ದಿಕ್ ಪಾಂಡ್ಯ (ಔಟಾಗದೇ 22; 9ಎ) ಅಬ್ಬರಿಸಿದರು.

ಇದಕ್ಕೂ ಮೊದಲು ಲಂಕಾ ತಂಡಕ್ಕೆ ಪಥುಮ್ ನಿಸಾಂಕ (32; 24ಎ) ಮತ್ತು ಕುಶಾಲ ಮೆಂಡಿಸ್ (10, 11ಎ) ಅವರು ಉತ್ತಮ ಆರಂಭ ನೀಡುವ ಪ್ರಯತ್ನ ಮಾಡಿದರು. ಆದರೆ ನಾಲ್ಕನೇ ಓವರ್‌ನಲ್ಲಿ ಮೆಂಡಿಸ್ ವಿಕೆಟ್ ಗಳಿಸಿದ ಆರ್ಷದೀಪ್ ಸಿಂಗ್ ಜೊತೆಯಾಟವನ್ನು ಮುರಿದರು. ಈ ಹಂತದಲ್ಲಿ ಪಥುಮ್ ಮತ್ತು ಪೆರೆರಾ ಅವರು ಜೊತೆಗೂಡಿದರು. ಎರಡನೇ ವಿಕೆಟ್‌ಗೆ ಜೊತೆಯಾಟದಲ್ಲಿ 54 ರನ್ ಸೇರಿಸಿದರು. ಹತ್ತನೇ ಓವರ್‌ನಲ್ಲಿ ಪಥುಮ್ ವಿಕೆಟ್ ಪಡೆದ ರವಿ ಬಿಷ್ಣೋಯಿ ಜೊತೆಯಾಟಕ್ಕೆ ತಡೆಯೊಡ್ಡಿದರು. ಆದರೂ ಪೆರೆರಾ ಅವರ ಆಟ ಮುಂದುವರಿಯಿತು. ಅವರು ಕಮಿಂದು ಮೆಂಡಿಸ್ ಅವರೊಂದಿಗೆ 3ನೇ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿದರು. 16ನೇ ಓವರ್‌ನಲ್ಲಿಯೇ ಇವರಿಬ್ಬರ ವಿಕೆಟ್‌ಗಳನ್ನೂ ಗಳಿಸಿದ ಹಾರ್ದಿಕ್ ಪಾಂಡ್ಯ ಮಿಂಚಿದರು.

ಕೊನೆಯಲ್ಲಿ 22 ರನ್‌ಗಳ ಅಂತರದಲ್ಲಿ 5 ವಿಕೆಟ್‌ಗಳು ಪತನವಾದವು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 161 (ಪಥುಮ್ ನಿಸಾಂಕ 32, ಕುಶಾಲ ಪೆರೆರಾ 53, ಕಮಿಂದು ಮೆಂಡಿಸ್ 26, ಅಸಲಂಕಾ 14, ಅರ್ಷದೀಪ್ ಸಿಂಗ್ 24ಕ್ಕೆ2, ಅಕ್ಷರ್ ಪಟೇಲ್ 30ಕ್ಕೆ2, ರವಿ ಬಿಷ್ಣೋಯಿ 26ಕ್ಕೆ3, ಹಾರ್ದಿಕ್ ಪಾಂಡ್ಯ 23ಕ್ಕೆ2). **ಭಾರತ:** 6.3 ಓವರ್‌ಗಳಲ್ಲಿ 3ಕ್ಕೆ 81 (ಜೈಸ್ವಾಲ್ 30, ಸೂರ್ಯಕುಮಾರ್ 26, ಹಾರ್ದಿಕ್ 22). **ಫಲಿತಾಂಶ:** ಭಾರತಕ್ಕೆ 7 ವಿಕೆಟ್‌ಗಳ ಜಯ (ಡಕ್ವರ್ಥ್ ಲೂಯಿಸ್ ನಿಯಮದಡಿ)

ವಿಕೆಟ್ ಪಡೆದ ರವಿ ಬಿಷ್ಣೋಯಿ ಅವರನ್ನು ಅಭಿನಂದಿಸಿದ ಸೂರ್ಯ ಕುಮಾರ್ ಯಾದವ್ –ಪಿಟಿಐ ಚಿತ್ರ

ಸರಣಿ 'ಕ್ಲೀನ್ ಸ್ವೀಪ್' ಮಾಡಿದ ಇಂಗ್ಲೆಂಡ್

ಬರ್ಮಿಂಗ್‌ಹ್ಯಾಮ್ (ಎಎಫ್‌ಪಿ): ಆಲ್‌ರೌಂಡರ್ ಬೆನ್ ಸ್ಟೋಕ್ಸ್ (ಔಟಾಗದೇ 57, 28 ಎಸೆತ, 4x9, 6x2) ಟೆಸ್ಟ್‌ನಲ್ಲಿ ಅತಿ ವೇಗದ ಅರ್ಧ ಶತಕ ಗಳಿಸಿ ಇಂಗ್ಲೆಂಡ್ ಬ್ಯಾಟರ್ ಎನಿಸಿದರು. ಇಂಗ್ಲೆಂಡ್ ತಂಡ ಮೂರನೇ ಟೆಸ್ಟ್‌ನಲ್ಲಿ ವೆಸ್ಟ್ ಇಂಡೀಸ್ ತಂಡವನ್ನು 10 ವಿಕೆಟ್‌ಗಳಿಂದ ಸೋಲಿಸಿ ಸರಣಿಯನ್ನು 3–0 ಅಂತರದಿಂದ 'ಕ್ಲೀನ್ ಸ್ವೀಪ್' ಮಾಡಿತು.

ಪಂದ್ಯದ ಮೂರನೇ ದಿನವಾದ ಭಾನುವಾರ ವಿಂಡೀಸ್ ಎರಡನೇ ಇನಿಂಗ್ಸ್‌ನಲ್ಲಿ 175 ರನ್ನಿಗೆ ಕುಸಿದ ನಂತರ ಗೆಲ್ಲಲು ಬೇಕಾದ 82 ರನ್‌ಗಳನ್ನು ಇಂಗ್ಲೆಂಡ್ ಮಿಂಚಿನ ವೇಗದಲ್ಲಿ ಗಳಿಸಿತು. ಬರೇ 7.2 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 87 ರನ್ ಬಾರಿಸಿತು.